ಮರಳಿ ಬರಲಿದೆ ಸಮಾಜವಾದ

ಡಿ.ಎಸ್. ನಾಗಭೂಷಣ



ಮರಳಿ ಬರಲಿದೆ ಸಮಾಜವಾದ

ಡಿ.ಎಸ್. ನಾಗಭೂಷಣ

ಲೋಹಿಯಾ ಪ್ರಕಾಶನ

ಮರಳಿ ಬರಲಿದೆ ಸಮಾಜವಾದ !

(ಸಮಕಾಲೀನ ಸಮಾಜವಾದಿ ಚಿಂತನೆಗಳು)

ಡಿ.ಎಸ್. ನಾಗಭೂಷಣ

ಲೋಹಿಯಾ ಪ್ರಕಾಶನ
ಬಳ್ಳಾರಿ

MARALI BARALIDE SAMAJAVADA ! :
(Socialism will Return) A collection of contemporary thoughts on Socialism by
D.S. Nagabhushana
HIG-5, 'Nudi', KHB Colony, Kallahally Extn.
Shimoga - 577204 (Karnataka)
Ph : 08182-248574, Mobile : 94492 42284

Published by
LOHIYA PRAKASHANA
'Kshitija', Kappagallu Road
Gandhi Nagar, Bellary - 583 103
Tel : 08392-257412

ISBN : 81-87731-88-5

First Impression - 2007

Pages : 148

Price : **Rs. 60**

Cover Page : SUDHAKAR DARBE

Printed at :
VISHWAS PRINTS
Bangalore-18

ಮರಳಿ ಬರಲಿದೆ ಸಮಾಜವಾದ !
ಲೇಖಕ : ಡಿ.ಎಸ್. ನಾಗಭೂಷಣ
ಪ್ರಕಾಶಕರು : ಲೋಹಿಯಾ ಪ್ರಕಾಶನ, ಬಳ್ಳಾರಿ

ಮುಖಪುಟ ವಿನ್ಯಾಸ : ಸುಧಾಕರ ದರ್ಬೆ

ಪುಟಗಳು : 148

ಬೆಲೆ : ರೂ. ೬೦

ಮುದ್ರಕರು :
ವಿಶ್ವಾಸ್ ಪ್ರಿಂಟ್ಸ್
VISHWAS PRINTS
೨೩, ೩ನೇ ಅಡ್ಡರಸ್ತೆ, ಸಂಜಾಂಬ ಅಗ್ರಹಾರ
ಚಾಮರಾಜಪೇಟೆ, ಬೆಂಗಳೂರು - ೧೮
ದೂರವಾಣಿ : ೨೬೬೦೪೮೩೫

ಲೇಖಕನ ಮಾತು

ಈ ಪುಸ್ತಕದ ಶೀರ್ಷಿಕೆಯೇ ಕೆಲವರಿಗೆ ವಿನೋದವನ್ನುಂಟು ಮಾಡಬಹುದು. ಸಮಾಜವಾದದ ಕಾಲದಿಂದ ಬಹುದೂರ ಸಾಗಿ ಬಂದು ಆ ದಿನಗಳ ಕಷ್ಟ ಕಾರ್ಪಣ್ಯಗಳ ಬಗೆಗೆ ಜನ ನಿಟ್ಟುಸಿರು ಬಿಡುತ್ತಿರುವಾಗ, ಈಗ ಮತ್ತೆ ಸಮಾಜವಾದ ಮರಳಿ ಬರಲಿದೆ ಎನ್ನಲು ಎಷ್ಟು ಧೈರ್ಯಬೇಕು ಎಂದು ಇಂತಹವರು ಆಶ್ಚರ್ಯವನ್ನೂ ಪಡಬಹುದು! ಆದರೆ ಸಮಾಜವಾದದ ಸೋಲನ್ನು ಘೋಷಿಸುತ್ತ ನಮ್ಮನ್ನು ಆವರಿಸುತ್ತ ಬಂದ ಜಾಗತೀಕರಣದ ಪರಿಣಾಮಗಳು ಕ್ರಮೇಣ ಅನಾವರಣಗೊಳ್ಳುತ್ತ ಹೋಗುತ್ತಿರುವ ಹಾಗೆ, 'ಲೈಸೆನ್ಸ್-ಪರ್ಮಿಟ್ ರಾಜ್ಯ'ಕ್ಕೆ ಬದಲಿಯಾಗಿ ಮುಕ್ತ ಸ್ಪರ್ಧೆಯ ಆರ್ಥಿಕತೆಯನ್ನು ಸ್ವಾಗತಿಸಿದವರ ಮಧ್ಯದಿಂದಲೇ ನಿಧಾನವಾಗಿ ಜಾಗತೀಕರಣ ಉಂಟು ಮಾಡುತ್ತಿರುವ ಸಾಮಾಜಿಕ ಅನಾಹುತಗಳ ಬಗ್ಗೆ ಆತಂಕದ, ಎಚ್ಚರಿಕೆಯ ಮಾತುಗಳು ಕೇಳಿ ಬರುತ್ತಿವೆ. ಜಾಗತೀಕರಣ, ಸ್ಥಗಿತಗೊಂಡ ತನ್ನ ಮಾರುಕಟ್ಟೆಯನ್ನು ವಿಸ್ತರಿಸಿಕೊಳ್ಳುವ ದೃಷ್ಟಿಯಿಂದ ಮುಂದುವರಿದ ದೇಶಗಳು (ಗುಂಪು-ಲರ ರಾಷ್ಟ್ರಗಳು) ಅಂತಾರಾಷ್ಟ್ರೀಯ ವ್ಯಾಪಾರದ ಮೇಲಿನ ನಿರ್ಬಂಧಗಳನ್ನು ಸಡಿಲಗೊಳಿಸಿಕೊಳ್ಳಲು ನಡೆಸಿದ ಒಂದು ಜಾಗತಿಕ ಯೋಜನೆಯಾಗಿದ್ದು; ಇದರ ಭಾಗವಾಗಿಯೇ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಮೂಲಕ ಹರಿಸುತ್ತಿರುವ ಹಣದ ಹೊಳೆ, ಈ ಯೋಜನೆಗೆ ಅನುಕೂಲ ಪರಿಸ್ಥಿತಿ ನಿರ್ಮಾಣ ಮಾಡಿಕೊಳ್ಳುವ ಹುನ್ನಾರ ಮಾತ್ರವಾಗಿದೆ ಎಂಬ ಅರಿವು ಈಗ ಕೆಲವರಲ್ಲಾದರೂ ಉಂಟಾಗ ತೊಡಗಿದೆ.

ಹಾಗಾಗಿಯೇ, ಜಾಗತೀಕರಣದ ಆರ್ಥಿಕ ನೀತಿಯನ್ನು ತುಂಬು ಉತ್ಸಾಹದಿಂದ ಜಾರಿಗೆ ತಂದ ನಮ್ಮ ಆಡಳಿತಗಾರರು ಚುನಾವಣೆಗಳಲ್ಲಿ ತಿರಸ್ಕೃತಗೊಂಡ ನಂತರ, 'ಮಾನವೀಯ ಮುಖ'ದ ಜಾಗತೀಕರಣದ ಮಾತುಗಳನ್ನಾಡತೊಡಗಿದ್ದಾರೆ! 'ಸಾಮಾನ್ಯ ಮನುಷ್ಯ'ನ ಒಳಿತನ್ನು ಗಮನದಲ್ಲಿಟ್ಟುಕೊಂಡು 'ಅಭಿವೃದ್ಧಿ'ಯನ್ನು ಸಾಧಿಸುವ ಸಾಮಾಜಿಕ ಎಚ್ಚರವನ್ನು ತಮ್ಮ ಆಡಳಿತದಲ್ಲಿ ಸಾಧಿಸಿಕೊಳ್ಳುವ ಒಲವು ತೋರಿದ್ದಾರೆ. ಹಾಗೇ, ಜಾಗತೀಕರಣದ ಹತ್ತು ವರ್ಷಗಳು ಉಂಟು ಮಾಡಿದ ಆರ್ಥಿಕ ಅಶ್ಲೀಲತೆ, ಆಡಂಬರಗಳ ದ್ವೀಪಗಳ ಬಗ್ಗೆ ಜಿಗುಪ್ಸೆ ವ್ಯಕ್ತಪಡಿಸುತ್ತಿದ್ದಾರೆ. ಲಕ್ಷಾಂತರ ಜನ ರೈತರ ಆತ್ಮಹತ್ಯೆ, ಆದಿವಾಸಿ ಜನರ ಬೃಹತ್ ಪ್ರಮಾಣದ ನಿರ್ವಸತೀಕರಣ ಹಾಗೂ ಬಡತನ ಮತ್ತು ಶ್ರೀಮಂತಿಕೆಗಳ ನಡುವೆ ಹೆಚ್ಚುತ್ತಿರುವ ಅಂತರದ ಸಮಸ್ಯೆಗಳಿಗೆ ತಮ್ಮ ಅಭಿವೃದ್ಧಿ ನೀತಿಯಲ್ಲಿ ಪರಿಹಾರ ಕಾಣದೆ ಕಂಗಾಲಾಗಿದ್ದಾರೆ. ಹೆಚ್ಚುತ್ತಿರುವ ಸಾಮಾಜಿಕ ಅಶಾಂತಿ ಹಾಗೂ ಅಪರಾಧಗಳ ವೈವಿಧ್ಯತೆಯಿಂದ ಆತಂಕಗೊಂಡಿದ್ದಾರೆ. ಆದರೂ, ಅಭಿವೃದ್ಧಿಯ ಬೇರೆ ದಾರಿಯೇ ಇಲ್ಲದವರಂತೆ, ಈ ಸಮಸ್ಯೆಗಳಿಗೆ ಹಲವು ರೀತಿಯ ಪ್ಯಾಕೇಜ್‌ಗಳ ಪ್ರಕಟಣೆ, ವಿಶೇಷ ಕರ್ತವ್ಯ-ದಳಗಳ ರಚನೆ ಮುಂತಾದ ತಾತ್ಕಾಲಿಕ ಉಪಶಮನ ಕ್ರಮಗಳನ್ನು ಕೈಗೊಂಡು,

ವಿದೇಶಿ ಬಂಡವಾಳ ಆಧಾರಿತ 'ಅಭಿವೃದ್ಧಿ' ಕಲ್ಪನೆಯನ್ನು ನೆಚ್ಚಿಕೊಂಡೇ ಮುಂದುವರೆದಿದ್ದಾರೆ. ಬಹುಪಾಲು ಜನ ಕೂಡಾ ಈ ತಾತ್ಕಾಲಿಕ ಉಪಶಮನ ಕ್ರಮಗಳಿಂದ ತೃಪ್ತಗೊಂಡವರಂತೆ, ಈಗ ಕೆಲವರಿಗಷ್ಟೆ ಲಭ್ಯವಾಗುತ್ತಿರುವ ಜಾಗತೀಕರಣದ 'ಅನುಕೂಲ'ಗಳು ತಮ್ಮ ಕಡೆಗೂ ಹರಿದು ಬರುವ ದಿನಗಳು ದೂರವಿಲ್ಲ ಎಂಬ ನಿರೀಕ್ಷೆಯಲ್ಲಿ ಕಾಯುತ್ತಿರುವಂತೆ ತೋರುತ್ತದೆ. ಆದರೆ ಈ ನಿರೀಕ್ಷೆ ಸುಳ್ಳಾಗುವ ಎಲ್ಲ ಲಕ್ಷಣಗಳೂ ಕಾಣತೊಡಗಿವೆ.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಪರ್ಯಾಯ ಅಭಿವೃದ್ಧಿ ನೀತಿ ಹಾಗೂ ಮಾದರಿಗಳ ಅನ್ವೇಷಣೆ, ದೇಶದಲ್ಲಿ ಈಗ ಹೆಚ್ಚು ತುರ್ತಿನಿಂದ ನಡೆದಿದೆ. ಕೆಲವು, ಜನಾಂದೋಲನ ರೂಪದಲ್ಲಿ ನಡೆದಿದ್ದರೆ; ಮತ್ತೆ ಕೆಲವು ತಾತ್ವಿಕ ಪುನರನ್ವೇಷಣೆಯ ರೂಪದಲ್ಲಿ ನಡೆದಿವೆ. ಹಾಗೆ ನೋಡಿದರೆ; ಜಾಗತಿಕ ಮಟ್ಟದಲ್ಲಿಯೇ, ಜಾಗತೀಕರಣ ಉಂಟು ಮಾಡುತ್ತಿರುವ ಅಸಮ ಅಭಿವೃದ್ಧಿ, ಅಶ್ಲೀಲ ಗ್ರಾಹಕವಾದ, ಜನಾಂಗೀಯ ದ್ವೇಷ, ದುರಾಕ್ರಮಣದ ರಾಜಕಾರಣ ಹಾಗೂ ಜೀವ ಪರಿಸರದ ವಿನಾಶ ಮುಂತಾದ ಅನಾಹುತಗಳ ವಿರುದ್ಧ ಎಚ್ಚರಿಸುವ 'ಇನ್ನೊಂದು ಜಗತ್ತು ಸಾಧ್ಯ' ಎಂಬ ಆಂದೋಲನವೊಂದು ಆರಂಭವಾಗಿದೆ. ಹಿಂದುಳಿದ ಮತ್ತು ಮುಂದುವರಿದ ದೇಶಗಳೆಂಬ ಭೇದ ಭಾವಗಳಿಲ್ಲದೆ ಜಗತ್ತಿನ ಎಲ್ಲ ದೇಶಗಳ ಜನರೂ ಈ ಆಂದೋಲನದಲ್ಲಿ ಪಾಲ್ಗೊಂಡು ಪರ್ಯಾಯ ಅಭಿವೃದ್ಧಿ ನೀತಿ–ಮಾದರಿಗಳ ಚರ್ಚೆಯಲ್ಲಿ ತೊಡಗಿದ್ದಾರೆ. ಹೀಗೆ 'ವಿಶ್ವ ಸಾಮಾಜಿಕ ವೇದಿಕೆ' ಎಂಬ ಹೊಸ ಅಂತಾರಾಷ್ಟ್ರೀಯ ವೇದಿಕೆಯಡಿ ಸಮಾಜವಾದ ಕುರಿತಂತೆ ಪುನರಾಲೋಚನೆ ಆರಂಭವಾಗಿದೆ.

ಅಂದ ಮಾತ್ರಕ್ಕೆ ಇದು ಹಳೆಯ ಸಮಾಜದ ಪುನರಾಗಮನದ ಪ್ರಯತ್ನಗಳೆಂದು ಯಾರಾದರೂ ಭಾವಿಸಿದರೆ ತಪ್ಪು. ಬದಲಾಗಿ ಸಮಾಜವಾದ ಮುನ್ನೋಡಿದ್ದ ಶಾಂತಿಯುತ ಸಹ ಬಾಳ್ವೆಯ ಅಭಿವೃದ್ಧಿ ಮಾದರಿಗಳ ವೈಫಲ್ಯವನ್ನು ವಿಶ್ಲೇಷಿಸಿ, ಈವರೆಗಿನ ಅನುಭವಗಳ ಬೆಳಕಿನಲ್ಲಿ ಅದರ ಕೊರತೆಗಳನ್ನು ತುಂಬುವ ಮೂಲಕ; ಅದನ್ನು ಇಂದಿನ ಬದುಕಿನ ಸವಾಲುಗಳನ್ನು ಎದುರಿಸಲು ಹೇಗೆ ಸಿದ್ಧಗೊಳಿಸಬಹುದು ಎಂಬುದರ ಪರಿಶೀಲನೆಯ ಪ್ರಯತ್ನವಿದು. ಈ ದೃಷ್ಟಿಯಿಂದ ಮಾರ್ಕ್ಸ್‌ವಾದಿ ಆರ್ಥಿಕ ಸಮಾಜವಾದಕ್ಕಿಂತ ಭಿನ್ನವಾಗಿ, ಗಾಂಧೀಜಿಯ ಅಹಿಂಸಾತ್ಮಕ ಸಾಮಾಜಿಕ ದರ್ಶನದ ಆಧಾರದ ಮೇಲೆ ಕಟ್ಟಿಕೊಂಡ ಭಾರತೀಯ ಸಮಾಜವಾದ ಪ್ರತಿಪಾದಿಸಿದ; ಮಧ್ಯಮ ಮಾರ್ಗದ ಜೀವನ ದೃಷ್ಟಿಯ ಅಭಿವೃದ್ಧಿ ಮಾದರಿಗಳ ಬಗ್ಗೆ ಇಂದು ಚರ್ಚೆ ಹೆಚ್ಚು ಅರ್ಥಪೂರ್ಣವೆನಿಸೀತು–ವಿಶೇಷವಾಗಿ ಇಂದಿನ ಭಾರತೀಯ ಸಂದರ್ಭದಲ್ಲಿ. ಏಕೆಂದರೆ ಜಗತ್ತು ತಿರಸ್ಕರಿಸುವ ಆರ್ಥಿಕ ಸಮಾಜವಾದಕ್ಕೆ ಪರ್ಯಾಯವಾಗಿ ರೂಪಿತವಾಗಿದ್ದ ಈ 'ಸಾಂಸ್ಕೃತಿಕ' ಸಮಾಜವಾದ, ಇಂದು ಜಾಗತೀಕರಣ ಉಂಟು ಮಾಡುತ್ತಿರುವ ಎಲ್ಲ ಅನಾಹುತಗಳನ್ನು ಮುನ್ನೋಡಿಯೇ ತನ್ನ ತಾತ್ವಿಕತೆಯನ್ನು, ಅಭಿವೃದ್ಧಿ ಮಾದರಿಯನ್ನು ರೂಪಿಸಿಕೊಂಡಿತ್ತು. ಆದರೆ ಚರಿತ್ರೆಯ ಆಕಸ್ಮಿಕಗಳ, ಜನಪ್ರಿಯ ರಾಜಕಾರಣದ ಆಕರ್ಷಣೆಗಳ ಹಾಗೂ ನಾಯಕರ ವೈಯುಕ್ತಿಕ ದೌರ್ಬಲ್ಯಗಳ ಕಾರಣಗಳಿಂದಾಗಿ ಈ ಆಂದೋಲನ ಜನಮನದಲ್ಲಿ ಭದ್ರವಾಗಿ ಬೇರು ಬಿಡಲಿಲ್ಲ.

ಅಂದಿನ ನೆಹರೂ ಕೇಂದ್ರಿತ ರಾಜಕಾರಣದ ವಿರುದ್ಧ ಬಂಡೆದ್ದ ಈ ಸಮಾಜವಾದಿ ಆಂದೋಲನ, ಲೋಹಿಯಾ ನೇತೃತ್ವದಲ್ಲಿ ಒಂದು ಸೃಜನಶೀಲ ವೈಚಾರಿಕ ಆಂದೋಲನವಾಗಿ ಮಾತ್ರ ಯಶಸ್ವಿಯಾಗಿ, ಅವರ ಅಕಾಲಿಕ ಮರಣದಿಂದಾಗಿ ತನ್ನ ಕಾರ್ಯಶೀಲತೆಯನ್ನು

ಸಾಬೀತು ಪಡಿಸುವಲ್ಲಿ ಸೋತು ಹೋಯಿತು. ಆದರೆ ಇಂದು ಸಮಾಜವಾದವೆಂದರೆ ನೆಹರೂರಿಂದ ಹಿಡಿದು ಇಂದಿರಾಗಾಂಧಿಯವರ ಆಡಳಿತ ಕಾಲದವರೆಗೆ ಜಾರಿಯಲ್ಲಿದ್ದ ಮಿಶ್ರ ಅರ್ಥವ್ಯವಸ್ಥೆಯ ಎಡಬಿಡಂಗಿ ಸಮಾಜವಾದವೇ ಎಂದಾಗಿ, ಅದರ ವೈಫಲ್ಯವನ್ನು ಇಡಿಯಾಗಿ ಭಾರತೀಯ ಸಮಾಜವಾದಿ ಚಳುವಳಿಯ ತಲೆಯ ಮೇಲೆ ಹೊರಿಸಲಾಗುತ್ತಿದೆ. ಭಾರತದಲ್ಲಿ ನೆಹರೂ ಪ್ರಯೋಗ ಮಾಡಿದ ಮತ್ತು ಇಂದಿರಾಗಾಂಧಿಯವರು ಮುಂದುವರಿಸಿದ ಸಮಾಜವಾದವೇ ಬೇರೆ ಎಂಬ ರಾಜಕೀಯ ಅರಿವಿಲ್ಲದೆಯೇ, ಸಮಾಜವಾದವನ್ನು ಕುರುಡು ಕುರುಡಾಗಿ ಲೈಸೆನ್ಸ್-ಪರ್ಮಿಟ್ ರಾಜ್ಯ ಎಂದು ಕರೆಯಲಾಗುತ್ತಿದೆ. ಆಚಾರ್ಯ ನರೇಂದ್ರ ದೇವ, ಜಯಪ್ರಕಾಶ ನಾರಾಯಣ ಹಾಗೂ ಡಾ. ರಾಮಮನೋಹರ ಲೋಹಿಯಾ ರೂಪಿಸಿದ ಸಮಾಜವಾದವು ಮಾರ್ಕ್ಸ್‌ವಾದಿ ಸಮಾಜವಾದ ಹಾಗೂ ಬ್ರಿಟನ್ನಿನ ಲೇಬರ್ ಪಕ್ಷದ ಸಮಾಜವಾದಕ್ಕಿಂತ (ಅಥವಾ ಪಶ್ಚಿಮ ಯೂರೋಪಿನ 'ಕಲ್ಯಾಣ ರಾಜ್ಯ' ಮಾದರಿಯ ಸಮಾಜವಾದಕ್ಕಿಂತ) ತೀರಾ ಭಿನ್ನವಾಗಿದ್ದು, ಲೌಕಿಕ ಹಾಗೂ ಅಧ್ಯಾತ್ಮಿಕ ನೆಲೆಗಳೆರಡರಲ್ಲೂ ಮನುಷ್ಯನನ್ನು ರೂಪಿಸುವಂತಹ ರಾಜಕಾರಣವನ್ನು ನೆಮ್ಮಿಕೊಂಡಿದ್ದಾಗಿತ್ತು. ಹಾಗಾಗಿ ಇಂದು ಈ ಸಾಂಸ್ಕೃತಿಕ ಸಮಾಜವಾದದ ಪುನರನ್ವೇಷಣೆ ಅತ್ಯಗತ್ಯವಾಗಿದೆ. ಈ ದೃಷ್ಟಿಯಿಂದ ಲೋಹಿಯಾರ 'ಕಾಲದ ಜೊತೆ ಹೆಜ್ಜೆ ಹಾಕುವಾಗ ನಾನು ಒಂದೆರಡು ಹೆಜ್ಜೆ ಮುಂದೆ ಹೋಗಿ ಬಿಟ್ಟಿರುವೆನೇನೋ.... ಆದರೆ ಒಂದಲ್ಲ ಒಂದು ದಿನ ದೇಶ ನನ್ನ ಮಾತನ್ನು ಕೇಳಬೇಕಾಗುತ್ತದೆ....!' ಎಂಬ ಮಾತು ಇಲ್ಲಿ ಅರ್ಥಪೂರ್ಣವಾಗಿ ಅನುರಣಿಸುತ್ತದೆ.

ಹಾಗಾಗಿ, 'ಮರಳಿ ಬರಲಿದೆ ಸಮಾಜವಾದ!' ಎಂಬ ಈ ಪುಸ್ತಕದ ಶೀರ್ಷಿಕೆ ಹೊಸ ಅರ್ಥ(Value)ವನ್ನೇ ಪಡೆಯುತ್ತದಲ್ಲದೆ, ಹೊಸ ರಾಜಕೀಯ ಸಂದರ್ಭ(Perspective)ವನ್ನು ಸೃಷ್ಟಿಸುತ್ತದೆ ಎಂದು ನಾನು ಭಾವಿಸಿದ್ದೇನೆ. ಇಲ್ಲಿನ ಲೇಖನಗಳು ಈ ಹೊಸ ಅರ್ಥವನ್ನು, ಹೊಸ ರಾಜಕೀಯ ಸಂದರ್ಭವನ್ನು ಸ್ಪಷ್ಟಪಡಿಸುವ, ವಿಷದೀಕರಿಸುವ ಪ್ರಯತ್ನಗಳನ್ನು ಮಾಡುತ್ತವೆ. ಆ ಮೂಲಕ ಈ ಪುಸ್ತಕ ಸಮಾಜವಾದಿ ಚಳುವಳಿಯ ವಸ್ತುನಿಷ್ಠ ವಿಮರ್ಶೆ ಮಾಡುವುದಲ್ಲದೆ, ಸಮಾಜವಾದಿಗಳ ವೈಯುಕ್ತಿಕ ಹಾಗೂ ರಾಜಕೀಯ ವರ್ತನೆಗಳನ್ನು ಕಟು ವಿಮರ್ಶೆಗೆ ಒಳಪಡಿಸುತ್ತದೆ. ಹಾಗೇ ಈ ವಿಮರ್ಶೆಯನ್ನು ಆಧಾರವಾಗಿಟ್ಟುಕೊಂಡು, ವರ್ತಮಾನದ ಸವಾಲುಗಳನ್ನು ಎದುರಿಸುತ್ತಾ ಹೊಸ ಸಮಾಜವಾದವನ್ನು ಕಟ್ಟಲು ಅಗತ್ಯವಾದ ವೈಚಾರಿಕ ಆಕೃತಿಗಳ ಹೊಳಹು ನೀಡಲು ಯತ್ನಿಸುತ್ತದೆ. ಹಾಗಾಗಿಯೇ ಇಲ್ಲಿನ ಲೇಖನಗಳನ್ನು ಸಮಕಾಲೀನ ಸಮಾಜವಾದಿ ಚಿಂತನೆಗಳು ಎಂದು ಕರೆಯಲಾಗಿದೆ. 'ಲೋಹಿಯಾ ಸಮಾಜವಾದ : ಮುಂದೇನು?' ಎಂಬ ಲೇಖನವನ್ನು ಪುಸ್ತಕದ ಒಟ್ಟಾರೆ ಪರಿಣಾಮದ ಕ್ರೋಢೀಕರಣದ ದೃಷ್ಟಿಯಿಂದ ಕೊನೆಯಲ್ಲಿ ಪ್ರಸ್ತುತಪಡಿಸಲಾಗಿದೆಯಾದರೂ, ಅದು ಪುಸ್ತಕದುದ್ದಕ್ಕೂ ಲಾಳಿಯಾಡುತ್ತಾ ಎಲ್ಲ ಲೇಖನಗಳಿಂದ ನೂಲು ಪಡೆದು, ಹೊಸ ಸಮಾಜವಾದದ ನೇಯ್ಗೆಗೆ ಪ್ರಯತ್ನಿಸುವುದನ್ನು ಓದುಗರು ಗಮನಿಸಬಹುದು. ಹಿಂದೂ ಮತ್ತು ಬೌದ್ಧ ಧರ್ಮಗಳ ನಡುವಣ ಸಂಬಂಧವನ್ನು ಕುರಿತ ಇಲ್ಲಿನ ಲೇಖನ ಪ್ರಸ್ತುತವಾಗುವುದೇ ಈ ನೆಲೆಯಲ್ಲಿ.

ಇಂದು ಕರ್ನಾಟಕದಲ್ಲಿ ಸಮಾಜವಾದಿ ಚಳುವಳಿ ಎಂಬುದಿಲ್ಲ. ಆದರೆ ಸಮಾಜವಾದಿ ಚಳುವಳಿಯ ದಟ್ಟ ಸ್ಮೃತಿ ಇದೆ. ಅದರಿಂದ ಸ್ಫೂರ್ತಿ ಪಡೆದೇ, ಅದರ ಮೇಲೆ ಆಸೆ ಇಟ್ಟೇ ಇಲ್ಲಿನ ಲೇಖನಗಳನ್ನು ಬರೆಯಲಾಗಿದೆ. ಇಂದಿನ ಜಾಗತೀಕರಣದ ಇಕ್ಕಟ್ಟಿನ ಸಂದರ್ಭದಲ್ಲಿ

ಸಮಾಜವಾದಿ ಚಳುವಳಿ ಯಾವುದಾದರೊಂದು ರೂಪದಲ್ಲಿ ಚಿಗುರೊಡೆಯಲೇಬೇಕು ಎಂಬ ನಂಬಿಕೆ ಈ ಪುಸ್ತಕದ ಪ್ರಕಟಣೆಗೆ ಕಾರಣವಾಗಿದೆ. ಕಾವೇರಿ ಚಳುವಳಿ ಹಾಗೂ ಕನ್ನಡ ಕಟ್ಟುವ ಕಾಯಕ ಕುರಿತ ಇಲ್ಲಿನ ಎರಡು ಲೇಖನಗಳು ಭಾರತೀಯ ಸಮಾಜವಾದದ ಎರಡು ಮುಖ್ಯ ಆಧಾರ ಸ್ತಂಭಗಳಾದ ರಾಜಕೀಯ ಅಧಿಕಾರದ ವಿಕೇಂದ್ರೀಕರಣ ಹಾಗೂ ಭಾರತೀಯ ಭಾಷಾ ಆಂದೋಲನವನ್ನು ಗಮನದಲ್ಲಿಟ್ಟುಕೊಂಡು ಈ ಸಂಗ್ರಹದಲ್ಲಿ ಅಳವಡಿಸಿಕೊಳ್ಳಲಾಗಿದೆ. ನನ್ನ ನಾಲ್ಕು ಹಳೆಯ ಲೇಖನಗಳನ್ನು ಇಲ್ಲಿ ಸೇರಿಸಿಕೊಂಡಿರುವುದೂ ಈ ದೃಷ್ಟಿಯಿಂದಲೇ – ಭಾರತೀಯ ಸಮಾಜವಾದದ ಸಮಗ್ರ ಸಂಶ್ಲೇಷಣೆಗಾಗಿ. ಕೊನೆಯಲ್ಲಿ ನೀಡಲಾಗಿರುವ ಪ್ರಶ್ನೋತ್ತರ ರೂಪದ ಎರಡು ಅನುಬಂಧಗಳು ಈ ಸಂಶ್ಲೇಷಣೆಗೆ ಪೂರಕವಾಗಿವೆ ಎಂದುಕೊಂಡಿದ್ದೇನೆ. ಹಾಗೂ, ಇಲ್ಲಿನ ಲೇಖನಗಳನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಬರೆದವಾದ್ದರಿಂದ ಕೆಲವು ವಿಷಯಗಳು ಅಲ್ಲಲ್ಲಿ ಪುನರಾವರ್ತನೆ ಆಗಿದ್ದರೆ, ಓದುಗರ ಕ್ಷಮೆ ಇರಲಿ.

ಇಲ್ಲಿನ ಇಪ್ಪತ್ತು ಲೇಖನಗಳಲ್ಲಿ ಅರ್ಧಕ್ಕಿಂತ ಹೆಚ್ಚಿನ ಲೇಖನಗಳನ್ನು ನಾನು ಇತ್ತೀಚೆಗೆ, 'ವಿಕ್ರಾಂತ ಕರ್ನಾಟಕ' ವಾರಪತ್ರಿಕೆಯ 'ವಾರದ ಒಳನೋಟ' ಅಂಕಣಕ್ಕಾಗಿ ಬರೆದವು. (ಇವುಗಳಲ್ಲಿ ಕೆಲವನ್ನು ಇಲ್ಲಿ ವಿಸ್ತರಿಸಲಾಗಿದೆ ಕೂಡಾ) ಇವನ್ನು ನನ್ನಿಂದ ಬರೆಯಿಸಿದ ಈ ಪತ್ರಿಕೆಯ ಮೂಲ ಕಾರಣಕರ್ತರಾದ ರವಿ ಕೃಷ್ಣಾರೆಡ್ಡಿ ಅವರಿಗೆ ಹಾಗೂ ಪತ್ರಿಕೆಯ ಈಗಿನ ಗೌರವ ಸಂಪಾದಕರಾದ ರವೀಂದ್ರ ರೇಷ್ಮೆ ಅವರಿಗೆ ವಿಶೇಷ ವಂದನೆ ಸಲ್ಲುತ್ತವೆ. ಹಾಗೇ, ಈ ಅಂಕಣದ ಬಗ್ಗೆ ಉತ್ಸಾಹದಿಂದ ಮಾತನಾಡುತ್ತ ನನ್ನಲ್ಲಿ ಬರೆಯುವ ಹುರುಪು ತುಂಬುತ್ತಿರುವ ಇದೇ ಪತ್ರಿಕೆಯ ಪಿ.ಕೆ. ಮಲ್ಲನಗೌಡರನ್ನು ಇಲ್ಲಿ ನೆನೆಯಲೇಬೇಕು. ಅಲ್ಲದೆ, ಇಲ್ಲಿನ ಇತರ ಲೇಖನಗಳನ್ನು ಬರೆಯಿಸಿದ/ಪ್ರಕಟಿಸಿದ 'ಸುಧಾ', 'ಅಗ್ನಿ', 'ಉದಯವಾಣಿ'; 'ಸಂವಾದ' ಹಾಗೂ 'ನಮ್ಮನಾಡು' ಪತ್ರಿಕೆಗಳ ಸಂಪಾದಕವರ್ಗಕ್ಕೂ, ಉಡುಪಿ ಸಾಹಿತ್ಯ ಸಮ್ಮೇಳನ–೨೦೦೭ರ ಸ್ಮರಣ ಸಂಚಿಕೆಯ ಸಂಪಾದಕರಿಗೂ, ವಿಶೇಷವಾಗಿ ಗೆಳೆಯ ಡಾ. ಮಹಾಬಲೇಶ್ವರ ರಾವ್ ಅವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಇಂದಿನ ಸಂದರ್ಭದಲ್ಲಿ ಇಂತಹ ಸಂಗ್ರಹದ ಅಗತ್ಯದ ಪ್ರಸ್ತಾಪ ಮಾಡಿದಾಗ, ತಮ್ಮ ಪ್ರಕಾಶನದ ಹೆಸರಿಗೆ ತಕ್ಕಂತೆ ಸಮಾಜವಾದಿ ಸಾಹಿತ್ಯ ಪ್ರಕಟಣೆಗೆ ಆದ್ಯತೆ ನೀಡುವ ಲೋಹಿಯಾ ಪ್ರಕಾಶನದ ಗೆಳೆಯ ಸಿ. ಚೆನ್ನಬಸವಣ್ಣ ಇದನ್ನು ಕೂಡಲೇ ಪ್ರಕಟಿಸಲು ಒಪ್ಪಿ, ಅಂದವಾಗಿ ಹೊರ ತಂದಿದ್ದಾರೆ. ಅವರಿಗೆ ಕೃತಜ್ಞತೆ ಎಂದರೆ ಔಪಚಾರಿಕತೆಯಾದೀತಾದರೂ, ವಂದನೆ ಹೇಳುವುದು ನನ್ನ ಕರ್ತವ್ಯ. ಹಾಗೇ ಈ ಪುಸ್ತಕದ ಮುದ್ರಣ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿರುವ ವಿಶ್ವಾಸ್ ಪ್ರಿಂಟ್ಸ್‌ನ ಮಾಲೀಕರಿಗೂ, ಸಿಬ್ಬಂದಿ ವರ್ಗಕ್ಕೂ; ಅರ್ಥಪೂರ್ಣ ಮುಖಪುಟ ವಿನ್ಯಾಸ ಮಾಡಿಕೊಟ್ಟಿರುವ ಸುಧಾಕರ ದರ್ಬೆಯವರಿಗೂ ನನ್ನ ವಂದನೆಗಳು ಸಲ್ಲುತ್ತವೆ. ಇನ್ನು ನನ್ನ ಎಲ್ಲ ಕೆಲಸಗಳಲ್ಲೂ ನನಗಿಂತ ಹೆಚ್ಚು ಆಸ್ಥೆ ವಹಿಸಿ ಸಹಕರಿಸುವ ಬಾಳ ಸಂಗಾತಿ ಸವಿತಾಳನ್ನೂ ಇಲ್ಲಿ ನೆನೆಯಲೇ ಬೇಕು.

೨೫–೯–೨೦೦೭ **ಡಿ.ಎಸ್. ನಾಗಭೂಷಣ**

ಶಿವಮೊಗ್ಗ

ಪ್ರಕಾಶಕರ ಮಾತು

ಕಳೆದ ಶತಮಾನದ ಕೊನೆಯ ದಶಕದಲ್ಲಿ ಪಿ.ವಿ. ನರಸಿಂಹರಾವ್ ಮತ್ತು ಮನಮೋಹನ್ ಸಿಂಗ್ ಅವರು ತುಂಬು ಉತ್ಸಾಹದಿಂದ ಜಾರಿಗೆ ತಂದ ಜಾಗತೀಕರಣದ ಹೊಸ ಆರ್ಥಿಕ ನೀತಿಯಿಂದ ಭಾರತೀಯ ಶ್ರೀಸಾಮಾನ್ಯನ ಬದುಕು ದುರ್ಭರ ಸ್ಥಿತಿಗೆ ಬಂದಿದೆ. ಇದರಿಂದಾಗಿ ಹೆಚ್ಚುತ್ತಿರುವ ಆರ್ಥಿಕ ಅಂತರದ ಜೊತೆಗೆ, ದೇಶದಲ್ಲಿ ಅಶಾಂತಿ ಮತ್ತು ದಬ್ಬಾಳಿಕೆಗಳು ತಲ್ಲಣವನ್ನು ಉಂಟು ಮಾಡಿವೆ.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಪರ್ಯಾಯ ಅಭಿವೃದ್ಧಿ ನೀತಿಗಳ ಬಗ್ಗೆ ಚಿಂತನೆ ಮೊಳಕೆಯೊಡೆಯುತ್ತಿದೆ. ಸಮಾಜವಾದ ಎಂದಿಗಿಂತಲೂ ಇಂದು ಹೆಚ್ಚು ಪ್ರಸ್ತುತವೆನಿಸುತ್ತದೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳೆಂಬ ತ್ರಿಕರಣಗಳು, ಬಡವ-ಬಲ್ಲಿದರ ಬಗ್ಗೆ ಮಧ್ಯೆ ಅಂತರದ ವ್ಯಾಪ್ತಿಯನ್ನು ಹಿಗ್ಗಿಸಿವೆ. ಇವೆಲ್ಲವುಗಳಿಗೆ ಪರಿಹಾರವೆಂದರೆ ಭೋಗದ ಹಸಿವೆಯನ್ನು ಕಡಿಮೆ ಮಾಡಿಕೊಳ್ಳುವುದು. ಸರಳತೆ, ಸಹಬಾಳ್ವೆ, ಸೋದರತ್ವ, ಹಂಚಿಕೊಂಡು ಬಾಳುವುದು ಈ ಎಲ್ಲಾ ಸೂತ್ರಗಳು ನಮ್ಮ ಸಂಸ್ಕೃತಿಯಲ್ಲೇ ಇವೆ. ಹಂಚಿಕೊಂಡು ಬಾಳುವ ಸಂಸ್ಕೃತಿಯ ಜಾಗದಲ್ಲಿ ಇಂದು ದೋಚಿಕೊಂಡು ಹೋಗುವ ಸಂಸ್ಕೃತಿ ಬಂದು ಕೂತಿದೆ.

ಪ್ರಕಾಶನದ ಬಗ್ಗೆ, ವೈಯಕ್ತಿಕವಾಗಿ ನನ್ನ ಬಗ್ಗೆ ತುಂಬ ಪ್ರೀತಿ ಇಟ್ಟುಕೊಂಡಿರುವ ಗೆಳೆಯ ಡಿ.ಎಸ್. ನಾಗಭೂಷಣ ಅವರ ಈ ಚಿಂತನೆಗಳ ಸಂಗ್ರಹವನ್ನು ಪ್ರಕಟಿಸಲು ಪ್ರಕಾಶನಕ್ಕೆ ತುಂಬ ಸಂತೋಷವೆನಿಸುತ್ತದೆ. ಪ್ರಕಟಣೆಗೆ ಅನುವು ಮಾಡಿಕೊಟ್ಟ ನಾಗಭೂಷಣ ಅವರಿಗೆ ಪ್ರಕಾಶನ ಕೃತಜ್ಞವಾಗಿದೆ. ಅರ್ಥಪೂರ್ಣವಾದ ಮುಖಪುಟ ವಿನ್ಯಾಸ ಮಾಡಿಕೊಟ್ಟ ಕಲಾವಿದ ಸುಧಾಕರ ದರ್ಬೆ ಅವರಿಗೆ, ಎಂದಿನಂತೆ ಅಚ್ಚುಕಟ್ಟಾಗಿ ಮುದ್ರಣ ಮಾಡಿಕೊಟ್ಟ ವಿಶ್ವಾಸ್ ಪ್ರಿಂಟ್ಸ್‌ನ ಗೆಳೆಯರಿಗೆ ಕೃತಜ್ಞರಾಗಿದ್ದೇವೆ.

ಸಿ. ಚನ್ನಬಸವಣ್ಣ
ಪ್ರಕಾಶನದ ಪರವಾಗಿ

ಪರಿವಿಡಿ

ಭಾರತೀಯ ಸಮಾಜವಾದವನ್ನು
ನನ್ನಲ್ಲಿ ಒಂದು ಸೌಂದರ್ಯವನ್ನಾಗಿ ಬಿತ್ತಿದ
ಕೆ.ಪಿ. ಪೂರ್ಣಚಂದ್ರ ತೇಜಸ್ವಿ
ಅವರ ನೆನಪಿಗೆ

ಈ ಕೃತಿ ಅರ್ಪಿತ

ಕನಸು, ಬಂಡಾಯಗಳ ನಾಯಕ : ಲೋಹಿಯಾ

"ಸತ್ಯ ಅನ್ನುವುದು ಅಖಂಡವಾದದ್ದು. ಅಲ್ಲದಿದ್ದರೆ ಅದು ಸತ್ಯ ಆಗಿರುವುದಿಲ್ಲ. ಖಂಡ ಸತ್ಯ ಅಥವಾ ಪಾರ್ಶ್ವಸತ್ಯ ಎನ್ನುವುದು ಅಭಿವ್ಯಕ್ತಿಯಲ್ಲಿನ ದೋಷವಷ್ಟೆ." ಈ ಮಾತುಗಳನ್ನಾಡಿದ ಡಾ|| ರಾಮಮನೋಹರ ಲೋಹಿಯಾ ಅವರ ಬಗ್ಗೆ ಏನು ಬರೆದರೂ ಅದು ಖಂಡ ಸತ್ಯವೇ ಆಗಿರುತ್ತದೆ. ಏಕೆಂದರೆ ಸುತ್ತ ಹಬ್ಬುತ್ತಿದ್ದ ಯಾಂತ್ರಿಕ ಸಂಸ್ಕೃತಿಯ ನಡುವೆಯೂ ಸತ್ಯಾನ್ವೇಷಣೆಯನ್ನು ಒಂದು ವ್ಯಸನವನ್ನೇ ಮಾಡಿಕೊಂಡು ಹೋರಾಡಿ ಸತ್ತ ಚೇತನ ಈತ. ಇಂತಹ ಚೇತನದ ಬಗ್ಗೆ ಏನು ಹೇಳಹೋದರೂ ಅದು ಅಪೂರ್ಣವಾಗಿ ಉಳಿಯುತ್ತದೆ. ಆತ ರೂಪಿಸಿದ ಸಿದ್ಧಾಂತದಂತೆ, ನಡೆಸಿದ ಹೋರಾಟದಂತೆ, ಬಿಟ್ಟು ಹೋದ ಬದುಕಿನಂತೆ. ೧೯೬೭ರಲ್ಲಿ ತನ್ನ ೫೭ನೇ ವಯಸ್ಸಿನಲ್ಲಿ ಭಾರತದ ರಾಜಕಾರಣಕ್ಕೆ ಹೊಸದೊಂದು ಶಕ್ತಿ, ತೇಜಸ್ಸು ಹಾಗೂ ದಿಕ್ಕು ಕೊಡಬಲ್ಲಷ್ಟು ಹಿಡಿತ ಸಾಧಿಸಿದ್ದಾನೆ ಎನ್ನುವಷ್ಟರಲ್ಲೇ ಈತ ತನ್ನ ಸಮಾನತೆಯ ಹುಚ್ಚಿನಲ್ಲಿ, ತನ್ನ ಒಂದು ಸಣ್ಣ ಶಸ್ತ್ರಚಿಕಿತ್ಸೆಗಾಗಿ ಭಾರತದ ಸಾಮಾನ್ಯ ಪ್ರಜೆಗೆ ದೊರಕುವ ವೈದ್ಯಕೀಯ ಸೌಲಭ್ಯಗಳಿಗಿಂತ ಹೆಚ್ಚಿನ ವಿಶೇಷ ಸೌಲಭ್ಯ ಪಡೆಯುವುದು ಅನೀತಿಯುತ ಎಂದು ಸರಕಾರಿ ಆಸ್ಪತ್ರೆಗೆ ಸೇರುವ ಹಠ ಮಾಡಿ ಅಸುನೀಗಿದ. ಇದೇ ಇಂದು ರಾಷ್ಟ್ರದ ರಾಜಧಾನಿಯಲ್ಲಿ ಅತ್ಯಂತ ಸುಸಜ್ಜಿತ ಆಸ್ಪತ್ರೆಗಳಲ್ಲೊಂದಾಗಿ ಬೆಳೆದಿರುವ ಡಾ|| ರಾಮ ಮನೋಹರ ಲೋಹಿಯಾ ಆಸ್ಪತ್ರೆ. ಈತನನ್ನು ಇವರ ಮಿತ್ರರು ಹಾಗೂ ಶತ್ರುಗಳು ಪಲವಾರು ಹೆಸರುಗಳಿಂದ ಕರೆದಿದ್ದಾರೆ. ಬಿರುದು ಬಾವಲಿಗಳಿಂದ ಅಲಂಕರಿಸಿದ್ದಾರೆ. "ಅರೆಹುಚ್ಚ", "ಅಧಿಕ ಪ್ರಸಂಗಿ", "ಭೋಳೆ ಕನಸುಗಾರ", "ನೆಹರೂ ದ್ವೇಷಿ", "ಕೇಂದ್ರಹೀನ ದಾರ್ಶನಿಕ", "ವಿಗ್ರಹ ಭಂಜಕ", "ಬಂಡುಕೋರ", "ವಿಚಾರ ದೈತ್ಯ", "ಬುದ್ಧಿಭಾವಗಳ ಜ್ವಾಲಾಮುಖಿ" ಇತ್ಯಾದಿ ಇತ್ಯಾದಿ. ಭೋಲಾ ಚಟರ್ಜಿ ಎಂಬ ಬಂಗಾಳಿ ಗೆಳೆಯನ ಪ್ರಕಾರ ಲೋಹಿಯಾ, "ಸೂಯೆಜ್‌ನಿಂದ ಪೂರ್ವಕ್ಕೆ ಬಾಳಿದ; ಅರಿಸ್ಟಾಟಲ್‌ನ ಕಾವ್ಯ ಮೀಮಾಂಸೆ ಆಗಿರಲಿ, ಮಾರ್ಕ್ಸ್‌ನ ಬಂಡವಾಳಶಾಹಿ ವಿಶ್ಲೇಷಣೆಯೇ ಆಗಿರಲಿ, ಗಾಂಧೀಜಿಯ ಅಹಿಂಸೆ ಮತ್ತು ಸತ್ಯಾಗ್ರಹಗಳ ಪರಿಕಲ್ಪನೆಗಳೇ ಆಗಿರಲಿ ಅಥವಾ ಉಪನಿಷತ್ತುಗಳ ವ್ಯಾಖ್ಯಾನವೇ ಆಗಿರಲಿ, ಇವೆಲ್ಲವುಗಳ ಬಗ್ಗೆ ಕೇಳುವವರನ್ನು ಮೂಕವಿಸ್ಮಿತರನ್ನಾಗಿ ಮಾಡುವಷ್ಟು ಆಳವಾದ ಚರ್ಚೆ ನಡೆಸಬಲ್ಲಂತಹ ಜ್ಞಾನಕೋಶ ಸಮಾನವಾದದ್ದೆಂದು ಹೇಳಬಹುದಾದ ಬಹು ಆಯಾಮಗಳ ವ್ಯಕ್ತಿತ್ವದ ಕೊನೆಯ ಮೇಧಾವಿ". ಈ ವರ್ಣನೆ ಸ್ವಲ್ಪ ಹೆಚ್ಚಿರಬಹುದು ಅಥವಾ

ಸ್ವಲ್ಪ ಕಡಿಮೆಯೂ ಇರಬಹುದು; ಆದರೆ ಲೋಹಿಯಾ ಎಂಬ ವ್ಯಕ್ತಿ, ಸ್ವಾತಂತ್ರ್ಯೋತ್ತರ ರಾಜಕಾರಣದಲ್ಲಿ ನಡೆಸಿದ ಪ್ರಯೋಗಗಳ ವಿವಿಧ ಆಯಾಮಗಳನ್ನು ಒಂದು ಒಟ್ಟಂದದಲ್ಲಿ ಗ್ರಹಿಸಬಲ್ಲವರಿಗೆ ಈ ವರ್ಣನೆ ಸುಳ್ಳು ಎನಿಸುವುದಿಲ್ಲ.

೧೯೧೦ರ ಮಾರ್ಚ್ ೨೩ ರಂದು ಈಗಿನ ಉತ್ತರ ಪ್ರದೇಶದ ಅಕ್ಬರ್‌ಪುರದಲ್ಲಿ ದೇಶಭಕ್ತ ಮಾರ್‍ವಾಡಿ ಕುಟುಂಬವೊಂದರಲ್ಲಿ ಜನಿಸಿದ ರಾಮಮನೋಹರ ಲೋಹಿಯಾ, ಕಲ್ಕತ್ತೆ, ಮುಂಬಯಿಗಳಲ್ಲಿ ಶಾಲಾ ಕಾಲೇಜು ವಿದ್ಯಾಭ್ಯಾಸ ಮುಗಿಸಿ, ಬ್ರಿಟನ್ ಆಳುವವರ ದೇಶವೆಂದು, ಅದು ಬಿಟ್ಟು ಜರ್ಮನಿಯ ಬರ್ಲಿನ್ ವಿಶ್ವವಿದ್ಯಾಲಯದಿಂದ "ಉಪ್ಪು ಮತ್ತು ಸತ್ಯಾಗ್ರಹ" ಎಂಬ ಒಂದು ಸಂಪ್ರಬಂಧಕ್ಕಾಗಿ ಡಾಕ್ಟರೇಟ್ ಪಡೆದು ಭಾರತಕ್ಕೆ ಹಿಂದಿರುಗಿದಾಗ ಅವರಿಗೆ ೨೨ ವರ್ಷ. ತಂದೆಯ ಮೂಲಕ ಗಾಂಧೀಜಿಯ ದಟ್ಟ ಪ್ರಭಾವಕ್ಕೆ ಒಳಗಾಗಿದ್ದ ಅವರು, ವಸಾಹತುಶಾಹಿಯ ನೌಕರಿ ನಿರಾಕರಿಸಿ ಕಾಂಗ್ರೆಸ್ ಆಂದೋಲನ ಸೇರಿದರು. ೧೯೩೪ರಲ್ಲಿ ಕಾಂಗ್ರೆಸ್‌ನೊಳಗೇ ಸಮಾಜವಾದಿ ಕೂಟ ರಚಿಸಿದ ಪ್ರಮುಖರಲ್ಲಿ ಇವರೊಬ್ಬರು. ೧೯೪೨ರ "ಭಾರತ ಬಿಟ್ಟು ತೊಲಗಿ" ಚಳುವಳಿಯ ಭೂಗತ ಚಟುವಟಿಕೆಗಳ ಸೂತ್ರಧಾರರಲ್ಲೊಬ್ಬರಾಗಿದ್ದ ಲೋಹಿಯಾ, ಭಾರತದ ವಿಭಜನೆಯನ್ನು ಕಾಂಗ್ರೆಸ್ ಕಾರ್ಯಕಾರಣಿಯ ನಿರ್ಣಾಯಕ ಸಭೆಯಲ್ಲಿ ಖಂಡ ತುಂಡವಾಗಿ ವಿರೋಧಿಸಿದ ಕೆಲವೇ ಕೆಲವರಲ್ಲಿ ಒಬ್ಬರು. ಹಾಗೆ ಭಾರತದ ವಿಭಜನೆಯ ದುರಂತ ರಾಜಕೀಯ ನಾಟಕವನ್ನು ಗಾಂಧೀಜಿ ಜೊತೆಯಲ್ಲಿದ್ದುಕೊಂಡು ಹತ್ತಿರದಿಂದ ಕಂಡವರು. "ಭಾರತದ ವಿಭಜನೆಯ ತಪ್ಪಿತಸ್ಥರು" (Guilty men of India's Partition) ಎಂಬ ಅವರ ಪುಸ್ತಕ ಈ ದುರಂತ ನಾಟಕದ ಪ್ರತಿ ದೃಶ್ಯವನ್ನೂ ತೀಕ್ಷ್ಣವಾದ ವಿಮರ್ಶೆಗೆ ಒಳಪಡಿಸುತ್ತದಲ್ಲದೆ, ಸ್ವಾತಂತ್ರ್ಯೋತ್ತರ ಭಾರತದ ರಾಜಕಾರಣದ ವಿಕೃತಿಗಳ ಬೇರುಗಳನ್ನು ಅಧಿಕಾರ ಹಿಡಿದವರ ಚಾರಿತ್ರ್ಯದ ಹಿನ್ನೆಲೆಯಲ್ಲಿ ಹುಡುಕಲು ಹವಣಿಸುತ್ತದೆ.

ಸ್ವಾತಂತ್ರ್ಯಾನಂತರ ಕಾಂಗ್ರೆಸ್‌ನೊಳಗಿನ ಒತ್ತಡದಿಂದಾಗಿ ಸಮಾಜವಾದಿ ಗುಂಪು ಹೊರಬರಬೇಕಾಗಿ ಬಂದಾಗ ರೂಪುಗೊಂಡ ಸಮಾಜವಾದಿ ಪಕ್ಷಕ್ಕೆ ಆಚಾರ್ಯ ನರೇಂದ್ರ ದೇವ ಹಾಗೂ ಜಯಪ್ರಕಾಶ್ ನಾರಾಯಣ್ ಅವರೊಂದಿಗೆ ಒಂದು ನಿರ್ದಿಷ್ಟ ಸಿದ್ಧಾಂತ, ಸಂಘಟನೆ ಹಾಗೂ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವರು ಲೋಹಿಯಾ. ೧೯೫೨ರ ಚುನಾವಣೆಗಳಲ್ಲಿ ಅನುಭವಿಸಿದ ಭಾರೀ ಸೋಲಿನ ನಂತರ ಪಂಚಮಡಿ ಎಂಬಲ್ಲಿ ದಿಗ್ಭ್ರಮೆ ಹಾಗೂ ಹತಾಶೆಗಳೊಂದಿಗೆ ಸಮಾವೇಶಗೊಂಡ ಸಮಾಜವಾದಿ ಪಕ್ಷಕ್ಕೆ ತಮ್ಮ ನವನವೀನ ಆಲೋಚನಾ ಲಹರಿಯ ಅಧ್ಯಕ್ಷ ಭಾಷಣದ ಮೂಲಕ ಹೊಸಶಕ್ತಿ ಹಾಗೂ ದಿಕ್ಕು ನೀಡಿದವರು ಡಾ|| ಲೋಹಿಯಾ. "ಸಮಾಜವಾದದ ತಾತ್ವಿಕ ಅಡಿಗಲ್ಲುಗಳು" (Doctrinal foundations of Socialism) ಎಂಬ ಶೀರ್ಷಿಕೆಯ ಈ ವಿಚಾರಧಾರೆ, ಇಂದಿಗೂ ಭಾರತೀಯ ಸಮಾಜವಾದವೆಂಬುದೇನಾದರೂ ಇದ್ದರೆ, ಅದರ ಬೆನ್ನೆಲುಬಾಗಿ ಉಳಿದಿದೆ.

ಲೋಹಿಯಾ ಅವರ ವ್ಯಕ್ತಿತ್ವವನ್ನು ಅದರಿಂದ ಒಡಮೂಡಿದ ವಿಚಾರಗಳನ್ನೂ ಅದರದೇ ಆದ ಸೃಜನಶೀಲ ನೆಲೆಯಲ್ಲಿ ಅರ್ಥೈಸಿಕೊಳ್ಳಲು ಈ ವ್ಯಕ್ತಿತ್ವ ಎರಕಗೊಂಡ ಹಿನ್ನೆಲೆಯನ್ನೂ ಗಮನಿಸಬೇಕಾಗುತ್ತದೆ. ತಾಯಿ ಇಲ್ಲದ ತಬ್ಬಲಿಯಾಗಿ, ಗಾಂಧಿ ಬಳಿ ಇರುತ್ತಿದ್ದ ತಂದೆಯಿಂದ ದೂರಾಗಿ ಮನೆಯಲ್ಲಿ ಒಬ್ಬಂಟಿಯಾಗಿ, ನೆರೆಯ ಅಯೋಧ್ಯೆ ಹಾಗೂ ಮಥುರಾಗಳಿಂದ ಹೊಮ್ಮುತ್ತಿದ್ದ ರಾಮ ಹಾಗೂ ಕೃಷ್ಣರ ಕಥ-ಉಪಕಥಾನಕಗಳ ನಡುವೆ ಬಾಲ್ಯವನ್ನೂ, ವೇದೋಪನಿಷತ್ತುಗಳ ಪುನರುದ್ದೀಪನದ ಮೂಲಕ ವಿಕಾಸಗೊಂಡ ವಂಗ ನವೋದಯದ ಕೇಂದ್ರ ಕಲ್ಕತ್ತದಲ್ಲಿ ಹದಿಹರೆಯವನ್ನೂ, ಜಗತ್ತಿನ ಮುಖವನ್ನೇ ಬದಲಿಸಲಿದ್ದ ಎರಡು ಮಹಾಯುದ್ಧಗಳ ಪೈಕಿ ಮೊದಲನೆಯದರ ಕಾರ್ಮೋಡಗಳು ಕವಿಯುತ್ತಿದ್ದ ಯೂರೋಪ್‌ನಲ್ಲಿ ಹರೆಯದಾರಂಭವನ್ನೂ ಕಳೆದ ಲೋಹಿಯಾ, ಸ್ವತಂತ್ರ ವಿಚಾರ ಮಥನದ ಶಕ್ತಿ ರೂಢಿಸಿಕೊಳ್ಳುವ ವೇಳೆಗೆ, ತಾರಕ ಘಟ್ಟವನ್ನು ಮುಟ್ಟುತ್ತಿದ್ದ ಭಾರತದ ಸ್ವಾತಂತ್ರ್ಯ ಸಂಗ್ರಾಮದ ನೇತೃತ್ವ ವಹಿಸಿದ್ದ ಹಿರಿಯ ಚೇತನಗಳ ಮಧ್ಯೆ ಇದ್ದರು. ಗಾಂಧೀಜಿಯ ವ್ಯಕ್ತಿತ್ವ ತನ್ನೆಲ್ಲಾ ಪ್ರಯೋಗಶೀಲತೆಯ ಹಂತಗಳನ್ನು ದಾಟಿ ಒಂದು ಒಟ್ಟಂದವನ್ನು ರೂಪಿಸಿಕೊಳ್ಳುತ್ತಿದ್ದ ಉತ್ಕಟ ಕ್ಷಣಗಳ ಕಾಲವದು. ಈ ಉತ್ಕಟ ಕ್ಷಣಗಳು ಊದುತ್ತಿದ್ದ ವಿಚಾರ ಸಂಘರ್ಷದ ಕುಲುಮೆಯಲ್ಲಿ ಪುಟಗೊಂಡ ಲೋಹಿಯಾ ವ್ಯಕ್ತಿತ್ವದ ಸ್ಥಿರಭಿತ್ತಿ "ವ್ಯವಸ್ಥಾ ಅವಿಧೇಯತೆ" (Non confirmism) ಯೇ ಆಯಿತು. ಗಾಂಧೀಜಿ ಕೂಡಾ ಅಂತಿಮ ದರ್ಶನದಲ್ಲಿ ಸ್ಫಟಿಕಶುದ್ಧ ಆರಾಜಕತಾವಾದಿ ತಾನೇ?

ಮನುಷ್ಯ ತನ್ನೆಲ್ಲಾ ಸೃಜನಶೀಲತೆಯೊಂದಿಗೆ ಸಮೃದ್ಧವಾಗಿ ಪ್ರಕಟಗೊಳ್ಳುವ ಘಳಿಗೆಯೇ ಬದುಕಿನ ಶುಭ ಘಳಿಗೆ. ಅದೇ ಎಲ್ಲ ನೋವು, ದುಃಖ, ನಿರಾಶೆ, ಭಯ, ಕ್ರೋಧಗಳಿಂದ ಬದುಕು ಬಿಡುಗಡೆಗೊಳ್ಳುವ ಕ್ಷಣ ಕೂಡ. ಇಂತಹ ಬಿಡುಗಡೆಯ, ವಿಮೋಚನೆಯ ಕನಸು ಕಂಡವರು ಲೋಹಿಯಾ. "ಪ್ರಭುತ್ವ" ವಿದ್ದೆಡೆ ಭಯ ಇರುತ್ತದೆ. ಈ ಭಯವೇ ವ್ಯಕ್ತಿಯ ಎಲ್ಲ ವಿಕೃತಿಗಳಿಗೂ ಮೂಲಕಾರಣ. ಆದುದರಿಂದ ಈ ಭಯದ ಬೀಜವಿರದ "ಪ್ರಭುತ್ವ"ವನ್ನು ಸ್ಥಾಪಿಸುವುದೇ ಲೋಹಿಯಾ ಅವರ ಸಿದ್ಧಾಂತ ಹಾಗೂ ಹೋರಾಟಗಳ ಮೂಲಪ್ರೇರಣೆಯಾಗಿತ್ತು.

ಲೋಹಿಯಾ ಕಂಡ ಜಗತ್ತು ಬಂಡವಾಳಶಾಹಿ ಹಾಗೂ ಕಮ್ಯುನಿಸ್ಟ್ ಎಂಬ ಎರಡು ಶಕ್ತಿ ಪಾಳೆಯಗಳು ತಮ್ಮ ಪ್ರಭಾವ ವಲಯಗಳನ್ನು ವಿಸ್ತರಿಸಿಕೊಳ್ಳಲು ಎದುರು ಬದುರಾಗಿ ನಿಂತ ರಣರಂಗವಾಗಿತ್ತು. ವಸಾಹತು ಶಾಹಿಯ ಫಲವಾದ ಬಂಡವಾಳದ ಕ್ರೋಢೀಕರಣ ಪ್ರೇರೇಪಿಸಿದ ವೈಜ್ಞಾನಿಕ ಅನ್ವೇಷಣೆಗಳ ಅನ್ವಯದಿಂದ ಹುಟ್ಟಿದ ಆಧುನಿಕ ತಂತ್ರಜ್ಞಾನದ ಮುಖೇನ ಬೃಹತ್ ಉತ್ಪಾದನಾ ಸಾಮರ್ಥ್ಯ ಸಾಧ್ಯವಾಯಿತು. ಇದರ ಮೂಲಕ ಸಾಧಿಸಬಹುದಾದ ಭೌತಿಕ ಸಮೃದ್ಧಿ, ಮನುಷ್ಯನನ್ನು ಎಲ್ಲ ಬವಣೆಗಳಿಂದ ಮುಕ್ತಗೊಳಿಸಿ ಆಧ್ಯಾತ್ಮಿಕಗೊಳಿಸುವುದು ಎಂಬ ಮೂಲನಂಬಿಕೆಯುನ್ನು ಆಧರಿಸಿದ ಈ ಎರಡೂ "ಪ್ರಭುತ್ವ"ಗಳು, ಮನುಷ್ಯನನ್ನು "ಭಯ"ದಿಂದ ಬಿಡುಗಡೆಗೊಳಿಸಲು ವಿಫಲಗೊಂಡಿದ್ದವು. ಅಷ್ಟೇ ಅಲ್ಲ, ಇವು ತಮ್ಮೊಳಗಿನ ತಾತ್ವಿಕ ಹಾಗೂ ಸಾಂಸ್ಥಿಕ ವಿರೋಧಾಭಾಸಗಳಿಂದಾಗಿ

ಮನುಷ್ಯನನ್ನು "ಭಯ"ದಿಂದ ಬಿಡುಗಡೆ ಗೊಳಿಸುವುದಿರಲಿ, ಆತನನ್ನು "ಭಯ"ವೂ ಅನುಭವಕ್ಕೆ ಬಾರದಂತಹ "ಜಡತೆ"ಗೆ ದೂಡುವ ವ್ಯವಸ್ಥೆಯ ಪ್ರತೀಕಗಳಾಗಿದ್ದುವು. ಬಂಡವಾಳಶಾಹಿಯು ಮುಕ್ತ ಪೈಪೋಟಿಯನ್ನು ಪ್ರತಿಪಾದಿಸುತ್ತಾ, ಜಗತ್ತಿನ ಒಂದು ಭಾಗದ ಮನುಷ್ಯನನ್ನು ಸಮೃದ್ಧಿಯ ಆಯಾಸದಿಂದ ಹುಟ್ಟುವ ಪಾರಮಾರ್ಥಿಕ ಭಯಕ್ಕೂ, ಈ ಸಮೃದ್ಧಿಗಾಗಿ ಕೊಳ್ಳೆ ಹೊಡೆಯಲ್ಪಟ್ಟ ಜಗತ್ತಿನ ಇನ್ನೊಂದು ಭಾಗದ ಮನುಷ್ಯನನ್ನು ಬಡತನದ ಭಯಾನಕತೆಯಿಂದ ಹುಟ್ಟುವ ಲೌಕಿಕ ಭಯಕ್ಕೂ ದೂಡಿದ್ದರೆ; ಕಮ್ಯೂನಿಸಂ ಸಮಾನತೆಯನ್ನು ಪ್ರತಿಪಾದಿಸುತ್ತಾ, ಇಡೀ ಜಗತ್ತನ್ನೇ "ಜಾಗತಿಕ ಕಾರ್ಮಿಕ ಕ್ರಾಂತಿ" ಎಂಬ ಧರ್ಮಯುದ್ಧದ ಮೂಲಕ ಒಂದು ಸರ್ವಾಧಿಕಾರಿ "ಮಹಾಪ್ರಭುತ್ವ" ವನ್ನು ಕಟ್ಟುವ ರಾಕ್ಷಸ ಭಯವನ್ನು ಹುಟ್ಟು ಹಾಕಿತ್ತು.

ಈ ಎರಡೂ, ಮಿತಿ ಇಲ್ಲದ ಸುಖದ ಮಾಯಾಮೃಗವನ್ನು ಬೆನ್ನಟ್ಟ ಬಯಸುವ ಆಕ್ರಮಣಶೀಲ ನಾಗರಿಕತೆ ರೂಪಿಸಿದ ಮನಸ್ಸಿನ ಎರಡು ಅಭಿವ್ಯಕ್ತಿ ರೂಪಗಳಷ್ಟೇ ಎಂದು ಹೇಳುವ ಲೋಹಿಯಾ, ಹೊಸದಾಗಿ ವಿಮೋಚನೆಗೊಂಡ ಶೋಷಿತ ರಾಷ್ಟ್ರಗಳು; ಸದ್ಯಕ್ಕೆ ಈ ಎರಡೂ ಪಾಳೆಯಗಳಲ್ಲಿನ ಸಮಾಜಗಳು ತಮ್ಮ ಆಂತರಿಕ ವಿರೋಧಾಭಾಸಗಳಿಂದಲೇ ಕುಸಿದಾಗ ಆರಿಸಿಕೊಳ್ಳಲೇಬೇಕಾದ ಸತ್ಯ, ಸಮತೆ ಮತ್ತು ಸೌಂದರ್ಯಗಳನ್ನಾಧರಿಸಿದ ಹೊಸ ನಾಗರಿಕತೆಯೊಂದನ್ನು ಸಲಹುವ "ಪ್ರಭುತ್ವ"ವನ್ನು ರೂಪಿಸಿಕೊಳ್ಳಬೇಕು ಎನ್ನುತ್ತಾರೆ. ಏಕೆಂದರೆ ಸೌಂದರ್ಯದ ಮೇಲೆ ಕಣ್ಣಿಟ್ಟಿರುವ ಬಂಡವಾಳಶಾಹಿ ನಾಗರಿಕತೆಗೆ ಸತ್ಯ ಮತ್ತು ಸಮತೆಗಳ ನೋಟಗಳು ಬೆರೆಯದ ಸೌಂದರ್ಯ ಅಶ್ಲೀಲವಾಗುವುದು ಎಂಬ ಪರಿವೆ ಇಲ್ಲ; ಹಾಗೆಯೇ ಸಮತೆಯ ಮೇಲೆ ಕಣ್ಣಿಟ್ಟಿರುವ ಕಮ್ಯೂನಿಸ್ಟ್ ನಾಗರಿಕತೆಗೆ ಸತ್ಯ ಮತ್ತು ಸೌಂದರ್ಯಗಳ ನೋಟಗಳು ಬೆರೆಯದ ಸಮತೆ ವಿಷಮವಾಗುವುದು ಎಂಬ ಪರಿವೆ ಇಲ್ಲ ಎಂಬುದು ಲೋಹಿಯಾ ಅವರ ತಾತ್ವಿಕ ದರ್ಶನದ ಮುಖ್ಯ ಧ್ವನಿ.

ಸತ್ಯ, ಸಮತೆ ಮತ್ತು ಸೌಂದರ್ಯ - ಈ ಮೂರು ಕಾಳಜಿಗಳೂ ಏಕೀಭವಿಸಿಕೊಂಡ ಹೊಸ ನಾಗರಿಕತೆಯ ನಿರ್ಮಾಣದ ನೇತೃತ್ವವನ್ನು ಭಾರತ ವಹಿಸಬಹುದಾಗಿದೆ ಎಂಬುದು ಲೋಹಿಯಾ ಅವರ ನಂಬಿಕೆಯಾಗಿತ್ತು. ಏಕೆಂದರೆ ಇಂತಹ ನಾಗರಿಕತೆಯೊಂದರ ಹೊಳಹು ನೀಡಿದ್ದ ಗಾಂಧೀಜಿ ಎಂಬ ಘನ ವ್ಯಕ್ತಿತ್ವವನ್ನು ಭಾರತ ಜಗತ್ತಿಗೆ ನೀಡಿತ್ತು. ಹೀಗಾಗಿ ತಮ್ಮ ತಾತ್ವಿಕ ದರ್ಶನದ ಅನುಷ್ಠಾನಕ್ಕಾಗಿ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಲೋಹಿಯಾ ಬಳಸುವುದು ಗಾಂಧೀಜಿಯ ಒಳತೋಟಿಗಳನ್ನೇ. ಗಾಂಧೀಜಿಯ ಗುರಿ ಎನ್ನುವುದು ತಲುಪುವುದಲ್ಲ, ಆಗುವುದು ಎಂಬ ನಂಬಿಕೆಯಲ್ಲಿನ ಸತ್ಯ ನಿಷ್ಠುರತೆಯನ್ನೂ, ಮೇಲ್ಜಾತಿಯವನಾಗಿ ಹುಟ್ಟಿದುದರ ಪಾಪ ತೊಳೆದುಕೊಳ್ಳಲು ಅಸ್ಪೃಶ್ಯನಾಗಿ ಪುನರ್ಜನ್ಮ ಪಡೆಯುವ ಇಚ್ಛೆಯಲ್ಲಿನ ಸಮತೆಯ ಹಂಬಲವನ್ನೂ, ಯಂತ್ರ ಮನುಷ್ಯನನ್ನು ಹೃದಯಹೀನನನ್ನಾಗಿ ಮಾಡುವುದು ಎಂಬ ಕಾಣ್ಕೆಯಲ್ಲಿನ ಸೌಂದರ್ಯ ದೃಷ್ಟಿಯನ್ನೂ, ಲೋಹಿಯಾ ಗುರುತಿಸಿದ್ದರು. ಈ ಒಳನೋಟಗಳೇ ಮುಂದೆ ಲೋಹಿಯಾ ಪ್ರತಿಪಾದಿಸಿದ ಭಾರತೀಯ ಸಮಾಜವಾದದ ಮೂರು ಮುಖ್ಯ ಅಡಿಗಲ್ಲುಗಳಾದ ನಿರಂತರ ನಾಗರಿಕ ಅಸಹಕಾರ ಸತ್ಯಾಗ್ರಹ ಆಂದೋಲನ,

ಜಾತಿ ವಿನಾಶ ಆಂದೋಲನ ಹಾಗೂ ಸಣ್ಣ ಘಟಕ ತಂತ್ರಜ್ಞಾನ (Small unit technology) ಆಂದೋಲನಗಳಿಗೆ ಪ್ರೇರಣೆ ಒದಗಿಸಿದ್ದು.

"ನಾಗರಿಕ ಅಸಹಕಾರ ಸತ್ಯಾಗ್ರಹಿಗೆ ಚರಿತ್ರೆಯ ಪಾಠ ಗೊತ್ತಿದೆ. ಕ್ರೂರಿಗಳು ಬದುಕುವುದು ಹೇಡಿಗಳಿರುವೆಡೆಗಳಲ್ಲಿ ಮಾತ್ರ ಎಂಬುದು ಗೊತ್ತಿದೆ. ಜಗತ್ತಿನ ಜನತೆ ೯೯ ವರ್ಷಗಳ ಸಾಧು ಗೋವುಗಳ ಬದುಕು ಹಾಗೂ ನಂತರದ ಒಂದು ವರ್ಷದ ಹುಲಿಯ ಬದುಕಿನ ನಡುವೆ ತುಯ್ದಾಡುತ್ತದೆ ಎಂಬುದು ಗೊತ್ತಿದೆ. ದೀರ್ಘ ಹಾಗೂ ನಿಸ್ಸಹಾಯಕ ಶರಣಾಗತಿಯ ನಂತರ ಅದು ಸಿಡಿದೆದ್ದು ನಿಲ್ಲುತ್ತದೆ, ಕ್ರೂರ ವ್ಯವಸ್ಥೆಯೊಂದನ್ನು ಹೊಡೆದುರುಳಿಸಿ ಮತ್ತೊಂದು ಕ್ರೂರ ವ್ಯವಸ್ಥೆಯನ್ನು ಕಟ್ಟಲು... ಎಂಬುದು ಗೊತ್ತಿದೆ" ಎನ್ನುವ ಲೋಹಿಯಾಗೆ ತಾವು ಪ್ರತಿಪಾದಿಸಿದ್ದ ಸಮಾಜವಾದವೂ ಸೇರಿದಂತೆ ಎಲ್ಲ ವ್ಯವಸ್ಥೆಗಳೂ ಅಧಿಕಾರದ ಅಮಲಿಗೆ ಒಳಗಾಗಿ ಕ್ರೂರವಾಗಬಲ್ಲವು ಎನ್ನುವುದು ಗೊತ್ತಿತ್ತು. ಅದಕ್ಕೇ ಅವರು "ಪ್ರಭುತ್ವ"ದ ದಮನಕಾರಿ ಪ್ರವೃತ್ತಿಗಳ ವಿರುದ್ಧ ಸದಾ ಎಚ್ಚರದಿಂದ ಇರುವ ನಾಗರಿಕ ಅಸಹಕಾರ ಸತ್ಯಾಗ್ರಹ ಆಂದೋಲನವನ್ನು ಸಮಾಜವಾದಿ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗವನ್ನಾಗಿ ಮಾಡಲು ಯತ್ನಿಸಿದ್ದು. ಈ ಪ್ರಯತ್ನದಲ್ಲಿ ಅವರು ಸ್ವಾತಂತ್ರ್ಯೋತ್ತರ ಭಾರತದ ರಾಜಕಾರಣದಲ್ಲಿ ಯಾರೂ ಕಳೆದಿರದಷ್ಟು ದೀರ್ಘ ಅವಧಿಗಳನ್ನು ಸೆರೆಮನೆಗಳಲ್ಲಿ ಕಳೆಯಬೇಕಾಯಿತು. ಭೂ ಚಳುವಳಿ, ಕಾರ್ಮಿಕ ಚಳುವಳಿ, ಹಿಂದುಳಿದ ಜಾತಿ ಚಳುವಳಿ, ಸ್ತ್ರೀ ವಿಮೋಚನಾ ಚಳುವಳಿ, ಇಂಗ್ಲಿಷ್ ತೊಲಗಿಸಿ ಚಳುವಳಿ, ಗೋವಾ ವಿಮುಕ್ತಿ ಚಳುವಳಿ, ನೇಪಾಳದ ಪ್ರಜಾಪ್ರಭುತ್ವ ಚಳುವಳಿಗಳಲ್ಲದೆ, ಅಮೆರಿಕ, ಬ್ರಿಟನ್, ಪೋರ್ಚುಗಲ್ ದೇಶಗಳಲ್ಲೂ ಅನ್ಯಾಯದ ವಿರುದ್ಧ ಪ್ರತಿಭಟಿಸಿ ದಸ್ತಗಿರಿಗೆ ಒಳಗಾದರು. ಅಮೆರಿಕದ ಒಂದು ನಗರದಲ್ಲಿ ಅವರು ಬಿಳಿಯರಿಗಲ್ಲದೆ ಬೇರೆಯವರಿಗೆ ಪ್ರವೇಶವಿಲ್ಲದಿದ್ದ ಉಪಾಹಾರ ಗೃಹವನ್ನು ಪ್ರವೇಶಿಸಿ ದಸ್ತಗಿರಿಯಾಗಿ ಆ ದೇಶದ ಸರ್ಕಾರ ಕ್ಷಮಾಪಣೆ ಕೇಳುವಂತಹ ಪರಿಸ್ಥಿತಿಯನ್ನು ನಿರ್ಮಿಸಿದ್ದರು. ತಾವು ಪ್ರತಿಪಾದಿಸಿದ ಭಾರತೀಯ ಸಮಾಜವಾದದ ವಿಸ್ತರಣೆ (Projection) ಯಾಗಿ ರೂಪಿಸಿದ್ದ ವಿಶ್ವಸರ್ಕಾರ ಕಲ್ಪನೆಗೆ ಒಂದು ಸಾಂಕೇತಿಕ ಅರ್ಥ ಕೊಡಲು ಅವರು ರಂಗೂನ್‌ನಲ್ಲಿ ನಡೆದ ಏಷ್ಯಾದ ಸಮಾಜವಾದೀ ಸಮ್ಮೇಳನಕ್ಕೆ ಪಾಸ್‌ಪೋರ್ಟ್ ಇಲ್ಲದೆ ಪ್ರಯಾಣ ಬೆಳೆಸಿ ಯಶಸ್ವಿಯಾದರು. ಬದಲಾವಣೆಯ ಪ್ರಮುಖ ಮತ್ತು ಏಕೈಕ ಅಸ್ತ್ರ, ನಾಗರಿಕ ಅಸಹಕಾರ ಸತ್ಯಾಗ್ರಹ ಎಂಬುದು ಅವರ ದೃಢ ನಂಬಿಕೆಯಾಗಿತ್ತು.

ಲೋಹಿಯಾ ಪ್ರಕಾರ, ಭಾರತ ಅಲ್ಲೊಂದು ಇಲ್ಲೊಂದು ತಾವರೆಗಳು ಅರಳಿಕೊಂಡಿರುವ ಕೊಚ್ಚೆಯಾದ ಕೊಳವಿದ್ದಂತೆ. ನಾವು ಆಚರಿಸುವ ಲಿಂಗಭೇದ ಹಾಗೂ ಜಾತಿಭೇದಗಳೇ ಈ ಕೊಳವನ್ನು ಕೊಚ್ಚೆಯಾಗಿಸಿರುವುದು. ಜಾತಿ ಎಂದೋ ತನ್ನ ಪ್ರಸ್ತುತತೆಯನ್ನು ಕಳೆದುಕೊಂಡು ಜಡವಾಗಿರುವ ವರ್ಗವಾಗಿದ್ದು, ಅದು ಸಮಾಜದ ಸಮಗ್ರ ಸಾಮರ್ಥ್ಯ ತನ್ನೆಲ್ಲಾ ಸೃಜನಶೀಲ ಶಕ್ತಿಯನ್ನು ಪ್ರಕಟಿಸುವ ಸಾಧ್ಯತೆಯನ್ನೇ ಇಲ್ಲವಾಗಿಸಿದೆ. ಜಾತಿ ಪದ್ಧತಿ ಇಂದು ಕೇವಲ ಧಾರ್ಮಿಕ ಮಾನ್ಯತೆಯಿಂದಷ್ಟೇ ಉಸಿರಾಡಿಕೊಂಡು ಬಿದ್ದಿದೆ. ಆದರೆ ಇಂತಹ ಅಸಂಬದ್ಧ ಜಾತಿ

ವ್ಯವಸ್ಥೆಯನ್ನು ಇನ್ನೂ ಮಾನ್ಯ ಮಾಡಿಕೊಂಡಿರುವ ಧರ್ಮ ತನ್ನೆಲ್ಲಾ ಆಧ್ಯಾತ್ಮಿಕತೆಯನ್ನೂ ಕಳೆದುಕೊಂಡಿದೆ. ಈ ವಿಷವೃತ್ತದಿಂದ ಭಾರತೀಯ ಹೊರಬರದ ಹೊರತು ಅವಸಿಗೆ ಭವಿಷ್ಯವಿಲ್ಲ. ಜಾತಿ ವ್ಯವಸ್ಥೆಯಿಂದಾಗಿ ಅರ್ಧ ಸತ್ತಿರುವ ಬ್ರಾಹ್ಮಣ ಹಾಗೂ ಅರ್ಧ ಸತ್ತಿರುವ ಶೂದ್ರ (ಮತ್ತು ಹೆಣ್ಣು) ಪರಸ್ಪರ ವಿಮೋಚನೆಗೊಳಿಸಿಕೊಳ್ಳಲು ಐತಿಹಾಸಿಕವಾಗಿ ಜಾತಿ ದಮನಕ್ಕೊಳಗಾದ ಸಮುದಾಯಗಳಿಗೆ ಬದುಕಿನ ಎಲ್ಲ ಕ್ಷೇತ್ರಗಳಲ್ಲಿ ವಿಶೇಷ ಪ್ರಾಶಸ್ತ್ಯ (Preferential treatment) ಕೊಡುವ ಮೂಲಕ ಹಾಗೂ "ಅಂತರ್ಧರ್ಮೀಯ ಮತ್ತು ಅಂತರ್ಜಾತೀಯ" ವಿವಾಹಗಳಿಗೆ ಪ್ರೋತ್ಸಾಹ ಕೊಡುವ ಮೂಲಕ ಅನುವಾಗಬೇಕು. ಹಾಗೆಯೇ ಧರ್ಮವೂ ತನ್ನ ಮನಸ್ಸಿನ ಮೇಲೆ ಶತ ಶತಮಾನಗಳಿಂದ ರಾಶಿ ಹಾಕಿಕೊಂಡಿರುವ ಧೂಳನ್ನು ಗುಡಿಸಿಕೊಂಡು ಹೊಸ ಅನುಭಾವಿಕ ಎತ್ತರಗಳನ್ನು ಮುಟ್ಟಲು ವರ್ತಮಾನದ ಘಳಿಗೆಗಳಿಂದಲೇ ಮತ್ತೆ ಆಧ್ಯಾತ್ಮಿಕ ಶಕ್ತಿ ಸಂಚಯ ಮಾಡಿಕೊಳ್ಳಬೇಕು ಎನ್ನುವುದು ಲೋಹಿಯಾ ಅವರ ಒಟ್ಟು ಸಾಮಾಜಿಕ ದೃಷ್ಟಿಕೋನವಾಗಿತ್ತು. ಹಿಂದೂಯೇತರರನ್ನು ಹೊರಗಿನವರು ಎಂದು ಗುಮಾನಿಪಡುವುದು ಹಿಂದೂ ಮನಸ್ಸಿನ ಅನಾರೋಗ್ಯಕರ ಲಕ್ಷಣ ಎಂದು ಗುರುತಿಸುವ ಲೋಹಿಯಾ; ಬಾಬರ್ ಹೊರಗಿನವನಿರಬಹುದು, ಆದರೆ ಅಕ್ಬರ್ ನಮ್ಮವನೇ ಎಂಬ ಐತಿಹಾಸಿಕ ಸತ್ಯವನ್ನು ಅರಗಿಸಿಕೊಳ್ಳುವ ಪ್ರಬುದ್ಧತೆ ಭಾರತೀಯ ಮನಸ್ಸಿಗೆ ಬರುವ ತನಕ ಅದಕ್ಕೆ ನೆಮ್ಮದಿ ಇಲ್ಲ ಎನ್ನುತ್ತಾರೆ.

"ಮೂಲಭೂತ ಸಮಸ್ಯೆ ಆಸ್ತಿಯದ್ದು. ಆಸ್ತಿ ಎರಡು ರೂಪಗಳಲ್ಲಿ ಕಾಡುತ್ತದೆ; ಆಸೆಯ ರೂಪದಲ್ಲಿ ಮತ್ತು ವ್ಯವಸ್ಥೆಯ ರೂಪದಲ್ಲಿ. ಆಸ್ತಿಯ ಆಸೆಯ ರೂಪಕ್ಕೆ ಸಂಬಂಧಪಟ್ಟ ಸಮಸ್ಯೆಗೆ ಉಪನಿಷತ್ತುಗಳು ಪರಿಹಾರ ಸೂಚಿಸುತ್ತವೆ. ವ್ಯವಸ್ಥೆಯ ರೂಪಕ್ಕೆ ಸಂಬಂಧಪಟ್ಟ ಸಮಸ್ಯೆಗೆ ಮಾರ್ಕ್ಸ್‌ವಾದ ಪರಿಹಾರ ಸೂಚಿಸುತ್ತದೆ. ಆದರೆ ನಮಗೀಗ ಬೇಕಾಗಿರುವುದು ಈ ಎರಡೂ ರೂಪಗಳನ್ನು ಎದುರಿಸುವಂತಹ ಒಂದು ರಾಜಕೀಯ ತತ್ವಜ್ಞಾನ. ನನ್ನ ಪ್ರತಿಪಾದನೆ ಆಸ್ತಿಯ ಸ್ಥಿತಿಜ್ಞಾನವನ್ನೇ ಬದಲಿಸುವ ಗುರಿ ಹೊಂದಿದೆ" ಎನ್ನುವ ಲೋಹಿಯಾ ಪ್ರತಿಪಾದಿಸುವುದು ಪ್ರತಿ ಕುಟುಂಬಕ್ಕೂ ಹೊರಗಿನ ಕಾರ್ಮಿಕ ಶಕ್ತಿಯಿಲ್ಲದೆ ನಿಭಾಯಿಸಬಲ್ಲಷ್ಟು ಆಸ್ತಿಯ ಹಕ್ಕನ್ನು ನೀಡಿ, ಸಣ್ಣ ಘಟಕ ತಂತ್ರಜ್ಞಾನವನ್ನು ಉತ್ಪಾದನೆಯಲ್ಲಿ ಜಾರಿಗೆ ತರುವ ವ್ಯವಸ್ಥೆಯನ್ನು. ಈ ಪ್ರತಿಪಾದನೆಯು ಕೇವಲ ತಾತ್ವಿಕ ರೂಪದಲ್ಲೇ ಉಳಿದುಕೊಂಡಿದ್ದು, ಇದೇ ಮುಖ್ಯವಾಗಿ ಸಮಾಜವಾದ ತನ್ನ ವಿಶ್ವಾಸಾರ್ಹತೆ ಕಳೆದುಕೊಳ್ಳುತ್ತಿರುವುದಕ್ಕೆ ಕಾರಣವಾಗಿದೆ.

ಲೋಹಿಯಾ ತಮ್ಮ ಸಮಾಜವಾದಿ ಹೋರಾಟದಲ್ಲಿ ಅಳವಡಿಸಿಕೊಂಡ ಇನ್ನೂ ಎರಡು ಮುಖ್ಯ ಸಂಗತಿಗಳೆಂದರೆ ಭಾಷೆ ಮತ್ತು ಅಧಿಕಾರ ವಿಕೇಂದ್ರೀಕರಣ. ಇಂಗ್ಲೀಷನ್ನು ಅಧಿಕಾರದ ಗದ್ದುಗೆಯಿಂದ ತೊಲಗಿಸಿ ಭಾರತೀಯ ಭಾಷೆಗಳನ್ನು ಪ್ರೋತ್ಸಾಹಿಸದಿದ್ದಲ್ಲಿ ಪ್ರಜಾಪ್ರಭುತ್ವ ವೆಂಬುದು ಒಂದು ಕಪಟ ನಾಟಕವಾಗಿ ಮಾತ್ರ ಜಾರಿಯಲ್ಲಿರುತ್ತದೆ ಎಂಬ ನಂಬಿಕೆಯಿಂದ ಅವರು ರಾಷ್ಟ್ರಾದ್ಯಂತ "ಇಂಗ್ಲಿಷ್ ಹಟಾವೋ" ಚಳುವಳಿ ಆರಂಭಿಸಿದರು. ಅಧಿಕಾರವನ್ನು

ರಾಜ್ಯ ಹಾಗೂ ವಿಭಾಗಗಳ ಮಟ್ಟಗಳಳಲ್ಲಿ ವಿಕೇಂದ್ರೀಕರಿಸಿ ಭಾರತದ ಒಕ್ಕೂಟ ವ್ಯವಸ್ಥೆಯನ್ನು ಬಲಗೊಳಿಸುವ ಮೂಲಕ ಅದರ ರಾಜಕೀಯ ಮತ್ತು ಸಾಂಸ್ಕೃತಿಕ ಏಕತೆಯನ್ನು ಬಲಗೊಳಿಸಬೇಕೆಂದು ಪ್ರತಿಪಾದಿಸಿದರು.

೧೯೬೨ರಲ್ಲಿ ಲೋಹಿಯಾ ಫೂಲ್‌ಪುರ ಕ್ಷೇತ್ರದಿಂದ ನೆಹರೂ ವಿರುದ್ಧ ಸ್ಪರ್ಧಿಸಿ, ಸೋತರು. ೧೯೬೭ರ ಚುನಾವಣೆಗಳಲ್ಲಿ ಗ್ವಾಲಿಯರ್ ಕ್ಷೇತ್ರದಲ್ಲಿ ಮಹಾರಾಣಿ ವಿಜಯರಾಜೇ ಸಿಂಧಿಯಾ ಅವರ ವಿರುದ್ಧ ಜಾಡಮಾಲಿ ಮಹಿಳೆಯೊಬ್ಬರನ್ನೂ ಸ್ಪರ್ಧಿಯನ್ನಾಗಿಸಿದರು. ಇವೆರಡೂ ಸಂಗತಿಗಳಿಗಾಗಿ ಅವರನ್ನು ಹುಚ್ಚರೆಂದು ಕರೆದವರುಂಟು. ಆದರೆ ಹೋರಾಟದ ಸಾಂಕೇತಿಕ ಅರ್ಥಗಳಲ್ಲೂ ನಂಬಿಕೆ ಇರಿಸಿದ್ದ ಲೋಹಿಯಾ, ಫೂಲ್‌ಪುರ ಕ್ಷೇತ್ರದ ಹಲವಾರು ಮತಗಟ್ಟೆಗಳಲ್ಲಿ ನೆಹರೂ ಅವರಿಗಿಂತ ತಮಗೇ ಹೆಚ್ಚು ಮತಗಳು ಬಿದ್ದಿರುವುದು ಭಾರತೀಯನ ಮನಸ್ಸಿನಲ್ಲಿ ಪ್ರಜಾಪ್ರಭುತ್ವದ ಚೇತನ ನೆಲೆಗೊಂಡಿರುವುದನ್ನು ಸಾಬೀತುಪಡಿಸಿದೆ ಎಂದರು. ಗ್ವಾಲಿಯರ್ ಸ್ಪರ್ಧೆಯು ಪ್ರಜಾಪ್ರಭುತ್ವದಲ್ಲಿ ಮಹಾರಾಣಿ ಹಾಗೂ ಜಾಡಮಾಲಿ ಸಮಾನ ಸ್ಥಾನಮಾನವುಳ್ಳವರು ಎಂಬ ಸಂದೇಶವನ್ನು ಸಾರಬಲ್ಲುದು ಎಂದರು. ಸ್ಟಾಲಿನ್‌ವಾದವನ್ನು ರಾಕ್ಷಸೀಯ ಎಂದು ವಿಶ್ಲೇಷಿಸಿದ ಲೋಹಿಯಾ, ಸ್ಟಾಲಿನ್ ಪದಚ್ಯುತಗೊಂಡು ಅಸುನೀಗಿದ ನಂತರ ಆತನ ಮಗಳು ಸ್ವೆಟ್ಲಾನಾಳನ್ನು ರಷ್ಯಾ ಹೊರದೂಡಿದಾಗ ಭಾರತ ಆಕೆಗೆ ಆಶ್ರಯ ನೀಡಬೇಕೆಂದು ವಾದಿಸಿ ಸಂಸತ್ತಿನಲ್ಲಿ ರಂಪ ಎಬ್ಬಿಸಿದರು. ಪ್ರಧಾನಿ, ವಿದೇಶೀ ಗಣ್ಯರೊಬ್ಬರಿಂದ ಬೆಲೆಬಾಳುವ ಮಿಂಕ್‌ಕೋಟ್ ಅನ್ನು ಉಡುಗೊರೆಯಾಗಿ ಪಡೆದಿದ್ದರ ಹಿನ್ನೆಲೆಯನ್ನೂ ವಿವರವಾಗಿ ಕೆದಕಿ, ಚರ್ಚೆಯನ್ನು ಆಧ್ಯಾತ್ಮದ ಎತ್ತರಕ್ಕೆ ಒಯ್ದರು!

ಹೀಗೆ ಮುಖ್ಯ ಅಮುಖ್ಯಗಳ ಭೇದವಿಲ್ಲದೆ ಎಲ್ಲವೂ ಸತ್ಯಾನ್ವೇಷಣೆಯ ಪರಿಕರಗಳೇ ಎಂದು ಭಾವಿಸಿದ ಲೋಹಿಯಾ, ಬದುಕಿನ ಎಲ್ಲ ಸಣ್ಣ ವಿವರಗಳನ್ನೂ ಸಮಾಜವಾದಿ ಹೋರಾಟದ ಆಕೃತಿಯೊಳಕ್ಕೆ ಲೀನಗೊಳಿಸಿಕೊಳ್ಳುವ ಕಲಾವಿದ ಮನಸ್ಸಿನ ರಾಜಕಾರಣಿಯಾಗಿದ್ದರು. ರಾಜಕಾರಣಕ್ಕೆ ಕಾವ್ಯದ ತೀವ್ರತೆಯನ್ನೂ, ಸಂಗೀತದ ತನ್ಮಯತೆಯನ್ನೂ, ಚಿತ್ರಕಲೆಯ ಶಿಸ್ತನ್ನೂ ತುಂಬಲು ಯತ್ನಿಸಿದ ಈ ಸಂಪೂರ್ಣ ಬಂಡುಕೋರ, ಬಹುಶಃ ಎಲ್ಲ ಬಂಡುಕೋರರಂತೆ, ತಮ್ಮ ಕನಸುಗಳ ಮಧ್ಯೆಯೇ ಕಣ್ಮರೆಯಾದರು.

(ಉದಯವಾಣಿ ಮಾರ್ಚ್ ೨೦, ೧೯೮೮)

ಮರಳಿ ಬರಲಿದೆ ಸಮಾಜವಾದ!

೨೦೦೭ ಮಾರ್ಚ್ ೨೩, ಡಾ|| ರಾಮ ಮನೋಹರ ಲೋಹಿಯಾ ಅವರ ೯೭ನೇ ಹುಟ್ಟುಹಬ್ಬ. ಲೋಹಿಯಾ ನಿಧನರಾಗಿ ಈಗ್ಗೆ ೪೦ ವರ್ಷಗಳಾಗುತ್ತಾ ಬಂದರೂ, ಲೋಹಿಯಾ ಎಂಬ ಹೆಸರು ಈಗಲೂ ಕರ್ನಾಟಕದ ಸಾಮಾನ್ಯ ಜನತೆಗೂ-ಅವರು ಕರ್ನಾಟಕದವರಲ್ಲ ವಾದರೂ–ಚಿರಪರಿಚಿತವಾದ ಹೆಸರಾಗಿ ಉಳಿದಿದೆ. ಇದಕ್ಕೆ ಕಾರಣ, ಕರ್ನಾಟಕದ ಅನೇಕ ಪ್ರಮುಖ ರಾಜಕಾರಣಿಗಳು (ದಿ. ಶಾಂತವೇರಿ ಗೋಪಾಲ ಗೌಡ, ದಿ. ಜೆ.ಎಚ್. ಪಟೇಲ್, ಎಸ್. ಬಂಗಾರಪ್ಪ, ಕಾಗೋಡು ತಿಮ್ಮಪ್ಪ, ಕೊಣಂದೂರು ಲಿಂಗಪ್ಪ, ಎಂ.ಪಿ. ಪ್ರಕಾಶ್, ಸಿದ್ಧರಾಮಯ್ಯ, ವೈಜನಾಥ ಪಾಟೀಲ ಬಿ.ಆರ್. ಪಾಟೀಲ್ ಇತ್ಯಾದಿ), ಪ್ರತಿಭಾವಂತ ಲೇಖಕ-ಕಲಾವಿದ–ಪತ್ರಕರ್ತರು (ದಿ. ಪಿ. ಲಂಕೇಶ್, ದಿ. ಬೆಸಗರಹಳ್ಳಿ ರಾಮಣ್ಣ, ದಿ. ಶ್ರೀಕೃಷ್ಣ ಆಲನಹಳ್ಳಿ, ದಿ. ಖಾದ್ರಿ ಶಾಮಣ್ಣ, ದಿ. ಕೆ.ವಿ. ಸುಬ್ಬಣ್ಣ, ಯು.ಆರ್. ಅನಂತಮೂರ್ತಿ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ದೇವನೂರ ಮಹಾದೇವ, ರಾಜಶೇಖರ ನೀರಮಾನ್ವಿ, ಚಂದ್ರಶೇಖರ ಪಾಟೀಲ, ಕಾಳೇಗೌಡ ನಾಗವಾರ, ಕೆ.ಟಿ. ಶಿವಪ್ರಸಾದ್, ಟಿ.ಎನ್. ಸೀತಾರಾಂ, ರಾಜಶೇಖರ ಕೋಟಿ ಇತ್ಯಾದಿ) ಹಾಗೂ ಪ್ರಖ್ಯಾತ ಸಾಮಾಜಿಕ ಚಳುವಳಿಗಾರರು (ದಿ. ಸಿ.ಜಿ.ಕೆ. ರೆಡ್ಡಿ, ದಿ. ಪ್ರೊ|| ಎಂ.ಡಿ. ನಂಜುಂಡಸ್ವಾಮಿ, ದಿ. ಎನ್.ಡಿ. ಸುಂದರೇಶ್, ಕಡಿದಾಳು ಶಾಮಣ್ಣ, ಪ್ರೊ|| ಕೆ. ರಾಮದಾಸ್, ಪ್ರೊ|| ರವಿವರ್ಮ ಕುಮಾರ್ ಇತ್ಯಾದಿ) ಲೋಹಿಯಾವಾದಿಗಳೆಂದೇ ಹೆಸರಾದವರು. ಹಾಗಾಗಿಯೇ, ಇವರಲ್ಲಿ ಕೆಲವರು ದಾರಿ ತಪ್ಪಿದಾಗಲೆಲ್ಲ, ಲೋಹಿಯಾವಾದಿ ಎನಿಸಿಕೊಂಡೂ ಹೀಗೆ ಮಾಡುವರಲ್ಲ ಎಂದು ಜನರಿಂದ ಆಕ್ಷೇಪಣೆ, ಟೀಕೆ ಹಾಗೂ ಛೀಮಾರಿ ಎದುರಿಸಿದವರು! ಈಚಿನ ದಿನಗಳಲ್ಲಿ ಈ ಲೋಹಿಯಾವಾದಿಗಳು ಹೀಗೆ ಛೀಮಾರಿ ಹಾಕಿಸಿಕೊಳ್ಳುವ ಮೂಲಕವೇ, ಲೋಹಿಯಾ ಹೆಸರನ್ನು ಕರ್ನಾಟಕದ ಜನಮನದಲ್ಲಿ ಉಳಿಸುತ್ತಾ ಹೋಗುತ್ತಿರುವುದು ವಿಪರ್ಯಾಸವೆನಿಸುವುದಾದರೂ, ಇದರ ಹಿಂದೆ ಲೋಹಿಯಾ ಬದುಕಿ ಪ್ರತಿನಿಧಿಸುತ್ತಿದ್ದ ಮೌಲ್ಯಗಳ ಬಗ್ಗೆ ಜನಮನದಲ್ಲಿ ಇನ್ನೂ ಉಳಿದಿರುವ ಪ್ರೀತಿ-ಗೌರವಗಳನ್ನು ನಾವು ಗಮನಿಸದೇ ಇರಲಾಗದು.

ಮಾರ್ಚ್ ೨೩, ಕ್ರಾಂತಿವೀರ ಭಗತ್ ಸಿಂಗ್‌ರನ್ನು ಬ್ರಿಟಿಷ್ ಸರ್ಕಾರ ನೇಣು ಹಾಕಿದ ದಿನ. ಹಾಗಾಗಿ, ಲೋಹಿಯಾ ತಾವು ಬದುಕಿರುವವರೆಗೂ ಅಂದು ತಮ್ಮ ಜನ್ಮದಿನವನ್ನು

ಆಚರಿಸಿಕೊಳ್ಳುತ್ತಿರಲಿಲ್ಲ ಹಾಗೂ ತಮ್ಮ ಅನುಯಾಯಿಗಳು ಆಚರಿಸಲೂ ಅವಕಾಶ ನೀಡುತ್ತಿರಲಿಲ್ಲ. ಆದರೆ, ತಮ್ಮ ೫೭ನೇ ವಯಸ್ಸಿನಲ್ಲಿ ತೀವ್ರ ಅಸ್ವಸ್ಥರಾದಾಗ, ದೇಶದ ಸಾಮಾನ್ಯ ಜನತೆಗೆ ಪ್ರವೇಶವಿರುವಂತಹ ಆಸ್ಪತ್ರೆಯಲ್ಲಿ ಮಾತ್ರ ಚಿಕಿತ್ಸೆ ಪಡೆಯುವ ಹಠ ಮಾಡಿ, ಈಗ ರಾಮ ಮನೋಹರ ಲೋಹಿಯಾ ಆಸ್ಪತ್ರೆ ಎಂದೇ ಹೆಸರಾಗಿರುವ ಸರ್ಕಾರಿ ಆಸ್ಪತ್ರೆ ಸೇರಿ, ಅವರು ೧೯೬೭ರ ಅಕ್ಟೋಬರ್ ೧೨ ರಂದು ನಿಧನರಾದ ನಂತರ, ಪ್ರತಿ ಮಾರ್ಚ್ ೨೩ ರಂದು ರಾಷ್ಟ್ರಾದ್ಯಂತ ಅನೇಕ ಕಡೆ ಮತ್ತು ಕರ್ನಾಟಕದಲ್ಲಿ ಒಂದಲ್ಲ ಒಂದು ಕಡೆ ಅವರ ಹುಟ್ಟು ಹಬ್ಬದ ನೆಪದಲ್ಲಿ ಲೋಹಿಯಾ ನೆನಪು ಕಾರ್ಯಕ್ರಮ ನಡೆಯುತ್ತಲೇ ಬಂದಿದೆ. ದೇಶಾದ್ಯಂತ ಹರಡಿ ಹೋಗಿದ್ದ ತನ್ನ ಅನುಯಾಯಿಗಳ ಹೊರತಾಗಿ, ತನ್ನದೆನ್ನುವ ಒಂದು ಕುಟುಂಬವನ್ನಾಗಲಿ, ತಲೆಯ ಮೇಲೆ ಒಂದು ಸೂರನ್ನಾಗಲಿ, ಒಂದು ನಿರ್ದಿಷ್ಟ ಅಂಚೆ ವಿಳಾಸವನ್ನಾಗಲಿ ಅಥವಾ ಒಂದು ಬ್ಯಾಂಕ್ ಅಕೌಂಟನ್ನಾಗಲಿ ಹೊಂದಿರದಿದ್ದ ಈ ಸಮಾಜವಾದಿ ಹೋರಾಟಗಾರನ ಬಗ್ಗೆ ಇನ್ನೂ ಹೀಗೆ, ಏಕೆ ಆಕರ್ಷಣೆ ಉಳಿದಿದೆ? ಅದೂ, ಸಮಾಜವಾದದ ಹೆಸರೇ ಹಿನ್ನಲೆಗೆ ಸರಿದು ಹೋಗುತ್ತಿರುವ ಈ ಕಾಲದಲ್ಲಿ? ಇನ್ನೇನು ರಾಜಕೀಯವಾಗಿ ನಿವೃತ್ತರಾದಂತೆಯೇ ಎಂದು ತೋರುತ್ತಿರುವ ಜಾರ್ಜ್ ಫರ್ನಾಂಡಿಸ್, ರಬಿರಾಯ್ ಹಾಗೂ ಜ್ಞಾನೇಶ್ವರ ಮಿಶ್ರರ ಹೊರತಾಗಿ ಅವರ ಪ್ರಮುಖ ಶಿಷ್ಯರೆಲ್ಲರೂ ಕಣ್ಮರೆಯಾಗಿದ್ದಾರೆ. ಆದರೂ, ಹೊಸ ಹೊಸ ತಲೆಮಾರುಗಳ ಜನ - ಅವರೆಷ್ಟು ಕಡಿಮೆ ಸಂಖ್ಯೆಯವರಾದರೂ - ಏಕೆ ಈ ಚಳುವಳಿಕಾರನ ಬಗ್ಗೆ ಪ್ರತಿ ವರ್ಷ ಸಮಾಜವಾದಿ ಸಮಾವೇಶಗಳನ್ನೋ, ಅಧ್ಯಯನ ಶಿಬಿರಗಳನ್ನೋ, ಪುಸ್ತಕ ಬಿಡುಗಡೆ ಸಮಾರಂಭಗಳನ್ನೋ ಆಯೋಜಿಸುವ ಮೂಲಕ ಇನ್ನೂ ಆಸಕ್ತಿ ತಳೆಯುತ್ತಿದ್ದಾರೆ? ಅದೂ, ಹೋರಾಟ, ಚಳುವಳಿ ಎಂಬುವವೆಲ್ಲ ಇತಿಹಾಸಕ್ಕೆ ಸೇರಿದ ವಿದ್ಯಮಾನಗಳೆಂದು ಹೇಳುತ್ತ, ಇನ್ನು ಮುಂದೆ ಇತಿಹಾಸವಿಲ್ಲವೆಂದು ಏಕಪಕ್ಷೀಯವಾಗಿ ಇತಿಹಾಸದ ಸಾವನ್ನು ಘೋಷಿಸುತ್ತಿರುವ ಜಾಗತೀಕರಣದ ಈ ದಿನಗಳಲ್ಲಿ?

ಕಾರಣವಿದೆ. ಈಗ ಜಗತ್ತಿನಾದ್ಯಂತ ಜಾಗತೀಕರಣದ ವಿವಿಧ ಆವೃತ್ತಿಗಳು ಕಾರ್ಯನಿರತವಾಗಿವೆ. ಅಭಿವೃದ್ಧಿಶೀಲ ದೇಶಗಳಲ್ಲಿ ನವ ಶ್ರೀಮಂತಿಕೆಯ ಹಪಾಹಪಿಗೆ ಸಿಕ್ಕಿರುವ ಹೊಸ ಮಧ್ಯಮ ವರ್ಗದ ದಲ್ಲಾಳಿತನದಲ್ಲಿ, ಅವು ಶ್ರೀಮಂತರನ್ನು ಮತ್ತಷ್ಟು ಶ್ರೀಮಂತರನ್ನಾಗಿಯೂ, ಬಡವರನ್ನು ಮತ್ತಷ್ಟು ಬಡವರನ್ನಾಗಿಯೂ ಮಾಡುತ್ತಿರುವುದು ಈಗ ಎದ್ದು ಕಾಣತೊಡಗಿದೆ. ಜಾಗತೀಕರಣದ ಪರಿಣಾಮವಾಗಿ ಈಗ ೫೦೦ ಬಹುರಾಷ್ಟ್ರೀಯ ಕಂಪನಿಗಳು ಜಗತ್ತಿನ ಶೇ. ೭೦ರಷ್ಟು ವಾಣಿಜ್ಯವನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡಿವೆ. ೩೦೫ ಶ್ರೀಮಂತ ಕುಟುಂಬಗಳು ಜಗತ್ತಿನ ಸಂಪತ್ತಿನ ಶೇ. ೪೦ ರಷ್ಟರ ಮೇಲೆ ಒಡೆತನ ಸಾಧಿಸಿವೆ. ಜಗತ್ತಿನ ಅರ್ಧದಷ್ಟು ಜನಸಂಖ್ಯೆ ಅಂತಾರಾಷ್ಟ್ರೀಯ ಬಡತನ ರೇಖೆ ಕೆಳಗೇ ಬದುಕುತ್ತಿದೆ. ಐದನೇ ಒಂದು ಭಾಗದ ಜನತೆ ದಿನವಹಿ ೪೦ ರೂ. ಗಳಿಗೂ ಕಡಿಮೆ ಆದಾಯದಲ್ಲಿ, ದಟ್ಟ ದಾರಿದ್ರ್ಯವನ್ನು ಎದುರಿಸುತ್ತಿದೆ. ಜಾಗತಿಕ ನಿರುದ್ಯೋಗ ದರ ಹಿಂದೆಂದಿಗಿಂತ ಕಡಿದಾಗಿ ಏರುತ್ತಿದೆ. ಇದರಿಂದಾಗಿ ಅಭಿವೃದ್ಧಿಗೊಂಡವೆಂದು ಹೇಳಲಾಗುವ ದೇಶಗಳಲ್ಲೂ, ವಲಸೆ

ಹಾಗೂ ಹೊರ ಗುತ್ತಿಗೆ ಕಾನೂನುಗಳ ವಿರುದ್ಧ ಹಿಂಸಾತ್ಮಕ ಪ್ರತಿಭಟನೆಗಳು ಮತ್ತು ಜನಾಂಗೀಯ ಚಳುವಳಿಗಳ ರೂಪದಲ್ಲಿ ಸಾಮಾಜಿಕ ಅಶಾಂತಿ ಆರಂಭವಾಗಿದೆ. ಜಗತ್ತಿನಲ್ಲಿ ಹೆಚ್ಚುವರಿ ಆಹಾರೋತ್ಪಾದನೆ ಆಗುತ್ತಿದ್ದರೂ, ಏಳೂವರೆ ಕೋಟಿ ಮಕ್ಕಳು ಸರಿಯಾದ ಆಹಾರವಿಲ್ಲದೆ ವಿವಿಧ ರೋಗಗಳಿಗೆ ತುತ್ತಾಗಿ ಸಾಯುತ್ತಿದ್ದಾರೆ. ಹತ್ತು ಕೋಟಿ ಮಕ್ಕಳು ಶಾಲೆಯ ಮುಖವನ್ನೇ ಕಂಡಿಲ್ಲವೆಂದು ವಿಶ್ವ ಸಂಸ್ಥೆಯ ವರದಿಯೇ ಹೇಳುತ್ತಿದೆ.

ಇಂತಹ ಅಭಿವೃದ್ಧಿ ಆರ್ಥಿಕತೆಯಿಂದಾಗಿಯೇ, ಜಗತ್ತಿನ ವಾತಾವರಣದ ಶಾಖ ಒಂದೇ ಸಮನೆ ಏರುತ್ತಿದ್ದು (ಕಳೆದ ಐವತ್ತು ವರ್ಷಗಳಲ್ಲಿ ವಾತಾವರಣದ ಶಾಖದ ಏರಿಕೆ ಕಳೆದ ನೂರು ವರ್ಷಗಳ ಏರಿಕೆಗೆ ಹೋಲಿಸಿದರೆ ದುಪ್ಪಟ್ಟಾಗಿದೆ), ಅಕಾಲಿಕ ಹಾಗೂ ಹುಚ್ಚು ಮಳೆ, ಪ್ರವಾಹ, ಭೂಕುಸಿತ, ಕಡಲ ಕೊರೆತ ಹಾಗೂ ಉಬ್ಬರ ಮತ್ತು ಜಲಚರ ಜೀವಿಗಳ ಅನೇಕ ರೀತಿಯ ಸಂಕಷ್ಟಗಳಿಗೆ ಕಾರಣವಾಗಿದೆ. ಅಲ್ಲದೆ, ಜಗತ್ತಿನಲ್ಲಿ ಇಂದು ಮಾನವ ವಿಕಾಸದ ಇತಿಹಾಸದಲ್ಲಿಯೇ ಕಂಡರಿಯದ ಗತಿಯಲ್ಲಿ ಜೀವ ಪ್ರಭೇದಗಳು ನಾಶವಾಗುತ್ತಿವೆ. ಈ ಮೊದಲು, ಅಂದರೆ ಈರೋಪಿನ ಪುನರುಜ್ಜೀವನ ಯುಗದಿಂದಾರಂಭವಾದ ವೈಜ್ಞಾನಿಕ ಆವಿಷ್ಕಾರಗಳಿಂದ ಸ್ಫೂರ್ತಿಗೊಂಡ 'ಆಧುನಿಕ' ಎಂದು ಕರೆಯಲಾದ ಜೀವನ ದೃಷ್ಟಿ ಹಾಗೂ ಶೈಲಿಗಳು ಜಗತ್ತಿನಾದ್ಯಂತ ರೂಢಿಗೊಳ್ಳುವವರೆಗೆ; ಮಾನವ ಅಭಿವೃದ್ಧಿಗೆ ಸಿಕ್ಕಿ ಐದು ವರ್ಷಗಳಿಗೊಂದು ಜೀವ ಪ್ರಭೇದ ನಾಶವಾಗುತ್ತಿದ್ದರೆ, ಈಗ ದಿನವೊಂದಕ್ಕೆ ೧೦೦ ಪ್ರಭೇದಗಳು ನಾಶವಾಗುತ್ತಿವೆಯಂತೆ! ಅಪಾರ ಹಣದ ಬೆಂಬಲ ಪಡೆದ ಗೂಢಚರ್ಯೆ ಹಾಗೂ ಪ್ರಚಾರ ರಾಜಕೀಯದ ಮೂಲಕ ಇತರ ಎಲ್ಲ ಅಭಿವೃದ್ಧಿ ಪರ್ಯಾಯಗಳ ವಿಶ್ವಾಸಾರ್ಹತೆಯನ್ನೂ ನಾಶ ಮಾಡಿರುವ ಈ ಮುಕ್ತ ಬಂಡವಾಳವಾದವು, ೧೯೮೯ರಲ್ಲಿ ಸೋವಿಯತ್ ಒಕ್ಕೂಟ ಕುಸಿದು ಬಿದ್ದ ನಂತರ, ಜನಪದ ವಿವೇಕದ ಬಹುಮುಖಿ ಜಗತ್ತನ್ನು ಸರ್ವಜ್ಞ ಗರ್ವದ ಏಕ ಸಂಸ್ಕೃತಿಯ ಆಡಳಿತಕ್ಕೆ ಒಳಪಡಿಸುವ ತನ್ನ ಜಾಗತಿಕ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ.

ಈ ಕಾರ್ಯಕ್ರಮದ ಅಂಗವಾಗಿ, ಈವರೆಗೆ ಜಗತ್ತು ಅನಿಷ್ಟಗಳೆಂದು ಭಾವಿಸುತ್ತಿದ್ದ ಮನುಷ್ಯ ಪ್ರವೃತ್ತಿಗಳಿಗೆ ಹೊಸ ಮಾನ್ಯತೆಯೂ, ಪಾವಿತ್ರ್ಯವೂ ದೊರಕತೊಡಗಿದೆ. ಈ ಪ್ರವೃತ್ತಿಗಳೆಂದರೆ, ಕೆಲವರ ಕೊನೆ ಮೊದಲಿಲ್ಲದ ಭೋಗಕ್ಕೆ ಎಡೆ ಮಾಡಿಕೊಡುತ್ತಿರುವ ಎಣೆಯಿಲ್ಲದ ಲೌಕಿಕ ಶ್ರೀಮಂತಿಕೆ; ಇದಕ್ಕೆ ಅಗತ್ಯವಾದ ಹೆಚ್ಚುವರಿ ಸಂಪನ್ಮೂಲಗಳ ಕ್ರೋಢೀಕರಣಕ್ಕಾಗಿ ರೂಪುಗೊಳ್ಳುತ್ತಿರುವ ಅನ್ಯ ಸಮಾಜಗಳ ಮೇಲಿನ ದುರಾಕ್ರಮಣದ ರಾಜಕಾರಣ; ಹಾಗೂ ಇಂತಹ ದುರಾಕ್ರಮಣಗಳನ್ನೆದುರಿಸಲು, ದುರಾಕ್ರಮಣಕ್ಕೊಳಗಾದ ಸಮುದಾಯಗಳು ತಮ್ಮ ಐಕ್ಯತೆಯನ್ನು ಪುನರ್‌ಸಂಘಟಿಸಿಕೊಳ್ಳಲು ಮತವನ್ನು ಬಳಸಿಕೊಳ್ಳುವ ಮೂಲಕ ಬೆಳೆಸುತ್ತಿರುವ ಮೂಲಭೂತವಾದದ ವಿವಿಧ ಅವತಾರಗಳು. ಇವೆಲ್ಲವೂ ಕ್ರಮವಾಗಿ ಮನುಷ್ಯನ ಅದಮ್ಯ ಕ್ರಿಯಾಶೀಲತೆಯ ಅನಾವರಣ, ಈ ಅನಾವರಣಕ್ಕೆ ಅಗತ್ಯವಾದ ಮುಕ್ತ ವಾತಾವರಣಕ್ಕೆ ಅಡ್ಡಿ ಮಾಡುತ್ತಿರುವ ಸಮಾಜಗಳನ್ನು ಆಧುನಿಕ ಪ್ರಜಾಪ್ರಭುತ್ವಗಳಾಗಿ ಪುನರ್ರೂಪಿಸುವ ಪವಿತ್ರ ಕೆಲಸ ಹಾಗೂ ಲೌಕಿಕ ಶ್ರೀಮಂತಿಕೆಯಲ್ಲಿ ಕಳೆದು ಹೋಗುತ್ತಿರುವ

ಮನುಷ್ಯನಲ್ಲಿ ಅಲೌಕಿಕ ಶ್ರದ್ಧೆಯ ಪುನಃಸ್ಥಾಪನೆಯ ಘನ ಕಾರ್ಯದ ಹೆಸರಿನಲ್ಲಿ ಮಾನ್ಯತೆ ಹಾಗೂ ಪಾವಿತ್ರ್ಯಗಳನ್ನು ಪಡೆಯುತ್ತಿವೆ. ಆದರೆ ಇವು ಹುಟ್ಟುಹಾಕುತ್ತಿರುವ ವಿವಿಧ ರೂಪದ ಹಿಂಸಾಚಾರಗಳು, ಜಗತ್ತನ್ನು ಜನ ಸಾಮಾನ್ಯರ ಪಾಲಿಗೆ ನರಕವನ್ನಾಗಿಸುತ್ತಿವೆ. ಚಿಲಿ ಮೊದಲ ನರಕವಾದರೆ, ಇರಾಕ್ ಇತ್ತೀಚಿನ ನರಕವಷ್ಟೇ. ಇರಾನ್ ಮುಂದಿನ ನರಕವಾಗುವ ಎಲ್ಲ ಸಾಧ್ಯತೆಗಳಿವೆ.

ಬೇರು ಮಟ್ಟದ ಪ್ರಜಾಪ್ರಭುತ್ವವಾಗಿ ಬೆಳೆದು ಉಳಿದಿರುವ ಭಾರತಕ್ಕೆ ಇಂತಹ ಅಪಾಯವೇನೂ ಹತ್ತಿರದಲ್ಲಿದ್ದಂತಿಲ್ಲ. ಆದರೆ ಬಡತನವೆಂಬ 'ವ್ಯಸನ'ಕ್ಕೆ ಸಿಕ್ಕಿರುವ ಭಾರತ, ತನ್ನದೇ ದೇಶೀ ಉದ್ಯೋಗ ನಿರ್ಮಾಣದ ಅಭಿವೃದ್ಧಿ ಮಾದರಿಗೆ ಬದಲಾಗಿ, ಎಲ್ಲೆಗಳಿಲ್ಲದ ಸಂಪದಭಿವೃದ್ಧಿಯ ಪಾಶ್ಚಾತ್ಯ ಮಾದರಿಯ ಮೂಲಕ ಬಡತನ ನಿವಾರಿಸಲು ಹೊರಟಿದೆ. ಹಾಗೂ ತನ್ನ ಈ ಅಭಿವೃದ್ಧಿಯ ಅವಸರದಲ್ಲಿ ಅದು ವಿದೇಶಿ ಸಾಲದ ಸುಳಿಗೆ ಸಿಕ್ಕುವ ಅಪಾಯವನ್ನು ಎದುರಿಸುತ್ತಿದೆ. ಈಗ ದೇಶದಲ್ಲಿ ಪಕ್ಷ ಹಾಗೂ ತತ್ವ ಭೇದವಿಲ್ಲದೆ ವಿದೇಶಿ ಬಂಡವಾಳದ ದೊಡ್ಡ ಪ್ರಚಾರಾಂದೋಲನವೇ ನಡೆಯುತ್ತಿದ್ದು; ಅದೀಗ ಸಗಟು ವಲಯಗಳಾಚೆ ಬೆಳೆದು, ಚಿಲ್ಲರೆ ವಲಯಕ್ಕೂ ಪ್ರವೇಶ ಪಡೆಯುವ ಹಂತ ತಲುಪಿದೆ. ಅಂದರೆ ಈ ದೇಶದ ಚಿಲ್ಲರೆ ಅಂಗಡಿಗಳೂ ವಿದೇಶೀ ಬಂಡವಾಳದ ವಶವಾಗುವ ನಿಚ್ಚಳ ಸಾಧ್ಯತೆ ಕಂಡು ಬರುತ್ತಿದೆ. ಆದರೆ, ಜಾಗತೀಕರಣ ಸೃಷ್ಟಿಸಿರುವ ಮಾರುಕಟ್ಟೆ ವೈವಿಧ್ಯದ ಹೊಸ ಫಲಾನುಭವಿಗಳಾದ ಈ ದೇಶದ ಮಧ್ಯಮ-ಬುದ್ಧಿಜೀವಿ-ವರ್ಗ, ಈ ಸಾಧ್ಯತೆಯ ದೂರಗಾಮಿ ಪರಿಣಾಮಗಳ ಬಗ್ಗೆ ಚಿಂತಿಸುತ್ತಲೇ ಇಲ್ಲ. (ಭಾರತದಲ್ಲಿ ಬುದ್ಧಿಜೀವಿಗಳು ಜನಸಾಮಾನ್ಯರ ಬಗ್ಗೆ ಚಿಂತಿಸುವ ಪರಂಪರೆಯೇ ಇಲ್ಲವೆಂದು ಭಾರತದಲ್ಲಿ ಅಮೆರಿಕಾದ ರಾಯಭಾರಿಯಾಗಿದ್ದ ಚಿಂತಕ-ಅರ್ಥಶಾಸ್ತ್ರಜ್ಞ ಗುನ್ನರ್ ಮಿರ್ಡಾಲ್ ಈಗಾಗಲೇ ಹೇಳಿದ್ದಾರೆ.) ಬದಲಿಗೆ ಅದು, ಈ ಬೆಳವಣಿಗೆಗೆ ಕುಮ್ಮಕ್ಕು ಕೊಡುವಂತೆ ವರ್ತಿಸುತ್ತಿರುವುದು ಈ ದೇಶದ ನಿಜವಾದ ದುರಂತವಾಗಿದೆ.

ಈ ಸಾಲದ ಹಣಕಾಸಿನ ಹೊರೆಗಿಂತ, ಅದು ಒತ್ತಾಯಿಸುವ ಅಭಿವೃದ್ಧಿ ಮಾದರಿ ಹಾಗೂ ಆ ಮೂಲಕ ರೂಢಿಗೊಳಿಸುವ ಆಧುನಿಕ ಎಂದು ಕರೆಯಲಾಗುವ ಜೀವನ ಶೈಲಿ ನಮ್ಮ ಸ್ವಾತಂತ್ರ್ಯವನ್ನೇ ಕಸಿಯಬಲ್ಲ ಅಪಾಯವನ್ನು ಒಳಗೊಂಡಿದೆ. ಜಾಗತೀಕರಣ ಸೃಷ್ಟಿ ಮಾಡುತ್ತಿರುವ ಅತಿ ಸಮೃದ್ಧಿಯ ದ್ವೀಪಗಳ ಮೂಲಕ ಜನಸಾಮಾನ್ಯರಲ್ಲಿ ಹೆಚ್ಚಿಸಲಾಗುತ್ತಿರುವ ಲೌಕಿಕ ನಿರೀಕ್ಷೆಗಳು, ನಮ್ಮ ಸಮಾಜವನ್ನು ಉಳ್ಳವರ ತೀರದ ದಾಹ ಹಾಗೂ ವಂಚಿತರ ತಣಿಯದ ಹಪಾಹಪಿಯ ನಿತ್ಯದ ರಣರಂಗವನ್ನಾಗಿ ಮಾಡುವ ಎಲ್ಲ ಸಾಧ್ಯತೆಗಳಿವೆ. ಏಕೆಂದರೆ, ಈಗ ಸೃಷ್ಟಿಸಲಾಗುತ್ತಿರುವ ಸಮೃದ್ಧಿಯ ಮಾದರಿ ನಮ್ಮ ಇಡೀ ಸಮಾಜಕ್ಕೆ ವ್ಯಾಪಿಸುವಂತೆ ಮಾಡಲು, ಜಗತ್ತಿನ ಎಲ್ಲ ಪ್ರಾಕೃತಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಖಾಲಿ ಮಾಡಿದರೂ ಸಾಕಾಗದಾಗುತ್ತದೆ. ಹಾಗಾಗಿ ನಾವು ಸಂಪನ್ಮೂಲಗಳನ್ನು ಸೂರೆ ಮಾಡಲು ಹೊಸ ವಸಾಹತುಗಳನ್ನು ಸೃಷ್ಟಿಸಿಕೊಳ್ಳಬೇಕಾಗುತ್ತದೆ. ಅದಕ್ಕೆ ಮೊದಲು ನಮ್ಮ ದೇಶವೇ,

ಒಳಗಿನ ಉಳ್ಳವರ ಸುಪರ್ದಿಯಲ್ಲಿನ ಹೊರಗಿನವರ ವಸಾಹತಾಗಿರುತ್ತದೆ–ಈಗಾಗುತ್ತಿರುವಂತೆ.

ಈ ಅರ್ಥದಲ್ಲೇ ಗಾಂಧೀಜಿ, ಜಾಗತೀಕರಣಕ್ಕೆ ಚಾಲನೆ ನೀಡುತ್ತಿರುವ ಈಗ ಹೈಟೆಕ್ ಎನ್ನಿಸಿರುವ–ಪಶ್ಚಿಮದ ಆಧುನಿಕತೆಯನ್ನು ವಸಾಹತುಶಾಹಿಯ ಸಾಧನ ಎಂದು ಎಚ್ಚರಿಸಿದ್ದುದು. ನೊಬೆಲ್ ಪ್ರಶಸ್ತಿ ವಿಜೇತ ಅಭಿವೃದ್ಧಿ ಅರ್ಥಶಾಸ್ತ್ರಜ್ಞ ಅಮರ್ತ್ಯಸೇನರು, ಅಭಿವೃದ್ಧಿ ಹೆಸರಿನಲ್ಲೀಗ ಭಾರತದ ಅರ್ಧ ಭಾಗ ಕ್ಯಾಲಿಫೋರ್ನಿಯಾ ಆಗುವ ಆತುರದಲ್ಲಿದ್ದರೆ, ಇನ್ನರ್ಧ ಭಾಗ ಇಥಿಯೋಪಿಯಾ ಆಗುವ ದುರಂತವನ್ನೆದರಿಸುತ್ತಿದೆ ಎಂದು ಹೇಳಿರುವುದೂ ಅದನ್ನೇ. ಗಾಂಧೀಜಿಯ ಈ ಎಚ್ಚರಿಕೆಯ ಹಿಂದಿನ ಒಳನೋಟವನ್ನು ವಿಸ್ತರಿಸಿಕೊಂಡು, ಭಾರತದ ಸಮಾಜವಾದಿ ಚಳುವಳಿಯು ತನ್ನ ತತ್ವವನ್ನು ರೂಪಿಸಿಕೊಂಡಿತ್ತು. ಹಾಗಾಗಿ, ಈ ದೇಶದ ಮನಸ್ಸಾಕ್ಷಿಯಂತಿದ್ದ ಸಮಾಜವಾದಿ ಚಳುವಳಿಯು ಗಾತ್ರದಲ್ಲಲ್ಲದಿದ್ದರೂ, ಗುಣದಲ್ಲಾದರೂ ಕ್ರಿಯಾಶೀಲವಾಗಿರುವವರೆಗೆ; ಈ ಪಶ್ಚಿಮದ ಆಧುನೀಕರಣವೇ ಅಭಿವೃದ್ಧಿ ಎಂಬ, ನಮ್ಮ ಆಡಳಿತಗಾರರಲ್ಲಿ ಬಿತ್ತಲ್ಪಟ್ಟಿದ್ದ ಮೂಢ ನಂಬಿಕೆ ಪೂರ್ಣ ಪ್ರಮಾಣದಲ್ಲಿ ಜಾರಿಯಾಗಿರಲಿಲ್ಲ. ನೆಹರೂ ಕಾಲದಿಂದ ನರಸಿಂಹರಾವ್ ಪ್ರಧಾನಿಯಾಗುವವರೆಗೆ ನಮ್ಮ ಅಭಿವೃದ್ಧಿ ಆಡಳಿತವು ಮಿಶ್ರ ಎಂಬ ಗೊಂದಲಮಯ ಅರ್ಥ ವ್ಯವಸ್ಥೆಯ ಆಧಾರದ ಮೇಲೆಯೇ ನಡೆಯುತ್ತಿತ್ತು. ಆದರೆ ಅದನ್ನು ಈಗ ತಪ್ಪಾಗಿ ಮತ್ತು ಉದ್ದೇಶಪೂರ್ವಕವಾಗಿ ಸಮಾಜವಾದಿ ವ್ಯವಸ್ಥೆ ಎಂದು ಕರೆದು, ಸಮಾಜವಾದದ ವಿಶ್ವಾಸಾರ್ಹತೆಯನ್ನೇ ಹಾಳು ಮಾಡುವ ಪ್ರಯತ್ನ ಮಾಡಲಾಗುತ್ತಿದೆ.

ಅದೇನೇ ಇರಲಿ, ಅಷ್ಟು ದೀರ್ಘಕಾಲದವರೆಗೆ ಜಾರಿಯಲ್ಲಿದ್ದ ಅತ್ತ ಸರಿಯಾದ ಸಮಾಜವಾದವೂ ಇಲ್ಲ, ಇತ್ತ ಸರಿಯಾದ ಬಂಡವಾಳವಾದವೂ ಇಲ್ಲ ಎಂಬ ಅಭಿವೃದ್ಧಿಯ ದ್ವಂದ್ವ ನೀತಿಯಿಂದಾಗಿ, ಈ ಎರಡರ ಮಧ್ಯೆ ಭಾರತ ಕುಸಿದು ಬಿದ್ದುದಂತೂ ಸತ್ಯ. ಆದರೆ ಇದಕ್ಕೋಸ್ಕರವೇ ಕಾಯುತ್ತಿದ್ದಂತೆ, ಭಾರತವನ್ನು ಕೈಹಿಡಿದೆತ್ತಲು ನರಸಿಂಹರಾವ್ ಕಾಲದಿಂದೀಚೆಗೆ ವಿಶ್ವಬ್ಯಾಂಕ್, ಅಂತಾರಾಷ್ಟ್ರೀಯ ಹಣಕಾಸು ನಿಧಿ ಹಾಗೂ ವಿಶ್ವ ವ್ಯಾಪಾರ ಸಂಸ್ಥೆಗಳ ವಕ್ತಾರರಾದ ಜಾಗತೀಕರಣವಾದಿಗಳು ಮುಂದೆ ಬಂದಿರುವುದು ಮಾತ್ರ ಅನೇಕ ಪ್ರಶ್ನೆಗಳನ್ನು ಎತ್ತಿದೆ. ಈ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಆಡಳಿತ ಹಾಗೂ ನೀತಿ ನಿರೂಪಣೆಯಲ್ಲಿ ಬಹು ವರ್ಷಗಳ ಕಾಲ ಭಾಗಿಯಾಗಿದ್ದ ಡಾ|| ಮನಮೋಹನ ಸಿಂಗ್ ಆ ಬಿಕ್ಕಟ್ಟಿನ ಸಮಯದಲ್ಲಿ ಭಾರತಕ್ಕೆ ಮುಕ್ತಿ ದೊರಕಿಸಿ ಕೊಡುವ ಅರ್ಥಮಂತ್ರಿಯಾಗಿ, ಮೊಂಟೆಕ್ ಸಿಂಗ್ ಅಹ್ಲುವಾಲಿಯ ಮುಂತಾದ ಮುಕ್ತ ಬಂಡವಾಳವಾದಿ ಅರ್ಥಶಾಸ್ತ್ರಜ್ಞರ ಪರಿವಾರದೊಂದಿಗೆ ಬಂದು ಭಾರತದ ಆರ್ಥಿಕ ಪುನಾರಚನೆಯಲ್ಲಿ ತೊಡಗಿಕೊಂಡಿದ್ದಾರೆ. ಆಗಿನಿಂದ ಭಾರತ ಪೂರ್ಣವಾಗಿ ಮುಕ್ತ ಬಂಡವಾಳವಾದದ ಪ್ರಭಾವಕ್ಕೆ ಸಿಕ್ಕಿದೆ. ಈ ಮಧ್ಯೆ ಬಂದು ಹೋದ, ಎಲ್ಲ ರಂಗಗಳಲ್ಲೂ ಅಪ್ಪಟ 'ಭಾರತೀಯತೆ'ಯನ್ನು ಪ್ರತಿಪಾದಿಸುತ್ತಿದ್ದ ಪಕ್ಷದ ನೇತೃತ್ವದ ಸರ್ಕಾರವೂ ಈ ಮುಕ್ತ ಬಂಡವಾಳವಾದದ ಬೆಂಬಲಕ್ಕೆ ನಿಂತು, ತನ್ನ ಅಪ್ಪಟ ಭಾರತೀಯತೆಯ ಬಣ್ಣವನ್ನು ಬಯಲು ಮಾಡಿಕೊಂಡದ್ದೂ ಆಗಿದೆ.

ಈ ಮುಕ್ತ ಬಂಡವಾಳದ ಯಶಸ್ಸು ಅಡಗಿರುವುದೇ ಲಾಭಾಧಾರಿತವಾದ ಕೈಗಾರಿಕಾ ಸಮಾಜದ ನಿರ್ಮಾಣದಲ್ಲಿ. ಅದೀಗ ಭಾರತದಲ್ಲಿ ಆರಂಭವಾಗಿದೆ. ಪ್ರಧಾನವಾಗಿ ಕೃಷಿ ಸಮಾಜವಾಗಿ ತನ್ನ ಕಷ್ಟ ಸುಖಗಳನ್ನು ತನ್ನ 'ಮರ್ಯಾದೆ'ಯ ಪರಿಮಿತಿಯಲ್ಲೇ ಹೇಗೋ ನಿರ್ವಹಿಸಿಕೊಳ್ಳುತ್ತಿದ್ದ ಭಾರತವೀಗ ವಿದೇಶಿ ಬಂಡವಾಳದ ಆಧುನೀಕರಣದ ಆಧಾರದ ಮೇಲೆ ಕೈಗಾರಿಕಾ ಸಮಾಜವಾಗ ಹೊರಟಿದೆ. ಇದರ ಪರೋಕ್ಷ ಒತ್ತಡಗಳು ರೈತರನ್ನು ಆತ್ಮಹತ್ಯೆಗೆ ದೂಡುತ್ತಿದ್ದರೆ, ಪ್ರತ್ಯಕ್ಷ ಒತ್ತಡಗಳು ಅವನನ್ನು ನಿರ್ವಸಿತನನ್ನಾಗಿ ಮಾಡುತ್ತಿವೆ. ಈಗ ಎಲ್ಲೆಡೆ ಚಾಲ್ತಿಗೆ ಬರುತ್ತಿರುವ ವಿಶೇಷ ಆರ್ಥಿಕ ವಲಯಗಳ ಯೋಜನೆಯು ಕೃಷಿ ಸಮಾಜದ ಗೋರಿಯ ಮೇಲೆ ಕೈಗಾರಿಕಾ ಸಮಾಜದ ನಿರ್ಮಾಣಕ್ಕೆ ಹಾಕಲಾಗುತ್ತಿರುವ ಆಸ್ತಿವಾರವೇ ಆಗಿದೆ. ತೆರಿಗೆ ರಿಯಾಯಿತಿಯ ಬೃಹತ್ ಖಾಸಗಿ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಲು ರೈತರ ಸಾವಿರಾರು ಎಕರೆ ಭೂಮಿಯನ್ನು ಖಾಸಗಿ ಬಂಡವಾಳಗಾರರಿಗೊಪ್ಪಿಸುವುದೇ ಈ ಯೋಜನೆಯ ಮೊದಲ ಹೆಜ್ಜೆಯಾಗಿದೆ. ಖಾಸಗಿ ಬಂಡವಾಳಗಾರರು ಈ ಭೂಮಿಯ ಒಂದು ಭಾಗವನ್ನು ರಿಯಲ್ ಎಸ್ಟೇಟ್ ವ್ಯಾಪಾರಕ್ಕೆ ಬಳಸಿಕೊಳ್ಳಲು ಈ ಯೋಜನೆಯಲ್ಲಿ ಅವಕಾಶವಿದೆ! ಮನುಷ್ಯ ತನ್ನ ಭೂಮಿಯ ಸಂಬಂಧವನ್ನು ಪೂರ್ಣವಾಗಿ ವಾಣಿಜ್ಯೀಕರಿಸುತ್ತಿರುವ ಈ ಯೋಜನೆ, ಗ್ರಾಮ ಸಂಸ್ಕೃತಿಯ ಆಧಾರದ ಮೇಲೆ ತನ್ನ ವ್ಯಕ್ತಿತ್ವವನ್ನು ಕಟ್ಟಿಕೊಂಡಿರುವ ಸಾಮಾನ್ಯ ಭಾರತೀಯನ-ಆತ ಗ್ರಾಮ ನಿವಾಸಿಯಾಗಿರದಿದ್ದರೂ-ಮಾನಸಿಕತೆಯನ್ನೇ ಬುಡಮೇಲುಗೊಳಿಸುವಂತಹುದಾಗಿದೆ. ಹಾಗೆ ನೋಡಿದರೆ, ಭಾರತಕ್ಕೆ ಇದೊಂದು ಮಾನಸಿಕ ಪ್ರಳಯವೇ ಆಗಲಿದೆ. ಈ ಪ್ರಳಯದ ಮೊದಲ ಕಂಪನಗಳು ಈಗ ಹರ್ಯಾಣ-ಪಂಜಾಬ್-ಪ.ಬಂಗಾಳ-ಒರಿಸ್ಸಾ- ಮಹಾರಾಷ್ಟ್ರ-ಕರ್ನಾಟಕಗಳಲ್ಲಿ ಮೆಲ್ಲಗೆ ಕೇಳಲಾರಂಭಿಸಿದೆ.

ಭಾರತೀಯ ಸಮಾಜವಾದಿ ಚಳುವಳಿಗೆ ಒಂದು ಸ್ಪಷ್ಟ ತಾತ್ವಿಕ ರೂಪ ನೀಡಿದ್ದ ಡಾ|| ರಾಮಮನೋಹರ ಲೋಹಿಯಾ ಈ ಪ್ರಳಯವನ್ನು ಮುನ್ನೋಡಿದ್ದರು. ಬಂಡವಾಳ ಬೆಳೆಯುವುದೇ ಅನ್ಯಾಕ್ರಮಣ ಮತ್ತು ಮೂಲನಿವಾಸಿಗಳ ನಿರ್ವಸತೀಕರಣಗಳ ಮೂಲಕ ಎಂಬುದು ಅವರ ವಾದವಾಗಿತ್ತು. (ರೆಡ್ ಇಂಡಿಯನ್ನರು ಕಾಪಾಡಿಕೊಂಡು ಬಂದಿದ್ದ ಸಮೃದ್ಧ ಪ್ರಾಕೃತಿಕ ಸಂಪನ್ಮೂಲಗಳ ಅಮೆರಿಕಾ, ಆಧುನಿಕ ಅಮೆರಿಕಾ ಹೇಗಾಯಿತೆಂಬುದನ್ನು ನೆನಪಿಸಿಕೊಳ್ಳಿ.) ಹಾಗಾಗಿ ಬಂಡವಾಳವಾದವು ಒಂದು ಘಟ್ಟದವರೆಗೆ ಪ್ರಗತಿಶೀಲವಾಗಿದ್ದು, ನಂತರ ತಾನೇ ಸೃಷ್ಟಿಸಿಕೊಳ್ಳುವ ವೈರುಧ್ಯಗಳಿಂದಾಗಿ ಸಾಮ್ಯವಾದ (ಕಮ್ಯುನಿಸಂ)ಕ್ಕೆ ದಾರಿ ಮಾಡಿಕೊಡುತ್ತದೆ ಎಂಬ ಮಾರ್ಕ್ಸ್‌ವಾದಿ ವಿಶ್ಲೇಷಣೆಯನ್ನು ಅವರು ತಿರಸ್ಕರಿಸಿದ್ದರು. ಬಂಡವಾಳವಾದವು ಜಗತ್ತಿನ ಒಂದು ಭಾಗವನ್ನು ಶೋಷಿಸುತ್ತಾ, ಇನ್ನೊಂದು ಭಾಗವನ್ನು ಸಮೃದ್ಧಗೊಳಿಸುತ್ತಾ ಹೋಗುತ್ತದೆ. ಅಲ್ಲದೆ, ಶೋಷಿತ ಪ್ರದೇಶಗಳಲ್ಲಿ ತನ್ನ ಚೇಲಾ ಬಂಡವಾಳವಾದಿಗಳ ಮೂಲಕ ಬಂಡವಾಳವಾದದ ಪ್ರಗತಿಶೀಲತೆಯ ಪ್ರಚಾರ ಮಾಡುತ್ತಾ ತನ್ನ ಶೋಷಣೆಯ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಾ ಹೋಗುತ್ತದೆ ಎಂಬುದು ಲೋಹಿಯಾ ಅವರ ವಿಶ್ಲೇಷಣೆಯಾಗಿತ್ತು. ಬಂಡವಾಳವಾದದ ಆಧಾರವಾದ ಸಮೂಹ (ಸಾಮೂಹಿಕ

ಅಲ್ಲ) ಮತ್ತು ಗ್ರಾಹಕವಾದಿ (ಅಂದರೆ, ಅಗತ್ಯವಲ್ಲದ ಆದರೆ ಶೋಕಿಯ) ಉತ್ಪಾದನೆಯನ್ನು ಪ್ರಚೋದಿಸುವ ತಂತ್ರಜ್ಞಾನವನ್ನೇ ನಂಬಿದ ಸಾಮ್ಯವಾದ ಕೂಡಾ ಪಶ್ಚಿಮದ ಆಧುನೀಕರಣದ ಮಾದರಿಯನ್ನೇ ಅವಲಂಬಿಸಿದೆ. ಆದುದರಿಂದ ಅದು ಕೂಡಾ ವಸಾಹತುಗಳನ್ನು ಸೃಷ್ಟಿಸಿಕೊಂಡೇ ಬದುಕಬೇಕಾಗುತ್ತದೆ. ಇಲ್ಲವೇ ತನ್ನ ಜನವನ್ನೇ ವಸಾಹತುದಾರರಂತೆ ದುಡಿಸಿಕೊಳ್ಳಬೇಕಾಗುತ್ತದೆ ಮತ್ತು ಆ ಮೂಲಕ ತನ್ನ ಆತ್ಯಂತಿಕ ಆದರ್ಶವಾದ ಸಮಾನತೆಯನ್ನು ಧಿಕ್ಕರಿಸಬೇಕಾಗುತ್ತದೆ ಎಂಬುದು ಅವರ ಕಾಣ್ಕೆಯಾಗಿತ್ತು. ಈ ಕಾಣ್ಕೆ ನಿಜವಾಗಿ, ಸೋವಿಯತ್ ಒಕ್ಕೂಟ ಪ್ರತಿನಿಧಿಸುತ್ತಿದ್ದ ಸಾಮ್ಯವಾದ (ಸಾಮ್ಯವಾದದ ಇನ್ನೊಂದು ರೂಪದ ಪ್ರತಿನಿಧಿಯಂತಿದ್ದ ಚೀನಾ ಬಹು ಹಿಂದೆಯೇ - ಮಾವೋ ನಂತರದಲ್ಲೇ - ಬಹಿರಂಗವಾಗಿ ಘೋಷಿಸಿಕೊಳ್ಳದೆ, ತನ್ನ ಸಾಮ್ಯವಾದಿ ಪ್ರಯೋಗವನ್ನು ಕೈಬಿಟ್ಟಿರುವುದು ಎಲ್ಲರಿಗೆ ಗೊತ್ತಿದೆ.) ವಿಫಲವಾಗಿದೆ ಮತ್ತು ಅದು ಬಂಡವಾಳವಾದದ ದಿಗ್ವಿಜಯಕ್ಕೆ ಕಾರಣವಾಗಿದೆ. ಈ ದಿಗ್ವಿಜಯದ ಇನ್ನೊಂದು ಹೆಸರೇ ಜಾಗತೀಕರಣವಾಗಿದೆ.

ಭಾರತ ಈ ದಿಗ್ವಿಜಯಕ್ಕೆ ಬಲಿಯಾಗಬಾರದೆಂದೇ ಲೋಹಿಯಾ ಹೊಸ ಉತ್ಪಾದನಾ ಸಂಸ್ಕೃತಿಯನ್ನು ಪ್ರತಿಪಾದಿಸಿದ್ದರು. ಅಷ್ಟೇ ಅಲ್ಲ, ಇಡೀ ಜಗತ್ತು ಈ ಸಂಸ್ಕೃತಿಯನ್ನು ಅಳವಡಿಸಿಕೊಂಡು ಬಂಡವಾಳವಾದ ಹಾಗೂ ಸಾಮ್ಯವಾದಗಳ ಅಪಾಯಗಳನ್ನು ಮೀರಿ ನಿಂತು, ಶೋಷಣೆಯಿಂದ ಮುಕ್ತಗೊಳ್ಳಬಹುದೆಂದು ಭಾವಿಸಿದ್ದರು. ಸ್ವಾತಂತ್ರ್ಯ, ಸಮಾನತೆ ಮತ್ತು ಸಂಪದಭಿವೃದ್ಧಿಗಳ ಅವಿಭಾಜ್ಯತೆಯೇ (ಒಂದನ್ನು ಬಿಟ್ಟು ಇನ್ನೊಂದು ಇರಲಾಗದ್ದು) ಲೋಹಿಯಾ ಪ್ರತಿಪಾದಿಸಿದ ಸಮಾಜವಾದದ ಹೆಗ್ಗುರುತಾಗಿದ್ದು, ಇದಕ್ಕಾಗಿ ಅವರು ಗಾಂಧೀಜಿಯ ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆ ಹಾಗೂ ಜರ್ಮನಿಯ ಸುಪ್ರಸಿದ್ಧ ಅರ್ಥಶಾಸ್ತ್ರಜ್ಞ ಷುಮೇಕರ್‌ನ 'ಸಣ್ಣದು ಸುಂದರ' ಪರಿಕಲ್ಪನೆಗಳನ್ನು ಬೆಸೆದು, ವಿಸ್ತರಿಸಿದರು. ಈ ಸಂಬಂಧವಾಗಿ, ಹಬೆ ಅಥವಾ ಸ್ಥಳೀಯ ವಿದ್ಯುತ್ತಿನ ಮೇಲೆ ಚಲಿಸುವ ಹಾಗೂ ಸ್ಥಳೀಕರ ನಿಯಂತ್ರಣ ದಾಟಿ ಹೋಗದಂತಹ ಸಣ್ಣ ಘಟಕಗಳ ಯಂತ್ರ ವ್ಯವಸ್ಥೆಯ ಅವಿಷ್ಕಾರಕ್ಕಾಗಿ ಅವರು ಜಾಗತಿಕ ಸಮಾಜವಾದಿ ವೇದಿಕೆಗಳಲ್ಲಿ ಕರೆಕೊಟ್ಟಿದ್ದರು. ಈ ಕರೆಯ ಹಿಂದೆ ಬೃಹತ್ ಉತ್ಪಾದನಾ ತಂತ್ರಜ್ಞಾನವು ಸ್ಥಳೀಯ ಜೀವನ ಕ್ರಮವನ್ನು ಹೊರಗಿನಿಂದ ಬುಡಮೇಲುಗೊಳಿಸಿ, ಸಮುದಾಯಗಳನ್ನು ಕ್ರಮೇಣ ಅವರಿಗೇ ಗೊತ್ತಿಲ್ಲದ ರೀತಿಗಳಲ್ಲಿ ಎಲ್ಲ ರೀತಿಯ ದುರಾಕ್ರಮಣಕ್ಕೆ ಈಡು ಮಾಡುವಂತಹದ್ದು ಎಂಬ ಒಳನೋಟವಿತ್ತು. ಹಾಗಾಗಿಯೇ, ವಿಜ್ಞಾನ- ತಂತ್ರಜ್ಞಾನಗಳ ನಿರಂತರ ಅನ್ವಯ ಹಾಗೂ ಅವಿಷ್ಕಾರಗಳನ್ನು ಆಧರಿಸಿದ ಸದಾ ಏರುತ್ತಾ ಹೋಗುವ ಜೀವನಮಟ್ಟದ ಆಸ್ಫೋಟನಕಾರಿ ಸಂಸ್ಕೃತಿಗೆ ಬದಲಾಗಿ, ಸ್ಥಳೀಯ ಇತಿ ಮಿತಿಗಳುಳ್ಳ ಒಂದು ಸಭ್ಯ ಜೀವನಮಟ್ಟದ ಸಂಸ್ಕೃತಿಯನ್ನಾಧರಿಸಿದ ಹೊಸ ಸಮಾಜವಾದಿ ನಾಗರೀಕತೆಯ ಕನಸನ್ನು ಲೋಹಿಯಾ ಜಗತ್ತಿನ ಮುಂದಿಟ್ಟಿದ್ದರು. ಬಂಡವಾಳವಾದಿ ಸರಕು ಉತ್ಪಾದನಾ ತಂತ್ರವನ್ನೇ ಅನುಸರಿಸುತ್ತಾ, ವಿತರಣೆಯಲ್ಲಿ ಮಾತ್ರ ಸಮಾಜವಾದಿ, ತತ್ವವನ್ನು ಅಳವಡಿಸಿಕೊಳ್ಳುವ ಐರೋಪ್ಯ ಸಮಾಜವಾದ, ಒಂದಲ್ಲ ಒಂದು ದಿನ ಬಂಡವಾಳವಾದಕ್ಕೆ ಶರಣಾಗುವುದೆಂದು

ಅವರು ಎಚ್ಚರಿಸಿದ್ದರು. ಅವರ ಮಾತು ಇಂದು, ಐರೋಪ್ಯ ದೇಶಗಳಲ್ಲಿ ಸಮಾಜವಾದಿ ಚಳುವಳಿಯೇ ಅವಶೇಷ ರೂಪ ತಾಳಿ, ಜಾಗತೀಕರಣಕ್ಕೆ ಅವಕಾಶ ಮಾಡಿಕೊಡುವ ಮೂಲಕ ನಿಜವಾಗಿದೆ.

ಭಾರತದಲ್ಲಿಯೂ ಸಮಾಜವಾದಿ ಚಳುವಳಿಯು ಅವಶೇಷ ರೂಪದಲ್ಲಿದ್ದರೆ ಅದಕ್ಕೆ ಮುಖ್ಯ ಕಾರಣ, ಸ್ವಾತಂತ್ರ್ಯ ಹೋರಾಟದಲ್ಲಿ ಸಮೂಹ ನಾಯಕರಂತೆ ಪ್ರತಿಬಿಂಬಿಸಲ್ಪಟ್ಟಿದ್ದ ನೆಹರೂರ ವರ್ಚಸ್ಸಿಗೆ ಬೆರಗಾಗಿದ್ದ ದೇಶಕ್ಕೆ, ಅವರು ಪ್ರತಿಪಾದಿಸಿದ ಪಶ್ಚಿಮದ ಆಧುನೀಕರಣದ ಸಂಭ್ರಮ-ಸಡಗರಗಳಲ್ಲಿ, ಲೋಹಿಯಾ ಇರಲಿ; ಗಾಂಧಿ ದರ್ಶನವನ್ನೂ ಅರ್ಥ ಮಾಡಿಕೊಳ್ಳುವ ವ್ಯವಧಾನವಾಗಲೀ, ಸಂಘಟಿತ ವಿವೇಕವಾಗಲೀ ಇಲ್ಲದಿದ್ದುದು. ಇದಕ್ಕಾಗಿ ಧ್ವನಿ ಎತ್ತಬೇಕಾಗಿದ್ದ ಗಾಂಧಿವಾದಿಗಳನ್ನು ನೆಹರೂ, ಖಾದಿ-ಗ್ರಾಮೋದ್ಯೋಗಗಳಿಗೂ ಒಂದಷ್ಟು ಹಣ ನೀಡಿ ಸಂತುಷ್ಟಗೊಳಿಸಿದ್ದರು. ಸ್ವಾತಂತ್ರ್ಯಾನಂತರದ ಗಾಂಧಿವಾದಿಗಳಲ್ಲಿ, ನೆಹರೂ ಅನುಯಾಯಿಗಳನ್ನು ಸರ್ಕಾರಿ ಗಾಂಧಿವಾದಿಗಳೆಂದು, ವಿನೋಬಾ ಅನುಯಾಯಿಗಳನ್ನು ಆಶ್ರಮ ಗಾಂಧಿವಾದಿಗಳೆಂದು, ಸಮಾಜವಾದಿಗಳನ್ನು ಬಂಡುಕೋರ ಗಾಂಧಿವಾದಿಗಳು ಎಂದು ವಿಂಗಡಿಸಿದ್ದ ಲೋಹಿಯಾ; ಮೊದಲಿಬ್ಬರ ಒಕ್ಕೂಟದಲ್ಲಿ ಗಾಂಧಿವಾದ ನಿಂತ ನೀರಾಗಿದ್ದು, ಅದನ್ನು ಚಲನಶೀಲಗೊಳಿಸುವ ಹೊಣೆ ಮೂರನೇ ಗುಂಪಿನದಾಗಿದೆ ಎಂದು ಭಾವಿಸಿದ್ದರು. ಆದರೆ ಸಮಾಜವಾದಿ ಚಳುವಳಿಯ ದುರಂತವೆಂದರೆ, ೧೯೫೨ರ ಮೊದಲ ಮಹಾ ಚುನಾವಣೆಯಲ್ಲಿ ಅನುಭವಿಸಿದ ದೊಡ್ಡ ಸೋಲಿನ ನಂತರ ಈ ಬಂಡುಕೋರ ಸಮಾಜವಾದಿಗಳಲ್ಲನೇಕರು ಹಂತಾನುಹಂತವಾಗಿ, ಒಂದಲ್ಲ ಒಂದು ವೈಯಕ್ತಿಕ ಅಥವಾ ತಾತ್ವಿಕ ಕಾರಣ ಅಥವಾ ನೆಪವೊಡ್ಡಿ, ಸರ್ಕಾರಿ ಮತ್ತು ಆಶ್ರಮವಾಸಿ ಗಾಂಧಿವಾದಿಗಳ ಒಕ್ಕೂಟದೊಡನೆ ಸಂಪರ್ಕವೇರ್ಪಡಿಸಿಕೊಂಡು, ಸಮಾಜವಾದಿ ಚಳುವಳಿಯ ಅನನ್ಯತೆ-ವಿಶ್ವಾಸಾರ್ಹತೆಗಳಿಗೆ ಧಕ್ಕೆ ತರತೊಡಗಿದರು. ಇವರಲ್ಲಿ ಭಾರತೀಯ ಸಮಾಜವಾದಿ ಚಳುವಳಿಯ ಮೂಲ ಕರ್ತೃಗಳಲ್ಲೊಬ್ಬರೂ ಮತ್ತು ಮುಂದೆ ೧೯೭೫ರಲ್ಲಿ ಸಂಪೂರ್ಣ ಕ್ರಾಂತಿಯ ನಾಯಕತ್ವ ವಹಿಸಿಕೊಂಡ ಜೆ.ಪಿ. ಕೂಡಾ ಸೇರಿದ್ದರೆಂದ ಮೇಲೆ ಈ ಆಘಾತದ ಪರಿಣಾಮಗಳನ್ನು ಊಹಿಸಿಕೊಳ್ಳಬಹುದಾಗಿದೆ. ಇದರ ಜೊತೆಗೆ ಲೋಹಿಯಾ ಅವರ ತಾತ್ವಿಕ ಹಠಮಾರಿತನವೂ ಮತ್ತು ಅವರ ಬೆಂಬಲಿಗರ ಅನಿರ್ಬಂಧಿತ ಅಶಿಸ್ತೂ ಸೇರಿಕೊಂಡಿತ್ತು. ಹೀಗಾಗಿ ಮುಖ್ಯವಾಹಿನಿ ರಾಜಕಾರಣದೊಂದಿಗೆ ಅಲ್ಲದೆ, ತನ್ನವರೊಡನೆ ಕೂಡಾ ಹೋರಾಡಬೇಕಾಗಿ ಬಂದ ಲೋಹಿಯಾ ಒಂಟಿಯಾಗಿ ಹೋದರು.

ಸ್ವಾತಂತ್ರ್ಯ ಹೋರಾಟದಲ್ಲಿ, ವಿಶೇಷವಾಗಿ ೧೯೪೨ರ 'ದೇಶ ಬಿಟ್ಟು ತೊಲಗಿ' ಚಳುವಳಿಯ ಸಂದರ್ಭದಲ್ಲಿ; ಆ ನಂತರ ದೇಶ ವಿಭಜನೆ ಸಂದರ್ಭದ ಕೋಮು ದಳ್ಳುರಿಯ ಕಾಲದಲ್ಲಿ ತಮ್ಮ ಉಜ್ವಲ ಬೌದ್ಧಿಕ ಸಂವಾದಗಳ ಮೂಲಕ ಹಾಗೂ ವಿರೋಚಿತ ಸಾಹಸಗಳ ಮೂಲಕ ಲೋಹಿಯಾ ಗಾಂಧೀಜಿಯ ಮೆಚ್ಚಿನ ಕಿರಿಯ ಶಿಷ್ಯರಾಗಿದ್ದರು. (ಸ್ವಾತಂತ್ರ್ಯಾನಂತರ ದೇಶ ಹಿಡಿದಿರುವ ದಾರಿ ಬಗ್ಗೆ ಬಹು ಚಿಂತಿತರಾಗಿದ್ದ ಗಾಂಧೀಜಿ, ತಾವು ಕೊಲೆಯಾಗುವ

ಒಂದೆರಡು ದಿನಗಳ ಮುನ್ನ ಲೋಹಿಯಾರೊಂದಿಗೆ ಆಪ್ತ ಸಮಾಲೋಚನೆ ನಡೆಸಿ, ಬಹು ಮುಖ್ಯ ಮಾತುಕತೆಗಾಗಿ ಅವರನ್ನು ಜನವರಿ ೩೦ ರಂದು ತಮ್ಮಲ್ಲಿಗೆ ಆಹ್ವಾನಿಸಿದ್ದರು.) ಆದರೆ ಗಾಂಧೀಜಿಯ ರಾಜಕೀಯ ಉತ್ತರಾಧಿಕಾರಿಯೆನಿಸಿದ್ದ ನೆಹರೂ ಬದುಕಿರುವವರೆಗೆ ಅವರು ಸಂಸತ್ತನ್ನು ಪ್ರವೇಶಿಸಲಾಗಲಿಲ್ಲ ಎಂಬ ಸಂಗತಿ, ಒಂದು ಕಾಲದಲ್ಲಿ ಆಪ್ತ ಸಂಗಾತಿಗಳಾಗಿದ್ದ ನೆಹರೂ-ಲೋಹಿಯಾ ನಡುವಣ ಸಂಬಂಧ ಎಷ್ಟು ವಿಷಮಿಸಿತ್ತು ಮತ್ತು ಸರ್ಕಾರಿ ಗಾಂಧಿವಾದ ಹಾಗೂ ಆಶ್ರಮ ಗಾಂಧಿವಾದಗಳ ಒಕ್ಕೂಟ ಲೋಹಿಯಾ ನೇತೃತ್ವದ ಸಮಾಜವಾದಿ ಚಳುವಳಿಯನ್ನು ಹೇಗೆ ಹತ್ತಿಕ್ಕಿತ್ತು ಎಂಬುದನ್ನು ಸೂಚಿಸುತ್ತದೆ.

ಇದೆಲ್ಲದುದರಿಂದಾಗಿ ಹತಾಶರಾದಂತೆ ತೋರಿದ ಲೋಹಿಯಾ, ತಮ್ಮ ಕೊನೆಯ ದಿನಗಳಲ್ಲಿ 'ಕಾಂಗ್ರೆಸ್ಸೇತರವಾದ'ವೊಂದೇ ದೇಶಕ್ಕೆ ಸದ್ಯದ ಪರಿಹಾರವೆಂದು ತೀರ್ಮಾನಿಸಿ, ಅದಕ್ಕಾಗಿ ತಮ್ಮೆಲ್ಲ ಶಕ್ತಿಯನ್ನು ವಿನಿಯೋಗಿಸಿ ಯಶಸ್ವಿಯೂ ಆದರು. (ಆ ಪ್ರಯತ್ನಕ್ಕಾಗಿ ಅವರು ದೇಶಾದ್ಯಂತ 'ಶ್ರೀಮಾನ್ ವಿರೋಧ ಪಕ್ಷ' ಎಂದೇ ಪ್ರಸಿದ್ಧರಾಗಿದ್ದರು!) ೧೯೬೭ರ ಮಹಾ ಚುನಾವಣೆಗಳಲ್ಲಿ ಕಾಂಗ್ರೆಸ್ ಅನೇಕ ರಾಜ್ಯಗಳಲ್ಲಿ ಅಧಿಕಾರ ಕಳೆದುಕೊಂಡಿತಲ್ಲದೆ, ಕೇಂದ್ರದಲ್ಲೂ ಬಲ ಕಳೆದುಕೊಂಡಿತು. ಆದರೆ, ಕಾಂಗ್ರೆಸ್ಸೇತರವಾದದ ಈ ಯಶಸ್ಸನ್ನು ಅವರು ಸಮಾಜವಾದಿ ತತ್ವದ ಯಶಸ್ಸಿಗಾಗಿ ಬಳಸಿಕೊಳ್ಳುವ ಮತ್ತು ತಮ್ಮ ಅನುಯಾಯಿಗಳನೇಕರು ಅಧಿಕಾರ ರಾಜಕಾರಣಕ್ಕೆ ಸಿಕ್ಕಿ ದಾರಿ ತಪ್ಪುತ್ತಿರುವುದನ್ನು ತಡೆಯುವ ಪ್ರಯತ್ನಗಳಲ್ಲಿದ್ದಾಗಲೇ ಅಸ್ವಸ್ಥರಾಗಿ ಅಸು ನೀಗಿದರು. ನಂತರ ಅಳಿದುಳಿದಿದ್ದ ಸಮಾಜವಾದಿಗಳು ನಾಯಕತ್ವವಿಲ್ಲದೆ ಹಲವು ಪಕ್ಷಗಳಲ್ಲಿ ಹರಿದು ಹಂಚಿಹೋಗುತ್ತಾ, ಕೊನೆಗೆ ೧೯೭೭ರಲ್ಲಿ ಜೆ.ಪಿ. ಯವರ ಸಂಪೂರ್ಣ ಕ್ರಾಂತಿಯ ಪ್ರಯೋಗದಲ್ಲಿ ಹುಟ್ಟಿದ ಜನತಾ ಪಕ್ಷದಲ್ಲಿ ತಮ್ಮ ಪಕ್ಷವನ್ನು ಲೀನಗೊಳಿಸಿದರು. ಈ ಪ್ರಯೋಗದ ವೈಫಲ್ಯದ ನಂತರವೂ ಸಮಾಜವಾದದ ಹೆಸರಿನಲ್ಲಿ ಒಂದೆರಡು ಪಕ್ಷಗಳು ಕಾಣಿಸಿಕೊಂಡಿವೆಯಾದರೂ, ಅವು ಲೋಹಿಯಾ ಸಮಾಜವಾದದ ಅಣಕಗಳಿಂತಿವೆಯಷ್ಟೆ.

ಜಾಗತೀಕರಣದ ಭರಾಟೆಯ ಇಂದಿನ ದಿನಗಳಲ್ಲಿ ಕೆಲವರಿಗಾದರೂ ಇನ್ನೂ ಲೋಹಿಯಾ ನೆನಪಾಗುತ್ತಿದ್ದರೆ ಅದಕ್ಕೆ ಮುಖ್ಯ ಕಾರಣ, ಭಾರತದ ಸ್ಮೃತಿಪಟಲದಲ್ಲಿ ಅಚ್ಚೊತ್ತಿರುವ ಪ್ರತಿಭೆ ಮತ್ತು ಪ್ರತಿಭಟನೆಗಳ ಸಂಗಮವಾಗಿದ್ದ ಅವರ ಉಜ್ವಲ ವ್ಯಕ್ತಿತ್ವ. ಈಗಿನ ಉತ್ತರ ಪ್ರದೇಶದ ಸಾಮಾನ್ಯ ವ್ಯಾಪಾರಿ ಕುಟುಂಬದಲ್ಲಿ ಸ್ವಾತಂತ್ರ್ಯ ಹೋರಾಟಗಾರನೊಬ್ಬನ ಮಗನಾಗಿ ಹುಟ್ಟಿ, ೨೨ನೇ ವಯಸ್ಸಿಗೇ ಬರ್ಲಿನ್ ವಿಶ್ವವಿದ್ಯಾಲಯದಿಂದ ರಾಜಕೀಯ ಶಾಸ್ತ್ರದಲ್ಲಿ ಡಾಕ್ಟೋರೇಟ್ ಪಡೆದ ಲೋಹಿಯಾ; ತಮ್ಮ ಮುಂದೆ ತೆರೆದಿಟ್ಟಿದ್ದ ಆರಾಮದಾಯಕ ಜೀವನವನ್ನು ತೊರೆದು, ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ ತಮ್ಮ ಇಡೀ ಜೀವನವನ್ನು ಸಮಾಜವಾದಿ ಚಿಂತನೆ ಹಾಗೂ ಹೋರಾಟಕ್ಕೆ ಮೀಸಲಿಟ್ಟರು. ವ್ಯವಸ್ಥೆಯ ವಿರುದ್ಧದ ಹೋರಾಟದ ಅಂಗವಾಗಿ ಅವರು ನಿರಂತರ ನಾಗರಿಕ ಸತ್ಯಾಗ್ರಹ, ಸಣ್ಣ ಘಟಕ ತಂತ್ರಜ್ಞಾನ ಹಾಗೂ ಭಾರತೀಯ ಪರಂಪರೆಯ ಪರಿಕಲ್ಪನೆಗಳನ್ನು ಕುರಿತ ಸಂಶೋಧನೆಗಾಗಿ 'ಖೋಜ್ ಪರಿಷತ್' ಎಂಬ

ಅಧ್ಯಯನ ಸಂಸ್ಥೆ, ಕೃಷಿ ಮತ್ತು ಕೈಗಾರಿಕಾ ಬೆಲೆಗಳ ಸಮನ್ವಯ ಹಾಗೂ ಬೆಲೆ ನಿಯಂತ್ರಣ ಆಯೋಗ, ವರಮಾನ ಹಾಗೂ ಖರ್ಚಿನ ಮೇಲೆ ಮಿತಿ, ನಾಲ್ಕು ಹಂತಗಳಲ್ಲಿನ ಅಧಿಕಾರ ವಿಕೇಂದ್ರೀಕರಣವನ್ನಾಧರಿಸಿದ ಚತುಸ್ತಂಭ ರಾಷ್ಟ್ರ, ವಿಶ್ವ ಸಂಸ್ಥೆಗೆ ಪರ್ಯಾಯವಾಗಿ ಜಾಗತಿಕ ಸರ್ಕಾರ ಮುಂತಾದ ನವ ನವೀನ ತತ್ವ-ಪರಿಕಲ್ಪನೆಗಳನ್ನೂ ಮತ್ತು ಗೋವಾ ವಿಮೋಚನೆ, ನೇಪಾಳದ ಪ್ರಜಾಪ್ರಭುತ್ವೀಕರಣ, ಜಾತಿ ವಿನಾಶ ಸಮ್ಮೇಳನ, ಇಂಗ್ಲಿಷ್ ವಿರೋಧಿ - ಭಾರತೀಯ ಭಾಷಾ ಸಮ್ಮೇಳನ, ಹಿಮಾಲಯ ರಕ್ಷಿಸಿ ಸಮ್ಮೇಳನ ಇತ್ಯಾದಿ ರಾಜಕೀಯ ಕಾರ್ಯಕ್ರಮಗಳನ್ನೂ ಅವಿಷ್ಕರಿಸಿ ಕೊಟ್ಟಿದ್ದರು.

ಸಮಾಜವಾದಿ ಭಾರತದಲ್ಲಿ ರೈತನೇ ಪ್ರಗತಿ ಚಿತ್ರದ ಕೇಂದ್ರ ಬಿಂದುವಾಗಬೇಕು ಎಂದು ನಂಬಿದ್ದ ಲೋಹಿಯಾ, ಐವತ್ತರ ದಶಕದಲ್ಲೇ ಒಂದು ಲಕ್ಷ ಜನ ರೈತರ ಜಾಥಾ ಸಂಘಟಿಸಿ ಸಂಸತ್ತಿನ ಮುಂದೆ ಮತ ಪ್ರದರ್ಶನ ನಡೆಸಿದ್ದರು. ಕರ್ನಾಟಕದಲ್ಲಿ ಭೂ ಸುಧಾರಣೆ ಕಾರ್ಯಕ್ರಮಕ್ಕೆ ಅಸ್ತಿವಾರ ಹಾಕಿದ ಕಾಗೋಡು ಸತ್ಯಾಗ್ರಹಕ್ಕೆ ಬೆಂಬಲವಾಗಿ ಬಂದು ಭಾಗವಹಿಸಿ, ಬಂಧಿತ ರಾದದ್ದೂ ಉಂಟು. ಹೊರಗಿನ ಆಳುಗಳಿಲ್ಲದೆ ಐದು ಮಂದಿ ಸದಸ್ಯರ ಕುಟುಂಬವೊಂದು ಬೇಸಾಯ ಮಾಡಬಹುದಾದ ಭೂಮಿಯ ಮೂರರಷ್ಟಕ್ಕೆ ಭೂಪರಿಮಿತಿಯನ್ನು ನಿಗದಿ ಪಡಿಸಬೇಕೆಂದು ಅವರು ಪ್ರತಿಪಾದಿಸಿದ್ದರು. ಎಲ್ಲ ಖಾಸಗಿ ವಲಯದ ಬೃಹತ್ ಕಾರ್ಖಾನೆಗಳನ್ನು ಸರ್ಕಾರ ವಶ ಪಡಿಸಿಕೊಂಡು ಸಹಕಾರಿ ತತ್ವದ ಆಡಳಿತಕ್ಕೆ ಒಳಪಡಿಸಿ ಸಾಮಾಜಿಕರಿಸ ಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. ವಿಶೇಷ ಪರಿಣತಿ ಬೇಡದ ಎಲ್ಲ ಉದ್ಯೋಗಗಳಲ್ಲಿ ಹಿಂದುಳಿದ ವರ್ಗಗಳಿಗೆ ವಿಶೇಷ ಪ್ರಾಶಸ್ತ್ಯವನ್ನು ಒತ್ತಾಯಿಸಿದ ಅವರು, ಶಿಕ್ಷಣ ಕ್ಷೇತ್ರದಲ್ಲಿ ಮೀಸಲಾತಿಗೆ ವಿರೋಧ ವ್ಯಕ್ತಪಡಿಸಿದ್ದರು. ನಮ್ಮ ಹೆಣ್ಣು ಮಕ್ಕಳಿಗೆ ಕೆಚ್ಚು ಮತ್ತು ವಿವೇಕಗಳ ದ್ರೌಪದಿ ಮಾದರಿಯಾಗಬೇಕೇ ಹೊರತು, ಪತಿ ವಿಧೇಯತೆಯ ಸೀತೆ-ಸಾವಿತ್ರಿಯರಲ್ಲ ಎಂದಿದ್ದ ಅವರು, ಹೆಣ್ಣು ಮಕ್ಕಳಿಗೆ ಒಳ್ಳೆಯ ಶಿಕ್ಷಣ ಒದಗಿಸುವುದರೊಂದಿಗೆ ತಂದೆ ತಾಯಿಯರ ಕರ್ತವ್ಯ ಮುಗಿದು, ಮುಂದೆ ಅವರಿಗೆ ತಮ್ಮ ಜೀವನಕ್ಕೆ ತಾವೇ ಜವಾಬ್ದಾರರಾಗುವ ಅವಕಾಶವಿರಬೇಕು ಎಂದು ಅಭಿಪ್ರಾಯ ಪಟ್ಟಿದ್ದರು.

ಇಡೀ ದೇಶಕ್ಕೆ ಒಂದ ಸಾಮಾನ್ಯ ನಾಗರಿಕ ಸಂಹಿತೆ ಇರಬೇಕೆಂದು ನಂಬಿದ್ದ ಲೋಹಿಯಾ, ಮುಸ್ಲಿಮರ ಬುರ್ಖಾ, ಹಿಂದೂಗಳ ಪರದಾಗಳಂತಹ ಮಧ್ಯಯುಗೀನ ಸ್ತ್ರೀ ನಿರ್ಬಂಧ ಪದ್ಧತಿಗಳನ್ನು ನಿಷೇಧಿಸಬೇಕೆಂದರು. ನೈತಿಕ ತರಬೇತಿ ಹಾಗೂ ಧ್ಯಾನ-ಪ್ರಾರ್ಥನೆಗಳಂತಹ ಅತೀತದೊಡನೆಯ ಸಂವಾದದ ರೂಪಗಳಲ್ಲಿ ಮಾತ್ರ ಧರ್ಮವನ್ನು ಮಾನ್ಯಮಾಡಬಹುದಾಗಿದೆ ಎಂದ ಅವರು, ಆಸ್ತಿ ಮತ್ತು ಹೆಣ್ಣಿಗೆ ಸಂಬಂಧಪಟ್ಟ ಕಾನೂನು ಕಟ್ಟಳೆಗಳಿಗೆ ಸಂಬಂಧಿಸಿದಂತೆ ಧರ್ಮವನ್ನು ದೂರವಿಡಬೇಕೆಂದು ಸೂಚಿಸಿದರು. ಸ್ವತಃ ತಾವೇ ಭಾರತೀಯ ಪುರಾಣಗಳ ವಿಶಿಷ್ಟ ವ್ಯಾಖ್ಯಾನ ಮಾಡಿ, ರಾಮ-ಕೃಷ್ಣ-ಶಿವ ಹೇಗೆ ತಮ್ಮ ವೈವಿಧ್ಯಮಯ ಆವೃತ್ತಿಗಳಲ್ಲಿ ಭಾರತೀಯ ಜನಜೀವನದ ಆಂತರಂಗಿಕ ಮೂರ್ತಿಗಳಾಗಿ ಕ್ರಿಯಾಶೀಲರಾಗಿದ್ದಾರೆ ಎಂಬುದನ್ನು ನಿರೂಪಿಸಿದ್ದರು. ದೇವರು ಮತ್ತು ಹೆಣ್ಣು ತಮ್ಮ ಬದುಕಿನ ಮುಖ್ಯ ಅನ್ವೇಷಣೆಗಳಾಗಿದ್ದು;

ದೇವರು ಸಿಕ್ಕಿಲ್ಲ, ಹೆಣ್ಣು ದಕ್ಕಿಲ್ಲ ಎಂದು ತಮ್ಮ ಜೀವನ ದರ್ಶನವನ್ನು ಲಘು-ಲಲಿತವಾಗಿ ಹೇಳಿದ್ದ ಲೋಹಿಯಾ ಕೆಲವರು ತಿಳಿದಂತೆ ನಾಸ್ತಿಕರಾಗಿರದೆ, ಬುದ್ಧನಂತೆ ಆಜ್ಞೇಯತಾ ವಾದಿಯಾಗಿದ್ದರು. ಹಿಂದು-ಮುಸ್ಲಿಂ ಏಕತೆಯನ್ನು, ಇತಿಹಾಸ ಕಲಿಕೆಯ ಪರಿಷ್ಕಾರ ಹಾಗೂ ಇಬ್ಬರೂ ಪರಸ್ಪರ ಅನುಮಾನಗಳನ್ನು ಹುಟ್ಟಿಸದ ರೀತಿಯಲ್ಲಿ ಪ್ರಜ್ಞಾಪೂರ್ವಕ ಬಾಳುವೆ ಮಾಡುವಂತಹ ವಾತಾವರಣ ನಿರ್ಮಾಣ ಮಾಡುವ ಮೂಲಕ ಮಾತ್ರ ಸಾಧಿಸಬಹುದೆಂದು ಭಾವಿಸಿದ್ದರು. ರಾಷ್ಟ್ರ ವಿಭಜನೆಯನ್ನು ಕಾಂಗ್ರೆಸ್ ಕಾರ್ಯಕಾರಿಣಿಯಲ್ಲಿ ಗಡಿನಾಡ ಗಾಂಧಿಯೊಂದಿಗೆ ವಿರೋಧಿಸಿ ಗಾಂಧೀಜಿಯ ಏಕಾಕಿತನದ ಭಾರವನ್ನು ಕಡಿಮೆಗೊಳಿಸಿದ್ದ ಲೋಹಿಯಾ, ಒಂದಲ್ಲ ಒಂದು ದಿನ ಭಾರತ-ಪಾಕಿಸ್ತಾನಗಳು ಒಂದಾಗುತ್ತವೆಂದು ನಂಬಿದ್ದರು. ತಾವು ಸಂಪಾದಿಸುತ್ತಿದ್ದ 'ಮ್ಯಾನ್‌ಕೈಂಡ್' ಎಂಬ ಇಂಗ್ಲಿಷ್ ತ್ರೈಮಾಸಿಕದ ಮೂಲಕ ಅವರು ಜಾಗತಿಕ ಮಟ್ಟದಲ್ಲಿ ಸಮಾಜವಾದಿ ಜಿಜ್ಞಾಸೆಗೆ ವೇದಿಕೆ ಸೃಷ್ಟಿಸಿದ್ದರು.

ಸಮಾನತೆಯ ಮುಖ್ಯ ಆಶಯವನ್ನಾಧರಿಸಿದ ತಮ್ಮ ಸಮಾಜವಾದಿ ತತ್ವದ ವಿಷದೀಕರಣಕ್ಕಾಗಿ ಅವರು ೧೯೬೨ರ ಲೋಕಸಭಾ ಚುನಾವಣೆಯಲ್ಲಿ ಗ್ವಾಲಿಯರ್‌ನ ರಾಣಿ ವಿರುದ್ಧ ಪೌರ ಕಾರ್ಮಿಕ ಮಹಿಳೆಯೊಬ್ಬಳನ್ನು ತಮ್ಮ ಪಕ್ಷದ ಅಭ್ಯರ್ಥಿಯನ್ನಾಗಿ ನಿಲ್ಲಿಸಿದ್ದರು. ಜಾಗತಿಕ ಸರ್ಕಾರದ ಕನಸಿನ ಪ್ರತೀಕವಾಗಿ ಪಾಸ್‌ಪೋರ್ಟ್ ಇಲ್ಲದೆ - ಕಲ್ಕತ್ತದಿಂದ ರಂಗೂನ್‌ಗೆ- ವಿದೇಶ ಪ್ರಯಾಣದ ಪ್ರಯೋಗ ಮಾಡಿದರು. ಅಮೆರಿಕಾ ಪ್ರವಾಸದ ಸಂದರ್ಭದಲ್ಲಿ ವರ್ಣಭೇದ ನೀತಿಯ ವಿರುದ್ಧ ಪ್ರತಿಭಟನಾರ್ಥವಾಗಿ ವರ್ಣೀಯರಿಗೆ ಪ್ರವೇಶವಿಲ್ಲದ ಉಪಹಾರ ಗೃಹವನ್ನು ಪ್ರವೇಶಿಸಿ ಬಂಧಿತರಾಗಿ, ಅಮೆರಿಕಾ ಸರ್ಕಾರ ಕ್ಷಮೆ ಕೇಳುವಂತೆ ಮಾಡಿದರು. ಹೀಗಾಗಿ, ರಾಮಮನೋಹರ ಲೋಹಿಯಾ ವ್ಯವಸ್ಥೆಯ ವಿರುದ್ಧದ ನಿರಂತರ ಹೋರಾಟದ ಉಜ್ವಲ ಸಂಕೇತವಾಗಿ ರಾಷ್ಟ್ರದ ಅನೇಕ ಲೇಖಕ-ಕಲಾವಿದ-ಚಿಂತಕರ ಗಮನ ಸೆಳೆದಿದ್ದರು. ಕನ್ನಡದ ಮಟ್ಟಿಗೆ ಮುಖ್ಯವಾಗಿ, ಕುವೆಂಪು, ಪು.ತಿ.ನ., ಅಡಿಗ ಹಾಗೂ ಜಿ.ಎಸ್. ಶಿವರುದ್ರಪ್ಪನವರು ಒಂದಲ್ಲ ಒಂದು ಕಾರಣಕ್ಕೆ ಲೋಹಿಯಾರಿಂದ ಸೆಳೆಯಲ್ಪಟ್ಟಿದ್ದರು. ಈ ಹೋರಾಟದಲ್ಲಿ ಅವರು ಸ್ವತಂತ್ರ ಭಾರತದಲ್ಲಿ ಯಾರೂ ಅನುಭವಿಸದಷ್ಟು ಬಾರಿ-ಹದಿನೆಂಟು ಬಾರಿ-ಸೆರೆಮನೆ ವಾಸ ಅನುಭವಿಸಿದರು ಹಾಗೂ ಈ ಸಂದರ್ಭದಲ್ಲಿ ಅನೇಕ ಬಾರಿ ಬ್ರಿಟಿಷರ ಕಾಲದಲ್ಲೂ ಒಳಗಾಗದಿದ್ದಂತಹ ಪೋಲೀಸ್ ದೌರ್ಜನ್ಯಕ್ಕೂ ಒಳಗಾಗಿದ್ದರು.

ಇಂತಹ ಲೋಹಿಯಾ, ಜಾಗತೀಕರಣ ತಂದೊಡ್ಡುತ್ತಿರುವ ಅಪಾಯಗಳ ವಿರುದ್ಧದ ಆಂದೋಲನಕ್ಕೆ ಭಾರತದ ಮಟ್ಟಿಗಾದರೂ, ಸ್ಫೂರ್ತಿ ಕೇಂದ್ರವಾಗದೆ, ಇನ್ನಾರಾದರು? ನಾವು ಹೈ-ಟೆಕ್ ಆಧುನಿಕತೆಯ ಹಾದಿಯಲ್ಲಿ ಎಷ್ಟು ಮುಂದೆ ಹೋಗಿಬಿಟ್ಟಿದ್ದೀವೆಂದರೆ, ಹಿಂದೆ ಬರುವುದು ಅಸಾಧ್ಯ ಎನ್ನುವವರು, ಈ ಹಾದಿ ನಮ್ಮನ್ನು ಎಲ್ಲಿಗೆ ಕೊಂಡೊಯ್ಯುತ್ತಿದೆ ಎಂಬುದನ್ನು ವ್ಯವಧಾನದಲ್ಲಿ ಆಲೋಚಿಸಬೇಕು; ಈ ಅಭಿವೃದ್ಧಿ ಎಂತಹುದು, ಎಷ್ಟು, ಏಕೆ ಮತ್ತು ಯಾರಿಗಾಗಿ ಎಂಬ ಪ್ರಶ್ನೆಗಳನ್ನು ಹಾಕಿಕೊಳ್ಳಬೇಕು. ನಾವು, ನಮ್ಮ ಮಕ್ಕಳು ಮತ್ತು ಮೊಮ್ಮಕ್ಕಳ ಭವಿಷ್ಯದ

ಮಟ್ಟಿಗೆ ಮಾತ್ರ ಆಲೋಚಿಸುವ ಸಮೀಪ ದೃಷ್ಟಿಯ ಸಮಾಜ, ಅವನತಿಯ ಕಡೆಗೆ ಮಾತ್ರ ನಡೆಯಬಲ್ಲುದು. ಇಂದಿನ 'ಅಭಿವೃದ್ಧಿ' ಹುಟ್ಟು ಹಾಕುತ್ತಿರುವ ಸಾಮಾಜಿಕ ಅಶಾಂತಿ ಹಾಗೂ ಜೀವ ಪರಿಸರ ನಾಶ ನಮ್ಮಲ್ಲಿ ಆತ್ಯಂತಿಕ ಆತಂಕ ಹುಟ್ಟಿಸದಿದ್ದಲ್ಲಿ, ನಾವು ನಾಗರಿಕ ಜಗತ್ತಿನ ಅಲ್ಲ, ಜೀವ ಜಗತ್ತಿನ ಪ್ರಜೆಗಳಾಗಿ ಉಳಿಯುವ ಎಲ್ಲ ಅರ್ಹತೆಗಳನ್ನೂ ಕಳೆದುಕೊಂಡು, ಆಧುನಿಕ ಭಸ್ಮಾಸುರರಾಗುತ್ತಿದ್ದೇವೆ ಎಂದೇ ಅರ್ಥ. ಇದರರ್ಥ, ನಾವು ಕಾಲದಲ್ಲಿ ಹಿಂದಕ್ಕೆ ಹೋಗಬೇಕು ಎಂಬುದಲ್ಲ. ಅದು ಸಾಧ್ಯವೂ ಆಗದು. ಬದಲಿಗೆ, ಹಾದಿಯ ದಿಕ್ಕನ್ನು ಕ್ರಮೇಣ ಬದಲಿಸುವ ಸಂಕಲ್ಪ ಮಾಡಿ, ಅದಕ್ಕೆ ಅಗತ್ಯವಾದ ಮೂಲಭೂತ ತಾಂತ್ರಿಕ ಹಾಗೂ ಆಡಳಿತಾತ್ಮಕ ಬದಲಾವಣೆಗಳಿಗಾಗಿ, ಕಾರ್ಯಕ್ರಮಗಳನ್ನು ಆರಂಭಿಸಲು ಸರ್ಕಾರಗಳ ಮೇಲೆ ಒತ್ತಡ ತರಬೇಕಿದೆ. ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ಜೀವನ ಕ್ರಮವನ್ನು ಮಿತಿಗಳುಳ್ಳ ಬದುಕಿನ ಶೈಲಿಗೆ ಪರಿವರ್ತಿಸಿಕೊಳ್ಳಬೇಕಾಗಿದೆ.

ಈ ದಿಕ್ಕಿನಲ್ಲಿ ಈಗಾಗಲೇ ಜಗತ್ತಿನಾದ್ಯಂತ ಒಂದು ದೊಡ್ಡ ಆಂದೋಲನವೇ ಆರಂಭವಾಗಿದೆ. ಜಾಗತೀಕರಣದ ಚಾಲಕ ಶಕ್ತಿಯಾಗಿರುವ ಅಮೆರಿಕಾದ ರಾಜಕೀಯ ಪಿತೂರಿ-ದಬ್ಬಾಳಿಕೆಗಳಿಂದ ಬಸವಳಿದು ಹೋಗಿರುವ ಲ್ಯಾಟಿನ್ ಅಮೆರಿಕಾದಿಂದಲೇ 'ವಿಶ್ವ ಸಾಮಾಜಿಕ ವೇದಿಕೆ'ಯಡಿ 'ಇನ್ನೊಂದು ಜಗತ್ತು ಸಾಧ್ಯ' ಎಂಬ ಆಂದೋಲನ ಆರಂಭವಾಗಿದೆ. ೨೦೦೧ರಲ್ಲಿ ಜಿ-೮ ಗುಂಪಿನ ಶ್ರೀಮಂತ ದೇಶಗಳು ಜಾಗತೀಕರಣವನ್ನು ಅಧಿಕೃತಗೊಳಿಸುದ್ದ 'ವಿಶ್ವ ಆರ್ಥಿಕ ಶೃಂಗ ಸಭೆ' ಯನ್ನು ಸ್ವಿಟ್ಜರ್‌ಲೆಂಡ್‌ನ ಡಾವೋಸ್‌ನಲ್ಲಿ ಆಯೋಜಿತಗೊಳಿಸಿದ್ದ ಸಂದರ್ಭದಲ್ಲೇ, ಅದಕ್ಕೆ ಪರ್ಯಾಯವೆಂಬಂತೆ ಬ್ರೆಜಿಲ್‌ನ ಪೊರ್ತೋ ಅಲೆಗ್ರೆಯಲ್ಲಿ ರೂಪುಗೊಂಡ 'ವಿಶ್ವ ಸಾಮಾಜಿಕ ವೇದಿಕೆ', ಈಗ ಅಮೆರಿಕಾ, ಬ್ರಿಟನ್, ಫ್ರಾನ್ಸ್ ಸೇರಿದಂತೆ ಜಗತ್ತಿನ ಬಹುಪಾಲು ದೇಶಗಳ ಜನಗಳ ಬೆಂಬಲ ಗಳಿಸಿದೆ. ಈ ಆಂದೋಲನ ಆರಂಭವಾದಾಗಿನಿಂದ ಲ್ಯಾಟಿನ್ ಅಮೆರಿಕಾದ ಮೂರು ರಾಷ್ಟ್ರಗಳಲ್ಲಿ-ಬೊಲಿವಿಯಾ, ವೆನಿಜೂಲ ಹಾಗೂ ನಿಕಾರುಗುವಾ-ಸಮಾಜವಾದಿ ಸರ್ಕಾರಗಳು ಸ್ಥಾಪಿತವಾಗಿರುವುದು ಈ ಆಂದೋಲನದ ಯಶಸ್ಸಿನ ಸಂಕೇತವಾಗಿದೆ. ಇತ್ತೀಚೆಗೆ ತಾನೇ ಮೆಕ್ಸಿಕೊದಲ್ಲಿ ನಡೆದ ಚುನಾವಣೆಗಳಲ್ಲಿ ಸಮಾಜವಾದಿ ಸರ್ಕಾರ ಸ್ಥಾಪಿತವಾಗುವ ಅವಕಾಶ ಕೂದಲೆಳೆ ಅಂತರದಲ್ಲಿ- ಮತ ಎಣಿಕೆ ಕಾಲದಲ್ಲಿ ಗಣಕ ಯಂತ್ರಗಳು ಕೈಕೊಟ್ಟು– ಸಮಾಜವಾದಿಗಳ ಮುನ್ನಡೆ ಆಶ್ಚರ್ಯಕರವಾಗಿ ಹಿನ್ನಡೆಯಾಗಿ ಪರಿವರ್ತಿತವಾಗಿ-ತಪ್ಪಿ ಹೋಗಿದೆ.

ಇದೆಲ್ಲದರ ಪರಿಣಾಮ ನಮ್ಮ ದೇಶದ ರಾಜಕೀಯದ ಮೇಲೆ ಆಗದೇ ಇಲ್ಲ. ಜಾಗತೀಕರಣದಿಂದ ಆರ್ಥಿಕವಾಗಿ 'ಹೊಳೆಯುತ್ತಿದ್ದ ಭಾರತ', ಕಳೆದ ಚುನಾವಣೆಗಳಲ್ಲಿ ಸಾಮಾಜಿಕ ವಲಯಕ್ಕೂ ಆದ್ಯತೆ ನೀಡುವುದಾಗಿ ಘೋಷಿಸಿಕೊಂಡ ಸರ್ಕಾರವನ್ನು ಆಯ್ಕೆ ಮಾಡಿಕೊಂಡಿದೆ. ಆದರೆ ಬರೀ ಆದ್ಯತೆಯಲ್ಲ, ಸಾಮಾಜಿಕ ವಲಯವೇ ಮೂಲ ಕಾಳಜಿಯಾಗಿರುವ ಜನತಾ ಅರ್ಥಶಾಸ್ತ್ರದ ದಿನಗಳು ಚಾಲ್ತಿಗೆ ಬರಬೇಕಿದೆ. ಆ ಮುನ್ನ, ಈ ಜನತಾ ಅರ್ಥಶಾಸ್ತ್ರ ತನ್ನ ದೌರ್ಬಲ್ಯಗಳನ್ನು ಗುರುತಿಸಿಕೊಂಡು ಮತ್ತು ತನ್ನ ಅತಿಗಳನ್ನು

ಕಳೆದುಕೊಂಡು (ಅಂದರೆ, ಅದಕ್ಷತೆ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಮುಷ್ಕರ-ಚಳುವಳಿ ಇತ್ಯಾದಿ) ಈಗ ಚಾಲ್ತಿಯಲ್ಲಿರುವ ಸರಕು ಅರ್ಥಶಾಸ್ತ್ರದ ಅಶ್ಲೀಲತೆಯನ್ನು ಎತ್ತಿ ತೋರಿಸುವ ನೈತಿಕ ಸ್ಥೈರ್ಯವನ್ನು ರೂಢಿಸಿಕೊಳ್ಳಬೇಕಿದೆ. ಹಾಗೆ ನೋಡಿದರೆ, ಇಂದು ಮಹಾರಾಷ್ಟ್ರದ ಮಾದರಿ ಗ್ರಾಮ ಆಂದೋಲನದ ಅಣ್ಣಾ ಹಜಾರೆ, ಪರ್ಯಾಯ ತಂತ್ರಜ್ಞಾನದ ಪ್ರಯೋಗಶೀಲ ವಿಜ್ಞಾನ ಪಿ.ವಿ. ಶೇಷಾದ್ರಿ ಮತ್ತು ಗ್ರಾಮ ಸ್ವರಾಜ್ಯ ಆಂದೋಲನದ ಇಳಂಗೋವನ್ ಭಾರತೀಯ ಸಮಾಜವಾದಿ ಚಳುವಳಿಯಲ್ಲಿ ಕಾಣೆಯಾಗಿದ್ದ ರಚನಾತ್ಮಕತೆಯ ಮೂರು ಮುಖಗಳಂತಿದ್ದರೆ; ನರ್ಮದಾ ಆಂದೋಲನದ ಮೇಧಾ ಪಾಟ್ಕರ್, ಮಾನವ ಹಕ್ಕುಗಳ ಹೋರಾಟಗಾರ್ತಿ ಅರುಣಾ ರಾಯ್, ಪ್ರಭುತ್ವ ಭಯೋತ್ಪಾದನೆ ವಿರುದ್ಧದ ಚಳುವಳಿಕಾರ್ತಿ ಅರುಂಧತಿ ರಾಯ್ - ಈ ಮಹಿಳಾ ತ್ರಿಮೂರ್ತಿಗಳ ಪ್ರತಿಭಟನೆ, ಸಮಾಜವಾದಿ ಚಳುವಳಿಯ ಪ್ರತಿರೋಧ ಮುಖದ ಮುಂದುವರಿಕೆಯೇ ಆಗಿದೆ. ಲೋಹಿಯಾ ನೆನಪು ಅರ್ಥಪೂರ್ಣವೆನ್ನಿಸುವುದು ಇಂತಹವರ ಮೂಲಕವೇ.

ಹೀಗಾಗಿ, ಹೇಗೆ ನಂಬುವುದು ಸಮಾಜವಾದದ ಕಾಲ ಮುಗಿಯಿತೆಂದು? ಹಾಗೆ ನೋಡಿದರೆ, ಭವಿಷ್ಯವಿರುವುದು ಸಮಾಜವಾದಕ್ಕೇ ಎನಿಸುತ್ತದೆ. ಆದರೆ, ಇತಿಹಾಸದಿಂದ ಪಾಠ ಕಲಿತು ರೂಪುಗೊಳ್ಳುವ ಹೊಸ ಸಮಾಜವಾದಕ್ಕೆ. ಏಕೆಂದರೆ, ಅದು ಕರುಣೆ ಮತ್ತು ಕೆಚ್ಚುಗಳು ಸಂಗಮಿಸಿದ ಮೂಲ ಮನುಷ್ಯ ಧರ್ಮವೇ ಆಗಿರುತ್ತದೆ. ಬಹುಶಃ ಹಾಗಾಗಿಯೇ, ಈಚೆಗೆ ನಿಧನರಾದ, ಲೋಹಿಯಾ ಪರಂಪರೆಯ ಕೊನೆಯ ಕೊಂಡಿಯಂತಿದ್ದ ಕಿಷನ್ ಪಟ್ನಾಯಕರು ತಮ್ಮ ಕೊನೇ ದಿನಗಳ ಭಾಷಣಗಳಲ್ಲಿ ಈಶೋಪನಿಷತ್ತಿನ ಅಪರಿಗ್ರಹ ಹಾಗೂ ಬೌದ್ಧ ಧರ್ಮದ ಕರುಣಾ ಬಗ್ಗೆ ಪದೇ ಪದೇ ಪ್ರಸ್ತಾಪಿಸುತ್ತಿದ್ದುದು.

(ಸುಧಾ : ಮಾರ್ಚ್ ೨೪, ೨೦೦೭)

ಸರಕು ಅರ್ಥಶಾಸ್ತ್ರ ಮತ್ತು ಸಮಾಜವಾದ

ಈಗ ಮದುವೆಗಳನ್ನು ಹೊರ ಗುತ್ತಿಗೆ ಕೊಟ್ಟು ಏರ್ಪಡಿಸುತ್ತಿರುವ ಸಂಗತಿಯನ್ನು ನೀವು ಈಚೆಗೆ ಪತ್ರಿಕೆಗಳಲ್ಲಿ ಓದಿರಬಹುದು. ಈಚೆಗೆ ಜೋಧ್‌ಪುರದಲ್ಲಿ ಅನಿವಾಸಿ ಭಾರತೀಯ ಉದ್ಯಮಿ ಅರುಣ್ ನಯ್ಯರ್ ಹಾಗೂ ಹಾಲಿವುಡ್ ನಟನೊಬ್ಬನ ಮಾಜಿ ಪತ್ನಿ ಹರ್ಲೆ ನಡುವೆ ನಡೆದ ಕೋಟ್ಯಾಂತರ ರೂಪಾಯಿಗಳ ವೆಚ್ಚದ ಮದುವೆ ಇದಕ್ಕೊಂದು ಇತ್ತೀಚಿನ ಉದಾಹರಣೆಯಷ್ಟೆ. ಐದು ಕೋಟಿ ರೂಪಾಯಿಗಳಿಂದ ಹಿಡಿದು ಐದು ನೂರು ಕೋಟಿ ರೂಪಾಯಿಗಳವರೆಗಿನ ಮೌಲ್ಯದ ಈ ಹೊರ ಗುತ್ತಿಗೆಯಲ್ಲಿ ಶೇಕಡಾ ೧೦ ರಿಂದ ೧೫ ರವರೆಗೆ ಸೇವಾ ಕಮೀಷನ್ ಸಿಗುತ್ತದೆಂದು 'ಈವೆಂಟ್ ಮ್ಯಾನೇಜ್‌ಮೆಂಟ್' ಎಂಬ ಹೊಸ ಮರ್ಯಾದಸ್ಥ ಹೆಸರು ಪಡೆದುಕೊಂಡಿರುವ ಈ ಗುತ್ತಿಗೆದಾರರು ಹೇಳುತ್ತಾರೆ. ಇದು ಈ ಕಾಲದ 'ಸೇವೆ'! ಅಂದರೆ, ಮದುವೆಯೆಂಬುದೊಂದು 'ಈವೆಂಟ್'. ಅಂದರೆ ಒಂದು 'ಷೋ'– ಪ್ರದರ್ಶನ! ಹೃದಯ ಸಂಬಂಧಗಳನ್ನು ಬೆಸೆಯುವ, ಹಾಗಾಗಿ ತೀರಾ ವೈಯುಕ್ತಿಕ ನೆಲೆಯಲ್ಲಿ ಮತ್ತು ಕೌಟುಂಬಿಕ ಚೌಕಟ್ಟಿನಲ್ಲಿ ನಡೆಯಬೇಕಾದ ಮದುವೆ, ಈಗ ಸೇವಾ ಶುಲ್ಕ ತೆರಬೇಕಾದ ಒಂದು performance ಎಂಬಂತೆ–ಒಂದು 'ಆಟ'ವೆಂಬಂತೆ ಆಯೋಜಿತವಾಗುತ್ತಿದೆ. ಈ 'ಆಟ'ದಲ್ಲಿ ಮದುಮಕ್ಕಳು ಆಟಕ್ಕುಂಟು, ಲೆಕ್ಕಕ್ಕಿಲ್ಲ. ಏನಿದ್ದರೂ ಮದುಮಕ್ಕಳ ಅಪ್ಪ–ಅಮ್ಮಂದಿರು ಹಾಗೂ ಬಂಧು–ಮಿತ್ರರದೇ ಆಟ–ಕೂಟ. ಈ ಆಟ–ಕೂಟದಲ್ಲಿ ಪ್ರದರ್ಶನವಾಗುವುದು ಅವರ ಸಂಪತ್ತಿನ ಹಾಗೂ ಸಂಬಂಧಗಳ ಆಳ–ಎತ್ತರಗಳು. ಈ ಪ್ರದರ್ಶನದ ಗುರಿ ಅವರ ವಾಣಿಜ್ಯ ವ್ಯವಹಾರಗಳ ವಿಸ್ತಾರ.

ಬೆಳ್ಳಿ ತಗಡಿನಲ್ಲಿ ಕೆತ್ತಲ್ಪಟ್ಟ ಮದುವೆಯ ಆಹ್ವಾನ ಪತ್ರಿಕೆ, ಅದರೊಂದಿಗೆ ವಿಮಾನ ಟಿಕೆಟ್‌ಗಳು, ಪ್ರತಿ ಆಹ್ವಾನಿತರಿಗೂ ಒಂದು ಹವಾನಿಯಂತ್ರಿತ ಕಾರು, ಆ ಮದುವೆಗೆಂದೇ ನಿಗದಿಯಾದ ವಿಶೇಷ ಉಡುಪು, ನಾಲ್ವರು ಸೇವಕರು, ದಿನವೊಂದಕ್ಕೆ ೧.೬ ಲಕ್ಷ ರೂಪಾಯಿಗಳ ಬಾಡಿಗೆ ಇರುವ ಹೊಟೆಲ್ ಕೊಠಡಿ, ನಾಲ್ಕು ಖಂಡಗಳ ಶೈಲಿಯ ವಿಶೇಷ ಊಟ, ಮುತ್ತು– ರತ್ನಗಳಿಂದ ಸಜ್ಜಾದ ದಂತದ ಉಡುಗೊರೆಗಳು, ಗತ ಇತಿಹಾಸದ ಚಕ್ರವರ್ತಿಗಳ ಸ್ಮಾರಕಗಳಾಗಿರುವ ಕೋಟೆಗಳಲ್ಲೋ ಅಥವಾ ಅರಮನೆಗಳಲ್ಲೋ; ಅದು ಸಾಧ್ಯವಾಗದಿದ್ದರೆ, ಜಗತ್ತಿನ ಸುಪ್ರಸಿದ್ಧ ವಾಸ್ತು ವಿನ್ಯಾಸಕಾರರಿಂದ ಅವುಗಳ ಮಾದರಿಯಲ್ಲಿ ನಿರ್ಮಿಸಲ್ಪಟ್ಟ ಮದುವೆ ಮಂಟಪದಲ್ಲಿ ಮದುವೆ. ಸಂಸ್ಕೃತ ಪ್ರೊಫೆಸರಗಳ ಮಾರ್ಗದರ್ಶನದಲ್ಲಿ ಮದುವೆಯ ವಿಧಿಗಳು, ಜಾಗತಿಕ ಮದುವೆಯಾದುದರಿಂದ ಸಂಸ್ಕೃತ ಮಂತ್ರಗಳ ಇಂಗ್ಲಿಷ್ ಅನುವಾದದ ಮೂಲಕ ಭಾರತೀಯ

ಸಂಸ್ಕೃತಿಯ ಪನ್ನೀರು ಸಿಂಚನ. ಹಾಲಿವುಡ್ಡಿನದೋ ಬಾಲಿವುಡ್ಡಿನದೋ ತಾರಾ ತಂಡದ ನೃತ್ಯ-ಸಂಗೀತ ಕೂಟ. ಅಲಂಕೃತ ಆನೆ, ಒಂಟೆ, ಕುದುರೆಗಳ ಮಧ್ಯೆ ಮದುಮಕ್ಕಳ ಪಲ್ಲಕ್ಕಿ ಮೆರವಣಿಗೆ! ನಂತರ ಹವಾಯಿಯಲ್ಲೋ, ಬಾಲಿಯಲ್ಲೋ, ಆಲ್ಪ್ಸ್ ಪರ್ವತಗಳ ತಪ್ಪಲಲ್ಲೋ ಮಧುಚಂದ್ರ. ಇದು ಈಗಿನ ಭಾರತದ ಕಾರ್ಪೊರೇಟ್ ಜಗತ್ತು ನಡೆಸುತ್ತಿರುವ ಮದುವೆಗಳ ವೈಖರಿ.

ಎಂದಿನಿಂದ ದೇಶ ಸಾಗಿದ್ದ ದಾರಿ ಅದನ್ನು ಭಾರಿ ಕಂದಕದ ಮುಂದೆ ತಂದು ನಿಲ್ಲಿಸಿ ಅದರ ಬುದ್ಧಿಯನ್ನು ಮಂಕಾಗಿಸಿತೋ, ಅಂದಿನಿಂದ ಈ ದೇಶದಲ್ಲಿ ಎಲ್ಲ ಕಲ್ಪನೆ-ಪರಿಕಲ್ಪನೆಗಳೂ ಬದಲಾಗತೊಡಗಿವೆ. ಎಲ್ಲ ಅಶ್ಲೀಲ-ಅನಾಚಾರಗಳಿಗೂ ಬ್ಯುಸಿನೆಸ್ ಮ್ಯಾನೇಜ್‌ಮೆಂಟ್ ಪರಿಭಾಷೆಯಲ್ಲಿ ಆಶ್ರಯ ಸಿಕ್ಕಿ, ಅವು ಹೊಸ ಹೈ-ಟೆಕ್ ಹೆಸರುಗಳಲ್ಲಿ ಹೊಸ ಪಾವಿತ್ರ್ಯಗಳನ್ನು ಗಳಿಸಿಕೊಳ್ಳುತ್ತಿವೆ. ಈಗ ಎಲ್ಲವೂ product ಅಥವಾ service! Manufacturing ಏನಿದ್ದರೂ ಹೆಸರುಗಳದ್ದು! ಸುಳ್ಳು ಹೇಳುವುದು, ಟೋಪಿ ಹಾಕುವುದು, ಚೆಲ್ಲಾಟ, ಕೊಲ್ಲುವುದು ಇತ್ಯಾದಿಗಳು ಈ ಹಿಂದೆಯೂ ವ್ಯಾಪಾರೋದ್ಯಮಗಳಲ್ಲಿ ನಡೆಯುತ್ತಿದ್ದುವಾದರೂ, ಅವು ಒಳಗಿನವರಿಗಲ್ಲದಿದ್ದರೂ ಹೊರಗಿನವರಿಗೆ ಪಾಪ ಕೃತ್ಯಗಳೆನಿಸುತ್ತಿದ್ದವು.

ಆದರೀಗ ಅವೆಲ್ಲ ಜಾಗತಿಕ ಮಾರುಕಟ್ಟೆ ವ್ಯವಹಾರಕ್ಕೆ ಇಂದು ಅತ್ಯಗತ್ಯವೆನಿಸಿರುವ ಬ್ಯುಸಿನೆಸ್ ಮ್ಯಾನೇಜ್‌ಮೆಂಟ್‌ನಲ್ಲಿ ನಾಜೂಕಿನ ರೂಪಗಳನ್ನೂ, ಹೆಸರುಗಳನ್ನೂ ಪಡೆಯುತ್ತಿವೆ. ಸುಳ್ಳು ಹೇಳುವುದು PR ಆಗಿ, ಟೋಪಿ ಹಾಕುವುದು fine print ಎಂದಾಗಿ, ಮೃದು ವ್ಯಭಿಚಾರ social intervention ಎಂದಾಗಿ, ಕೊಲ್ಲುವುದು survival of the fittest ಎಂದಾಗಿ ಹೊಸಶಾಸ್ತ್ರೀಯ ಬೆಡಗನ್ನು ಪಡೆಯುತ್ತಿವೆ. ನಮ್ಮ ಮಕ್ಕಳು ಇಂದು ಬದುಕಲು ಬೇಕಾದ ಹಾಗೂ ಮಾರುಕಟ್ಟೆಯಲ್ಲಿ ಬಹು ಬೇಡಿಕೆ ಇರುವ ವ್ಯಾಸಂಗ ಕ್ರಮಗಳೆಂದು ಹೇಳಲಾದ ಹೊಸ ಹೊಸ ಶಾಸ್ತ್ರಗಳಡಿಯಲ್ಲಿ ಅವುಗಳನ್ನು ಕಲಿತು, ಅವುಗಳ ಬಗೆಗಿದ್ದ ಎಲ್ಲ ಮುಜುಗರಗಳನ್ನೂ ಕಳೆಯತೊಡಗಿದ್ದಾರೆ. ಇಂತಹ ಮುಜುಗರಗಳನ್ನು ಕಳೆದುಕೊಂಡಷ್ಟೂ ಹಳೆಯ ಹಳವಂಡಗಳಿಂದ ವಿಮೋಚಿತರಾಗಿ ಹೊಸ ಜಗತ್ತಿನ ಹೊಸ ರುಚಿಗಳನ್ನು ಸವಿಯುವ ಅವಕಾಶ ಹೆಚ್ಚೆಂಬ ನಿರೀಕ್ಷೆಯಲ್ಲಿ ನಾವು, ನಮ್ಮ ಆ ಹಳೆ ಲೋಕದ ಪಾಪಗಳನ್ನೆಲ್ಲ ನಮ್ಮ ಹೊಸ ಲೋಕದ ಪುಣ್ಯಗಳನ್ನಾಗಿ ಮಾಡಿಕೊಳ್ಳುತ್ತಿದ್ದೇವೆ.

ನಮ್ಮ ಹೆಣ್ಣು ಮಕ್ಕಳು ಕಾಲ್ ಸೆಂಟರ್‌ಗಳಲ್ಲಿ ತಮ್ಮ ರಾತ್ರಿಗಳನ್ನು ಹಗಲುಗಳನ್ನಾಗಿ ಬದಲಿಸಿಕೊಳ್ಳುವುದಲ್ಲದೆ, ತಮ್ಮ ಸಹಜ ಭಾಷಾ ಶೈಲಿ ಹಾಗೂ ಉಚ್ಚಾರಣೆಗಳ ಜೊತೆಗೆ ತಮ್ಮ ಮೂಲ ಗುರುತಿನ ಪ್ರೀತಿಪಾತ್ರ ಹೆಸರುಗಳನ್ನೂ ಬದಲಿಸಿಕೊಂಡು 'ಸೇವೆ' ಸಲ್ಲಿಸುವಂತಹ ಒತ್ತಡಕ್ಕೆ ಸಿಕ್ಕಿ, ತಮ್ಮ ನಿಜ ವ್ಯಕ್ತಿತ್ವದ ಆಧಾರಗಳನ್ನೇ ಕಳೆದುಕೊಳ್ಳುತಿದ್ದಾರೆ ಎಂಬ ಸಂಗತಿ ನಮಗೆ ಮುಖ್ಯವಾಗದೇ ಹೋಗುವಷ್ಟು ನಾವು ಸಂವೇದನಾ ಹೀನರಾಗುತ್ತಿದ್ದೇವೆ. ನಮ್ಮ ಸಾಫ್ಟ್‌ವೇರ್ ಇಂಜಿನಿಯರ್ ಮಕ್ಕಳು ಆ ವೃತ್ತಿಯ ಜೀವನ ಕ್ರಮದ ಒತ್ತಡಗಳಿಗೆ ಸಿಕ್ಕಿ ಕ್ರಮೇಣ ಸಂತಾನ ಹೀನರಾಗುತ್ತಿದ್ದಾರೆ; ತಮ್ಮ ವಿರಾಮ ವೇಳೆಯನ್ನೂ, ಸುಖ-ಶಾಂತಿಗಳನ್ನು

ಹುಡುಕಿಕೊಂಡು ಮಸಾಜ್ ಸೆಂಟರುಗಳೆಂಬ ಲೌಕಿಕ ಆರಾಮ ಕೇಂದ್ರಗಳಿಂದ ಹಿಡಿದು ಧ್ಯಾನ ಕೇಂದ್ರಗಳೆಂಬ ಅಧ್ಯಾತ್ಮಿಕ ವ್ಯಾಪಾರ ಕೇಂದ್ರಗಳವರೆಗೆ ಅಲೆದಾಡುವುದರಲ್ಲಿ ವ್ಯರ್ಥಗೊಳಿಸಿಕೊಳ್ಳುತ್ತಿದ್ದಾರೆ ಎಂಬ ಸಂಗತಿ ನಮ್ಮನ್ನು ಕಿಂಚಿತ್ತೂ ಅಲುಗಾಡಿಸುವುದಿಲ್ಲ. ಮತ್ತು ನಮ್ಮ ಮಕ್ಕಳನ್ನು ಆ ಕ್ಷೇತ್ರಕ್ಕೆ ದೂಡುವ ನಮ್ಮ ಹುಚ್ಚು ಸ್ವಲ್ಪವೂ ಕಡಿಮೆಯಾಗುವುದಿಲ್ಲ. ಆರ್ಥಿಕ ಬಂಡವಾಳದ ಈ ಎಲ್ಲ ಹಪಾಹಪಿಗಳಲ್ಲಿ ನಮ್ಮ ಮಾತೃಭಾಷೆಗಳನ್ನೇ ಇತಿಹಾಸದಲ್ಲಿ ಹೂತು ಹಾಕಲು ಹಿಂಜರಿಯದೆ, ನಮ್ಮ ಸಾಂಸ್ಕೃತಿಕ ಬಂಡವಾಳವನ್ನೇ ಕಳೆದುಕೊಳ್ಳಲು ಸಿದ್ಧರಾಗುತ್ತಿದ್ದೇವೆ. ಇದರ ದೂರಗಾಮಿ ಪರಿಣಾಮಗಳನ್ನು ಕಲ್ಪಿಸಿಕೊಳ್ಳಲೂ ವ್ಯವಧಾನವಿಲ್ಲದಷ್ಟು ಇಂದಿನ ಜಾಗತೀಕರಣದ ಸರಕು ಸಂತೆಯ ಸುಖ ಕಲ್ಪನೆಯಲ್ಲಿ ಮಗ್ನರಾಗಿ, ನಾವು ನಮ್ಮಿಂದಲೇ ದೂರವಾಗುತ್ತಿದ್ದೇವೆ ಎಂಬ ಕೇಂದ್ರ-ಅರಿವನ್ನೇ ಕಳೆದುಕೊಳ್ಳುತ್ತಿದ್ದೇವೆ. ಇದು ಮನುಷ್ಯನ ಆಳದ ಅಧ್ಯಾತ್ಮಿಕತೆಯ ಸಾವು. ಇದೇ ಮನುಷ್ಯನ ಆತ್ಯಂತಿಕ ದುರಂತ ಕೂಡ.

ಬಹುಶಃ ಮನಮೋಹನ ಸಿಂಗರು ಹದಿನೈದು ವರ್ಷಗಳ ಹಿಂದೆ 'ಆರ್ಥಿಕ ಸುಧಾರಣೆ'ಗಳೆಂಬ ಹುಸಿ ಹೆಸರಿನಲ್ಲಿ ಈ ಹೊಸ ಆರ್ಥಿಕತೆಯನ್ನು ವಿಶ್ವ ಬ್ಯಾಂಕಿನ ಮಾರ್ಗದರ್ಶನದಲ್ಲಿ ಜಾರಿ ಮಾಡಿದಾಗ, ಅವರಲ್ಲಿ ಇಂತಹ ದುರಂತದ ಕಲ್ಪನೆಯೂ ಇದ್ದಿರಲಾರದು. ಈಗಲೂ ಅದು ಮೂಡಿರಲಾರದು. ಏಕೆಂದರೆ, ಅವರು ಬಡತನದಲ್ಲಿ ಬೆಳೆದರಾದರೂ, ಕಲಿತದ್ದು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನ ಪಾಠಗಳನ್ನು. ಅದು ನಿಂತಿರುವುದೇ, ಮನುಷ್ಯನ ಭೌತಿಕ ಅಗತ್ಯಗಳು ಹಾಗೂ ಅವುಗಳ ಪೂರೈಕೆಯ ನಿರಂತರ ಚಕ್ರದ ಚಲನೆಯಲ್ಲೇ ಅರ್ಥಶಾಸ್ತ್ರ ಹುಟ್ಟಿ ಬೆಳೆಯುವುದೆಂಬ ನಂಬಿಕೆಯ ಮೇಲೆ. ಅವರು ಕೆಲಸ ಮಾಡಿದ್ದೂ ಇದೇ ಅರ್ಥಶಾಸ್ತ್ರದ ನಿಯಮಗಳಲ್ಲಿ ನಂಬಿಕೆಯಿಟ್ಟ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳಲ್ಲೇ. ಅವರು ಈ ಸಂಸ್ಥೆಗಳ ಸೇವೆಯಿಂದ ನಿವೃತ್ತರಾದಾಗ, ಅವರ ದೇಶ ಭಾರತ ತಾನು ಆರಿಸಿಕೊಂಡ ಅಭಿವೃದ್ಧಿಯ ಹಾದಿಯಲ್ಲಿ ಸೋತು ಸುಸ್ತಾಗಿ ತನ್ನ ಕಾಪು ಚಿನ್ನವನ್ನೆಲ್ಲಾ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳಲ್ಲಿ ಅಡವಿಟ್ಟು ಉಸಿರು ಉಳಿಸಿಕೊಂಡಿತ್ತು. ತಾವು ಕಲಿತ ಅರ್ಥಶಾಸ್ತ್ರ ಪಶ್ಚಿಮದ ದೇಶಗಳಲ್ಲಿ ಕೊಟ್ಟ ಅದ್ಭುತ ಫಲಗಳನ್ನಷ್ಟೇ ಕಂಡು ಬೆರಗಾಗಿದ್ದ ಮನಮೋಹನರಿಗೆ, ಈ ಅದ್ಭುತ ಫಲಗಳ ಹಿಂದಿನ ಜಾಗತಿಕ ರಾಜಕಾರಣದ ಅರಿವಿದ್ದಂತಿರಲಿಲ್ಲ. ಹಾಗಾಗಿಯೇ ಅವರಿಗೆ ಭಾರತೀಯ ಸಮಾಜವಾದವೆಂಬುದೊಂದಿದೆ; ಅದು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನ ತಿಳುವಳಿಕೆಗಿಂತ ಭಿನ್ನವಾದ, ಬೇರೊಂದು ನೆಲೆಯ ಅರ್ಥಶಾಸ್ತ್ರದ ಆಧಾರ ಹೊಂದಿದೆ ಎಂಬ ಅರಿವೇ ಇದ್ದಂತಿರಲಿಲ್ಲ.

ಹೆಚ್ಚೆಂದರೆ, ಅವರಿಗೆ ಗಾಂಧಿ ಅರ್ಥಶಾಸ್ತ್ರದ ಅರಿವಿದ್ದಿತೇನೋ. ಆದರೆ ಅದರ ಜೊತೆಗೇ, ಆ ಅರ್ಥಶಾಸ್ತ್ರ ನೆಹರೂ ಕಾಲದಲ್ಲೇ ತಿರಸ್ಕೃತಗೊಂಡಿದೆ ಎಂಬ ಮಾಹಿತಿಯೂ ಇತ್ತು. ಅದರಾಚೆಗೆ, ಗಾಂಧಿ ಎಂದರೆ ವೈಯುಕ್ತಿಕ ಬದುಕಿನ ಸರಳತೆ ಮಾತ್ರ. ಆದರೆ ಅದು ತನ್ನ ಒಡಲಾಳದಲ್ಲಿ ಭಾರತಕ್ಕೇ ವಿಶಿಷ್ಟವಾದ ಅರ್ಥಶಾಸ್ತ್ರವನ್ನು ಹುದುಗಿಸಿಕೊಂಡಿದೆ; ಭಾರತೀಯ ಸಮಾಜವಾದಿ ಚಳವಳಿ ಅದನ್ನು ಡಾ॥ ರಾಮ ಮನೋಹರ ಲೋಹಿಯಾರಂತಹವರ

ಒಳನೋಟಗಳ ಮೂಲಕ ಯುದ್ಧೋತ್ತರ ಹೊಸ ಜಗತ್ತಿನ ಅರ್ಥಶಾಸ್ತ್ರವನ್ನು ವಿಸ್ತರಿಸಿ ಮಂಡಿಸಿದೆ ಎಂಬ ತಿಳುವಳಿಕೆ ಅವರಿಗಿಲ್ಲದೇ ಹೋಗಿರುವುದು, ಅವರ ಸಹವಾಸ ದೋಷದ ಹಿನ್ನೆಲೆಯಲ್ಲಿ ಸಹಜವೇ ಆಗಿದೆ. ಆ ತಿಳುವಳಿಕೆ ಅವರಿಗಿದ್ದಲ್ಲಿ, ಭಾರತದ ಅಭಿವೃದ್ಧಿ ಸೋಲನ್ನು ಪಶ್ಚಿಮದ ಬಂಡವಾಳವಾದಿಗಳ ಅಬ್ಬರದ ಮಧ್ಯೆ ಸಮಾಜವಾದದ ಕೊರಳಿಗೆ ಕಟ್ಟಿ; ಗೆಲುವಿಗೆ ಇನ್ನಿರುವುದು ಒಂದೇ ದಾರಿಯೆಂದು ಆಗಿನ ಗುಮ್ಮನೆ ಗುಸುಕ ವ್ಯಕ್ತಿತ್ವದ ಪ್ರಧಾನಿ ನರಸಿಂಹರಾಯರ ಅಭಯ ಹಸ್ತದಡಿಯಲ್ಲಿ ಸಾಲಾಧಾರಿತ ಮುಕ್ತ ಬಂಡವಾಳವಾದಿ ಆರ್ಥಿಕ ಕ್ರಮಗಳನ್ನು ಪ್ರತಿಪಾದಿಸುತ್ತಿರಲಿಲ್ಲ.

ಈ ಮುಕ್ತ ಬಂಡವಾಳವಾದ ಇಂದು ಜಾಗತೀಕರಣವೆನಿಸಿ, ಭಾರತದಲ್ಲಿ ಅಪಾರ ಸಂಪತ್ತಿನ ದ್ವೀಪಗಳನ್ನು 'ಸೃಷ್ಟಿ'ಸುತ್ತಿದೆ. ಇದನ್ನು ತಮ್ಮ ಈ ಯಶಸ್ಸಿನ ಪ್ರತೀಕವೆಂದೇ ಭಾವಿಸಿ ಬಹುಶಃ ಮನಮೋಹನರು ಆ ಅಂತಹ ಅಶ್ಲೀಲ, ಅನಾಚಾರಗಳ ಮದುವೆಗಳಿಗೆ ಹೋಗುತ್ತಾರೆಂದು ಕಾಣುತ್ತದೆ. ಆದರೆ, ಅವುಗಳ ಆಶ್ಲೀಲತೆ–ಅನಾಚಾರಗಳು ಅವರಿಗೆ ಕಾಣದೇ ಹೋಗಲು, ಅವೆಲ್ಲವೂ ಮುಕ್ತ ಬಂಡವಾಳದ ಸಹಜ ಉಪ ಉತ್ಪನ್ನಗಳಾಗಿದ್ದು, ಅವುಗಳ ಕ್ರಿಯಾಶೀಲ ಪರಿಣಾಮಗಳಿಂದಾಗಿಯೇ ಆ ಸಂಪತ್ತಿನ ದ್ವೀಪಗಳು ಇತರರೆಡೆಗೂ ಹಿಗ್ಗತೊಡಗುವವು ಎಂದು ಅವರು ಕಲಿತು ನಂಬಿದ ಆರ್ಥಶಾಸ್ತ್ರ ಹೇಳುವುದೇ ಕಾರಣವಾಗಿದೆ. ಆದರೆ ಜಾಗತಿಕ ರಾಜಕಾರಣದ ಅಪಾರ ತಿಳುವಳಿಕೆಯುಳ್ಳವರಾಗಿದ್ದ ಲೋಹಿಯಾ, ಗಾಂಧಿವಾದದ ಪ್ರಭಾವದಲ್ಲಿ ಮತ್ತು ನೆಹರೂ ರಾಜಕಾರಣದ ಹಿನ್ನೆಲೆಯಲ್ಲಿ ಬಂಡವಾಳವಾದದ ಅಪಾಯಗಳನ್ನು ಅವರದೇ ರೀತಿಯಲ್ಲಿ ವಿಶ್ಲೇಷಿಸಿ, ಬಂಡವಾಳವಾದದ ಯಾವುದೇ ರೂಪ (ಅವರು ಕಮ್ಯುನಿಸಮ್ಮನ್ನೂ ಬಂಡವಾಳವಾದದ ಇನ್ನೊಂದು ರೂಪವೆಂದೇ ಪ್ರತಿಪಾದಿಸಿದ್ದರು) ಭಾರತದಂತಹ ಬಂಡವಾಳ ಸೂರೆಗೊಂಡ ದೇಶಕ್ಕೆ ಮುಕ್ತಿ ದೊರಕಿಸಲಾರದು ಎಂದು ಪ್ರತಿಪಾದಿಸಿದ್ದರು. ಶೋಷಣೆಯ ಮೂಲಕವೇ ಹುಟ್ಟಿ, ಶೋಷಣೆಯ ಮೇಲೆಯೇ ಬೆಳೆದಿರುವ ಬಂಡವಾಳವಾದವು ಶೋಷಣೆಯ ಅಸ್ತ್ರವಾಗಿ ಜಗತ್ತನ್ನು ಬಡ–ಶ್ರೀಮಂತವೆಂದು ಎರಡಾಗಿ ಒಡೆದಿದೆ. ಅದು ಭಾರತದಂತಹ ಬಡ ದೇಶಗಳ ಸಮಾಜಗಳನ್ನು ಬಡ ಹಾಗೂ ಶ್ರೀಮಂತ ವರ್ಗಗಳನ್ನಾಗಿ ಒಡೆದಿಟ್ಟು ನಿರಂತರ ಘರ್ಷಣೆ–ಅಶಾಂತಿಗೆ ಕಾರಣವಾಗಿ, ಆತ್ಯಂತಿಕವಾಗಿ ಅವನ್ನು ಪರೋಕ್ಷ ವಸಾಹತು ದೇಶಗಳನ್ನಾಗಿ ಮಾಡಿಕೊಳ್ಳುತ್ತದೆ ಎಂಬುದು ಅವರ ವಿಶ್ಲೇಷಣೆಯಾಗಿತ್ತು. ಇಂದು ಆಗುತ್ತಿರುವುದೂ ಅದೇ ಆಗಿದೆ.

ಲೋಹಿಯಾ ಅವರ ಈ ವಿಶ್ಲೇಷಣೆಯನ್ನು, ಹೋದ ವರ್ಷ ಬ್ರೆಝಿಲ್‌ನಲ್ಲಿ ನಡೆದ 'ವಿಶ್ವ ಸಾಮಾಜಿಕ ವೇದಿಕೆ'ಯ ವಾರ್ಷಿಕ ಸಮಾವೇಶದಲ್ಲಿ ಅಮೆರಿಕಾದ ಗೂಢಚರ್ಯೆ ಸಂಸ್ಥೆ ಸಿ.ಐ.ಎ.ಯ ಜಾನ್ ಪರ್ಕಿನ್ಸ್ ಎಂಬ ಮಾಜಿ ಗೂಢಚಾರ ಬಹಿರಂಗಗೊಳಿಸಿದ ಮಾಹಿತಿಯೊಂದಿಗೆ (ನೋಡಿ ಈತನ ಪುಸ್ತಕ : *Economic Hitmen*) ಜೋಡಿಸಿ ನೋಡಿದಾಗ, ಜಾಗತೀಕರಣವೆಂಬುದು ಒಂದು ಸಹಜ ಅರ್ಥಶಾಸ್ತ್ರೀಯ ವಿದ್ಯಮಾನವಾಗಿರದೆ, ಹೇಗೆ ಕಾರ್ಪೊರೇಟ್ ಬಂಡವಾಳಿಗರ ಒಂದು ಜಾಗತಿಕ ರಾಜಕೀಯ ಪಿತೂರಿಯಾಗಿದೆ

ಎಂಬುದು ಗೊತ್ತಾಗುತ್ತದೆ. ಆತನ ಪ್ರಕಾರ, ಮುಕ್ತ ಬಂಡವಾಳದ ಗುರು ಸ್ಥಾನದಲ್ಲಿರುವ ಅಮೆರಿಕ, ತನ್ನ 'ಗುರಿ'ಯಾಗುಳ್ಳ ದೇಶಕ್ಕೆ 'ಅಭಿವೃದ್ಧಿ ತಜ್ಞ'ನೊಬ್ಬನ ರೂಪದ ದಲ್ಲಾಳಿಯ ಮೂಲಕ, ಆ ದೇಶ ಭರಿಸಲಾಗದಷ್ಟು ಪ್ರಮಾಣದ ಸಾಲ ನೀಡಿಕೆಯನ್ನು ಪ್ರಸ್ತಾಪಿಸುತ್ತದೆ. ಬಯಸದೆ ಬಂದ ಭಾಗ್ಯದಂತೆ ಅದನ್ನು ಆ ದೇಶ ಒಪ್ಪಿಕೊಂಡ ಕೂಡಲೇ, ವಿಶ್ವಬ್ಯಾಂಕಿನದೋ, ಅಂತಾರಾಷ್ಟ್ರೀಯ ಹಣಕಾಸು ನಿಧಿಯದೋ ಹಣ ಅಮೆರಿಕಾದ ಬಹುರಾಷ್ಟ್ರೀಯ ಕಂಪನಿಯೊಂದಕ್ಕೆ ಬಂದುಬೀಳುತ್ತದೆ. ಆ ಕಂಪನಿ ತನ್ನ ಷರತ್ತುಗಳ ಮೇಲೇ, ಸಂಬಂಧಪಟ್ಟ ದೇಶದ ರಾಜಕೀಯ ವ್ಯವಸ್ಥೆ ಹಾಗೂ ಅಧಿಕಾರಶಾಹಿಯೊಂದಿಗೆ ಶಾಮೀಲಾಗಿ ಬೃಹತ್ ಪ್ರಮಾಣದ ಲಾಭದೊಂದಿಗೆ ಅಲ್ಲಿ ಸ್ಥಳೀಯರ ಮೂಲಕವೇ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡು, ಆ ದೇಶವನ್ನು 'ಆಧುನೀಕರಣ'ಕ್ಕೊಳಪಡಿಸುವ ಕಾರ್ಯದಲ್ಲಿ ತನ್ನ ಅಮೂಲ್ಯ ಕೊಡುಗೆಯನ್ನು ಸಲ್ಲಿಸುತ್ತದೆ! ಆಕಸ್ಮಾತ್ ಆ ದೇಶದ ರಾಜಕೀಯ ಅಧಿಪತಿ ಸಾಲದ ಪ್ರಸ್ತಾಪವನ್ನು ಒಪ್ಪದಿದ್ದರೆ, ವಿರೋಧ ಪಕ್ಷಗಳಿಗೆ ಬೃಹತ್ ಪ್ರಮಾಣದ ಹಣ ಒದಗಿಸಿ ಆತನನ್ನು ಪದಚ್ಯುತಗೊಳಿಸುವ ಅಥವಾ ಆ ದೇಶದ ರಾಜಕೀಯ ವ್ಯವಸ್ಥೆಯನ್ನೇ ಬುಡಮೇಲುಗೊಳಿಸುವ ಪರೋಕ್ಷ ಬೆದರಿಕೆ ಒಡ್ಡಲಾಗುತ್ತದೆ. ಅದಕ್ಕೂ ಬಗ್ಗದಿದ್ದರೆ, ಚಿಲಿ, ಹೈಟಿ, ಪನಾಮಾ ಇತ್ಯಾದಿ ದೇಶಗಳಲ್ಲಿ ಈ ಹಿಂದೆ ನಡೆಸಿದ ರಾಜಕೀಯ ಕೊಲೆಗಳನ್ನು ನೆನಪಿಸಲಾಗುತ್ತದೆ... ಹೀಗೆ, ಈ ಎರಡೂ ಸಂದರ್ಭಗಳಲ್ಲಿ ಆ ದೇಶ ಅಮೆರಿಕಾದ ಬಾಲಂಗೋಚಿ ದೇಶವಾಗುವುದು ಅನಿವಾರ್ಯವಾಗುತ್ತದೆ!

ಇದೇ ಸಮಾವೇಶದಲ್ಲಿ ಭಾಗವಹಿಸಿದ್ದ, 'ಇನ್ನೊಂದು ಜಗತ್ತು ಸಾಧ್ಯ'ವೆಂಬ ಪರಿಕಲ್ಪನೆಗೆ ಸ್ಫೂರ್ತಿ ನೀಡಿದ ಮತ್ತು ನವೋದಿತ ಸಮಾಜವಾದದ ಜಾಗತಿಕ ಪ್ರತಿನಿಧಿಯಂತಿರುವ ವೆನಿಜ಼ೂಲದ ಅಧ್ಯಕ್ಷ ಹ್ಯೂಗೊ ಶಾವೆಜ಼್, ಅಮೆರಿಕಾ ಹೇರುತ್ತಿರುವ ಬರೀ ಲಾಭಾಧಾರಿತವಾದ ವ್ಯಾಪಾರ ಒಪ್ಪಂದಗಳನ್ನಾಧರಿಸಿದ ಜಾಗತೀಕರಣದ ಬದಲಾಗಿ, ಸಾಮಾಜಿಕ-ಸಾಂಸ್ಕೃತಿಕ ವಿನಿಮಯ ಒಪ್ಪಂದಗಳನ್ನಾಧರಿಸಿದ ಜಾಗತೀಕರಣದ ಪ್ರತಿಪಾದನೆ ಮಾಡಿದರು. ಹತ್ತು ವರ್ಷಗಳ ಸುಸ್ಥಿರ ಬಂಡವಾಳವಾದಿ ಅಭಿವೃದ್ಧಿಯ ನಂತರ ಸಂಪತ್ತು ಬಡವರ ಕಡೆಗೂ ಹರಿಯತೊಡಗುತ್ತದೆ ಎಂಬ ಜಾಗತೀಕರಣವಾದಿಗಳ ಭವಿಷ್ಯವಾದವನ್ನು ನಂಬಬಾರದೆಂದು ಹೇಳಿದ ಅವರು; ಸಮಾನತೆ ಮನುಷ್ಯನ ಸಹಜ ಹಕ್ಕಾಗಿದ್ದು, ಅದಕ್ಕಾಗಿ ಬಡವರು ಹತ್ತಾರು ವರ್ಷಗಳ ಕಾಲ ಕಾಯುತ್ತಾ ಕೂರುವ ಮೂರ್ಖತನ ತೋರಬಾರದೆಂದು ಕರೆಕೊಟ್ಟರು.

ಇದು ಭಾರತೀಯ ಸಮಾಜವಾದ ಪ್ರತಿಧ್ವನಿಯೇ ಆಗಿದೆ. ಸಮಾನತೆಯನ್ನು ಸಾಮಾಜಿಕ ಸಮತೋಲನ ಹಾಗೂ ನೆಮ್ಮದಿಯ ಮೂಲ ಸೂತ್ರವನ್ನಾಗಿ ಕಂಡಿದ್ದ ಲೋಹಿಯಾ, ಅದನ್ನು ಜಾಗತಿಕವಾಗಿ ಸಾಧಿಸಿದಾಗ ಮಾತ್ರ ಅದು ಸುಸ್ಥಿರವಾಗಿರಬಲ್ಲುದು ಎಂದು ನಂಬಿದ್ದರು. ಅದಕ್ಕಾಗಿ ಒಬ್ಬರಲ್ಲ ಒಬ್ಬರ ಶೋಷಣೆಯನ್ನಾಧರಿಸಿದ ಮತ್ತು ಸದಾ ಏರುತ್ತಾ ಹೋಗುವ ಆಸ್ಫೋಟನಕಾರಿ ಜೀವನ ಶೈಲಿಗೆ ಕಾರಣವಾಗಿರುವ ಬೃಹತ್ ಪ್ರಮಾಣದ ತಂತ್ರಜ್ಞಾನದ ಬದಲಿಗೆ, ಯಾವುದೇ ಹೊರಗಿನ ಬಂಡವಾಳ ಬೇಡದಂತಹ ಸ್ಥಳೀಯ ಎಲ್ಲೆಗಳುಳ್ಳ ಉತ್ಪಾದನಾ

ತಂತ್ರಜ್ಞಾನವನ್ನಾಧರಿಸಿದ ಒಂದು ಸಭ್ಯ-ಸಾಧಾರಣ ಜೀವನ ಕ್ರಮವನ್ನು ಜಗತ್ತು ಒಪ್ಪಿಕೊಳ್ಳುವ ವಿವೇಕವನ್ನು ಜನತೆಯಲ್ಲಿ ಜಾಗತಿಕ ಮಟ್ಟದಲ್ಲಿ ರೂಢಿಸುವುದು ಅವರು ಪ್ರತಿಪಾದಿಸಿದ ಸಮಾಜವಾದದ ಮೂಲ ಆಶಯವಾಗಿತ್ತು. ಅದಕ್ಕಾಗಿ ಅವರು ಅನೇಕ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ನೆಲೆಗಳ ಕಾರ್ಯಕ್ರಮಗಳನ್ನು ರೂಪಿಸಿ ಜನತೆಯ ಮುಂದಿಟ್ಟಿದ್ದರು. ಆದರೆ ಪಶ್ಚಿಮದ ಆಧುನಿಕತೆಯ ಹುಚ್ಚಿನಲ್ಲಿದ್ದ ಅವರ ದೇಶವೇ ಅವರ ಮಾತನ್ನು ಕೇಳುವ ಸ್ಥಿತಿಯಲ್ಲಿರಲಿಲ್ಲ. ಅದು ಅವರಿಗೂ ಗೊತ್ತಿತ್ತು. ಅವರು ಹೇಳಿದ್ದರು: "ನಾನು ಕಾಲದೊಂದಿಗೆ ಹೆಜ್ಜೆ ಹಾಕುವಾಗ ಒಂದೆರೆಡು ಹೆಜ್ಜೆ ಮುಂದು ಹೋಗಿಬಿಟ್ಟಿರುವೆನೇನೋ....ಆದರೆ ಒಂದಲ್ಲ ಒಂದು ದಿನ ದೇಶ ನನ್ನ ಮಾತನ್ನು ಕೇಳಲೇಬೇಕಾಗುತ್ತದೆ...."

ಲೋಹಿಯಾ ಅವರ ಈ ಮಾತು, ಅವರು ನಿಧನರಾದ ನಲವತ್ತು ವರ್ಷಗಳ ನಂತರದಲ್ಲೂ ಪ್ರತಿ ವರ್ಷ ಮಾರ್ಚ್ ೨೩ರಂದು ಅವರ ಹುಟ್ಟು ಹಬ್ಬ ಆಚರಿಸುವ ಅವರ ಪ್ರತಿಯೊಬ್ಬ ಅನುಯಾಯಿಯ ಕಿವಿಗಳಲ್ಲಿಯೂ ಅನುರಣಿಸದಿರದು.

(ವಿಕ್ರಾಂತ ಕರ್ನಾಟಕ, ಮಾರ್ಚ್ ೨೩-೨೭, ೨೦೦೭)

ದಾರಿ ತಪ್ಪಿದ ಸಮಾಜವಾದಿಗಳು

ಕಳೆದ ವಾರ ನಮ್ಮ ಮನೆಗೆ ಅಂಚೆಯಲ್ಲಿ ನನ್ನ ಹೆಂಡತಿಯ ಹೆಸರಿಗೆ ಗದಗ್‌ನಿಂದ ಒಂದು ಕರಪತ್ರ ಬಂತು. ಅಕಾಲಿಕ ಮರಣಕ್ಕೆ ತುತ್ತಾದ ಭರವಸೆಯ ಕವಯಿತ್ರಿ ವಿಭಾಳ ನೆನಪಲ್ಲಿ ಕೆಲವು ತಿಂಗಳುಗಳ ಹಿಂದೆ ಗದಗ್‌ನಲ್ಲಿ ಸಾಹಿತ್ಯ ಕಾರ್ಯಕ್ರಮವೊಂದನ್ನು ಆಯೋಜಿಸಿದ್ದ ಗೆಳೆಯರ ಗುಂಪಿನ ಕಡೆಯಿಂದ ಬಂದ ಕರಪತ್ರವದು. ನನ್ನ ಹೆಂಡತಿಯೂ ಓರ್ವ ಕವಯಿತ್ರಿಯಾಗಿ ಆಹ್ವಾನಿತಳಾಗಿ ಆ ಕಾರ್ಯಕ್ರಮದಲ್ಲಿ ಭಾಗವಹಿಸಿದುದರಿಂದ, ಆ ನೆನಪಿನಲ್ಲಿ ಈ ಕರ ಪತ್ರವನ್ನು ಆಯೋಜಕರು ನಮಗೆ ಕಳಿಸಿರಬಹುದೆಂದು ನಾನು ಆ ಬಗ್ಗೆ ಹೆಚ್ಚಿನ ಆಸಕ್ತಿಯನ್ನೇನೂ ತಾಳಲಿಲ್ಲ. ಆದರೆ, ಅದು ಪ್ರಸ್ತಾಪಿಸಿದ್ದ ಇದೇ ಮಾರ್ಚ್ ೨೩ರಂದು ಗೋಕಾಕದಲ್ಲಿ ರಾಜ್ಯ ಮಟ್ಟದ ಭಗತ್‌ಸಿಂಗ್-ಲೋಹಿಯಾ ಚಿಂತನೆಗಳ ಸಮಾವೇಶದ ಆಯೋಜನೆ ಮತ್ತು ಅದರ ಬಹು ಆಯೋಜಕತ್ವ ನನ್ನ ಕುತೂಹಲ ಕೆರಳಿಸಿತು. ಸಮಾವೇಶವನ್ನು ಆಯೋಜಿಸಲಿದ್ದುದು ನಾನು ಈವರೆಗೆ ಹೆಸರೇ ಕೇಳಿರದ ಸಂಘಟನೆಗಳು - ಕರ್ನಾಟಕ ಸೌಹಾರ್ದ ವೇದಿಕೆ, ಭೂಮಿ ಬೇಕು-ರೈತ ಆಂದೋಲನ ಸಮಿತಿ ಹಾಗೂ ಸಮಾಜವಾದಿ ಚಿಂತನ ವೇದಿಕೆ, ಗೋಕಾಕ. ಭಗತ್‌ಸಿಂಗರಿಗೂ ಲೋಹಿಯಾ ಚಿಂತನೆಗಳಿಗೂ ಏನು ಸಂಬಂಧವಿದ್ದೀತು ಎಂದು ಆಶ್ಚರ್ಯ ಪಟ್ಟೆನಾದರೂ, ಮಾರ್ಚ್ ೨೩ ಲೋಹಿಯಾರ ಹುಟ್ಟುಹಬ್ಬ ಹೇಗೋ ಭಗತ್‌ಸಿಂಗರು ಹುತಾತ್ಮರಾದ ದಿನವೂ ಆದುದರಿಂದ ಕೆಲ ಸಮಾನ ಮನಸ್ಕರು ಸೇರಿ ಇಬ್ಬರ ನೆನಪನ್ನೂ ಒಟ್ಟಿಗೆ ಆಚರಿಸುವ ಸ್ಥೂಲ ಉದ್ದೇಶದ ಸಮಾರಂಭ ಅದಿರಬಹುದೆಂದು ಆ ಬಗ್ಗೆ ಹೆಚ್ಚು ಗಮನ ಕೊಡಲಿಲ್ಲ.

ಆದರೆ, ಮೂರು ದಿನಗಳ ಕೆಳಗೆ ಸಮಾರಂಭದ ಅಧಿಕೃತ ಆಹ್ವಾನ ಪತ್ರಿಕೆ ಬಂದಾಗ ಅದರ ವಿವರ-ವೈಖರಿಗಳನ್ನು ನೋಡಿ ಗಾಬರಿಯಾದೆ. ಅದರಲ್ಲಿ ಲೋಹಿಯಾರ ಒಂದು ಸಣ್ಣ ಭಾವಚಿತ್ರವನ್ನು ಹೊರತುಪಡಿಸಿದರೆ, ಕೆಂಪು ಬಣ್ಣ ಪ್ರಧಾನವಾದ ಆ ಆಹ್ವಾನಪತ್ರಿಕೆಯಲ್ಲಿ ಇರುವುದೆಲ್ಲ ಭಗತ್‌ಸಿಂಗರನ್ನು ಮೆರೆಸುವ ವಿವಿಧ ಚಿತ್ರಗಳು ಹಾಗೂ ಘೋಷಣೆ- ಉಲ್ಲೇಖಗಳು! ಇದೇಸಿದೆಂದು, ಈ ಹಿಂದೆ ಬಂದಿದ್ದ ಕರಪತ್ರವನ್ನು ವಿವರವಾಗಿ ಗಮನಿಸಿದಾಗ ಕಂಡದ್ದು, ಇಡೀ ಕರಪತ್ರದಲ್ಲಿ ಶೀರ್ಷಿಕೆಯ ಲೋಹಿಯಾ ಎಂಬ ಮೂರಕ್ಷರಗಳನ್ನು ಹೊರತು ಪಡಿಸಿದರೆ, ಇನ್ನೆಲ್ಲೂ ಸಮಾಜವಾದಿ ಚಳುವಳಿಯ ಅಥವಾ ಲೋಹಿಯಾ ವಿಚಾರಗಳ ಉಲ್ಲೇಖವಿಲ್ಲ. ಬದಲಿಗೆ, ಇಡೀ ಕರಪತ್ರ ಭಗತ್‌ಸಿಂಗರ ಆರಾಧನೆಗೆ ಮೀಸಲು. ಅಷ್ಟೇ ಅಲ್ಲ, ಕರಪತ್ರದ

ಬಲ ಮೇಲ್ತುದಿಯಲ್ಲಿ ಸುತ್ತಿಗೆ ಕುಡುಗೋಲುಗಳನ್ನು ಹಿಡಿದ ಪುರುಷ- ಮಹಿಳೆಯ ಆ ಅದೇ ಹಳೆಯ ಕಮ್ಯುನಿಸ್ಟ್ ಲಾಂಛನ!

ಆಗ ಥಟ್ಟನೆ ನನಗೆ ನೆನಪಾದದ್ದು, ಹೋದ ವರ್ಷ ಶಿವಮೊಗ್ಗದಲ್ಲಿ ಭಗತ್‌ಸಿಂಗರ ಹುಟ್ಟುಹಬ್ಬ ಆಚರಿಸಲು ತರಾತುರಿಯಿಂದ ಓಡಾಡಿದ ಜನ. ಅವರೆಲ್ಲ ಈಗ ಮಲೆನಾಡಿನಲ್ಲಿ ಭೂಗತ ಕಮ್ಯುನಿಸ್ಟ್ ರಾಜಕಾರಣ ಮಾಡುತ್ತಿರುವ ಗುಂಪಿನೊಂದಿಗೆ ಗುರುತಿಸಿಕೊಂಡಿರುವ ಜನ. ಹೌದು, ಈಗ ಭಗತ್‌ಸಿಂಗ್ ನಕ್ಸಲೀಯ ಚಳುವಳಿಕಾರರ ಒಂದು ಗುಂಪಿನ ಜನಸಂಪರ್ಕ ಲಾಂಛನವಾಗಿದ್ದಾನೆ. ಅವರ ಈ ಜನಸಂಪರ್ಕ ಕಾರ್ಯಕ್ರಮದ ಅಂಗವಾಗಿಯೇ ಈ ಗೋಕಾಕದ ಸಮಾವೇಶ. ಇದಕ್ಕೆ ಅಮಾಯಕವಾಗಿ ಜನರನ್ನು ಸೆಳೆಯಲು ಲೋಹಿಯಾ ಹೆಸರಿನ ಬಳಕೆ ಎಂಬುದು ಯಾರಿಗಾದರೂ ಹೊಳೆಯದಿರದು. ಹಾಗೆ ನೋಡಿದರೆ, ಭಗತ್‌ಸಿಂಗ್ ಈವರೆಗೆ ಬಲದಿಂದ ಹಿಡಿದು ಎಡದವರೆಗೆ ಹಲವು ಛಾಯೆಗಳ ರಾಜಕೀಯ ಗುಂಪುಗಳ ಪ್ರಚಾರ ಪ್ರತೀಕ (ICON) ವಾಗಿ ಬಳಸಲ್ಪಟ್ಟು ಸವೆದು ಹೋದ ಮೂರ್ತಿಯಾಗಿದ್ದರೂ, ಆತ ಜನರ ಅಂತರಾಳದಲ್ಲಿ ಇನ್ನೂ ಕಟ್ಟಾ ದೇಶಪ್ರೇಮದ ಸ್ಥೂಲ ಸಂಕೇತವಾಗಿ ಎಲ್ಲೋ ನೆಲೆಸಿದ್ದಾನೆ. ಲೋಹಿಯಾ ಕೂಡ ಈ ಸಹ ಸ್ವಾತಂತ್ರ್ಯ ಹೋರಾಟಗಾರನ ನೆನಪಿಗೆ ಗೌರವ ಸಲ್ಲಿಸುವ ಸಂಕೇತವಾಗಿ, ಎಂದೂ ಮಾರ್ಚ್ ೨೩ ರಂದು ತಮ್ಮ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರಲಿಲ್ಲ. ಲೋಹಿಯಾ-ಭಗತ್‌ಸಿಂಗ್‌ರ ಸಂಬಂಧ-ಸಾಮ್ಯತೆ ಇಷ್ಟಕ್ಕೇ ಸೀಮಿತಗೊಳ್ಳುವಂಥದ್ದು. ಏಕೆಂದರೆ, ಲೋಹಿಯಾ ಪ್ರತಿನಿಧಿಸುವುದು ಜನಸಮ್ಮುಖ ಸತ್ಯಾಗ್ರಹಿ ರಾಜಕಾರಣವಾದರೆ, ಭಗತ್‌ಸಿಂಗ್ ಪ್ರತಿನಿಧಿಸುವುದು ಭೂಗತ ಹಿಂಸಾತ್ಮಕ ರಾಜಕಾರಣ. ಹೀಗಾಗಿ ಇವರಿಬ್ಬರ ವಿಚಾರ-ಹೋರಾಟಗಳ ದಿಕ್ಕುಗಳೇ ಬೇರೆ ಬೇರೆ.

ಭಗತ್‌ಸಿಂಗ್ ಕೆಲವೇ ವರ್ಷಗಳ ಹಿಂದಿನವರೆಗೂ ಸಂಘ ಪರಿವಾರದವರ ಪ್ರಚಾರ ಪ್ರತೀಕವೂ ಆಗಿದ್ದ ಎಂಬುದನ್ನು ನೆನಪಿಸಿಕೊಂಡರೆ, ಆತ ಹೇಗೆ ಚರಿತ್ರೆ ಮೀರಿದ ದಂತಕಥೆಯಾಗಿದ್ದಾನೆ ಎಂಬುದು ಗೊತ್ತಾಗುತ್ತದೆ. ಆತ ಕಮ್ಯುನಿಸ್ಟ್ ಸಾಹಿತ್ಯವನ್ನೂ ಓದಿಕೊಂಡು ಮಲಿನಗೊಂಡಿದ್ದ ಎಂದು ಭಾವಿಸಿಯೋ ಏನೋ, ಸಂಘ ಪರಿವಾರದವರು ಆತನನ್ನು ಕ್ರಮೇಣ ಕೈಬಿಟ್ಟರೆಂದು ತೋರುತ್ತದೆ. ಹಾಗೆ ಕೈಬಿಟ್ಟ ಭಗತ್‌ಸಿಂಗ್‌ರನ್ನು ಈಗ ಭೂಗತ ಕಮ್ಯುನಿಸ್ಟರು ಕೈಹಿಡಿಯ ಹೊರಟಿದ್ದಾರೆ!

ಸಂಘ ಪರಿವಾರವು ತನ್ನ ಮುಂದಿನ ರಾಜಕಾರಣದ ಯಶಸ್ಸಿಗಾಗಿ ಕುವೆಂಪು, ಕನಕದಾಸರಿಂದ ಹಿಡಿದು ಅಂಬೇಡ್ಕರ್‌ವರೆಗೆ ಪ್ರಚಾರ ಪ್ರತೀಕಗಳನ್ನು ಹುಡುಕಿಕೊಂಡು ಹೊರಟಿರುವಂತೆ, ಈ ಭೂಗತ ರಾಜಕಾರಣದ ಕಮ್ಯುನಿಸ್ಟರೂ ಭೂಮಿಯ ಮೇಲೆ ಬರಲು ಸೂಕ್ತ ಪ್ರಚಾರ ಪ್ರತೀಕಗಳನ್ನು ಹುಡುಕುತ್ತಾ ಹೊರಟು ಈಗ ಭಗತ್‌ಸಿಂಗ್‌ರಿಗೆ ಗಂಟು ಬಿದ್ದಿದ್ದಾರೆ! ಇದು ಭಾರತೀಯ ಸಮಾಜವನ್ನು ತಮ್ಮ ಸರಳೀಕೃತ ಚಿಂತನೆ-ಹೋರಾಟಗಳ ಮೂಲಕ ಒಡೆಯುತ್ತ ಒಡೆಯುತ್ತ ನಾಶ ಮಾಡುತ್ತಿರುವ ವಿನಾಶಕಾರಿ ರಾಜಕಾರಣದ ನಮ್ಮ ಕಣ್ಮುಂದಿನ ಈ ಎರಡೂ ಆವೃತ್ತಿಗಳು ಎದುರಿಸುತ್ತಿರುವ ತತ್ವ ದಾರಿದ್ರ್ಯಕ್ಕೆ ಸಾಕ್ಷಿಯಾಗಿದೆ.

ಭಗತ್‌ಸಿಂಗ್ ತನ್ನ ಕಾಲದ ಎಲ್ಲ ಯುವಕರಂತೆ ಮಾರ್ಕ್ಸ್‌ವಾದಿ ಬರಹಗಳೆಡೆಗೂ ಆಕರ್ಷಿತನಾಗಿದ್ದ ಎಂಬುದರ ಹೊರತಾಗಿ ಆತ ಮಾರ್ಕ್ಸ್‌ವಾದಿ ಹೋರಾಟಗಾರ ಎನ್ನಲು ಬೇರೆನೂ ಪುರಾವೆ ನಮಗೆ ಸಿಗುವುದಿಲ್ಲ. ಅಲ್ಲದೆ, ೨೩ ವರ್ಷಗಳ ಆತನ ಅಲ್ಪ ಜೀವನಾವಧಿಯಲ್ಲಿ ಆತನಿಗೊಂದು ಖಚಿತ ರಾಜಕೀಯ ನಿಲುವು ಸಾಧ್ಯವಾಗಿತ್ತೆ ಎಂಬುದರ ಬಗ್ಗೆ ಸಹಜವಾಗಿಯೇ ಸಂದೇಹಗಳಿವೆ. ಹಾಗಾಗಿಯೇ ಆತ ಐತಿಹಾಸಿಕ ವ್ಯಕ್ತಿಗಿಂತ ಹೆಚ್ಚಾಗಿ ಒಂದು ದಂತಕಥೆಯಾಗಿಯೇ ನಮ್ಮ ರಾಷ್ಟ್ರೀಯ ಸ್ಮೃತಿಯಲ್ಲಿ ಉಳಿದಿದ್ದಾನೆ. ಆದರೆ, ಇತಿಹಾಸದ ಭೌತವಾದಿ ನಿರೂಪಣೆಯನ್ನು ನಂಬಿರುವ ಈ ಕಮ್ಯುನಿಸ್ಟ್‌ರು ಈಗ ಇತಿಹಾಸವನ್ನು ಮೀರಿ ನಿಂತ ದಂತಕಥೆಯೊಂದನ್ನು ಹೀಗೆ ನಗದು ಮಾಡಿಕೊಳ್ಳಲು ಹೊರಟಿರುವುದು ಎಂತಹ ಚೋದ್ಯವಾಗಿದೆ!

ಇದನ್ನೆಲ್ಲ ನಾನು ಹೇಳುತ್ತಿರುವುದು, ನಕ್ಸಲೀಯ ಚಳುವಳಿಯ ತಂತ್ರಗಾರಿಕೆಯ ಪರಿಚಯ ಮಾಡಿ ಕೊಡುವುದಕ್ಕಲ್ಲ. ಅದನ್ನು ಎಲ್ಲರೂ ಬಲ್ಲರು. ಬದಲಿಗೆ, ಲೋಹಿಯಾ–ವಾದಿ ಅಥವಾ ಅಭಿಮಾನಿಗಳೆನಿಸಿಕೊಂಡವರು ಇದಕ್ಕೆಲ್ಲ ಅವಕಾಶ ಮಾಡಿಕೊಡುವ ದೈನೇಸಿ ಪರಿಸ್ಥಿತಿಯನ್ನು ಮುಟ್ಟಿರುವುದೇತಕ್ಕೆ ಎಂದು ಚಿಂತಿಸಲು. ಇದಕ್ಕಾಗಿ ನಾನು ಈ ಸಮಾವೇಶದ ಆಯೋಜಕರಲ್ಲಿ ಲೋಹಿಯಾವಾದಿ ಇರಬಹುದೆಂದು ಭಾವಿಸಿದ ಧಾರವಾಡದ ಕವಿಮಿತ್ರರೊಬ್ಬರನ್ನು ಸಂಪರ್ಕಿಸಿ, ಹೀಗೇಕಾಗಿದೆ ಎಂದು ಕೇಳಿದೆ. ಆತ ನನ್ನ ಪ್ರಶ್ನೆಯಿಂದ ಗಲಿಬಿಲಿಗೊಂಡಂತೆ, ಇದೆಲ್ಲ ಹೀಗಾಗುತ್ತದೆಂದು ತಮಗೂ ಗೊತ್ತಿರಲಿಲ್ಲವೆಂದೂ; ಹೆಚ್ಚಿನ ವಿವರಗಳು ಬೇಕಾದರೆ, ಗದರ್‌ನ ಮೂಲ ಆಯೋಜಕರೊಂದಿಗೆ ನನಗೆ ಸಂಪರ್ಕ ಮಾಡಿಸಿಕೊಡುವುದಾಗಿಯೂ ಹೇಳಿದಾಗ, ಇದು hopeless case ಎಂದು ಸುಮ್ಮನಾದೆ.

ಏಕೆಂದರೆ, ಇಂತಹ hopeless ಪರಿಸ್ಥಿತಿ ಮುಂದೊಂದು ದಿನ ಸಮಾಜವಾದಕ್ಕೆ ಎದುರಾಗುವ ಅಪಾಯವನ್ನು ಲೋಹಿಯಾ ಮುನ್ನೋಡಿದ್ದರು. ಭಾರತೀಯ ಸಮಾಜವಾದವು ಬಂಡವಾಳವಾದ ಹಾಗೂ ಮಾರ್ಕ್ಸ್‌ವಾದಗಳ ಮಧ್ಯೆ ತನ್ನ ವಿಶಿಷ್ಟ ಸತ್ವ ಹಾಗೂ ಚಹರೆಯನ್ನು ಸಾಧಿಸಿಕೊಳ್ಳದೇ ಹೋದರೆ, ಮುಂದೊಂದು ದಿನ ಸಮಾಜವಾದಿ ಚಳುವಳಿಯು ಅವರೆಡರ ಮಧ್ಯೆ ಹರಿದು ಹಂಚಿಹೋಗುವ ಅಪಾಯವಿದೆಯೆಂದು ಅವರು ಹಲವಾರು ಸಮಾಜವಾದಿ ಸಮಾವೇಶಗಳಲ್ಲಿ ಎಚ್ಚರಿಸಿದ್ದರು. ಲೋಹಿಯಾ ನಿಧನಾನಂತರ ಬಹಳಷ್ಟು ಸಮಾಜವಾದಿಗಳು ಒಂದಲ್ಲ ಒಂದು ನೆಪದ ಮೇಲೆ ಬೇರೆ ಬೇರೆ ಪಕ್ಷಗಳ ಜಗುಲಿಗಳ ಮೇಲೆ ಮಲಗಲಾರಂಭಿಸಿ, ಕೊನೆಗೆ ಸಮಾಜವಾದಿ ಪಕ್ಷವೆಂಬುದೇ ೧೯೭೭ರ ಜನತಾ ಪಕ್ಷದಲ್ಲಿ ಲೀನವಾಗುವುದರೊಂದಿಗೆ ಇಲ್ಲವಾದದ್ದು ಹಾಗೂ ಆ ಪಕ್ಷವೂ ಛಿದ್ರ-ವಿಚ್ಛಿದ್ರವಾದ ಮೇಲೆ ಸಮಾಜವಾದಿಗಳೆನಿಸಿ ಕೊಂಡವರು ಸೇರದೇ ಇದ್ದ ಪಕ್ಷವೇ ಇಲ್ಲವಾದಂತಾದುದು, ಲೋಹಿಯಾ ಎದುರು ನೋಡಿದ್ದ ಆ ಅಪಾಯವನ್ನು ಅವರ ನಂತರ ಯಾರೂ ಗಂಭೀರವಾಗಿ ಪರಿಗಣಿಸದ ಕಾರಣದಿಂದಾಗಿಯೇ ಎಂದು ಹೇಳಬಹುದು.

ಭಾರತದಲ್ಲಿ ಸಮಾಜವಾದಿ ಚಳುವಳಿ ಹುಟ್ಟಿದ್ದು ಆಚಾರ್ಯ ನರೇಂದ್ರ ದೇವ, ಡಾ. ಸಂಪೂರ್ಣಾನಂದ, ಜಯಪ್ರಕಾಶ್ ನಾರಾಯಣ, ಮಿನೂ ಮಸಾನಿ, ಅಶೋಕ ಮೆಹ್ತಾ ಮುಂತಾದ ಮೂಲತಃ ಮಾರ್ಕ್ಸ್‌ವಾದಿಗಳಾಗಿದ್ದವರಿಂದಲೇ ಎಂಬುದು ನಿಜವಾದರೂ; ಅವರ್ಯಾರೂ ಮಾರ್ಕ್ಸ್‌ವಾದದ ಅಧಿಕೃತ ವಾರಸುದಾರನಂತಿದ್ದ ಭಾರತದ ಕಮ್ಯುನಿಸ್ಟ್ ಪಕ್ಷ ಸೇರದೆ, ಸ್ವಾತಂತ್ರ್ಯ ಚಳುವಳಿಯ ನಾಯಕತ್ವ ವಹಿಸಿದ್ದ ಕಾಂಗ್ರೆಸ್ ಪಕ್ಷದ ಚೌಕಟ್ಟಿನಲ್ಲೇ ತಮ್ಮದೇ ಸಮಾಜವಾದಿ ಪಕ್ಷವೊಂದನ್ನು ಸ್ಥಾಪಿಸಿಕೊಂಡು; ಕ್ರಮೇಣ ಗಾಂಧಿವಾದದ ಪ್ರಭಾವದಲ್ಲಿ, ಮಾರ್ಕ್ಸ್‌ವಾದವನ್ನು ಮೀರಿ ಬೆಳೆದ ಒಂದು ತತ್ವವಾಗಿ ಭಾರತೀಯ ಸಮಾಜವಾದವನ್ನು ನಿರೂಪಿಸಲು ಯತ್ನಿಸಿದರು ಎಂಬುದನ್ನು ನಾವು ಮರೆಯಬಾರದು. ಆದರೆ ಈ ಸಮಾಜವಾದದ ಅಭಿವ್ಯಕ್ತಿ, ಸ್ವಾತಂತ್ರ್ಯಾನಂತರವೂ ಪ್ರತಿರೋಧ ರಾಜಕಾರಣದ ರೂಪದಲ್ಲೇ ಪ್ರಕಟವಾಗಬೇಕಾದ ರಾಜಕೀಯ ಅನಿವಾರ್ಯತೆಗೆ ಸಿಕ್ಕಿದ್ದರಿಂದಾಗಿ, ಅದರ ರಚನಾತ್ಮಕತೆ ಕ್ರಿಯಾಶೀಲವಾಗಿ ಪ್ರಕಟವಾದದ್ದು ಬಹು ಕಡಿಮೆ ಎಂದೇ ಹೇಳಬೇಕು. ಮೊದಲ ಮಹಾಚುನಾವಣೆಯಲ್ಲಿ ಅನಿರೀಕ್ಷಿತ ಭಾರಿ ಸೋಲನ್ನು ಅನುಭವಿಸಿದ್ದಲ್ಲದೆ, ಕಾಂಗ್ರೆಸ್ ನಂತರದ ಸ್ಥಾನವನ್ನೂ ಕಮ್ಯುನಿಸ್ಟರಿಗೆ ಬಿಟ್ಟುಕೊಟ್ಟ ದಿಗ್ಭ್ರಮೆಯಲ್ಲಿದ್ದ ಸಮಾಜವಾದಿಗಳನ್ನು ಉದ್ದೇಶಿಸಿ ಮಾಡಿದ ಸಮಾಜವಾದದ ತಾತ್ವಿಕ ಅಡಿಗಲ್ಲು (Doctrinal Foundation of Indian Socialism - 1952) ಎಂಬ ತಮ್ಮ ಸುಪ್ರಸಿದ್ಧ ಭಾಷಣದ ಮೂಲಕ ಲೋಹಿಯಾ ತನ್ನ ಸಹಚರರನ್ನು ವರ್ಗ ಹೋರಾಟದ ಮಾರ್ಕ್ಸ್‌ವಾದಿ ಚಿಂತನೆಯ ಏರಕದಿಂದ ಬಿಡುಗಡೆಗೊಳಿಸಿದರು. ಆಗ ಆಳುವ ಚಿಂತನೆಗಳಾಗಿ ಪ್ರಚಲಿತವಿದ್ದ ಬಂಡವಾಳವಾದ ಹಾಗೂ ಮಾರ್ಕ್ಸ್‌ವಾದಗಳೆರಡಕ್ಕೂ ಸಂವಾದಿಯಾಗಿ, ಮಿತಿಗಳುಳ್ಳ ಬದುಕಿನ ಹೊಸ ವಿಶ್ವ ನಾಗರಿಕತೆಯ ಆಶಯ ರೂಪದಲ್ಲಿ ಭಾರತೀಯ ಸಮಾಜವಾದವನ್ನು ಪ್ರಸ್ತುತಪಡಿಸಿದ್ದ ಅವರು; ಈ ಹೊಸ ಸಮಾಜವಾದವನ್ನು ಗುದ್ದಲಿ, ಸೆರೆಮನೆ ಹಾಗೂ ಓಟು ಎಂಬ ಮೂರು ಕಾರ್ಯಶೀಲ ಆಧಾರಗಳ ಮೇಲೆ ಕಟ್ಟಬೇಕಾಗಿದೆ ಎಂದು ಸೂಚಿಸಿದ್ದರು. ಲೋಹಿಯಾ ಪ್ರಕಾರ, ಗುದ್ದಲಿ ರಚನಾತ್ಮಕ ಕೆಲಸಗಳಿಗೆ, ಸೆರೆಮನೆ ಸ್ಥಾಪಿತ ಹಿತಾಸಕ್ತಿಗಳ ವಿರುದ್ಧ ಪ್ರತಿಭಟನೆಗೆ, ಓಟು ಸಂಸದೀಯ ರಾಜಕಾರಣದಲ್ಲಿ ಪಾಲ್ಗೊಳ್ಳುವುದಕ್ಕೆ ಸಂಕೇತಗಳಾಗಿದ್ದವು.

ಆದರೆ, ಸ್ವಾತಂತ್ರ್ಯೋತ್ತರ ಭಾರತದ ವಾಸ್ತವ ರಾಜಕಾರಣದೆದುರು ಸಮಾಜವಾದಿ ಕನಸು-ಆಶಯಗಳೆಲ್ಲ ಕೇಂದ್ರ ಕಳೆದುಕೊಳ್ಳುತ್ತಾ ಸಂಘಟನೆ ಸಡಿಲವಾಗುತ್ತಾ ಹೋದಂತೆ, ಗುದ್ದಲಿ ಹಿಡಿದುಕೊಂಡು ಜೆ.ಪಿ. ಗುಂಪು ಸರ್ವೋದಯದ ಕಡೆ ನಡೆದರೆ, ಅಶೋಕ ಮೆಹ್ತಾ ಗುಂಪು ರಾಷ್ಟ್ರಹಿತ ದೃಷ್ಟಿಯ ನೆಪದಲ್ಲಿ ಸಮನ್ವಯ ರಾಜಕಾರಣವನ್ನು ಪ್ರತಿಪಾದಿಸುತ್ತಾ ಓಟಿನ ಹಿಂದೆ ಹೋಯಿತು. ಇದೆಲ್ಲವನ್ನೂ ಕ್ರುದ್ಧರಾಗಿ ನೋಡಬೇಕಾಗಿ ಬಂದ ಲೋಹಿಯಾ, ಪ್ರತಿಭಟನೆಯ ರಾಜಕಾರಣವನ್ನು ತೀವ್ರಗೊಳಿಸುವ ಒತ್ತಡಕ್ಕೆ ಸಿಕ್ಕಿ ಪದೇ ಪದೇ ಸೆರೆಮನೆಯ ಕಡೆ ಹೋಗಬೇಕಾಯಿತು. ಹೀಗೆ ಕ್ರಮೇಣ ತನ್ನ ತಾತ್ವಿಕ ದೃಷ್ಟಿ ಕೇಂದ್ರವನ್ನೇ ಕಳೆದುಕೊಳ್ಳುತ್ತಾ ಹೋದ ಸಮಾಜವಾದಿ ಚಳುವಳಿ, ಪ್ರತಿರೋಧ ರಾಜಕಾರಣಕ್ಕೆ ತನ್ನನ್ನು ಮೀಸಲಾಗಿರಿಸಿ

ಕೊಳ್ಳುವ ರಾಜಕೀಯ ಅನಿವಾರ್ಯತೆಗೆ ಸಿಕ್ಕಿತು. ಇದರಿಂದ ಹೊರಬರಲೆಂದೇ, ೧೯೬೭ರ ಚುನಾವಣೆಗಳ ಸಂದರ್ಭದಲ್ಲಿ ಲೋಹಿಯಾ 'ಕಾಂಗ್ರೆಸ್ಸೇತರವಾದ'ವನ್ನು ರೂಪಿಸಿ ತಕ್ಕಮಟ್ಟಿಗೆ ಯಶಸ್ವಿಯಾದರಾದರೂ, ಅವರ ಅಕಾಲಿಕ ಮರಣದಿಂದಾಗಿ ಆ ಯಶಸ್ಸೇ ಮುಂದಿನ ದಿನಗಳಲ್ಲಿ ಸಮಾಜವಾದದ ತಾತ್ವಿಕ ಛಿದ್ರೀಕರಣಕ್ಕೆ ದಾರಿ ಮಾಡಿಕೊಟ್ಟಿತೆಂಬುದೂ ನಿಜ. ಇದನ್ನೇ ಭಾರತೀಯ ಸಮಾಜವಾದದ ಚರಿತ್ರೆಕಾರ ಹ್ಯಾರಿಸ್ ವೊಫರ್ಡ್, ಭಾರತೀಯ ಸಮಾಜವಾದದ ದುರಂತವೆಂದರೆ, ಅದು ಹಾಕಿಕೊಂಡವರ ತಲೆಯ ಆಕಾರ ಪಡೆಯುವ ಕಾಂಗ್ರೆಸ್ ಟೊಪ್ಪಿಗೆಯಾದಂತಾದ್ದು ಎಂದು ಹೇಳಿದ್ದು! ಸರ್ವಾಧಿಕಾರಿ ರಾಜಕಾರಣಕ್ಕೆ ಒಂದು ಮಾನ್ಯತೆ ಒದಗಿಸಿಕೊಟ್ಟ ಇಂದಿರಾಗಾಂಧಿಯೂ ಸಮಾಜವಾದಿಯೆಂದೇ ಚರಿತ್ರೆಯಲ್ಲಿ ಪ್ರಸ್ತುತಪಡಿಸಲ್ಪಡುತ್ತಿದ್ದಾರೆ ಎಂದಮೇಲೆ, ಭಾರತೀಯ ಸಮಾಜವಾದ ಎಂತಹ ರೋಗಕ್ಕೆ ತುತ್ತಾಯಿತು ಎಂಬುದನ್ನು ನಾವು ಊಹಿಸಿಕೊಳ್ಳಬಹುದಾಗಿದೆ.

ಈ ದುರಂತದ ಹೊಣೆಗಾರಿಕೆಯನ್ನು ಸಮಾಜವಾದಿಗಳಲ್ಲದೆ ಇನ್ಯಾರು ಹೊರಬಲ್ಲರು? ಅಧಿಕಾರ ರಾಜಕಾರಣಕ್ಕೆ ಸಿಕ್ಕಿ ದಾರಿ ತಪ್ಪಿದ ಸಮಾಜವಾದಿಗಳು ಕ್ರಮೇಣ ಸಮಾಜವಾದದ ದಾರಿಯನ್ನೇ ತಪ್ಪಿಸ ಹೊರಟಾಗ, ಈ ಹೊಣೆಗಾರಿಕೆಯ ಶಿಲುಬೆಯನ್ನು ತನ್ನ ಹೆಗಲ ಮೇಲೆ ಹೊತ್ತ ದಿವಂಗತ ಕಿಷನ್ ಪಟ್ನಾಯಕ್‌ರಂತಹ ಚರಿತ್ರವಂತ ಸಮಾಜವಾದಿಗಳು, ಇತ್ತೀಚಿನವರೆಗೆ ಲೋಹಿಯಾ ರೂಪಿಸಿದ್ದ ಸಮಾಜವಾದದ ವಿಶಿಷ್ಟ ಸತ್ವ ಹಾಗೂ ಗುರುತನ್ನು ಉಳಿಸಿಕೊಡಲು ಸರ್ವಪ್ರಯತ್ನ ಮಾಡಿದರು. ಸಂಪನ್ಮೂಲಗಳ ಅಪಾರ ಕೊರತೆ ಹಾಗೂ ಸತತ ಅನಾರೋಗ್ಯದ ಮಧ್ಯೆಯೂ ದೇಶಾದ್ಯಂತ ತಿರುಗಾಡಿ, ಸಮಾಜವಾದಿ ಕನಸನ್ನು ಆತ್ಯಂತಿಕವಾಗಿ ಹೊಸಕಿ ಹಾಕಿ ಬಿಡಲು ಸನ್ನದ್ಧವಾಗಿರುವ ಜಾಗತೀಕರಣದ ವಿರುದ್ಧ ಹೋರಾಟವನ್ನು ಸಂಘಟಿಸುತ್ತಿದ್ದ ಅವರು, ಇದು ಸಮಾಜವಾದಿಗಳಿಗೆ ಧ್ಯಾನದ ಕಾಲ ಎನ್ನುತ್ತಿದ್ದರೆ, ಅದರ ಅರ್ಥ ಸಮಾಜವಾದಿಗಳು ಅನೈಕ್ಯತೆ, ಆಲಸ್ಯ ಮತ್ತು ಅನುಭೋಗದಲ್ಲಿ ತಾವು ಕಳೆದುಕೊಂಡಿರುವ ದೃಷ್ಟಿಕೇಂದ್ರವನ್ನು ಮರಳಿ ಪಡೆಯುವ ಅಗತ್ಯವನ್ನು ಮನಗಾಣಬೇಕೆಂಬುದೇ ಆಗಿತ್ತು. ಇದಕ್ಕೆ ಅತ್ಯಗತ್ಯವಾದದ್ದು, ಬದಲಾದ ಸಂದರ್ಭದಲ್ಲಿ ತಾತ್ವಿಕ ಸ್ಪಷ್ಟತೆಯ ಹಾಗೂ ಬದ್ಧತೆಯ ತರಬೇತಿ ಚಟುವಟಿಕೆಗಳು. ಅದಕ್ಕಾಗಿ ಮೊದಲು ಒಂದು-ಅದು ಎಷ್ಟೇ ಚಿಕ್ಕದಾದರೂ-ಸಂಘಟನೆ. ಕಿಷನ್‌ಜಿಯಂತಹವರ ಸ್ಫೂರ್ತಿ ಮತ್ತು ಮಾರ್ಗದರ್ಶನವಿದ್ದೂ, ಇದಾವುದನ್ನೂ ಮಾಡಲಾಗದ ಕರ್ನಾಟಕದ ಸಮಾಜವಾದಿಗಳು ಸಹಜವಾಗಿಯೇ, ಸಮಾಜವಾದದ ಸರಿಯಾದ ತರಬೇತಿಯಿಲ್ಲದೆ ಸ್ಥೂಲ ನೋಟದಲ್ಲಿ ಮಾತ್ರ ಲೋಹಿಯಾ ಕಡೆ ಆಕರ್ಷಿತರಾಗಿರುವ ಇತ್ತೀಚಿನ ತಲೆಮಾರಿನ ಬಹುಪಾಲು ಯುವಜನರು ನಕ್ಸಲೀಯ ಗುಂಪುಗಳೂ ಸೇರಿದಂತೆ ಎಲ್ಲ ರೀತಿಯ ಅನಪೇಕ್ಷಣೀಯ ಗುಂಪುಗಳ ರಾಜಕಾರಣಕ್ಕೆ ಬಲಿಯಾಗುತ್ತಿರುವುದನ್ನು, ನಿಸ್ಸಹಾಯಕರಾಗಿ ನಿಂತು ನೋಡುವ ದುಃಸ್ಥಿತಿಗೆ ಈಡಾಗಿದ್ದಾರೆ.

ಈಗ ಈ ಮೊದಲು ಪ್ರಸ್ತಾಪಿಸಿದ ಭಗತ್‌ಸಿಂಗ್-ಲೋಹಿಯಾ ಚಿಂತನಾ ಸಮಾವೇಶದ ಹೆಸರಿನಲ್ಲಿ ಆಗುತ್ತಿರುವುದೂ ಇದೇ. ಆದರೆ, ಇದು ಅಸಂಬದ್ಧ, ಅಕ್ರಮ ಹಾಗೂ ಅಪಾಯಕಾರಿ

ಎಂದು ಹೇಳಬಲ್ಲ ರಾಜ್ಯವ್ಯಾಪಿಯಾದ ಒಂದು ಸಮಾಜವಾದಿ ಸಂಘಟನೆಯೂ ಕರ್ನಾಟಕದಲ್ಲಿ ಇಲ್ಲವಾದರೆ? ಜಾಗತೀಕರಣವನ್ನು ಅನ್ಯ ದೂಷಣೆಯ ಹಳೆಯ ಸಮಾಜವಾದಿ ಮಾದರಿಯಲ್ಲೇ ಬೈಯುತ್ತಾ ಕೂತರೆ, ಸಮಾಜವಾದದ ಮುಂದಿನ ದಾರಿ ಸ್ಪಷ್ಟವಾಗುವುದೆ? ಸಮಾಜವಾದವೇ ಜಾಗತೀಕರಣಕ್ಕೆ ಪರ್ಯಾಯವೆಂದು ನಾವು ಹೇಳುವ ಮೊದಲು ಸಮಾಜವಾದದ ಬಗೆಗೆ ಉಂಟಾಗಿರುವ ತಪ್ಪು ಕಲ್ಪನೆಯನ್ನು ನಿವಾರಿಸುವ ಮತ್ತು ಸಮಾಜವಾದವೆಂದರೆ ನಿಜವಾಗಿ ಏನು ಎಂಬುದನ್ನು ಬದಲಾದ ಸಂದರ್ಭದಲ್ಲಿ ನಮಗೆ ನಾವೇ ಮೊದಲು ಸ್ಪಷ್ಟಪಡಿಸಿಕೊಂಡು ಇತರರಿಗೆ ಸ್ಪಷ್ಟಪಡಿಸುವ ಹೊಣೆಗಾರಿಕೆಯನ್ನು ಹೊರಬೇಕಿದೆ. ಇದಕ್ಕಾಗಿ, ಅರ್ಧ ಹತಾಶೆ-ಅರ್ಧ ಆಶೆಗಳಿಂದ ಅತ್ತಿತ್ತ ನೋಡುವುದನ್ನು ಬಿಟ್ಟು, ಈಗಲಾದರೂ ಸೂಕ್ತ ಸಿದ್ಧತೆ ಮಾಡಿಕೊಳ್ಳುವ ಕಾರ್ಯಕ್ರಮವಾಗಿ ಮಾತ್ರ ಲೋಹಿಯಾ ಹುಟ್ಟುಹಬ್ಬದ ಆಚರಣೆಗಳು ಅರ್ಥಪೂರ್ಣವೆನಿಸಿಕೊಳ್ಳಬಲ್ಲವು. ಇಲ್ಲದೇ ಹೋದರೆ, ಲೋಹಿಯಾ ನೆನಪು ಕ್ರಮೇಣ ಒಂದು ದುಃಸ್ವಪ್ನವಾಗಿ ನಮ್ಮನ್ನು ಕಾಡತೊಡಗುವುದು ನಿಶ್ಚಿತ.

('ಅಗ್ನಿ', ಮಾರ್ಚ್ ೨೯,೨೦೦೨)

ಒಂದು ಪ್ರತಿಕ್ರಿಯೆ

ಸಮಾಜವಾದಕ್ಕೆ ಅಡ್ಡದಾರಿಗಳಿಲ್ಲ

ಕುಂಬಳಕಾಯಿ ಕಳ್ಳ ಎಂದೊಡನೆ ನನ್ನ ಇಬ್ಬರು 'ಕಮ್ಯುನಿಸ್ಟ್' ಗೆಳೆಯರು ಹೆಗಲು ಮುಟ್ಟಿ ನೋಡಿಕೊಂಡಿದ್ದಾರೆ. ಗೋಕಾಕದಲ್ಲಿ ಆಯೋಜಿತವಾಗಿದ್ದ 'ಲೋಹಿಯಾ- ಭಗತ್‌ಸಿಂಗ್ ಚಿಂತನಾ ಸಮಾವೇಶ' ದ ಅಸಂಬದ್ಧತೆಯ ಬಗ್ಗೆ ನಾನು ಬರೆದ ಲೇಖನಕ್ಕೆ (ಅಗ್ನಿ, ೨೯.೩.೨೦೦೨) ಹೋದ ವಾರದ 'ಅಗ್ನಿ'ಯಲ್ಲಿ ಸನತ್ ಕುಮಾರ್ ಬೆಳಗಲಿ ಹಾಗೂ ಇನ್ನೊಂದು ಪತ್ರಿಕೆಯಲ್ಲಿ ಅವರ ಸಹಮನಸ್ಕ ಗೆಳೆಯ ಶಿವಸುಂದರ ವಿಸ್ತಾರವಾಗಿ ಪ್ರತಿಕ್ರಿಯಿಸಿದ್ದಾರೆ. ನಾನು ತಾತ್ವಿಕ ನೆಲೆಯಲ್ಲಿ ಬರೆದುದನ್ನು ಇವರು ವೈಯಕ್ತಿಕ ನೆಲೆಗೆ ಇಳಿಸಿ ನನ್ನ ಮೇಲೆ ಹರಿಹಾಯ್ದಿದ್ದಾರೆ. ಅಂದರೆ, ನಾನು ಬರೆದದ್ದು ಅವರ ಮರ್ಮಕ್ಕೆ ತಾಗಿದೆ ಎಂದೇ ಅರ್ಥ. ಅಷ್ಟರಮಟ್ಟಿಗೆ ನನ್ನ ಬರಹ ಸಾರ್ಥಕ್ಯ ಕಂಡಿದೆ.

ಗೆಳೆಯರ ಪ್ರತಿಕ್ರಿಯೆಗಳಲ್ಲಿ ವೈಯಕ್ತಿಕ ಟೀಕೆ–ವ್ಯಂಗ್ಯಗಳು, ಉದ್ದೇಶಪೂರ್ವಕ ಗೊಂದಲ ಸೃಷ್ಟಿಗಳೂ ಇರುವುದರಿಂದ ನಾನು ಸ್ವಲ್ಪ ವಿವರವಾಗಿಯೇ ಪ್ರತಿಕ್ರಿಯಿಸಬೇಕಿದೆ. ನನ್ನ ಮೂಲ ಬರಹದ ಉದ್ದೇಶ - ಅದರಲ್ಲೇ ಹೇಳಿದಂತೆ - ಈ 'ಕಮ್ಯೂನಿಸ್ಟ್'ರ ತಂತ್ರಗಾರಿಕೆಯನ್ನು ಪರಿಚಯ ಮಾಡಿಕೊಡುವುದಲ್ಲ; ಬದಲಿಗೆ ಈ ಸಮಾವೇಶದಲ್ಲಿ ಲೋಹಿಯಾ ತತ್ವ ಹೋರಾಟಗಳಲ್ಲಿ ನಂಬಿಕೆ ಇಟ್ಟ ಯಾರಾದರೂ ಭಾಗವಹಿಸಿದ್ದಲ್ಲಿ, ಅವರಿಗೆ ಇಂತಹ ಮರುಳೇಕೆ ಕವಿಯಿತು ಎಂದು ಚಿಂತಿಸಲು. ಏಕೆಂದರೆ, ಈ ಭೂಮಿಯ ಮೇಲೆ ಕಮ್ಯುನಿಸ್ಟರೆಂಬುವರು ಕಾಲಿಟ್ಟ ದಿನದಿಂದಲೂ ಅವರು ತತ್ವವನ್ನು ತಂತ್ರದ ಬಾಲಂಗೋಚಿಯಾಗಿ ಮಾಡಿಟ್ಟುಕೊಂಡು

ರಾಜಕಾರಣ ಮಾಡಿಕೊಂಡು ಬಂದವರು. ಭಾರತದಲ್ಲಿ ಸಮಾಜವಾದಿ ಚಳುವಳಿ ಆರಂಭವಾದ ೩೦ರ ದಶಕದಲ್ಲೇ, ತಮ್ಮ ಅಂತಾರಾಷ್ಟ್ರೀಯ ಯಜಮಾನರ ಅಣತಿಯಂತೆ 'ಐಕ್ಯರಂಗ'ದ ಹೆಸರು ಹೇಳಿಕೊಂಡು ಸಮಾಜವಾದಿ ಚಳುವಳಿಯನ್ನು ವಶಪಡಿಸಿಕೊಳ್ಳಲು ಯತ್ನಿಸಿ, ತಂತ್ರ ಬಯಲಾದಾಗ ಇವರನ್ನು ನಂಬಿ ಆಲಂಗಿಸಿದ್ದ ಜಯಪ್ರಕಾಶ್ ನಾರಾಯಣ್‌ರಿಂದಲೇ 'ಇವರು ನಮ್ಮ ಶತ್ರುಗಳು ಮಾತ್ರವಲ್ಲ, ಜನತೆಯ ಶತ್ರುಗಳು ಕೂಡಾ' ಎಂದು ಛೀಮಾರಿ ಹಾಕಿಸಿಕೊಂಡು ಹೊರದಬ್ಬಿಸಿಕೊಂಡವರು. ಆ ವೇಳೆಗಾಗಲೇ ಈ ಐಕ್ಯರಂಗವಾದಿಗಳು ದಕ್ಷಿಣ ಭಾರತದ ಅನೇಕ ಸಮಾಜವಾದಿ ಶಾಖೆಗಳನ್ನೂ ತಮ್ಮಲ್ಲಿ ಐಕ್ಯಗೊಳಿಸಿಕೊಂಡಿದ್ದನ್ನು ಸಮಾಜವಾದಿಗಳು ಹೇಗೆ ದಿಗ್ಭ್ರಮೆಯಲ್ಲಿ ನೋಡ ಬೇಕಾಯಿತು ಎಂಬುದನ್ನು ಭಾರತೀಯ ಸಮಾಜವಾದಿ ಚರಿತ್ರೆ ಬಲ್ಲ ಎಲ್ಲರಿಗೂ ತಿಳಿದಿದೆ.

ಹಾಗೆ ನಂಬಿದವರಿಗೆ ದ್ರೋಹ ಬಗೆಯುವುದನ್ನು ತಮ್ಮ ತತ್ವ-ತಂತ್ರಗಳೆರಡನ್ನೂ ಮಾಡಿಕೊಂಡು ಯಾವ ಮುಜುಗರವೂ ಇಲ್ಲದೆ ನಿರುಮ್ಮಳವಾಗಿರಬಲ್ಲ ಈ 'ಉಗ್ರ ಸತ್ಯನಿಷ್ಠ ಕಮ್ಯುನಿಸ್ಟರು', ಒಂದು ವರ್ಷದ ಹಿಂದಷ್ಟೇ ಶಿವಮೊಗ್ಗ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿನ 'ಪ್ರಗತಿಶೀಲ' ರೆಂದೆನಿಸಿಕೊಂಡವರಿಗೆ 'ಜನಪರ ಹೋರಾಟ' ದ ಟೋಪಿ ಹಾಕಿ ಜನ ಮತ್ತು ಹಣ ಎರಡನ್ನೂ ತಮ್ಮ 'ಕಾಣದ ಹೋರಾಟ'ಕ್ಕಾಗಿ ಲಪಟಾಯಿಸಿಕೊಂಡು ಹೋಗುವ ಅವಸರದಲ್ಲಿದ್ದಾಗ ಸಿಕ್ಕಿಬಿದ್ದು, ಹೇಗೆ ಅನೇಕ ಪ್ರಗತಿಪರರ ದಿಗ್ಭ್ರಮೆಗೆ ಕಾರಣರಾಗಿದ್ದಾರೆ ಎಂಬುದನ್ನು ಈಗಲೂ ಶಿವಮೊಗ್ಗಕ್ಕೆ ಬಂದು ನಾಲ್ಕು ಜನರನ್ನು ವಿಚಾರಿಸಿದರೆ ಗೊತ್ತಾಗುತ್ತದೆ. ಅಲ್ಲಿಂದೀಚೆಗೆ ಈ ಜನಪರ ಹೋರಾಟಗಾರರು 'ಬಲಿ'ಗಳನ್ನು ಹುಡುಕಿಕೊಂಡು ತುಂಗಭದ್ರಾದ ಆಚೆಕಡೆಗೆ ಗುಳೆ ಹೊರಟಿದ್ದಾರೆಂದು ಕಾಣುತ್ತದೆ.

ನಾನು ನನ್ನ ಬರಹದಲ್ಲಿ ಎಚ್ಚರಿಸಿದ್ದುದು ಈ ಮಾರುವೇಷದ ರಾಜಕಾರಣದ ವಿರುದ್ಧ. ನನ್ನ ಈ ಗೆಳೆಯರು ಮೂಲತಃ ಕಮ್ಯೂನಿಸ್ಟರೇ ಆಗಿದ್ದರೆ, ಇವರೇಕೆ ಸಂಸದೀಯ ಪ್ರಜಾಪ್ರಭುತ್ವದಲ್ಲಿ ಪಾಲ್ಗೊಂಡು ಬಹಿರಂಗ ರಾಜಕಾರಣ ಮಾಡುತ್ತಿರುವ ತಮ್ಮ ಸೋದರ ಕಮ್ಯುನಿಸ್ಟ್ ಪಕ್ಷಗಳೊಂದಿಗೆ ಮೊದಲು ಐಕ್ಯತೆ ಸ್ಥಾಪಿಸಿಕೊಳ್ಳಬಾರದು? ಬದಲಿಗೆ ಕಮ್ಯುನಿಸ್ಟ್ ಆಡಳಿತಶಾಹಿ ಕುರಿತಂತೆ ತೀವ್ರ ಭಿನ್ನಾಭಿಪ್ರಾಯ ಹೊಂದಿದ್ದ ಗಾಂಧಿ-ಲೋಹಿಯಾಗೆ ಯಾಕೆ ಇವರು ಗಂಟು ಬೀಳಲು ಹೊರಟಿದ್ದಾರೆ? ತಮ್ಮ ಹತಾಶ ರಾಜಕೀಯ ತತ್ವ ಹಾಗೂ ತಂತ್ರಗಳಿಂದಾಗಿ ಜನವಿಮುಖರಾಗಿ ಕಾಡು ಹೊಕ್ಕಿರುವ ಇವರಿಗೆ ಸದ್ಯಕ್ಕೆ ಜನ ಬೇಕಿದೆ ಮತ್ತು ಹೇಗಾದರೂ ಅದನ್ನು ಪಡೆಯಬೇಕಿದೆ! ಅದಕ್ಕಾಗಿ ಇದ್ದಕ್ಕಿದ್ದಂತೆ ಭಗತ್‌ಸಿಂಗ್-ಗಾಂಧಿ-ಲೋಹಿಯಾ ಬಗೆಗೆ ಪ್ರೀತಿ ಉಕ್ಕಿ ಹರಿದು ಈ ಹೆಸರುಗಳ ಬಳಕೆಗೆ ಸಿದ್ಧತೆ ನಡೆದಿದೆ.

ಇವರು, ಲೋಹಿಯಾ ಇಂದು ಬದುಕಿದ್ದರೆ ಏನು ಮಾಡುತ್ತಿದ್ದರು ಎಂಬುದನ್ನು ತಾವೇ ಊಹಿಸಿಕೊಂಡು ತಮ್ಮ ರಾಜಕಾರಣವನ್ನು ಸಮರ್ಥಿಸಿಕೊಂಡಿದ್ದಾರೆ. ಇಂತಹ ಊಹಾತ್ಮಕ ರಾಜಕಾರಣದಲ್ಲಿ ನನಗೆ ನಂಬಿಕೆ ಇಲ್ಲದಿದ್ದರೂ, ಇವರ ಊಹೆಗೆ ಪ್ರತಿಕ್ರಿಯಿಸಿ ಹೇಳುವುದಾದರೆ, ಖಂಡಿತ ಲೋಹಿಯಾರ ಹೋರಾಟದಲ್ಲಿ ಸಂವಿಧಾನ ಹಾಗೂ ಸಂಸದೀಯ ಪ್ರಜಾಪ್ರಭುತ್ವವನ್ನು

ಬುಡಮೇಲುಗೊಳಿಸ ಬಯಸುವವರಿಗೆ ಸ್ಥಾನವಿರುತ್ತಿರಲಿಲ್ಲ. ಅಂತಹವರನ್ನು ಅವರು ದಾರಿತಪ್ಪಿದ ಮಕ್ಕಳೆಂದು ಸಹಾನುಭೂತಿಯಿಂದ ನೋಡುತ್ತಿದ್ದರೆ ಹೊರತು, ಅವರೊಂದಿಗೆ ಎಂದೂ ರಾಜಕೀಯವಾಗಿ ಗುರುತಿಸಿಕೊಳ್ಳುತ್ತಿರಲಿಲ್ಲ. ನನ್ನ ಈ ಕಮ್ಯುನಿಸ್ಟ್ ಗೆಳೆಯರಿಗೆ ಲೋಹಿಯಾ ಈಗ ಅಷ್ಟು ಪ್ರೀತಿಯ ಹೆಸರಾಗಿ ಪರಿವರ್ತಿತವಾಗಿದ್ದರೆ, ಲೋಹಿಯಾ ಹೆಸರನ್ನು ಸೇರಿಸಿಕೊಂಡು ಆಯೋಜಿಸಿದ್ದ ಗೋಕಾಕ್ ಸಮಾವೇಶದ ಕರಪತ್ರ ಮತ್ತು ಆಹ್ವಾನ ಪತ್ರಿಕೆಯಲ್ಲಿ ಲೋಹಿಯಾ ವಿಚಾರಗಳಿಗೆ ಒಂದು ಸಾಲಿನ ಜಾಗವನ್ನೂ ಏಕೆ ಕೊಡಲಾಗಿಲ್ಲ? ಇನ್ನು ಇವರ ಕೈಲಿ ಸಿಕ್ಕು ಗಾಂಧಿ ಪಾಡೇನಾಗಬೇಕು?

ಇನ್ನು, ಇಬ್ಬರು ಗೆಳೆಯರೂ ಮಾಡಿರುವ ಕಿಷನ್ ಪಟ್ನಾಯಕ್ ಹಾಗೂ ಸುರೇಂದ್ರ ಮೋಹನರ ಪ್ರಸ್ತಾಪ. ೩೦ ವರ್ಷಗಳಿಂದ ಸತತವಾಗಿ ಕಿಷನ್ ಪಟ್ನಾಯಕ್‌ರೊಂದಿಗೆ ಒಡನಾಡಿರುವ ನನಗೆ ಅವರ ಬಗ್ಗೆ ಈ ಇಬ್ಬರು ಗೆಳೆಯರಿಗಿಂತ ಹೆಚ್ಚು ಗೊತ್ತೆಂದು ವಿಶ್ವಾಸದಿಂದ ಹೇಳಬಲ್ಲೆ. ಖಂಡಿತ ಅವರು ಕಮ್ಯುನಿಸ್ಟರೂ ಸೇರಿದಂತೆ ಜಾಗತೀಕರಣದ ವಿರುದ್ಧ ಇರುವ ಎಲ್ಲ ಎಡಪಂಥೀಯರ ಒಗ್ಗಟ್ಟಿಗೆ ಶ್ರಮಿಸಿದರು. (ಈಚಿನ ನಂದಿಗ್ರಾಮ ಪ್ರಕರಣದ ನಂತರ ಅವರ ನಿಲುವು ಏನಾಗುತ್ತಿತ್ತೋ ಊಹಿಸುವುದು ಕಷ್ಟ!) ಆದರೆ, ಈ ಒಗ್ಗಟ್ಟಿನ ಹೋರಾಟ ಸಂಪೂರ್ಣವಾಗಿ ಜನಸಮ್ಮುಖದಲ್ಲಿ ಅಹಿಂಸಾತ್ಮಕವಾಗಿ ನಡೆಯಬೇಕೆಂದು ಅವರು ನಂಬಿದ್ದರು. ಬೀದಿಯಲ್ಲೊ, ಕಾಡಿನಲ್ಲೊ ಕಂಡವರ ಮಕ್ಕಳ 'ರಕ್ತ ಚೆಲ್ಲುವ' ವಿಕ್ಷಿಪ್ತ ವೀರಾವೇಶದ 'ಹೋರಾಟ'ದ ಮಾತುಗಳಿಗೆ ಅವರ ಬಳಿ ಅವಕಾಶವಿರಲಿಲ್ಲ. ಹಾಗಾಗಿ ಈ ಗೆಳೆಯರು ಕಿಷನ್ ಪಟ್ನಾಯಕರ ಅಥವಾ ಸುರೇಂದ್ರ ಮೋಹನದ ಹೆಸರನ್ನಾಗಲಿ ಪ್ರಸ್ತಾಪಿಸುತ್ತಿದ್ದರೆ, ಅದು ಮತ್ತೆ ಅವರ Cadre buildingಗಾಗಿ ಮಾತ್ರ.

ಇವರ ಕೋಮುವಾದಿ ರಾಜಕಾರಣದ ವಿರುದ್ಧದ ಹೋರಾಟವೂ ಅಷ್ಟೆ. ನಾನೂ ಆರಂಭದಲ್ಲಿ ಇವರ 'ಕೋಮು ಸೌಹಾರ್ದ ವೇದಿಕೆ'ಗೆ ನನ್ನ ಕೈಲಾದಷ್ಟು ಚಂದಾ ಕೊಟ್ಟವನೇ ಹಾಗೂ ಕೊಡಿಸಿದವನೇ. ಆದರೆ ಕೋಮು ಸೌಹಾರ್ದ ವೇದಿಕೆ ಬಳಕೆಯಾದದ್ದು ಸೌಹಾರ್ದಕ್ಕೆ ಬದಲಾಗಿ ಸಂಘರ್ಷಕ್ಕೆ. ಅದಕ್ಕಿಂತ ಹೆಚ್ಚಾಗಿ ಇವರ ರಾಜಕೀಯ 'ಜಾಗ'ವನ್ನು ಭದ್ರಪಡಿಸಿ ಕೊಳ್ಳಲಿಕ್ಕೆ. ಇದು ಬಯಲಾದೊಡನೆ ಹೊಸ ಹೊಸ ಮುಖವಾಡಗಳ ಅವಿಷ್ಕಾರ ಶುರುವಾಗಿದೆ. ಹೀಗಾಗಿ ಈಗ ಅದು ಗದಗ-ಗೋಕಾಕದ ಕಡೆ ಕೋಮು ಕಳಚಿಕೊಂಡು ಬರೀ ಸೌಹಾರ್ದ ವೇದಿಕೆಯಾಗಿ ತಲೆ ಎತ್ತಿದೆ! ಜೊತೆಗೆ ಅವರೇ ಹೇಳಿಕೊಂಡಂತೆ, ಭೂ ಮಾಲೀಕರನ್ನು ನಡುಗಿಸಿರುವ 'ಭೂಮಿ ಬೇಕು' ಆಂದೋಲನ... ಇಷ್ಟು ಸಶಕ್ತರಾದ ಇವರು ಸಂಘ ಪರಿವಾರದ ರಾಜಕಾರಣದ ವಿರುದ್ಧ ಹೋರಾಟ ಮಾಡುವುದಿದ್ದರೆ, ನೇರವಾಗಿ ತಮ್ಮ ಹೆಸರಿನಲ್ಲಿ ಸಮಾವೇಶದ ಸಂಘಟನೆ ಏಕೆ ಮಾಡಬಾರದಿತ್ತು? ಬಂಡಾಯ ಸಾಹಿತ್ಯ ಸಂಘಟನೆ ಇರುವುದು ಇಂತಹ 'ಮಧ್ಯವರ್ತಿ' ಕೆಲಸಗಳಿಗೇ ಎಂದು ಕಾಣುತ್ತದೆ. ಹಾಗೆ ನೋಡಿದರೆ ಬಂಡಾಯ ಸಾಹಿತ್ಯ ಸಂಘಟನೆ ಹುಟ್ಟಿದ್ದೇ ಆಗಿನ ಕಮ್ಯುನಿಸ್ಟ್ ನಾಯಕ ಎಂ.ಕೆ. ಭಟ್ಟರ ಮಾರುವೇಷದ ರಾಜಕೀಯ ಕಾರ್ಯಕ್ರಮವಾಗಿ. ಆದರೆ, ನಂತರ ಅದು ಅವರ ಹಿಡಿತಕ್ಕೆ ಸಿಗದೆ ಸಾಹಿತ್ಯದ ಹೆಸರಲ್ಲಿ ರಾಜಕೀಯ ಮಾಡಹೊರಟ ಪುಢಾರಿಗಳ ಕೈವಶವಾದದ್ದು ಬೇರೆ ವಿಷಯ.

ಹಿಂದೂ ಸಮಾಜೋತ್ಸವದ ಬಗ್ಗೆ ನಾನೇನೂ ಮಾತನಾಡಲಿಲ್ಲವೆಂದೂ, ಜಾರ್ಜ್ ಫರ್ನಾಂಡೀಸ್ ರಾಜಕಾರಣದ ಬಗ್ಗೆ ನಾನು ಏನೂ ಹೇಳಲ್ಲವೆಂದೂ ಈ ಗೆಳೆಯರು ಆಪಾದಿಸಿದ್ದಾರೆ. ಅಂದರೆ, ನಾನು ಬಂದು ಈ ಕುರಿತ ನನ್ನ ನಿಲುವುಗಳನ್ನೂ, ಪ್ರತಿಕ್ರಿಯೆಗಳನ್ನೂ ಇವರ ಮುಂದೆ ದಾಖಲಿಸಬೇಕಿತ್ತೆಂದೇ? ವಿಷಯ ಗೊತ್ತಿಲ್ಲದಿದ್ದರೆ ಬಾಯಿ ಮುಚ್ಚಿ ಕೊಂಡಿರುವುದು ಸೌಜನ್ಯ. ಇಂತಹ ಸೌಜನ್ಯಗಳಿಗೆಲ್ಲ ತಿಲಾಂಜಲಿ ಕೊಟ್ಟವರಂತೆ ತೋರುವ ಈ ಗೆಳೆಯರು ನನ್ನನ್ನು ದಂತಗೋಪುರದ ಸಮಾಜವಾದಿಯೆಂದೂ, ಗಾವಿಲನೆಂದೂ, ಪಂಡಿತನೆಂದೂ, ಹೋರಾಟದಿಂದ ವಿಆರ್‌ಎಸ್ ತೆಗೆದುಕೊಂಡವನೆಂದೂ ಜರಿದಿದ್ದಾರೆ. ವೈಯಕ್ತಿಕವಾಗಿ ಹೀಗೆ ಜರಿಯುವ ಭಾಷೆ ದುರ್ಬಲರದು, ಹೇಡಿಗಳದು ಹಾಗೂ ಅಗ್ಗದ ಜನಪ್ರಿಯತೆಗೆ ಬಿದ್ದವರದು ಎಂದಷ್ಟೇ ನಾನಿಲ್ಲಿ ಹೇಳಬಯಸುವೆ. ಆದರೆ, ಇವರು ತಮ್ಮನ್ನು ಕ್ರಾಂತಿಕಾರಿಗಳೆಂದು ಭಾವಿಸಿಕೊಂಡಿದ್ದಾರೆ. ಅದೇ ವಿಪರ್ಯಾಸ. ನಾನೆಂದೂ ಇವರ ಇಂತಹ 'ಹಾರಾಟ' ರೂಪದ ಹೋರಾಟದಲ್ಲಿ ಭಾಗಿಯಾಗಿಲ್ಲ. ನನಗೆ ಅದರಲ್ಲಿ ನಂಬಿಕೆಯೂ ಇಲ್ಲ. ನನ್ನ ನಂಬಿಕೆ ಏನಿದ್ದರೂ ಗಾಂಧಿ-ಲೋಹಿಯಾ ಪ್ರತಿಪಾದಿಸಿದ, ದೇಹದಲ್ಲಿ ಒಂದೇ ತಲೆ ಇರುವ ಹಾಗೂ ಆ ತಲೆಯಲ್ಲಿ ಒಂದೇ ನಾಲಗೆ ಇರುವ ಮತ್ತು ಆ ಒಂದೇ ತಲೆ ಹಾಗೂ ನಾಲಗೆಯೊಂದಿಗೆ ಜನರ ಮಧ್ಯೆ ಮಾಡುವ ನೇರ ಹಾಗೂ ಸತ್ಯದ ರಾಜಕಾರಣದಲ್ಲಿ. ಅದು ಇಂದು ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟು ಮಾತ್ರ ಮಾಡುವ ರಾಜಕೀಯ ವಿವೇಕವನ್ನು ಒಪ್ಪಿಕೊಂಡವನು.

ಹಾಗಾಗಿಯೇ ನಾನೀಗ ಮೂವತ್ತು ವರ್ಷಗಳ ಸರ್ಕಾರಿ ಸೇವೆಯ ನಂತರ ದೊರೆಯುತ್ತಿರುವ (ನನ್ನ ಹೆಂಡತಿಯದೂ ಸೇರಿದಂತೆ) ೧೨ ಸಾವಿರ ರೂ.ಗಳ ಮಾಸಿಕ ಪಿಂಚಣಿಯ ದಂತ ಗೋಪುರದಲ್ಲಿ ಕೂತು ನಿಮ್ಮ ಕ್ರಾಂತಿಕಾರಕ ರಾಜಕಾರಣವನ್ನು ಗಾಬರಿಯಿಂದ ನೋಡುವ ಪಡಿಪಾಟಲಿನಲ್ಲಿದ್ದೇನೆ. ಏನು ಮಾಡುವುದು ಹೇಳಿ, ತಾವು ಮಾಡಿದ ಕ್ರಾಂತಿಯ ಸುಸ್ತನ್ನು ನಿವಾರಿಸಿಕೊಳ್ಳಲು ಮಧ್ಯಯುಗೀನ ಮಹಾರಾಜರ ವೈಭೋಗವನ್ನೂ ನಾಚಿಸುವಂತಹ ಆಧುನಿಕ ಅರಮನೆಗಳ ವೈಭೋಗ ಕಲ್ಪಿಸಿಕೊಂಡ ನಿಮ್ಮ ಮಾದರಿಗಳಾದ ಮಾವೋ, ಲೆನಿನ್, ಸ್ಟಾಲಿನ್ ಹಾಗೂ ಚೆಸಸ್ಕು (ರುಮೇನಿಯಾ) ಮುಂತಾದ ದುಡಿಯುವ ವರ್ಗಗಳ ಸರ್ವಾಧಿಕಾರಿಗಳು ನನಗೆ ಮಾದರಿಗಳಾಗಿಲ್ಲವಲ್ಲ?

ಅಂದಹಾಗೆ ಈ ಗೋಕಾಕ ಸಮಾವೇಶದಲ್ಲಿ ಪಾಲ್ಗೊಂಡಿರಬಹುದಾದ ಒಬ್ಬ ಲೋಹಿಯಾ ಸಮಾಜವಾದಿಯಿಂದಲೂ ನನ್ನ ಬರಹಕ್ಕೆ ಪ್ರತಿಕ್ರಿಯೆ ಇಲ್ಲವಾಗಿ, ಕಳ್ಳನ ಮನಸ್ಸು ಹುಳ್ಳಹುಳ್ಳಗೆ ಎಂಬಂತೆ ಎಲ್ಲ ರಾದ್ಧಾಂತವೂ ಈ 'ಕಮ್ಯುನಿಸ್ಟ್' ಗೆಳೆಯರದೇ ಆಗಿದೆಯಲ್ಲ! ಗೆಳೆಯರೇ, ಮೊದಲು ನಿಮ್ಮ ನಿಮ್ಮ ಭ್ರಮೆಗಳಿಂದ ಹೊರಬನ್ನಿ. ಜನರಿಗಾಗಿ ಜನರ ಮಧ್ಯೆ ಮನಬಿಚ್ಚಿ ಮಾತನಾಡಿ. ನೇರ ರಾಜಕಾರಣ ಮಾಡುವ ಧೈರ್ಯ ತೋರಿ. ನಿಮ್ಮ ಬದ್ಧತೆ ಹಾಗೂ ಪರಿಶ್ರಮಗಳ ಬಗ್ಗೆ ಯಾರಿಗೂ ಅನುಮಾನವಿಲ್ಲ. ಅನುಮಾನವಿರುವುದು, ನಿಮ್ಮ ಗುರಿ ಮತ್ತು ಮಾರ್ಗಗಳ ಬಗ್ಗೆ. ಆದುದರಿಂದ, ಜನರಿಗೆ ಅಗತ್ಯವೆನಿಸಿದರೆ ಒಟ್ಟಿಗೆ ಸೇರಿ ಸಮಾಜವಾದಿ

ಆಂದೋಲನವನ್ನು ಇವೊತ್ತಿನ ಸವಾಲುಗಳಿಗೆ ತಕ್ಕಂತೆ ಪುನಃಶ್ಚೇತನಗೊಳಿಸೋಣ. ಭಗತ್‌ಸಿಂಗ್‌ರನ್ನು ಮಾದರಿಯಾಗಿಟ್ಟುಕೊಂಡಲ್ಲ; ಗಾಂಧಿ-ಲೋಹಿಯಾ-ಕಿಷನ್ ಪಟ್ನಾಯಕ್‌ರ ಅಹಿಂಸಾತ್ಮಕ ಮತ್ತು ಸಂಸದೀಯ ಪ್ರಜಾಪ್ರಭುತ್ವವಾದೀ ರಾಜಕಾರಣದ ಆಶಯಗಳನ್ನಿಟ್ಟುಕೊಂಡು. ಏಕೆಂದರೆ ಸತ್ಯ-ಸಮತೆ-ಸೌಂದರ್ಯಗಳನ್ನು ಏಕವಾಗಿ ಪರಿಭಾವಿಸುವ ಭಾರತೀಯ ಸಮಾಜವಾದಕ್ಕೆ ಅಡ್ಡದಾರಿ (shortcut) ಗಳಿಲ್ಲ.

(ಅಗ್ನಿ. ಏಪ್ರಿಲ್ ೧೨, ೨೦೦೭)

ಸಮಾಜವಾದದ ಆಧ್ಯಾತ್ಮಿಕತೆ

ಗೆಳೆಯ ಜಿ.ಎನ್. ಮಲ್ಲಿಕಾರ್ಜುನ ಅವರು ತಮ್ಮ 'ಬೆಳಗಿನ ಬೆರಗು' ಪುಸ್ತಕದ ಮುದ್ರಿತ ಕರಡು ಪ್ರತಿಯನ್ನು ಮುನ್ನುಡಿಗಾಗಿ ವಿಶ್ವಾಸದಿಂದ ನನಗೆ ಕಳಿಸಿದಾಗ, ಲೋಕಸಭಾ ಚುನಾವಣೆ (೨೦೦೪)ಗಳಿನ್ನೂ ಮುಗಿದಿರಲಿಲ್ಲ. ಬಿ.ಜೆ.ಪಿ. ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ರಂಗದ ಸರ್ಕಾರವೇ ಮರು ಆಯ್ಕೆಯಾಗುವುದು ಈಗಾಗಲೇ ತೀರ್ಮಾನವಾಗಿ ಹೋಗಿರುವ ವಿಚಾರ ಎಂಬುದು ಸಾರ್ವತ್ರಿಕ ಅಭಿಪ್ರಾಯವಾಗಿತ್ತು. ಇಂತಹ ಸಂದರ್ಭದಲ್ಲಿ, ಸಮಾಜವಾದಿ ಆಶಯಗಳ ಹಿನ್ನೆಲೆಯಲ್ಲಿ ಬರೆದ ಈ ಸಂಗ್ರಹದ ಲೇಖನಗಳನ್ನು ನಾನು ಕೊಂಚ ಮರುಕ ತುಂಬಿದ ಸಹಾನುಭೂತಿಯಿಂದಲೇ ಓದಿದ್ದೆ. ಸಮಾಜವಾದವನ್ನು ಲೈಸೆನ್ಸ್ ಪರ್ಮಿಟ್ ರಾಜ್ಯ ವ್ಯವಸ್ಥೆಯೆಂದು ಹೀಗಳೆದು, ಈವರೆಗೆ ರಾಷ್ಟ್ರ ಈ ವ್ಯವಸ್ಥೆಯನ್ನು ಅನುಸರಿಸಿದ ಕಾರಣ ನಿಜವಾದ ಪ್ರಗತಿಯನ್ನೇ ಕಾಣದೆ ಹೋಗಿದೆ ಎಂಬ ವಾದ ಮಂಡಿಸುತ್ತಾ; ಮುಕ್ತ ಮಾರುಕಟ್ಟೆ ನೀತಿಯ ಜಾಗತೀಕರಣವೇ ಪ್ರಗತಿಯ ಹೆಬ್ಬಾಗಿಲನ್ನು ತೆರೆಯಬಲ್ಲುದು ಎಂಬ ನಂಬಿಕೆಯೊಡನೆ, ನಮ್ಮ ಆಡಳಿತಗಾರರು ಕಳೆದೊಂದು ದಶಕದಲ್ಲಿ ಹೊಸ ರಾಜಕೀಯ ವಾತಾವರಣವನ್ನೇ ಉಂಟು ಮಾಡಿದ್ದರು. ವಿಶ್ವಬ್ಯಾಂಕ್ ಮತ್ತು ಇತರೆ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಹರಿದುಬಂದ ಸಾಲದ ಹಣ, ಬಹುರಾಷ್ಟ್ರೀಯ ಕಂಪನಿಗಳು ನಮ್ಮ ಮಾರುಕಟ್ಟೆಗೆ ತಂದು ಸುರಿದ ವೈವಿಧ್ಯಮಯ ಗ್ರಾಹಕ ವಸ್ತುಗಳ ಮೂಲಕ ರಾಷ್ಟ್ರಾದ್ಯಂತ ಸಮೃದ್ಧಿಯ ದ್ವೀಪಗಳನ್ನು ಸೃಷ್ಟಿಸಿ, ಈ ಝುಗಝುಗಿಸುವ ದ್ವೀಪಗಳನ್ನು ಎಲ್ಲರ ಕಣ್ಮುಂದಿನ ಕನಸುಗಳನ್ನಾಗಿ ಪ್ರಸ್ತುತಪಡಿಸಲಾಗಿತ್ತು.

ಆದರೆ ಈ ಚುನಾವಣೆ, ರಾಷ್ಟ್ರ ಇಂತಹ ಕನಸು ಕಾಣಲು ಸುತರಾಂ ನಿರಾಕರಿಸಿದೆ ಎಂಬುದನ್ನು ಸಾಬೀತುಪಡಿಸಿದೆ. ಹೊಸ ಆಡಳಿತಗಾರರು ಈಗ ಮಾನವೀಯ ಮುಖದ ಆರ್ಥಿಕ ಸುಧಾರಣೆಗಳ ಮಾತುಗಳನ್ನಾಡುತ್ತಿದ್ದಾರೆ. ಅಂದರೆ ಈವರೆಗೆ ನಾವು ಕಂಡ ಜಾಗತೀಕರಣದ ಪ್ರಕ್ರಿಯೆ ಅಮಾನವೀಯವಾಗಿತ್ತು ಎಂಬುದನ್ನು ಒಪ್ಪಿಕೊಂಡಂತಾಯಿತು... ಅಂದ ಹಾಗೆ ಈ ಹೊಸ ಆಡಳಿತಗಾರರು ಮತ್ತಾರೂ ಅಲ್ಲ, ನಮ್ಮ ದೇಶದಲ್ಲಿ ಜಾಗತೀಕರಣ ಪ್ರಕ್ರಿಯೆಗೆ ದಾರಿ ಮಾಡಿಕೊಟ್ಟ ಆರ್ಥಿಕ ಸುಧಾರಣೆಗಳನ್ನು ಜಾರಿಗೆ ತಂದ ಮೂಲಪುರುಷರು ಇವರು! ಅದೇನೇ ಇರಲಿ, ಈ ಹತ್ತು ವರ್ಷಗಳಲ್ಲಿ ಈಗ ಮೊದಲ ಬಾರಿಗೆ ಯಾವುದೇ ಮುಜುಗರವಿಲ್ಲದೆ ಮತ್ತೆ ನಾವು ಸಮಾಜವಾದದ ಬಗ್ಗೆ ಮಾತಾಡಬಹುದಾಗಿದೆ. ಏಕೆಂದರೆ

ಮಾನವೀಯ ಮುಖದ ಆರ್ಥಿಕ ಸುಧಾರಣೆ ಎಂದರೇನು ಎಂಬ ಪ್ರಶ್ನೆಗೆ ಉತ್ತರಕ್ಕಾಗಿ ನಾವು ಮತ್ತೆ ಸಮಾಜವಾದಿ ಸಂಕಥನಕ್ಕೇ ಹಿಂದಿರುಗಬೇಕಾಗುವುದು ಅನಿವಾರ್ಯವಾಗುತ್ತದೆ. ಅಲ್ಲದೆ ಈ ಬಾರಿಯ ಚುನಾವಣೆಗಳಲ್ಲಿ ರಾಷ್ಟ್ರವೇಕೆ ಜಾಗತೀಕರಣ ಸೂಚಿಸುತ್ತಿದ್ದ ಸಮೃದ್ಧಿಯ ಕನಸನ್ನು ಮೌನವಾಗಿ ತಳ್ಳಿಹಾಕಿಬಿಟ್ಟಿತು? ಈ ಕನಸು ನನಸಾಗಲು ಸಾಧ್ಯವಿಲ್ಲ ಎಂಬುದು ರಾಷ್ಟ್ರದ ಅಂತರಾಳಕ್ಕೆ ತಲುಪಿದ್ದಾದರೂ ಹೇಗೆ? ಎಂಬ ಪ್ರಶ್ನೆಗಳನ್ನು ಹಿಂಬಾಲಿಸಿದರೆ ನಮಗೆ ಕಾಣುವ ಸತ್ಯವೆಂದರೆ ನಮ್ಮ ದೇಶದಲ್ಲಿ ಸಮಾಜವಾದಿ ಸಂಕಥನ ತನ್ನ ತಾರ್ಕಿಕ ಅಂತ್ಯವನ್ನು ಇನ್ನೂ ಕಂಡಿಲ್ಲವೆಂಬುದೇ ಆಗಿದೆ. ಹೀಗಾಗಿ ನಾವೀಗ ಜಿ.ಎನ್. ಮಲ್ಲಿಕಾರ್ಜುನ ಅವರ ಈ ಲೇಖನಗಳನ್ನು ಹೊಸ ಪ್ರಸ್ತುತತೆಯ ನೆಲೆಯಲ್ಲಿಯೇ ಓದಬಹುದಾಗಿದೆ.

ಈ ಸಂಗ್ರಹದಲ್ಲಿರುವ ಎಲ್ಲ ಲೇಖನಗಳೂ ಜಾಗತೀಕರಣದ ಬಗ್ಗೆ ಕಳೆದ ಹತ್ತು ವರ್ಷಗಳಲ್ಲಿ ನಡೆದಿರುವ ಚರ್ಚೆಯ ಭಾಗವೇ ಆಗಿ ಒಡಮೂಡಿದೆ. ಇಲ್ಲಿನ ಲೇಖನಗಳನ್ನು ಎರಡು ಗುಂಪುಗಳನ್ನಾಗಿ ವಿಂಗಡಿಸಿ ನೋಡಬಹುದು. ಒಂದು, ಜಾಗತೀಕರಣವು ಪ್ರಗತಿ ಮತ್ತು ಸಮೃದ್ಧಿಯ ಹೆಸರಿನಲ್ಲಿ ರಾಷ್ಟ್ರ ಜೀವನದಲ್ಲಿ ಉಂಟು ಮಾಡುತ್ತಿರುವ ಅನಾಹುತಗಳನ್ನು ಅಂಕಿ ಅಂಶಗಳೊಂದಿಗೆ ವಿಷದೀಕರಿಸುವ ವಿಶ್ಲೇಷಣಾತ್ಮಕ ಲೇಖನಗಳು. ಇವು ಸಂಗ್ರಹದ ಕೊನೆಯ ಆರೇಳು ಲೇಖನಗಳು. ಇನ್ನೊಂದು, ಜಾಗತೀಕರಣಕ್ಕೆ ಪರ್ಯಾಯವಿಲ್ಲ ಎಂಬ ವಾದಕ್ಕೆ ವಿರುದ್ಧವಾಗಿ ಪ್ರಸ್ತುತಗೊಂಡಂತೆ ತೋರುವ ಪರ್ಯಾಪ್ತ ಪರಿಕಲ್ಪನೆಗಳನ್ನು ಕುರಿತ ಪರಿಚಯಾತ್ಮಕ ಲೇಖನಗಳು. ಇವು ಸಂಗ್ರಹದ ಮೊದಲ ಆರು ಲೇಖನಗಳು. ವೈಯಕ್ತಿಕವಾಗಿ ನನ್ನ ಆಸಕ್ತಿ ಈ ಎರಡನೇ ಗುಂಪಿನ ಲೇಖನಗಳ ಕಡೆಗೇ. ಏಕೆಂದರೆ ಜಾಗತೀಕರಣದ ಅನಾಹುತಗಳು ವಿಷದೀಕರಣ ಹಾಗೂ ವಿಶ್ಲೇಷಣೆಗಳನ್ನೂ ಮೀರಿ ಕಣ್ಣಿಗೆ ಒಡೆದು ಕಾಣುವಂತಿವೆ. ಕಳೆದ ಮೂರ್ನಾಲ್ಕು ವರ್ಷಗಳಲ್ಲಿ ಆಂಧ್ರ - ಕರ್ನಾಟಕ ರಾಜ್ಯಗಳಲ್ಲಿ ನಡೆದ - ಹಿಂದೆಂದೂ ಕಂಡು ಕೇಳರಿಯದ ದಾರುಣ ಪರಿಸ್ಥಿತಿಯಲ್ಲಿ - ಸಾವಿರಾರು ರೈತರ ಆತ್ಮಹತ್ಯೆಗಳ ನಂತರವೂ ಜಾಗತೀಕರಣದ ಪರವಾಗಿ ಯಾರಾದರೂ ತತ್ವ ವಿಶ್ಲೇಷಣೆಗೆ ಹೊರಟರೆ ಅವರನ್ನು ಹುಚ್ಚರೆಂದೋ ಅವಿವೇಕಿಗಳೆಂದೋ ಕರೆಯಬೇಕಾಗುತ್ತದೆ. ಕಳೆದ ಮೂರ್ನಾಲ್ಕು ವರ್ಷಗಳ ಕಾಲ ಈ ರಾಜ್ಯಗಳ ಬಹು ಭಾಗಗಳನ್ನಾವರಿಸಿದ ಬರದಿಂದಾಗಿ ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಕಂಡು ಬಂದ ಹಸಿವು - ಅವಮಾನ - ಅಸಹಾಯಕತೆಗಳ ದುರಂತ ಕಥೆಯು ರಾಷ್ಟ್ರದ ಎದೆಗೆ ಮುಟ್ಟದೇ ಹೋಗುವಷ್ಟು ಅಸೂಕ್ಷ್ಮತೆಯನ್ನು ಈ ಜಾಗತೀಕರಣದ ರಾಜಕಾರಣ ಉಂಟು ಮಾಡಿತ್ತೆಂಬುದನ್ನು ಯಾರಾದರೂ ನಿರಾಕರಿಸಲಾದೀತೇ? ಹಾಗೆ ನಿರಾಕರಿಸುವಷ್ಟು ಧೈರ್ಯ ಮತ್ತು ಹಠವುಳ್ಳವರು ಈ ಸಂಗ್ರಹದ ಕೊನೆಯ ಆರೇಳು ಲೇಖನಗಳನ್ನು ಓದುವ ಮನಸ್ಸು ಮಾಡಬೇಕು. ಜಾಗತೀಕರಣ ಕೇವಲ ರೈತರ ಕತ್ತನ್ನಲ್ಲ - ಸಮಾನತೆಯ ತತ್ವವನ್ನು ಅವ್ಯಾವಹಾರಿಕ ವೆಂದು ಬಗೆಯುವ ಅಸೂಕ್ಷ್ಮವಾದ ನವ ಶ್ರೀಮಂತಶಾಹಿಯನ್ನು ಸೃಷ್ಟಿಸುವ ಮೂಲಕ - ದೇಶದ ಕತ್ತನ್ನೇ ಹೇಗೆ ಕೊಯ್ಯಹೊರಟಿದೆ ಎಂಬುದರ ಸತ್ಯ-ಮಿಥ್ಯೆಗಳ ಕತೆಯನ್ನು ಈ ಲೇಖನಗಳು ನಿರೂಪಿಸುತ್ತವೆ.

ಆದರೆ ಮೊದಲೇ ಹೇಳಿದಂತೆ ನನ್ನ ಕುತೂಹಲವಿರುವುದು, ಈ ದುರಂತಕ್ಕೆ ಪರಿಹಾರವೆಂಬಂತೆ, ಈ ಸಂಗ್ರಹದ ಮೊದಲ ಆರು ಲೇಖನಗಳಲ್ಲಿ ಪರಿಚಯಿಸಲಾಗಿರುವ ತತ್ವಗಳ ಮತ್ತು ಪರಿಕಲ್ಪನೆಗಳ ಸಾಧ್ಯಾಸಾಧ್ಯತೆಗಳ ಬಗ್ಗೆ. ಬುದ್ಧ - ಬಸವರ ಅರ್ಥ ವ್ಯವಸ್ಥೆಯಿಂದ ಹಿಡಿದು ಲೋಹಿಯಾ ಅವರ ತಂತ್ರಜ್ಞಾನ ನೀತಿ, ಅಮರ್ತ್ಯಸೇನರ ನೈತಿಕ ಅರ್ಥಶಾಸ್ತ್ರದ ಪರಿಕಲ್ಪನೆ ಹಾಗೂ ನಮ್ಮ ನಡುವಿನ ಹಿರಿಯ ಸಮಾಜವಾದಿ ಚಿಂತಕ ಕಿಷನ್ ಪಟ್ನಾಯಕ್ ಅವರ ಸಮಾಜವಾದದ ಹೊಸ ನಿರೂಪಣೆವರೆಗೆ ಇಲ್ಲಿ ವೈಚಾರಿಕ ಪರ್ಯಾಯ ಮಾದರಿಗಳನ್ನು ಪ್ರಸ್ತುತಪಡಿಸಲಾಗಿದೆ. ಇದೆಲ್ಲದಕ್ಕೆ ಕಳಸವಿಟ್ಟಂತೆ, ಈ ಮಾದರಿಗಳ ಮಧ್ಯದಿಂದಲೇ ಮೂಡಿಬಂದಂತಿರುವ ಅಣ್ಣಾ ಹಜಾರೆ ಅವರು ಅಭಿವೃದ್ಧಿ ಪಡಿಸಿರುವ ರಾಳೆಗಾಣ ಸಿದ್ಧಿ ಗ್ರಾಮದ ಪ್ರಯೋಗ ಚಿತ್ರವನ್ನು ಜಿ.ಎನ್. ಮಲ್ಲಿಕಾರ್ಜುನ ಅವರು ನೀಡಿದ್ದಾರೆ. ಈ ಪೈಕಿ ಕಿಷನ್ ಪಟ್ನಾಯಕ್ ಚಿಂತನೆ ಕುರಿತ ಲೇಖನ, ಒಂದೂವರೆ ವರ್ಷಗಳ ಹಿಂದೆ ಶಿವಮೊಗ್ಗದಲ್ಲಿ ನಡೆದ ಒಂದು ಸಮಾಜವಾದಿ ಚಿಂತನಾ ಕಮ್ಮಟದಲ್ಲಿ ನಾನು 'ಸಮಾಜವಾದವೆಂಬುದು ಒಂದು ರೊಮ್ಯಾಂಟಿಕ್ ಕಲ್ಪನೆ; ಆದರೆ ಅದು ಅವ್ಯಾವಹಾರಿಕ ಕೂಡಾ ಎಂಬುದೀಗ ಸಾಬೀತಾಗಿದೆ' ಎಂದು, ಚರ್ಚೆಗಾಗಿ ಮಂಡಿಸಿದ ಒಂದು ಪ್ರಮೇಯಕ್ಕೆ ಕಿಷನ್ ಪಟ್ನಾಯಕ್ ಅವರು ಕಮ್ಮಟದ ಸಮಾರೋಪ ಭಾಷಣದ ರೂಪದಲ್ಲಿ ನೀಡಿದ ವಿಸ್ತೃತ ಪ್ರತಿಕ್ರಿಯೆಯ ಸಾರಾಂಶವಾಗಿದೆ.

ಅಂದು ನಾನು ಮಂಡಿಸಿದ ಪ್ರಮೇಯದ ಹಿಂದಿದ್ದ ವಾದ ಸರಣಿಯೆಂದರೆ, ಇಂದಿನ ತಂತ್ರಜ್ಞಾನ ಸ್ಫೋಟವು ಸೃಷ್ಟಿಸಿರುವ ಸುಖ-ಸಮೃದ್ಧಿಗಳ ಹೊಸ ಅಳತೆಗೋಲುಗಳ ಹಾಗೂ ವರ್ಗ ಸಂಘಟನೆಯ ಹೊಸ ವಿನ್ಯಾಸಗಳ ಹಿನ್ನೆಲೆಯಲ್ಲಿ ಮನುಷ್ಯನ ಚಿತ್ತವೃತ್ತಿಯನ್ನು ಅಂದಾಜು ಮಾಡುವಲ್ಲಿ ಸಮಾಜವಾದವು ವಿಫಲವಾಗಿದ್ದು, ಸಮಾನತೆಯ ಸಂಸ್ಕೃತಿಯನ್ನು ನಿರ್ಮಿಸಲು ಅದರ ಬಳಿಯಿರುವ ಪರಿಕರಗಳು ಹಾಗೂ ಪರಿಕಲ್ಪನೆಗಳು ಈಗ ಅಪ್ರಸ್ತುತವೆನಿಸಿಕೊಂಡಿವೆ ಎಂಬುದೇ ಆಗಿತ್ತು. ನನ್ನ ಈ ವಾದ ಸರಣಿಗೆ ಕಿಷನ್ ಅವರು ನೀಡಿದ ವಿಸ್ತೃತ ಉತ್ತರದಲ್ಲಿ ಸಮಾಜವಾದ ಮತ್ತೆ ಮರುಜೀವ ಪಡೆಯಬಹುದಾದ ಶಕ್ತಿ ಮೂಲಗಳನ್ನು ಬುದ್ಧ, ಪರಮಹಂಸ, ಗಾಂಧಿ, ಮದರ್ ಥೆರೇಸಾ ಅವರಲ್ಲಿ ಗುರುತಿಸಿ ಕುತೂಹಲ ಹುಟ್ಟಿಸಿದ್ದಾರೆ. ಈ ಮೂಲಕ ಅವರು, ಸಮಾಜವಾದ ಈವರೆಗೆ ಒಂದು ಭೌತಿಕ ಅಥವಾ ಲೌಕಿಕ ಪರಿಕರವೆಂಬಂತೆ ಮಾತ್ರ ಕೆಲಸ ಮಾಡಿ exhaust ಆಗಿದೆ; ಅದೀಗ ಒಂದು ಆಧ್ಯಾತ್ಮಿಕ ಆಯಾಮವನ್ನು ಪಡೆದು ಧರ್ಮದಂತೆ ಕೆಲಸ ಮಾಡಬೇಕಾದ ಸಂದರ್ಭ ಬಂದಿದೆ ಎಂದು ಸೂಚಿಸುತ್ತಿರುವಂತೆ ನನಗೆ ತೋರುತ್ತಿದೆ. ಆಧ್ಯಾತ್ಮ ಎಂದೊಡನೆ ದೇವರು-ದಿಂಡಿರು, ಜಪ-ತಪ-ಭಜನೆ ಎಂದು ಹೀಯಾಳಿಸುತ್ತಾ ಹೌಹಾರುವ ಸಮಾಜವಾದಿ ಗೆಳೆಯರ ಸಂಖ್ಯೆ ನಮ್ಮಲ್ಲೇನೂ ಕಡಿಮೆ ಇಲ್ಲ. ಇದು ಪೆರಿಯಾರ್ ಚಳುವಳಿಯ ಸ್ಥೂಲತೆಯಿಂದುಂಟಾದ ವಕ್ರತೆಯಷ್ಟೆ. ಆದರೆ ಆಧ್ಯಾತ್ಮವೆಂದರೆ ಕೆಲಸದ ನಂತರದ ವಿಶ್ರಾಂತಿ ; ಮಾತಿನ ನಂತರದ ಮೌನ ಎಂಬ ಸಹಜಾರ್ಥದಲ್ಲಿ ಗ್ರಹಿಸುವುದಾದರೆ ಕಿಷನ್ ನೀಡುತ್ತಿರುವ ಸೂಚನೆ ನಮಗೆ ಅರ್ಥವಾದೀತು. ನಾನು ಎತ್ತಿದ ಮನುಷ್ಯನ ಚಿತ್ತವೃತ್ತಿಯನ್ನು ಅಂದಾಜು ಮಾಡುವಲ್ಲಿನ

ಸಮಾಜವಾದದ ವೈಫಲ್ಯದ ಪ್ರಶ್ನೆಗೂ ಕಿಷನ್ ಇಲ್ಲಿ ಉತ್ತರ ಬೊಟ್ಟು ಮಾಡುತ್ತಿದ್ದಾರೆಂದು ನನಗನ್ನಿಸುತ್ತದೆ.

ಹಾಗೆ ನೋಡಿದರೆ ಸಮಾನತೆ ಎಂಬುದೇ ಒಂದು ಆಧ್ಯಾತ್ಮಿಕ ಪ್ರೇರಣೆ ಎಂಬುದನ್ನು ನಾವು ಗಮನಿಸಬೇಕು. ಈ ದೃಷ್ಟಿಯಿಂದ ಸಮಾಜವಾದಿ ಚಳುವಳಿ ಒಂದು ಸ್ತರದಲ್ಲಿ ಧಾರ್ಮಿಕ ಚಳುವಳಿಯಂತೆಯೇ ಕ್ರಿಯಾಶೀಲವಾಗಬೇಕಿತ್ತು. ಆದರೆ ಕಳೆದ ಐವತ್ತು - ಅರವತ್ತು ವರ್ಷಗಳ ಸಮಾಜವಾದಿ ಚಳುವಳಿ ಈ ಆಧ್ಯಾತ್ಮಿಕ ಆಯಾಮವನ್ನೇ ಮಸುಕು ಮಾಡುವಷ್ಟು ಆಕ್ರಮಣಕಾರಿಯಾಗಿ ವರ್ತಿಸಿ ತನ್ನೆಲ್ಲ ಆಯುಧಗಳನ್ನೇ ಕಳೆದುಕೊಂಡು ಕೂತಿದೆ. ಲೋಹಿಯಾ ಹೇಳಿದ ಅನ್ಯಾಯ ಕುರಿತಂತೆ 'ಒಂದು ಕಣ್ಣಲ್ಲಿ ಕರುಣೆಯ ಕಣ್ಣೀರ ಹನಿ; ಮತ್ತೊಂದು ಕಣ್ಣಲ್ಲಿ ಕ್ರೋಧದ ಬೆಂಕಿ' ಧೋರಣೆಯು ಚಳುವಳಿಯುದ್ದಕ್ಕೂ ಕ್ರೋಧವಾಗಿ ಮಾತ್ರ ಅಭಿವ್ಯಕ್ತ ಗೊಂಡಿರುವುರ ಹಿಂದಿರುವ ಕಾರಣಗಳಾದರೂ ಏನು ಮತ್ತು ಇದರಿಂದ ಉಂಟಾಗಿರುವ ಪರಿಣಾಮಗಳಾದರೂ ಎಂತಹವು ಎಂಬುದನ್ನು ಸಮಾಜವಾದಿಗಳು ಆಳವಾಗಿ ಆಲೋಚಿಸಬೇಕಿದೆ. ಕ್ರೋಧದ ರಾಜಕಾರಣ ಸಮಾಜವಾದಿಗಳನ್ನು ಎಷ್ಟರಮಟ್ಟಿಗೆ ಸ್ವಯಂಪರವಶರನ್ನಾಗಿ ಮಾಡಿತೆಂದರೆ, ಆಚಾರ್ಯ ನರೇಂದ್ರದೇವ, ಲೋಹಿಯಾ, ಜೆ.ಪಿ. ಮುಂತಾದ ಸಮಾಜವಾದಿ ಚಿಂತಕರು ಪ್ರತಿಪಾದಿಸಿದ ಅನೇಕ ತಾತ್ವಿಕ ಹಾಗೂ ಪ್ರಾಯೋಗಿಕ ಮಾದರಿಗಳ ಬಗೆಗೆ ಅವರಲ್ಲಿ ಅಸೂಕ್ಷ್ಮತೆ-ಅವಜ್ಞತೆಗಳು ಉಂಟಾಗಿ, ಆ ಮಾದರಿಗಳು ಚಳುವಳಿಯ ಭಾಗವಾಗಿ ಬೆಳೆಯಲೇ ಇಲ್ಲ. ಉದಾಹರಣೆಗೆ ನರೇಂದ್ರದೇವ ಅವರು ಪ್ರತಿಪಾದಿಸಿದ್ದ ಗಾಂಧಿ ಮುಖೇನ ಬುದ್ಧ-ಮಾರ್ಕ್ಸ್‌ರ ಅನುಸಂಧಾನ, ಲೋಹಿಯಾ ಪ್ರತಿಪಾದಿಸಿದ್ದ ಸಣ್ಣ ಘಟಕ ತಂತ್ರಜ್ಞಾನ ಹಾಗೂ ಜೆ.ಪಿ. ಅವರ 'ಸಮಾಜವಾದಿ ಆಶ್ರಮ'ಗಳ ಪ್ರಯೋಗ ಸಮಾಜವಾದಿ ಚಳುವಳಿಯ ಭಾಗವೇ ಆಗಲಿಲ್ಲ. ಆದರೆ ವಿಷಾದದ ಸಂಗತಿ ಎಂದರೆ ಈ ಎಲ್ಲವೂ ಸಮಾಜವಾದದ ಆಧ್ಯಾತ್ಮಿಕ ಹೃದಯ ಭಾಗವೇ ಆಗಿತ್ತು ಎಂಬುದನ್ನು ಸಮಾಜವಾದಿ ಚಳುವಳಿ ಅರಿಯದೇ ಹೋಯಿತು ಎಂಬುದು. ಬಹುಶಃ ಕಿಷನ್ ಸೂಚಿಸುತ್ತಿರುವುದೂ ಇದನ್ನೇ.* ಜಿ.ಎನ್. ಮಲ್ಲಿಕಾರ್ಜುನ ಅವರ ಈ ಕುರಿತ ಲೇಖನ ಅಂದು ಕಿಷನ್ ಪಟ್ನಾಯಕ್ ಮಾಡಿದ ಭಾಷಣದ ಸಾರಾಂಶ ಮಾತ್ರ ಎಂಬುದನ್ನು ಈ ಸಂದರ್ಭದಲ್ಲಿ ಓದುಗರಿಗೆ ನೆನಪಿಸಬೇಕಿದೆ.

ಅದೇನೇ ಇರಲಿ, ಈ ಸಂಗ್ರಹದ ಅಮರ್ತ್ಯಸೇನರ ಅರ್ಥಶಾಸ್ತ್ರ, ಸಮಾಜವಾದದ ತಂತ್ರಜ್ಞಾನ ನೀತಿ ಹಾಗೂ ಅಣ್ಣಾ ಹಜಾರೆ ಕುರಿತ ಲೇಖನಗಳು ಕ್ರಮವಾಗಿ ಈ ಮೇಲೆ ಪ್ರಸ್ತಾಪಿಸಿದ ನರೇಂದ್ರದೇವ, ಲೋಹಿಯಾ ಹಾಗೂ ಜೆ.ಪಿ. ಯವರ ವಿಚಾರಗಳ ಕ್ರಿಯಾಶೀಲ ವಿಸ್ತರಣೆಗಳಂತಿರುವುದನ್ನು ನಾವು ಗಮನಿಸಬೇಕು. ಮಾರ್ಕ್ಸ್‌ವಾದದ ಸುಖ ಹಾಗೂ ಬುದ್ಧನ ದುಃಖ ಮೀಮಾಂಸೆಗಳ ಅನುಸಂಧಾನದಂತೆ ತೋರುವ well being (ನೆಮ್ಮದಿ?) ಎನ್ನುವ

---

* ಆಸಕ್ತರು 'ನೆಲಸಿರಿ' ಹೊರ ತಂದಿರುವ ಅವರ 'ಬನ್ನಿ ಬೆಳಕಿನ ದೊಂದಿ ಹಚ್ಚೋಣ' ಎಂಬ ಸಿ.ಡಿ. ಕೇಳಬಹುದು. ವಿಚಾರಿಸಿ : ೯೪೪೪೮೮೭೧೮೧೫

ಪರಿಕಲ್ಪನೆಯನ್ನು ಅರ್ಥಶಾಸ್ತ್ರೀಯ ಪರಿಭಾಷೆಯಲ್ಲಿ ಪುನರ್ವ್ಯಾಖ್ಯಾನಿಸುವ ಅಮರ್ತ್ಯಸೇನರ ಪ್ರಯತ್ನವು, ಬಡತನ ಮತ್ತು ಅಸಮಾನತೆಗಳನ್ನು ಅನುಭೋಗ ಮತ್ತು ತುಷ್ಟಿ ಗುಣಗಳ ಮಟ್ಟಗಳೆಂಬ ಭೌತಿಕ ಅಳತೆಗೋಲುಗಳಿಂದ ಬಿಡುಗಡೆಗೊಳಿಸುವ ಮೂಲಕ ಒಂದು ನೈತಿಕ ಪ್ರಭೆಯನ್ನು ಪಡೆದುಕೊಳ್ಳುತ್ತದೆ. ಜಿ.ಎನ್. ಮಲ್ಲಿಕಾರ್ಜುನ ಅವರು ತಮ್ಮ ಲೇಖನದಲ್ಲಿ ಇದನ್ನು ವಿಸ್ತಾರವಾಗಿ ವಿವರಿಸಿದ್ದಾರೆ. ಹಾಗೇ ಲೋಹಿಯಾ ಪ್ರತಿಪಾದಿಸಿದ ಸಣ್ಣ ಘಟಕ ಯಂತ್ರದ ಪರಿಕಲ್ಪನೆಯನ್ನು ಸಮಾಜವಾದಿ ಚಳುವಳಿ ಮರೆತರೂ, ದೇಶೀ ತಂತ್ರಜ್ಞರ ಸಮೂಹವೊಂದು ಅದನ್ನು ವಿಸ್ತರಿಸಿ ಬೆಳೆಸಿರುವುದನ್ನು ಮತ್ತು ಜಾಗತೀಕರಣದೊಂದಿಗೆ ಬೆಸೆದುಕೊಂಡು ಬಂದಿರುವ ಹೊಸ ಮಾದರಿಯ ತಂತ್ರಜ್ಞಾನ ಹುಟ್ಟು ಹಾಕುತ್ತಿರುವ ಅಸಮಾನತೆ ಮತ್ತು ಸಾಂಸ್ಕೃತಿಕ ಅರಾಜಕತೆಗಳ ಇಂದಿನ ಸಂದರ್ಭದಲ್ಲಿ ಅದರ ಕಾರ್ಯಶೀಲ ಪ್ರಸ್ತುತತೆಯನ್ನು ಲೇಖಕರು ವಿಷದವಾಗಿ ಪ್ರಸ್ತಾಪಿಸಿದ್ದಾರೆ. ಸಮಾಜವಾದಿಗಳು ಇದನ್ನು ವಿಷಾದದಿಂದ ಓದಿಕೊಳ್ಳಬಹುದು.

ಇನ್ನು ಅಣ್ಣಾ ಹಜಾರೆ ಅವರು ತಮ್ಮ ಹುಟ್ಟೂರು ರಾಳೇಗಣ ಸಿದ್ಧಿಯನ್ನು 'ಗಾಂಧೀಜಿ ಕನಸಿನ ಹಳ್ಳಿ'ಯನ್ನಾಗಿ ಪರಿವರ್ತಿಸಿರುವ ಪವಾಡ ಯಾರನ್ನಾದರೂ ಬೆರಗುಗೊಳಿಸುವಂತಿದೆ. ಇದು ವ್ಯಕ್ತಿಯ ಅಂತರಾಳದ ದುಃಖ, ಆದರ್ಶ ಹಾಗೂ ಹಠಗಳಿಂದ ಸಾಕಾರಗೊಂಡ ಪವಾಡ. ಈ ಕುರಿತ ಇಲ್ಲಿನ ಲೇಖನ ಅಣ್ಣಾ ಹಜಾರೆ ಎಂಬ ಸಾಮಾನ್ಯ ನಿವೃತ್ತ ಸೈನಿಕನೊಬ್ಬನ ಮೌನದಾಳಗಳನ್ನು ವಿವರವಾಗಿ ಪರಿಚಯ ಮಾಡಿಕೊಡುತ್ತದೆ. ಇಲ್ಲಿ ಬುದ್ಧ, ಪರಮಹಂಸ, ಗಾಂಧಿ, ಥೆರೇಸಾ ಎಲ್ಲ ಕ್ರಿಯಾಶೀಲರಾಗಿದ್ದಾರೆ. ಜಿ.ಎನ್. ಮಲ್ಲಿಕಾರ್ಜುನ ಅವರು ತಮ್ಮ ಈ ಲೇಖನಕ್ಕೆ 'ಬೆಳಗಿನೊಳಗಿನ ಬೆರಗು...' ಎಂಬ ಶೀರ್ಷಿಕೆ ನೀಡಿರುವುದು ಉಚಿತವಾಗಿಯೇ ಇದೆ. ತತ್ವಗಳ ಹಿಂದಿನ ಬೆಳಕನ್ನು ಇಲ್ಲಿ ಕಣ್ಣಿಗೆ ಕಾಣುವ ಬೆಳಕನ್ನಾಗಿ ಮಾರ್ಪಡಿಸಿದ್ದಾರೆ ಅಣ್ಣಾ ಹಜಾರೆ. ಜೆ.ಪಿ.ಯವರು ಗ್ರಾಮಾಂತರ ಪ್ರದೇಶಗಳಲ್ಲಿ 'ಸಮಾಜವಾದಿ ಆಶ್ರಮ'ಗಳ ಸ್ಥಾಪನೆಯ ಪರಿಕಲ್ಪನೆಯನ್ನು ಮುಂದಿಟ್ಟಾಗ ಅವರ ಮನಸ್ಸು ಇದೇ ತರಂಗಾಂತರದಲ್ಲಿತ್ತೇನೋ! ಆದರೆ ಸ್ವತಃ ಜೆ.ಪಿ.ಯಂತಹ ಜೆ.ಪಿ.ಯವರೇ ಸೆಖೋದೇವೋರಾದಲ್ಲಿ ಸ್ಥಾಪಿಸಿದ 'ಸಮಾಜವಾದಿ ಆಶ್ರಮ' ಅವರ ಕಣ್ಮುಂದೆಯೇ ಅನೇಕ ತರಲೆ-ತಾಪತ್ರಯಗಳ ಬೀಡಾಗಿ ಹೋಯಿತು ಎಂಬುದನ್ನು ನೆನೆಸಿಕೊಂಡಾಗ ಸಮಾಜವಾದಿ ಚಳುವಳಿಯಲ್ಲಿ ಮೂಡದ, ಆದರೆ ಅಣ್ಣಾ ಹಜಾರೆ ಎಂಬ ವ್ಯಕ್ತಿಯಲ್ಲಿ ಪ್ರಕಟಗೊಂಡ ಕ್ರತುಶಕ್ತಿಯ ಮೂಲ ಯಾವುದು ಎಂಬುದನ್ನು ಪರಿಶೀಲಿಸುವ ಜವಾಬ್ದಾರಿಯನ್ನು ಈ ಲೇಖನ ನಮಗೆ ವಹಿಸುತ್ತದೆ. ಆಳದ ನೋವಿನಿಂದ ಚಿಮ್ಮದ ಯಾವುದೇ ಕ್ರಿಯಾಶೀಲತೆಗೆ ಹೆಚ್ಚಿನ ಧಾರಣಶಕ್ತಿ ಇರಲಾರದು... ಗಾಂಧಿ ಒಡನಾಟದಿಂದ ಬೇರ್ಪಟ್ಟ ಸಮಾಜವಾದಿ ಚಳುವಳಿ ಆಳದ ನೋವನ್ನು ಕಳೆದುಕೊಂಡು ಸೈದ್ಧಾಂತಿಕ ವಿಶಿಷ್ಟತೆಯ ಅಹಂಕಾರವನ್ನಷ್ಟೇ ಬೆಳೆಸಿಕೊಂಡು ಆಕ್ರಮಣಕಾರಿಯಾಗುತ್ತ ಹೋಗಿ ಸುಮ್ಮನೆ ಕುಸ್ತಿ ಮಾಡಿ ಮಾಡಿ ಸುಸ್ತಾಗಿ ಹೋಯಿತೇ?

ಹೀಗೆಲ್ಲ - ಇಷ್ಟು ವಿಸ್ತಾರದಲ್ಲಿ - ಯೋಚಿಸಲು ಈ ಸಂಗ್ರಹದ ಲೇಖನಗಳು ನಮ್ಮನ್ನು ಪ್ರೇರೇಪಿಸುತ್ತವೆ. ಇಂತಹ ಪ್ರೇರೇಪಣೆ ಇಂದಿನ ಸಂದರ್ಭದಲ್ಲಿ ಸಾಮಾನ್ಯ ಮಹತ್ವದಲ್ಲ. ಗೆಳೆಯ ಮಲ್ಲಿಕಾರ್ಜುನ ತಮ್ಮ ಮೊದಲ 'ಬೋಧಿವೃಕ್ಷದ ಕೆಳಗೆ' ಕೃತಿಯ ಮೂಲಕ ಕನ್ನಡದಲ್ಲಿ ಅಭಿವೃದ್ಧಿ ವಿನ್ಯಾಸಗಳನ್ನು ಕುರಿತ ಸಾಹಿತ್ಯ ಕೃಷಿಯನ್ನು ಆರಂಭಿಸಿದವರು. ಈ ಪುಸ್ತಕದ ಮೂಲಕ ಅವರು ಕೆಲವೆಡೆ ಪ್ರತ್ಯಕ್ಷವಾಗಿ, ಮತ್ತೆ ಕೆಲವೆಡೆ ಪರೋಕ್ಷವಾಗಿ ಸಮಾಜವಾದಿ ಚಿಂತನೆಯ ವಿಸ್ತರಣೆಯ ಅನಿವಾರ್ಯತೆ ಮತ್ತು ಸಾಧ್ಯತೆಗಳ ಕಡೆ ಬೊಟ್ಟು ಮಾಡಿ ಪರ್ಯಾಯ ಚಿಂತನೆಯ ತುರ್ತು ಅಗತ್ಯವನ್ನು ಪ್ರತಿಪಾದಿಸಿದ್ದಾರೆ. ಇದಕ್ಕಾಗಿ ನಾನು ಜಿ.ಎನ್. ಮಲ್ಲಿಕಾರ್ಜುನ ಅವರನ್ನು ಅಭಿನಂದಿಸುತ್ತೇನೆ.

(ಜಿ.ಎನ್. ಮಲ್ಲಿಕಾರ್ಜುನ ಅವರ ಅಭಿವೃದ್ಧಿ ಸಾಹಿತ್ಯ ಲೇಖನಗಳ ಸಂಗ್ರಹ : *'ಬೆಳಗಿನ ಬೆರಗು'* ಗಾಗಿ ಬರೆದ ಮುನ್ನುಡಿಯ ಮಾತುಗಳು)

●

ಜಾಗತೀಕರಣದ ಸ್ವರೂಪ ಮತ್ತು ಆತಂಕಗಳು

ಯಾವ ಲೋಹಿಯಾ ಅವರ ತತ್ವ ಚಿಂತನೆಯ ಒಂದು ಅನುಬಂಧವಾಗಿ ಜಾಗತಿಕ ಸರ್ಕಾರದ ಪರಿಕಲ್ಪನೆ ಇದೆಯೋ, ಆ ಲೋಹಿಯಾ ನೆನಪಿನಲ್ಲಿ ಸ್ಥಾಪಿತವಾಗಿರುವ ಡಾ. ರಾಮ ಮನೋಹರ ಟ್ರಸ್ಟ್‌ನ ಉದ್ಘಾಟನಾ ಸಮಾರಂಭದ ಸಂದರ್ಭದಲ್ಲಿ ಜಾಗತೀಕರಣ ಕುರಿತು ವ್ಯಾಪಕ ಚರ್ಚೆ ನಡೆಸುತ್ತಿರುವುದು ತುಂಬಾ ಔಚಿತ್ಯಪೂರ್ಣ ಎಂದು ನಾನು ಭಾವಿಸಿದ್ದೇನೆ. ಏಕೇಂದ್ರೆ, ಬೆಳಿಗ್ಗೆ ಕಿಷನ್ ಪಟ್ನಾಯಕ್ ಟ್ರಸ್ಟನ್ನು ಉದ್ಘಾಟನೆ ಮಾಡ್ತಾ ಮಾಡಿದ ಭಾಷಣದಲ್ಲಿ ಹೇಳಿದ ಹಾಗೆ ಜಾಗತೀಕರಣದ ಪರಿಕಲ್ಪನೆ ಬಗ್ಗೆ ಸಾಕಷ್ಟು ಗೊಂದಲಗಳಿವೆ, ಅಪವ್ಯಾಖ್ಯಾನಗಳಿವೆ. ಜಾಗತೀಕರಣ ಅಂದ್ರೆ ಜಗತ್ತನ್ನೇ ಒಟ್ಟುಗೂಡಿಸುವಂತಹ ಒಂದು ಸತ್ಯ, ಎಲ್ಲ ರಾಷ್ಟ್ರಗಳನ್ನು ಅಂತಾರಾಷ್ಟ್ರೀಯ ಒಪ್ಪಂದಗಳ ಮೂಲಕ ಒಂದು ಸಮಾನ ನೆಲೆಗೆ ತಂದು ಅಭಿವೃದ್ಧಿಯನ್ನು ಸುಗಮಗೊಳಿಸುವಂತಹ ಕಾರ್ಯಕ್ರಮ ಎಂಬೆಲ್ಲ ಅಭಿಪ್ರಾಯಗಳೂ ಪ್ರಚಲಿತದಲ್ಲಿವೆ. ಅಥವಾ ಅಂತಹ ಅಭಿಪ್ರಾಯಗಳನ್ನು ಬಿತ್ತಿ ಬೆಳೆಯಲಾಗುತ್ತಿದೆ. ಈ ಸಂಬಂಧ ನಾನು ಮೊದಲಿಗೆ ಒಂದು ಮುಖ್ಯ ಉಲ್ಲೇಖ ಮಾಡಿ ವಿಷಯವನ್ನು ಮುಂದುವರಿಸೋದಕ್ಕೆ ಇಷ್ಟಪಡ್ತೇನೆ. ಜಾಗತೀಕರಣಕ್ಕೂ ಜಾಗತಿಕ ಸರ್ಕಾರಕ್ಕೂ ಏನಾದರೂ ಸಂಬಂಧ ಇದ್ರೆ, ಅಂತಹ ಜಾಗತಿಕ ಸರ್ಕಾರ ಸ್ಥಾಪನೆಯಾಗಬೇಕಾದದ್ದು ಜಗತ್ತಿನ ಎಲ್ಲ ರಾಷ್ಟ್ರಗಳ ಸಾಮಾನ್ಯ ವೇದಿಕೆಯಾಗಿರುವ ವಿಶ್ವಸಂಸ್ಥೆ ಮೂಲಕ. ಆದರೆ ವಿಶ್ವಸಂಸ್ಥೆ ಇವೊತ್ತು ಯಾವ ಸ್ಥಿತಿಗೆ ಮುಟ್ಟಿದೆ ಅಂದ್ರೆ, ಕಳೆದ ಸಹಸ್ರಮಾನದ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಸಭೆಯಲ್ಲಿ ವಿಶ್ವಸಂಸ್ಥೆ ಕುರಿತ ಅಮೆರಿಕನ್ ಸಮಿತಿಯ ರಿಪಬ್ಲಿಕನ್ ಪಾರ್ಟಿಯ ನಾಯಕರು ಹೇಳಿದರು - "ವಿಶ್ವಸಂಸ್ಥೆ ಉಸಿರಾಡ್ತಿರೋದೇನೇ ಅಮೆರಿಕಾದ ತೆರಿಗೆದಾರರ-ಪ್ರಜೆಗಳ ಹಣದಿಂದ. ಅವರ ಹಿತಾಸಕ್ತಿಗಳಿಗೇನಾದ್ರೂ ಧಕ್ಕೆಯಾಗೋದಿದ್ರೆ ನಾವೂ ಈ ಹಣ ಪೂರೈಕೆಯನ್ನು ನಿಲ್ಲಿಸಿಬಿಡ್ತೀವಿ" ಅಂತ! ಆಶ್ಚರ್ಯ ಅಂದ್ರೆ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಸೇರಿದಂತೆ ಯಾರಿಂದಲೂ ಈ ಬೆದರಿಕೆಗೆ ಕಿಂಚಿತ್ತೂ ವಿರೋಧ ವ್ಯಕ್ತವಾಗಲಿಲ್ಲ. ಈ ರೀತಿ ಜಾಗತಿಕ ವೇದಿಕೆಗಳು blackmailಗೆ ಒಳಗಾಗಿ ಅಪ್ರಸ್ತುತಗೊಳ್ಳುತ್ತಿರುವ ಸಂದರ್ಭದಲ್ಲಿ ಜಾಗತೀಕರಣಕ್ಕೂ ಜಾಗತಿಕ ಸರ್ಕಾರಕ್ಕೂ ದೂರದ ಸಂಬಂಧ ಕಲ್ಪಿಸುವುದೂ ನಮಗೆ ನಾವೇ ಮಾಡಿಕೊಳ್ಳುವ ಮೋಸಾಂತ ನನಗನ್ನಿಸ್ತದೆ.

ಬೆಳಗಿನ ಉದ್ಘಾಟನಾ ಸಮಾರಂಭದಲ್ಲಿ ಬೇರೆ ಬೇರೆ ಭಾಷಣಕಾರರು ಜಾಗತೀಕರಣದ ಆರ್ಥಿಕ ಮತ್ತು ರಾಜಕೀಯ ಆಯಾಮಗಳ ಬಗ್ಗೆ ಮಾತನಾಡಿದ್ದಾರೆ; ಅದರ ಹಿಂದಿರುವ ಶೋಷಣಾ ರಾಜಕೀಯವನ್ನು ವಿವರಿಸಿದ್ದಾರೆ. ಆದ್ದರಿಂದ ಈ ಬಗೆಗೆ ನಾನು ಹೆಚ್ಚಿಗೆ ತಾತ್ವಿಕ ಜಿಜ್ಞಾಸೆಗೆ ಹೋಗದೆ; ಇವೊತ್ತು ನನ್ನ ಸುತ್ತಮುತ್ತ ನಡೆಯುತ್ತಿರುವ ವಿದ್ಯಮಾನಗಳು ನನ್ನ ಅಂತರಂಗವನ್ನು ಕಲಕುತ್ತಿರುವ, ನನ್ನ ಅಸ್ತಿತ್ವದ ಮೇಲೆ ಉಂಟುಮಾಡುತ್ತಿರುವ ಪರಿಣಾಮಗಳ ನೆಲೆಯಲ್ಲಿ ಈ ದೇಶದ ಒಬ್ಬ ಮಧ್ಯಮ ವರ್ಗದ ಪ್ರಜೆಯಾಗಿ ಸ್ಪಂದಿಸುವ ಮೂಲಕ ಜಾಗತೀಕರಣವನ್ನು ನಾನು ಹೇಗೆ ಗ್ರಹಿಸ್ತಾ ಇದ್ದೇನೆ, ಅದರ ಅಪಾಯ - ಆತಂಕಗಳನ್ನು ಹೇಗೆ ಎದುರುಗೊಳ್ತಾ ಇದ್ದೇನೆ ಅನ್ನೋದರ ಬಗ್ಗೆ ಮಾತಾಡೋದಕ್ಕೆ ಇಷ್ಟಪಡ್ತೇನೆ. ಬೆಳಿಗ್ಗೆ ಕೆ. ರಾಮದಾಸ್ ಅವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಜಾಗತೀಕರಣ ತುಂಬಾ amorphous ಆದಂತಹ ಅಮೂರ್ತವಾದಂತಹ ಪರಿಕಲ್ಪನೇಂತ ಹೇಳಿದರು. ಹಾಗೇನೇ ಕಿಷನ್ ಪಟ್ನಾಯಕ್ ಅವರು ಅದನ್ನು ಸ್ಪಷ್ಟವಾಗಿ ವ್ಯಾಖ್ಯಾನ ಮಾಡೋದು ಕಷ್ಟ; ಅದಕ್ಕೇನೇ ಅದರ ಬಗ್ಗೆ ಎರಡು ವಿರುದ್ಧ ರೀತಿಯ ಅಭಿಪ್ರಾಯಗಳು ಕೇಳಿ ಬರ್ತಾ ಇರೋ ಅಪಾಯದ ಬಗ್ಗೆ ಮಾತಾಡಿದರು. ಆದರೆ ಕಳೆದ ೨೫-೩೦ ವರ್ಷಗಳಿಂದ ಸಮಾಜವಾದಿ ತತ್ವದಲ್ಲಿ ನಂಬಿಕೆಯುಳ್ಳವನಾಗಿ ಜಾಗತೀಕರಣ ನನಗೆ, ನಮ್ಮೆಲ್ಲ ಎಡಪಂಥೀಯ ರಾಜಕಾರಣದ ವೈಫಲ್ಯ ಅಥವಾ ದರಿದ್ರೀಕರಣದ ಆತ್ಯಂತಿಕ ಪರಿಣಾಮ ರೂಪವಾಗಿ ಕಾಣ್ತಾ ಇದೆ. ನೇರವಾಗಿ ಹೇಳೋದಾದ್ರೆ, ಇದು ಪರ್ಯಾಯಗಳೆಲ್ಲ ಕುಸಿದುಬಿದ್ದಿರುವ ಸಂದರ್ಭದಲ್ಲಿ ವಿರಾಜಮಾನವಾಗಿರುವ ಒಂದು ನಿರ್ದಿಷ್ಟ ಆರ್ಥಿಕ ನೀತಿಯ ಗುತ್ತೇದಾರಿಕೆ. ಇನ್ನೂ ಸ್ಪಷ್ಟವಾಗಿ ಹೇಳೋದಾದ್ರೆ, ಜಾಗತೀಕರಣ ಅಂದ್ರೆ ಮತ್ತೇನೂ ಅಲ್ಲ, ಸವಾಲೇ ಇಲ್ಲದ ಮುಕ್ತ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ಅನಾವರಣ.

ಜಾಗತೀಕರಣ ಈ ದೃಷ್ಟಿಯಿಂದ ಈಗ ನಮ್ಮ ಮುಂದೆ ಧುತ್ತೆಂದು ಹಾಜರಾಗಿರುವ ವಿದ್ಯಮಾನ ಅಲ್ಲ. ಕಳೆದ ೧೦ ವರ್ಷಗಳಲ್ಲಿ – ನಮ್ಮ ದೇಶದ ಸರ್ಕಾರಿ ಚಿನ್ನವನ್ನೆಲ್ಲ ಅಡವಿಟ್ಟು ನಮ್ಮ ಆರ್ಥಿಕ ವ್ಯವಸ್ಥೆಯನ್ನು ರಕ್ಷಿಸಿಕೊಳ್ಳಬೇಕಾದ ಸಂದರ್ಭದಿಂದೀಚೆಗೆ - ಅದು ನಿಧಾನವಾಗಿ ವಿಕಾಸವಾಗ್ತಾ ಬಂದು, ಈಗ ಅದರ ಪರಿಣಾಮಗಳು ನಮ್ಮನ್ನು ಕಂಗೆಡಿಸುವ ಮಟ್ಟ ಮುಟ್ಟಿದೆ ಅಷ್ಟೆ. ಕಳೆದ ೫೫ ವರ್ಷಗಳಲ್ಲಿ ನಾವು ಅನುಸರಿಸಿಕೊಂಡು ಬಂದಂತಹ ಆರ್ಥಿಕ ನೀತಿ, ನಮ್ಮ ಆದ್ಯತೆಗಳು, ನಾವು ಆಯ್ದುಕೊಂಡ ಅಭಿವೃದ್ಧಿ ಮಾದರಿ, ಅದನ್ನು ಅನುಷ್ಠಾನಗೊಳಿಸಿದ ರೀತಿ ಇವುಗಳೆಲ್ಲದರ ಪರಿಣಾಮ ಇವೊತ್ತು ಏನಾಗಿದೇಂದ್ರೆ ಮುಕ್ತ ಮಾರುಕಟ್ಟೆ ನೀತಿ ಮಾತ್ರ ಬೇಗ ಫಲಗಳನ್ನೂ ಕೊಡಬಲ್ಲದು - ಯಾರಿಗೆ ಎಷ್ಟು ಎಂಬ ಪ್ರಶ್ನೆಗೆ ವ್ಯವಧಾನವಿಲ್ಲ - ಅದು ಮಾತ್ರ ವಾಸ್ತವಿಕವಾದದ್ದು, ಕಾರ್ಯಸಾಧ್ಯವಾದದ್ದು ಎಂಬಂತಹ ಅಭಿಪ್ರಾಯ ಜನಸಾಮಾನ್ಯರಲ್ಲೂ ಬರುವಂತಾಗಿದೆ. ಇದನ್ನು ನಾನು ಬಂಡವಾಳಶಾಹಿ ಆರ್ಥಿಕ ನೀತಿಯ ವಿಜಯ ಅನ್ನೋದಕ್ಕಿಂತ ಜಗತ್ತಿನ ಎಡಪಂಥೀಯ ರಾಜಕಾರಣದ - ಅದರಲ್ಲೂ ಎಡಪಂಥೀಯ ರಾಜಕಾರಣದ ಜಾಗತಿಕ ನಾಯಕತ್ವ ವಹಿಸಿದ್ದ ಸೋವಿಯತ್ ಒಕ್ಕೂಟ ಕುಸಿದುಬಿದ್ದ ನಂತರದ - ವೈಫಲ್ಯ ಅಂತ ಕರೀತೀನಿ. ಹಾಗಾಗಿ ನಮ್ಮ ಎಡಪಂಥೀಯ ತತ್ವ ಮೀಮಾಂಸಕರು

ಬಂಡವಾಳಶಾಹಿ ಆರ್ಥಿಕತೆಯ ವೈರುಧ್ಯಗಳನ್ನು ವಿಶ್ಲೇಷಿಸುವುದನ್ನು ಸ್ವಲ್ಪ ಸಮಯ ನಿಲ್ಲಿಸಿ ಎಡಪಂಥೀಯ ತತ್ವ ಮತ್ತು ರಾಜಕಾರಣದ ವಿಫಲತೆಯ ಹಿಂದಿರುವ ಐಬುಗಳೇನು ಎಂಬುದನ್ನು ಗುರುತಿಸಲು ಮುಂದಾಗಬೇಕೆಂದು ಕೇಳಿಕೊಳ್ತೇನೆ.

ಹೀಗೆ ಎಡಪಂಥೀಯ ರಾಜಕಾರಣದ ವಿಶ್ವಾಸಾರ್ಹತೆಯೇ ಕುಂದು ಹೋಗಿರುವ ಸಂದರ್ಭದಲ್ಲಿ ಏಕೈಕ ಆರ್ಥಿಕ ನೀತಿಯಾಗಿ ವಿಜೃಂಭಿಸುತ್ತಿರುವ ಮುಕ್ತ ಮಾರುಕಟ್ಟೆ ನೀತಿಯನ್ನೇ ಇಂದು ಅಮೇರಿಕಾ ಪ್ರೇರಿತ ಆರ್ಥಿಕ ತಜ್ಞರು, ಆಡಳಿತಗಾರರು ಹಾಗೂ ಕೆಲವು ಬುದ್ಧಿಜೀವಿಗಳು ಜಾಗತೀಕರಣ ಎಂಬ ಉದಾರ ಹೆಸರಿನಿಂದ ಕರೆದು ನಮ್ಮ ದೇಶದ ಮಧ್ಯಮ ವರ್ಗದಲ್ಲಿ ಸಮೃದ್ಧ ಭಾರತದ ಕನಸನ್ನು ಬಿತ್ತಿದ್ದಾರೆ. ಇದಕ್ಕೆ ಪೂರಕವಾಗಿ, ಬೆಳಿಗ್ಗೆ ಕಿಷನ್ ಪಟ್ನಾಯಕ್ ಹೇಳಿದ ಹಾಗೆ ವಿಶ್ವಬ್ಯಾಂಕ್ ಹಾಗೂ ಅಂತಾರಾಷ್ಟ್ರೀಯ ಹಣಕಾಸು ನಿಧಿ ಇತ್ಯಾದಿ 'ಅಭಿವೃದ್ಧಿ ಪೋಷಕ' ಸಂಸ್ಥೆಗಳು ತಂತಮ್ಮ ನೀತಿ-ಆದ್ಯತೆಗಳನ್ನು ನಿರ್ಧರಿಸಿಕೊಂಡು ಹಣದ ಭಾರಿ ಥೈಲಿಗಳೊಂದಿಗೆ ಬರ್‍ತಾ ಇವೆ. ಅವು ಈ ಮೂರನೇ ಜಗತ್ತಿನ ಬಡದೇಶಗಳು ಏನು ಅಭಿವೃದ್ಧಿ ಹಂಬಲ ಇಟ್ಟುಕೊಂಡಿದ್ದವು–ಆದರೆ ಅದಾಗದೆ ಹತಾಶೆಗೊಂಡಿವೆ–ಆ ಹತಾಶೆಯ ಆಧಾರದ ಮೇಲೆ ಅವುಗಳಲ್ಲಿ ದಿಢೀರ್ ಲೌಕಿಕ ಅಭಿವೃದ್ಧಿಯ - ಇನ್ನು ಐವತ್ತು ವರ್ಷಗಳಲ್ಲಿ ಭಾರತ ಜಗತ್ತಿನ ಅತಿ ದೊಡ್ಡ ಆರ್ಥಿಕ ಶಕ್ತಿಯಾಗಿ ಬೆಳೆದಿರುತ್ತದೆ - ಕನಸನ್ನು ಬಿತ್ತಿ ಈ ಮೂರನೇ ಜಗತ್ತಿನ ಮನುಷ್ಯನ ಮನಸ್ಸನ್ನು ಆಳತಕ್ಕಂತಹ ಹುನ್ನಾರ ಮಾಡುತ್ತಿರುವಂತೆ ತೋರುತ್ತಿದೆ.

ಈ ಮುಕ್ತ ಬಂಡವಾಳಶಾಹಿ ಆರ್ಥಿಕ ನೀತಿಯ ಮುಖ್ಯ ಚೈತನ್ಯ ಅಂದರೆ ಅದರ ಸದಾ ಹೊಸದಾಗುತ್ತಿರುವ - ಆದರೆ ತಾನು ಅದರ ಸಂಪೂರ್ಣ ಬಳಕೆ ಮಾಡಿ ಸವಕಲಾಗುವ ತನಕ ಬಡ ದೇಶಗಳಿಗೆ ವರ್ಗಾಯಿಸದ - ಆಧುನಿಕ ತಂತ್ರಜ್ಞಾನ ಮತ್ತು ಅದರ ಫಲಗಳು, ವಿಶೇಷವಾಗಿ ಐಷಾರಾಮಿ ವಸ್ತುಗಳು. ಅದರ ಗಮನ ಮನುಷ್ಯನ ತಣಿಯದ ಸುಖದ ದಾಹ. ಭಾರತದಂತಹ, ಸಾಧಿಸಲಾಗದ ವೈರಾಗ್ಯ ಮತ್ತು ತಣಿಯದ ಸುಖದ ದಾಹಗಳ ನಡುವೆ ಹೊಯ್ದಾಡುತ್ತಿರುವ ದೇಶದ ಮಾರುಕಟ್ಟೆಗೆ ವೈವಿಧ್ಯಮಯ ಗ್ರಾಹಕ ವಸ್ತುಗಳು ಬೀದಿ ಬೀದಿಗಳಿಗೆ – ಅದೂ ಎಲ್ಲ ಪರ್ಯಾಯಗಳೂ ಮನಸ್ಸಿನಿಂದ ಖಾಲಿಯಾಗ್ತಿದ್ದಾಗ - ಬಂದು ಬಿದ್ದರೆ, ಮನುಷ್ಯ ವಿಚಲಿತನಾಗುವುದು, ಅಲ್ಲಾಡುವುದು ಸಹಜವೇ ಎಂದು ನಾನು ಭಾವಿಸಿದ್ದೇನೆ. ಅಲ್ಲದೆ ಮನಸ್ಸಿಗೆ ಒಂದು ರೀತಿಯ ಮಂಕು ಕವಿಯುವುದೂ ಸಹಜ. ನಮಗೆಲ್ಲರಿಗೂ ಆಗಿರುವುದು ಅದೇನೇ. ಬೆಳಗ್ಗೆ ದೇವನೂರ ಮಹಾದೇವ ಅವರು ಹೇಳಿದ ಹಾಗೆ 'ತರಣಿಯ ಹುಳು ತನ್ನ ಸ್ನೇಹಕ್ಕೆ ಮನೆಯ ಮಾಡಿ ತನ್ನ ನೂಲು ತನ್ನನ್ನೇ ಸುತ್ತಿ ಸಾವಂತೆ....' ಕಳೆದ ೧೦ ವರ್ಷಗಳಲ್ಲಿ ಜಾಗತೀಕರಣದ ಫಲಗಳನ್ನು ಅನುಭವಿಸುತ್ತಲೇ ಬಂದು ನಮ್ಮ ಮನಸ್ಸಿಗೆ ಮಂಕು ಕವಿಸಿಕೊಂಡಿದ್ದೇವೆ. ಈಗ ಜಾಗತೀಕರಣದ ಆತ್ಯಂತಿಕ ರೂಪ ನಮ್ಮ ಅಸ್ತಿತ್ವದ ನಿಜತ್ವವನ್ನೇ ಅಲ್ಲಾಡಿಸುವ ನಿರ್ಣಾಯಕ ಸಂದರ್ಭ ಬಂದಾಗ, ಅದನ್ನು ಮುಖಾಮುಖಿಗೊಳಿಸಿಕೊಳ್ಳುವ ಆತ್ಮಸ್ಥೈರ್ಯವನ್ನು - ಮನಃ ಸ್ಪಷ್ಟತೆಯನ್ನೇ ಕಳೆದುಕೊಂಡು ಕೂತಿದ್ದೇವೆ.

ಯಾಕೆ ಹೀಗಾಯ್ತು? ಜಾಗತೀಕರಣ ನಮ್ಮ ಅಸ್ತಿತ್ವ-ನಿಜತ್ವಗಳನ್ನು ಅಲ್ಲಾಡಿಸುತ್ತಿರುವುದು ಎಷ್ಟು ನಿಜ? ಆ ತುದಿಯ ಪೂರ್ಣಚಂದ್ರ ತೇಜಸ್ವಿ, ಈ ತುದಿಯ ಮೊಗಳ್ಳಿ ಗಣೇಶ್‌ರಂತಹ ಚಿಂತಕರು ಜಾಗತೀಕರಣದ ಪರವಾಗಿ ವಾದಿಸಿದ್ದಾರಲ್ಲಾ? ಈ ಎಲ್ಲ ಪ್ರಶ್ನೆಗಳ ಮಧ್ಯೆ ನನಗನ್ನಿಸೋದು, ಯಾವುದೇ ಒಂದು ತತ್ವ ಅಥವಾ ವಿದ್ಯಮಾನ ಒಳ್ಳೆಯದೋ, ಕೆಟ್ಟದ್ದೋ ಅನ್ನೋದನ್ನ ಅದು ವ್ಯಕ್ತಿಯ ಅಂತಃಕರಣ, ಸಮಾಜದ ಅಂತಃಕರಣ ಮತ್ತು ಪ್ರಕೃತಿಯ ವೈವಿಧ್ಯದ ಮೇಲೆ ಏನು ಪರಿಣಾಮ ಮಾಡ್ತಾ ಇದೇಂತ ಗಮನಿಸಿ ತೀರ್ಮಾನಿಸಬೇಕಾಗುತ್ತದೆ.

ಪ್ರತಿಯೊಂದು ಸಮಾಜಕ್ಕೂ ಒಂದು ಧಾರಣಾಶಕ್ತಿ ಮತ್ತು ಶೀಲ ಅನ್ನೋದಿರುತ್ತೆ. ಧಾರಣಾಶಕ್ತಿ ಅಂದರೆ ತನ್ನನ್ನು ತಾನು ನಡೆಸಿಕೊಂಡು ಹೋಗುವಂತಹ, ಅಂದರೆ ಸಮಾಜವೊಂದರ ತಾಳಿಕೆ ಮತ್ತು ಬಾಳಿಕೆಯ ಚೈತನ್ಯ ಶಕ್ತಿ. ಶೀಲ ಅಂದರೆ ಆ ಸಮಾಜದ ವ್ಯಕ್ತಿಯ ನಡೆ-ನುಡಿಗಳ ಸಂಬಂಧದ ಮತ್ತು ವ್ಯಕ್ತಿ - ಸಮಾಜಗಳ ಸಂಬಂಧದ ಒಂದು ನೀತಿ ಸಂಹಿತೆ. ಈ ಧಾರಣ ಶಕ್ತಿ ಮತ್ತು ಶೀಲ ಆ ಸಮಾಜದ ಪರಂಪರೆ ಮತ್ತು ರಚನೆಗೆ ತಕ್ಕಂತೆ ವಿಕಾಸವಾಗ್ತಾ ಇರುತ್ತೆ. ಜಾಗತೀಕರಣ ನಮ್ಮ ಸಮಾಜದ ಧಾರಣಾಶಕ್ತಿ ಮತ್ತು ಶೀಲಗಳ ಮೇಲೆ ಏನು ಪರಿಣಾಮ ಉಂಟು ಮಾಡಿದೆ ಎಂಬುದನ್ನು ಸ್ಥೂಲವಾಗಿಯಾದರೂ ಪರಿಶೀಲಿಸಿದರೆ, ಅದನ್ನು ನಾವು ಒಪ್ಪಬಹುದೋ ಇಲ್ಲವೋ ಎನ್ನುವುದನ್ನು ತೀರ್ಮಾನಿಸಬಹುದು. ಸಮಾನತೆಯನ್ನು ಬೋಧಿಸುವ ಸಂವಿಧಾನವನ್ನು ನಾವು ಅರ್ಧ ಶತಮಾನ ಇಟ್ಟುಕೊಂಡಿದ್ದರೂ ಮೂಲಭೂತವಾಗಿ ನಮ್ಮ ಸಮಾಜ ಇನ್ನೂ feudal ಮನಃಸ್ಥಿತಿಯಿಂದ ಹೊರಬರಲು ನಿರಾಕರಿಸುತ್ತಿರುವ ಸಮಾಜವೇ ಆಗಿದೆ. ಇಂತಹ ಸಮಾಜವನ್ನು ಸಂರಕ್ಷಿಸಿಕೊಂಡು ಬರುತ್ತಿರುವ ನಮ್ಮ ನಾಯಕಗಣ ಮತ್ತು ನೌಕರಶಾಹಿ, ಜಾಗತೀಕರಣವನ್ನು ಹೇಗೆ deal ಮಾಡ್ತಾ ಇದೇಂತ ಗಮನಿಸಿದರೆ ಯಾರಿಗಾದರೂ ಗಾಬರಿಯಾಗುತ್ತೆ. ಕೆಲವೇ ದಿನಗಳ ಹಿಂದೆ ಹಿರಿಯರ - ಬುದ್ಧಿಜೀವಿಗಳ ಸದನ ಎನ್ನಿಸಿಕೊಂಡಿರುವ ನಮ್ಮ ರಾಜ್ಯಸಭೆ ಎರಡನೇ ಪೇಟೆಂಟ್ ಮಸೂದೆಯನ್ನು ಒಂದು ಶಬ್ದದಷ್ಟೂ ಚರ್ಚೆ ಮಾಡದೆ ಒಪ್ಪಿಗೆ ನೀಡಿ ಕಳಿಸಿದೆ ಎಂಬುದು ಎಷ್ಟು ಜನಕ್ಕೆ ಗೊತ್ತು? ಅದಕ್ಕೆ ಮುಖ್ಯ ಕಾರಣ ಆ ಮಸೂದೆಯ ಪರಿಭಾಷೆಯೇ ನಮ್ಮ ಜನ ಪ್ರತಿನಿಧಿಗಳಿಗೆ ಹೊಸದು; ಅದನ್ನು ಹೇಗೂ ಕಾನೂನು ಇಲಾಖೆ ಪರಿಶೀಲಿಸಿದೆಯಲ್ಲ! ಆದರೆ ಕಾನೂನು ಇಲಾಖೆಯನ್ನು ನಿಯಂತ್ರಿಸುವವರು ಯಾರು ಎಂದು ಕೇಳುವವರು ಯಾರು?

ಈಗ ಅಭಿವೃದ್ಧಿ ಹೆಸರಿನಲ್ಲಿ ಹಣದ ಹೊಳೆಯೇ ಹರಿದು ಬರ್ತಾ ಇದೆ. ವಿಶ್ವಬ್ಯಾಂಕ್‌ನಿಂದ ಹಾಗೂ ಇತರ ಅಂತಾರಾಷ್ಟ್ರೀಯ ಅಭಿವೃದ್ಧಿ ನಿಧಿಗಳಿಂದ. ಈ ಅಭಿವೃದ್ಧಿ ಎಂತಹುದು, ಯಾವ ಜನವರ್ಗಕ್ಕಾಗಿ ಎಂಬುದಕ್ಕೆ ಬೆಳಿಗ್ಗೆ ಕಿಷನ್ ಪಟ್ನಾಯಕ್ ಸೂಚ್ಯವಾಗಿ ಹೇಳಿದ್ದಾರೆ - ಉತ್ಪಾದನಾ ಕ್ಷೇತ್ರಕ್ಕಲ್ಲ, ದಲ್ಲಾಳಿ-ಕಮೀಷನ್ ವ್ಯವಹಾರಗಳಿಗೆ ಅಮೆರಿಕಾ ಕೊಟ್ಟಿರುವ ಪ್ರತಿಷ್ಠಿತ ಹೆಸರಾದ 'ಸೇವೆಗಳು' (Services) ಕ್ಷೇತ್ರದ ಅಭಿವೃದ್ಧಿಗಾಗಿ. ಅವರ ಗ್ರಾಹಕ ಸರಕುಗಳು ನಮ್ಮ ಮಾರುಕಟ್ಟೆಯಲ್ಲಿ ಆಕರ್ಷಕವಾಗಿ ಚುರುಕಾಗಿ ಬಿಕರಿಯಾಗುವಂತಹ ಮಾರುಕಟ್ಟೆ

ವಾತಾವರಣ ನಿರ್ಮಿಸಲು ಬೇಕಾದ ಸೌಲಭ್ಯಗಳ ನಿರ್ಮಾಣಕ್ಕಾಗಿ. ಇದಕ್ಕಾಗಿ ಬರುವ ಹಣದ ಪ್ರಮಾಣ ಎಷ್ಟು? ಅದನ್ನು ನಿರ್ವಹಿಸುವವರು ಯಾರು? ಪ್ರತಿಯೊಂದು ಸಮಾಜಕ್ಕೂ ಅದು ನಿರ್ವಹಿಸಬಹುದಾದ ಹಣದ ವ್ಯವಹಾರದ ಒಂದು ಮಟ್ಟ ಇರುತ್ತೆ. ಅದಕ್ಕಿಂತ ಹೆಚ್ಚು ಹಣ ಬಂದು ಬಿದ್ರೆ ಅದು ತನ್ನ ಶೀಲವನ್ನ ಕಳೆದುಕೊಳ್ಳಲಾರಂಭಿಸುತ್ತದೆ. ಇದು ನೈತಿಕ ಪ್ರಶ್ನೆ ಅಲ್ಲ, ಆಂತರಿಕ ಸಾಮರ್ಥ್ಯದ ಪ್ರಶ್ನೆ, ಒಂದು ಸಮಾಜದ ಧಾರಣಾಶಕ್ತಿಯ ಪ್ರಶ್ನೆ.

ನಾವು ಕಳೆದ ೧೦ ವರ್ಷಗಳಲ್ಲಿ ನಡೆದಿರುವ ಆರ್ಥಿಕ ಹಗರಣಗಳಲ್ಲಿ ಕಳೆದುಹೋಗಿರುವ ಹಣದ ಪ್ರಮಾಣವನ್ನು ಗಮನಿಸಿದರೆ, ಅದು ಬ್ಯಾಂಕ್ ಹಗರಣ ಆಗಿರಬಹುದು, ಷೇರು ಹಗರಣ ಇರಬಹುದು, ಯು.ಟಿ.ಐ. ಹಗರಣ ಇರಬಹುದು - ಸ್ವಾತಂತ್ರ್ಯೋತ್ತರ ಭಾರತದ ಇತರ ಭ್ರಷ್ಟಾಚಾರದ ಹಗರಣಗಳೆಲ್ಲ ಕ್ಷುದ್ರವಾಗಿ ಕಾಣ್ತವೆ. ಇದರಲ್ಲಿ ಎಲ್ಲ ಇಲಾಖೆಗಳಲ್ಲಿ ನಡೆಯುತ್ತಿರುವ ಕಂಪ್ಯೂಟರೀಕರಣದ ಕೋಟ್ಯಾಂತರ ರೂಪಾಯಿಗಳ ದುರ್ವ್ಯವಹಾರ ಸೇರಿಲ್ಲ. ಹಾಗಾಗಿ ಇವೊತ್ತು ದೇಶದಲ್ಲಿ ನಡೆಯುತ್ತಿರುವುದು ಅಭಿವೃದ್ಧಿಯೋ, ಲೆಕ್ಕಕ್ಕೆ ಸಿಗದಂತಹ ಭ್ರಷ್ಟಾಚಾರವೋ ಅಥವಾ ಭಾರತೀಯ ಪ್ರಜೆಯ ಶೀಲಹರಣವೋ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕಾಗಿದೆ. ಇದು ದೇಶದ characterನ ಪ್ರಶ್ನೆ, ಮನುಷ್ಯನ ಔಚಿತ್ಯಪ್ರಜ್ಞೆಯ ನಾಶದ ಪ್ರಶ್ನೆ. ನಮಗೆ ನಿಜವಾಗಿ ಎಷ್ಟು ಹಣ ಬೇಕು, ಯಾಕೆ ಬೇಕು? ನಮಗೆ ೨೪ ತಾಸುಗಳೂ ನೂರಾರು ವಾಹಿನಿಗಳ ಟಿವಿ ಬೇಕಾ? ಅದು ನಮ್ಮ ಕೌಟುಂಬಿಕ ಹಾಗೂ ಸಾಮಾಜಿಕ ಪರಿಸರದ ಮೇಲೆ ಉಂಟುಮಾಡಿರುವ ಪರಿಣಾಮಗಳು ಎಂತಹವು? ಎಲ್ಲ ಕಛೇರಿಗಳಿಗೂ ಅಷ್ಟು ಸಂಕೀರ್ಣವಾದ, ಅಷ್ಟು ದುಬಾರಿಯಾದ ಕಂಪ್ಯೂಟರ್‌ಗಳು ಬೇಕಾ? ಸಮೃದ್ಧಿ ಎಂದರೆ ಇದೇನೇ? ಸಮೃದ್ಧಿ ಎಂದರೆ ಅಮೆರಿಕಾದಲ್ಲೇ ಬೇರೆ ಅರ್ಥ, ಈ ದೇಶದಲ್ಲೇ ಬೇರೆ ಅರ್ಥ ಹೊರಡುತ್ತದಲ್ಲವೇ?

ಯಾವುದೇ ಒಂದು ನಾಗರೀಕತೆ ಒಂದು ಸಮಾಜವನ್ನು ಮುನ್ನಡೆಸಬಲ್ಲದೋ ಇಲ್ಲವೋ ಎಂಬುದಕ್ಕೆ ಒಂದು ಸಣ್ಣ ಪರೀಕ್ಷೆ ಇದೆ - ಅದು ಸಮಾಜದಲ್ಲಿ ಎಂತಹ ದಾಹ ಸೃಷ್ಟಿಸುತ್ತದೆ ಮತ್ತು ಆ ದಾಹವನ್ನು ಆ ಸಮಾಜದ ಶಾಂತಿ ಕದಡದಂತೆ ತಣಿಸಲು ಅದಕ್ಕೆ ಸಾಧ್ಯವೇ ಎಂಬ ಪ್ರಶ್ನೆಯನ್ನು ಅದು ಉತ್ತರಿಸಬೇಕಾಗುತ್ತದೆ. ಈ ಜಾಗತೀಕರಣದ ನಾಗರೀಕತೆ - ಯಾವುದನ್ನು ಮಹಾತ್ಮಗಾಂಧಿ ಆಧುನಿಕ ಅಥವಾ ಪಶ್ಚಿಮದ ನಾಗರೀಕತೆ ಅಂತ ಕರೆದ್ರೋ ಅದರ ಅನಿರ್ಬಂಧಿತ ರೂಪ - ಇವೊತ್ತು ಏನು ಮಾಡ್ತಾ ಇದೇಂದ್ರೆ, ಅದು ಈ ದೇಶದ ಸಾಮಾನ್ಯ ಪ್ರಜೆಯಲ್ಲಿ ತಾನು ನಿರ್ವಹಿಸಲಾಗದಂತಹ ದಾಹ ಮತ್ತು ಒಂದು ದೊಡ್ಡ ಜನವರ್ಗ ಅದರ ಹತ್ತಿರಕ್ಕೂ ಬರಲಾಗದಂತಹ ಝುಗಝುಗಿಸುವ ಗ್ರಾಹಕ ಮಾರುಕಟ್ಟೆಯನ್ನು ಸೃಷ್ಟಿ ಮಾಡ್ತಾ ಇದೆ. ಭಾರತದ ಸರಾಸರಿ ಪ್ರಜೆಯ ಸುಖದ ನಿರೀಕ್ಷೆಯ ಮತ್ತು ತಣಿವಿನ ಮಟ್ಟ ನಿರಂತರವಾಗಿ ಏರ್ತಾನೇ ಇದೆ. ಇದರಿಂದಾಗಿ ಅಪರಾಧಗಳ ಸಂಖ್ಯೆ ಮತ್ತು ವೈವಿಧ್ಯ ದಿಢೀರನೆ ಏರ್ತಾ ಇದೆ. ಎಲ್ಲೆಲ್ಲೂ ಈಗ ರಕ್ಷಣಾ ಕೋಟೆಗಳೇ, ವೈಯಕ್ತಿಕ ಮತ್ತು ಸರ್ಕಾರಿ ಎರಡೂ. ಇದಾವುದರ ಬಗ್ಗೆಯೂ ತಲೆ ಕೆಡಿಸಿಕೊಳ್ಳದ ಬಡವರು, ಪಾರಂಪರಿಕ ಸರಳ ಜೀವಿಗಳು ಮತ್ತು ನಿಜವಾದ

ಗಾಂಧಿವಾದಿಗಳ ಹೊರತಾಗಿ ಇನ್ನಾರಿಗೂ ನೆಮ್ಮದಿ ಇದ್ದಂತಿಲ್ಲ. ಅದಕ್ಕೇ ಮಾನಸಿಕ ಸಲಹಾ ಕೇಂದ್ರಗಳು, ಜಪ-ತಪ-ಧ್ಯಾನ ಕೇಂದ್ರಗಳು ಜನರನ್ನು ಆಕರ್ಷಿಸುತ್ತಿವೆ. ಇದೊಂದು ತಳವಿಲ್ಲದ ಬಾವಿಗೆ ಬೀಳುವ, ಸದಾ ಒಳಕ್ಕೇ ಎಳೆದುಕೊಳ್ಳುವಂತಹ ವಿಷವ್ಯೂಹ ಪ್ರವೇಶಿಸುವ ಅಪಾಯವೇ ಆಗಿದೆ.

ಈ ಅಪಾಯದ ಒಂದೆ ಸಮಾಜವಾದಿ ಆಂದೋಳನದ ದೊಡ್ಡ ವೈಫಲ್ಯವೂ ಇದೆ. ಕಮ್ಯೂನಿಸಂ ಮತ್ತು ಬಂಡವಾಳಶಾಹಿ ಎರಡನ್ನೂ ಒಂದೇ ನಾಗರೀಕತೆಯ ಎರಡು ಮುಖಗಳು ಎಂದು ವಿಶ್ಲೇಷಿಸಿ, ಈ ನಾಗರೀಕತೆಯ ಹಿಂದಿರುವ, ಭಾರತ ಭರಿಸಲಾಗದಂತಹ ever raising standard of living ಪ್ರೇರಣೆಯ ಬದಲಾಗಿ decent standard of living ಪ್ರೇರಣೆಯ ಸಮಾಜವಾದಿ ನಾಗರೀಕತೆಯನ್ನು ಪ್ರತಿಪಾದಿಸಿದ ಸಮಾಜವಾದಿಗಳು ಅಂತಹ ನಾಗರೀಕತೆಗೆ ಅಸ್ತಿಭಾರ ಹಾಕಲೂ ಅಸಮರ್ಥರಾಗಿ ಹೋದರು. Decent standard ಎಂಬುದನ್ನೂ ಸ್ಪಷ್ಟವಾಗಿ ವ್ಯಾಖ್ಯಾನ ಮಾಡದಾದರು. ಪ್ರಕೃತಿಯನ್ನೂ - ನೆಲ, ಜಲ, ವಾಯುಗಳನ್ನು - ಮನುಷ್ಯನ ಕೌಶಲ್ಯವನ್ನೂ ನಾಶ ಮಾಡುವಂತಹ ಸಾಮೂಹಿಕ ಉತ್ಪಾದನೆಯ ಆಧುನಿಕ ತಂತ್ರಜ್ಞಾನಕ್ಕೆ ಬದಲಾಗಿ ಸ್ಥಳೀಯ ಸಂಪನ್ಮೂಲ ಮತ್ತು ಕೌಶಲ್ಯಗಳನ್ನು ಬಳಸಿಕೊಳ್ಳಲು ಸಾಧ್ಯವಾಗುವಂತಹ - ಆದರೆ ಮನುಷ್ಯನನ್ನು ಪ್ರಾಣಿಯಂತೆ ದುಡಿಸದಂತಹ - ಸಣ್ಣ ಪ್ರಮಾಣದ ತಂತ್ರಜ್ಞಾನ ಮತ್ತು ಅಧಿಕಾರ ವಿಕೇಂದ್ರೀಕರಣ ಕಲ್ಪನೆಗಳ ಆಧಾರದ ಮೇಲೆ ಪ್ರತಿಪಾದಿತವಾದ ಈ ನಾಗರೀಕತೆಯ ಬೀಜ ಚಿಗುರೊಡೆಯಲೇ ಇಲ್ಲ. ಬಹಳಷ್ಟು ಸಮಾಜವಾದಿಗಳು - ವಿಶೇಷವಾಗಿ ರಾಜಕಾರಣಿಗಳು - ಐಷಾರಾಮಿ ಜೀವನಕ್ಕೆ ಬಿದ್ದು ಇಂದು ಜಾಗತೀಕರಣವನ್ನು ಹುಳ್ಳುಳ್ಳ ಮನಸ್ಸಿನಿಂದ ಸ್ವಾಗತಿಸ್ತಿದ್ದಾರೆ. ಇದು ದುರಂತ. ಒಟ್ಟಾರೆ ಎಡಪಂಥೀಯ ರಾಜಕಾರಣದ ದುರಂತ - ನುಡಿದಂತೆ ನಡೆಯಲಾಗದ ದ್ವಂದ್ವದ ದುರಂತ ಮತ್ತು ಶ್ರಮಜೀವಿಗಳ ಹೆಸರಲ್ಲಿ ನಡೆದ ವಿಚ್ಛಿದ್ರಕಾರಿ ರಾಜಕಾರಣದ ದುರಂತ.

ಒಂದು ಸಮಾಜಕ್ಕೆ, ಅಂದರೆ ಅದರ ಜೀವನಶೈಲಿಗೆ ಒಂದು ಲಯ ಇರುತ್ತದೆ, ಒಂದು ನಿರ್ದಿಷ್ಟ ಮಟ್ಟದ ಅಭಿವೃದ್ಧಿ ಗತಿಯನ್ನು ತಾಳಿಕೊಳ್ಳುವ, absorb ಮಾಡಿಕೊಳ್ಳುವ ಶಕ್ತಿ ಇರುತ್ತದೆ. ಅದನ್ನು ಮೀರಿದರೆ ಆ ಲಯವನ್ನು disturb ಮಾಡಿದರೆ ಆ ಸಮಾಜ ಅನೇಕ ರೀತಿಯ ವಿಕ್ಷಿಪ್ತತೆಗಳಿಗೆ ಈಡಾಗುತ್ತದೆ - ಅದು ವ್ಯಾಪಕ ಭ್ರಷ್ಟಾಚಾರ ಆಗಬಹುದು, ಹವಾಲಾ ದುರ್ವ್ಯವಹಾರ ಸೇರಿದಂತೆ ಅಪರಾಧ ಪ್ರಪಂಚದ ವಿಸ್ತರಣೆ ಆಗಬಹುದು. ತನ್ನ ನೆರೆಹೊರೆ, ಪ್ರಕೃತಿ ಮತ್ತು ದೇಶ ಕುರಿತ ಜವಾಬ್ದಾರಿಯ ನಾಶ ಆಗಬಹುದು. ಒಟ್ಟಾರೆ ಮನುಷ್ಯನ ಔಚಿತ್ಯಪ್ರಜ್ಞೆಯೇ ನಾಶವಾಗತೊಡಗುತ್ತದೆ : ಒಬ್ಬನಿಗೆ ಎಷ್ಟು ಹಣ ಬೇಕು, ಯಾಕೆ ಬೇಕು, ಆ ಹಣವನ್ನು ಸಂಪಾದನೆ ಮಾಡುವ ಬಗೆ ಸರಿ ಇದೆಯಾ - ಇಂತಹ ಎಲ್ಲ ಪ್ರಶ್ನೆಗಳೂ ಈಗ ಮಧ್ಯಮ ವರ್ಗದ ಜನರ ಮನಸ್ಸಿನಿಂದಲೂ ಮಾಯವಾಗ್ತಿವೆ. ಹೀಗಾಗಿ ಕ್ರಮೇಣ ನಾವು ನಮ್ಮ ಸಂವೇದನಾಶೀಲತೆಯನ್ನೇ ಕಳೆದುಕೊಳ್ತಿದ್ದೇವೆ. Selfishness ಒಂದು ಮೌಲ್ಯವಾಗ್ತಿದೆ. ಯಶಸ್ಸು, ಯಶಸ್ಸು ಮಾತ್ರ ಮಾತ್ರ ಮುಖ್ಯ; ಆದ್ದರಿಂದ ಅಕ್ಕ ಪಕ್ಕ ಹಿಂದೆ ಮುಂದೆ ನೋಡದೆ

ನಿನ್ನ ಕಣ್ಮುಂದಿನ ದಾರಿ ಮಾತ್ರ ನೋಡಿಕೊಂಡು ಸಾಗು. ಆ ದಾರಿಯಲ್ಲಿ ರಕ್ತ ಬಿದ್ದಿದ್ರೆ ಅದು ನಿನಗೆ ಸಂಬಂಧಪಟ್ಟ ವಿಷಯವಲ್ಲ. ಅದರ ಗೊಡವೆಗೆ ಹೋದರೆ ನಿನ್ನನ್ನು ದಾಟಿಕೊಂಡು ಇತರರು ನಿನಗಿಂತ ಬೇಗ ಯಶಸ್ಸನ್ನು ಸಾಧಿಸಿಬಿಟ್ಟಿರುತ್ತಾರೆ! ಆದ್ದರಿಂದ be selfish. ಅದರ ಬಗ್ಗೆ ನಾಚಿಕೆ ಬೇಡ - ಅವೆಲ್ಲ ಈಗ ಚಲಾವಣೆ ಕಳೆದುಕೊಂಡಿರುವ ವಸ್ತುಗಳು. You are condemned to be selfish now. ಇದು ಮನುಷ್ಯನೇ ಇಲ್ಲದ ಸಂಪತ್ತೆಂಬ (ಜಡ) 'ವಸ್ತು'ಗಳೇ terms dictate ಮಾಡುತ್ತಿರುವ ಅನಾತ್ಮವಾದಿ ಪ್ರಪಂಚ. ಈ ಪ್ರಪಂಚದೊಳಕ್ಕೆ ಸಾವಿರಾರು ರೈತರನ್ನು ಬಲಿ ತೆಗೆದುಕೊಂಡ ಮೂರ್ನಾಲ್ಕು ರಾಜ್ಯಗಳ ಕ್ಷಾಮದ ಭೀಕರತೆಗೆ ಪ್ರವೇಶವೇ ಇಲ್ಲ. ಇಂತಹ ಪ್ರಪಂಚಕ್ಕೆ ನಾವು ಅಧಿಕೃತವಾಗಿ ಪ್ರವೇಶಿಸಬೇಕೇ? ಪ್ರವೇಶಿಸದಿದ್ದರೆ ಉಳಿಗಾಲವಿಲ್ಲ - ಏಕೆಂದ್ರೆ ಚರಿತ್ರೆ dead endಗೆ ಬಂದಿದೆ. ಇನ್ನಾವುದೇ ಹೊಸ ಆಲೋಚನೆ ಅಥವಾ ಪ್ರಯೋಗ ಬರೀ ಪುನರಾವರ್ತನಗಳಷ್ಟೇ ಆಗಬಲ್ಲವು ಎಂದು ಜಾಗತೀಕರಣ ಶಾಸ್ತ್ರಜ್ಞರು ಸಾರಿ ಸಾರಿ ಹೇಳುತ್ತಿದ್ದಾರೆ! ಇದನ್ನು ಪ್ರಶ್ನಿಸಬಹುದಾದವರಿಗೆ ಬಹುರಾಷ್ಟ್ರೀಯ (ಭಾರತೀಯವೂ ಸೇರಿದಂತೆ) ಸಂಸ್ಥೆಗಳಲ್ಲಿ ಮರು ಮಾತಾಡಲಾಗದಷ್ಟು ಸಂಬಳ ನೀಡಿ ಕೆಲಸ ಕೊಡಲಾಗಿದೆ. ಇತರರಿಗೋಸ್ಕರ ವಿದೇಶೀ ನೆರವಿನ ಸ್ವಯಂಸೇವಾ ಸಂಸ್ಥೆಗಳ ಜಾಲವನ್ನೇ ನಿರ್ಮಿಸಿ ಅವರನ್ನು ಅದರಲ್ಲಿ ತೊಡಗಿಸಲಾಗಿದೆ. ಹೀಗಾಗಿ ಅಲ್ಲೊಬ್ಬ ಅಣ್ಣ ಹಜಾರೆ, ಇಲ್ಲೊಬ್ಬ ರಾಜೇಂದ್ರ ಸಿಂಗ್ ಇನ್ನೆಲ್ಲೋ ಮೇಧಾಪಾಟ್ಕರ್, ಮತ್ತೆಲ್ಲೋ ಕಿಷನ್ ಪಟ್ನಾಯಕ್ ಇಂತಹವರ ನೇತೃತ್ವದ ಸಣ್ಣ ಗುಂಪುಗಳಷ್ಟೇ ಜಾಗತೀಕರಣದ ರೀತಿ ನೀತಿಗಳನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರಶ್ನಿಸಲು ಸಾಧ್ಯವಾಗುತ್ತಿರುವುದು. ಆದರೆ ಜಾಗತೀಕರಣದ - ಅಂದರೆ ಉದಾರೀಕರಣ, ಖಾಸಗೀಕರಣ ಹಾಗೂ ವಿದೇಶೀ ಬಂಡವಾಳಕ್ಕೆ ಅನುಮತಿ - ಮೊದಲ ಎರಡು ವರ್ಷಗಳ ಹೊರತಾಗಿ ರಾಷ್ಟ್ರದ ಬೆಳವಣಿಗೆ ದರ ಹಿಂದೂ ಬೆಳವಣಿಗೆ ದರವೆಂದೇ ಪ್ರಸಿದ್ಧವಾಗಿರುವ ಶೇಕಡಾ ಛರಷ್ಟಕ್ಕೇ ನಿಂತುಬಿಟ್ಟಿದೆ.* ವಿದೇಶೀ ಬಂಡವಾಳದ ಹರಿವೂ ಕುಂದಿದೆ ಏಕೆ ಎಂಬ ಪ್ರಶ್ನೆಗಳು ರಾಷ್ಟ್ರೀಯ ಚರ್ಚೆಗೆ ಬರುತ್ತಿಲ್ಲ.

ಇದು ಕನಸುಗಳನ್ನು ಕಳೆದುಕೊಂಡ ದೇಶವಾಗಿಬಿಟ್ಟಿದೆ. ಸ್ವಾತಂತ್ರ್ಯ ಹೋರಾಟದ ಫಲಗಳಾಗಿ ಮೂಡಿದ ಅನೇಕ ಕನಸುಗಳು ಇಂದು ಕಮರಿ ಹೋಗಿವೆ. ಆ ಕನಸುಗಳನ್ನು ನನಸು ಮಾಡುವ ಭರವಸೆ ನೀಡಿದ್ದ ಎಲ್ಲ ರಾಜಕೀಯ ಸಿದ್ಧಾಂತಗಳೂ, ಪಕ್ಷಗಳೂ ತಮ್ಮ ಆತ್ಮದ್ರೋಹಿ ರಾಜಕಾರಣದ ಮೂಲಕ ವಿಶ್ವಾಸಾರ್ಹತೆಯನ್ನೇ ಕಳೆದುಕೊಂಡಿವೆ. ಇಂತಹ ಸನ್ನಿವೇಶಗಳಿಗೆ ಕಾಯುತ್ತಿದ್ದ ಕೋಮುವಾದಿ ರಾಜಕಾರಣ ಮುನ್ನಲೆಗೆ ಬಂದಿದೆ. ಇನ್‌ಫೋಸಿಸ್‌ನ ನಾರಾಯಣಮೂರ್ತಿಯವರಿಗೆ ಇಡೀ ದೇಶದಲ್ಲಿ ಶಾಲಾ ಶಿಕ್ಷಣದಿಂದ ಆರಂಭವಾದಂತೆ ಶಿಕ್ಷಣ ಮಾಧ್ಯಮವಾಗಿ ಇಂಗ್ಲಿಷನ್ನು ಕಡ್ಡಾಯ ಮಾಡಿದಾಗ ಮಾತ್ರ ದೇಶ ಅಭಿವೃದ್ಧಿ

* ಈಗ ಈ ದರ ದುಪ್ಪಟ್ಟವಾಗಿದ್ದು, ರೈತರ ಆತ್ಮಹತ್ಯೆ ದರವೂ ದುಪ್ಪಟ್ಟಾಗಿದೆ!

ಹೊಂದಲು ಸಾಧ್ಯ ಎಂದು ಸಾರ್ವಜನಿಕವಾಗಿ ಹೇಳುವಷ್ಟು ಧೈರ್ಯ ಬಂದಿದೆ. ಸರ್ಕಾರಿ ಸ್ವಾಮ್ಯದ ಕಂಪನಿಗಳು ದಿವಾಳಿ ಎದ್ದಿವೆ ಎಂದು ಬಂಡವಾಳವನ್ನು ಹಿಂತೆಗೆದುಕೊಂಡು ಅವನ್ನು ಖಾಸಗಿ ಸ್ವತ್ತಾಗಿ ಪರಿವರ್ತಿಸುತ್ತಿದ್ದಾಗ್ಯೂ, ನಮಗೆ ತೀವ್ರವಾಗಿ ಪ್ರತಿಕ್ರಿಯಿಸಲಾಗುವುದಿಲ್ಲ. ಏಕೆಂದರೆ ದಿವಾಳಿ ಎಬ್ಬಿಸಿದವರೂ ನಾವೇ - ಅಧಿಕಾರಶಾಹಿ ಮತ್ತು ಕಾರ್ಮಿಕಶಾಹಿ.

ಆಶ್ಚರ್ಯವಾಗುತ್ತೆ, ಹಿಂದಿರುಗಿ ನೋಡಿದರೆ - ಕಳೆದ ಹತ್ತು ವರ್ಷಗಳಲ್ಲಿ ಎಷ್ಟೊಂದು ಹಗರಣಗಳನ್ನು ಕ್ಷಮಿಸಿಬಿಟ್ಟಿದೆ ಈ ಸಮಾಜ! ಇದು ಕ್ಷಮಾಗುಣ ಅಲ್ಲ, ನಿಷ್ಕ್ರಿಯತೆ; ಸ್ಪರ್ಧಾಪ್ರಪಂಚದಲ್ಲಿ ಸದಾ ದುಡಿಯಬೇಕಾದ ಪ್ರಾಣಿಯಾಗಿಬಿಟ್ಟಿರುವ ಮನುಷ್ಯನ ಸಂವೇದನಾಹೀನತೆ; ಜಾಗತೀಕರಣ ನಾಗರೀಕತೆ ಸೃಷ್ಟಿಸುತ್ತಿರುವ ನಿರಂತರ ದಾಹದ ಪರಿಣಾಮ. ಎಂಥ ದಾಹ ಇದು? ಗುಜರಾತ್ ಕೋಮು ಹತ್ಯಾಕಾಂಡದಲ್ಲಿ ಮಿಟ್ಸುಬಿಷಿ ಲ್ಯಾನ್ಸರ್ ಕಾರ್‌ಗಳಲ್ಲಿ ಬಂದ ಗಂಡಸರು ಹೆಂಗಸರು ಇಬ್ಬರೂ ಮುಸ್ಲಿಂ ಮನೆಗಳು-ಅಂಗಡಿಗಳಿಂದ ಬಣ್ಣದ ಟಿ.ವಿ., ರೆಫ್ರಿಜರೇಟರ್, ಏರ್ ಕಂಡೀಷನರ್‌ಗಳನ್ನು ಲೂಟಿ ಮಾಡಿಕೊಂಡು ಹೋಗಿದ್ದಾರೆ! ಇದು ಶ್ರೀಮಂತಿಕೆಯ ತೀರದ ದಾಹ. ಮನೆಗೆ ಎಷ್ಟು ಟಿವಿ, ರೆಫ್ರಿಜರೇಟರ್, ಏರ್‌ಕಂಡೀಷನರ್ ಇದ್ದರೂ ಸಾಲದು, ಇನ್ನೂ ಒಂದೆರಡು ಇದ್ದರೆ ಇನ್ನಷ್ಟು ಸುಖ, comfort ದೊರೆತೀತೆನ್ನುವ ತರ್ಕ! ಈ ತರ್ಕದ ಬೆನ್ನು ಬಿದ್ದಿರುವ ಜಾಗತೀಕರಣದ ಫಲಾನುಭವಿಗಳು ಸಮಾಜಕ್ಕೆ 'ಮಾದರಿ' ಗಳೆನಿಸುತ್ತಿದ್ದಾರೆ. ಏಕೆಂದರೆ ಯಾವುದೇ ಹಿಂದುಳಿದ ಸಮಾಜ ಇಂತಹ 'ಕ್ಷಿಪ್ರ ಲೌಕಿಕ ಅಭಿವೃದ್ಧಿ'ಯ ಮಾದರಿಗಳಿಗೆ ಸೆಳೆಯಲ್ಪಡುವುದು ಸಹಜವೇ ಆಗಿದೆ. ರಸ್ತೆಗಳು ಸುಧಾರಿಸುತ್ತಿರುವುದನ್ನು ಅವರು ನೋಡುತ್ತಿದ್ದಾರೆ. ತಾಲ್ಲೂಕು ಹೋಬಳಿ ಕೇಂದ್ರಗಳಲ್ಲೂ ಷಾಪಿಂಗ್ ಮಾಲ್‌ಗಳು ಏಳುತ್ತಿರುವುದನ್ನು ಅವರು ನೋಡುತ್ತಿದ್ದಾರೆ. ತಮ್ಮ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ, ಉಚಿತ ಸಮವಸ್ತ್ರ, ಉಚಿತ ಪುಸ್ತಕಗಳ ಪೂರೈಕೆ ಮತ್ತು ಕಂಪ್ಯೂಟರ್‌ಗಳ ಬಳಕೆ ಸಾಧ್ಯವಾಗಿದೆ. ಅರವತ್ತು - ಎಪ್ಪತ್ತು ಟಿವಿ ವಾಹಿನಿಗಳಲ್ಲಿ ಜಗತ್ತೇ ನಿಮ್ಮ ಮುಂದೆ ತೋರಿಸಬಹುದಾದ ಮತ್ತು ತೋರಿಸಬಾರದ್ದೆಲ್ಲವನ್ನೂ ತೆರೆದು ತೋರಿಸುತ್ತಿದೆ. ಎಷ್ಟೊಂದು ತರದ ವಾಹನಗಳು - ಎಂತೆಂತಹ ವೇಗವ್ಯಾಪ್ತಿಗೆ ಸೇರಿದವು! ಅಂಗಡಿ - ಮುಂಗಟ್ಟುಗಳಲ್ಲಿ ಎಂತೆಂತಹ ತಿನಸುಗಳು, ಎಷ್ಟು ಆಕರ್ಷಕವಾದ ಸಾಧನ, ಸಲಕರಣೆಗಳು - ಕೂತಲ್ಲೇ ಕೂತು ಬೊಜ್ಜು ಕರಗಿಸಿಕೊಳ್ಳಬಹುದು!

ಇದು ಸಾಮಾನ್ಯ ಮನುಷ್ಯನ ಎಲ್ಲ faculty ಗಳನ್ನು ಮಂಕುಗೊಳಿಸುವಂತಹ ವಾತಾವರಣ. ಎಲ್ಲವನ್ನೂ ಸರಕಾಗಿ ಕಾಣುವ ದೃಷ್ಟಿಕೋನ-ಸಾಹಿತ್ಯ, ಸಂಗೀತ, ನೃತ್ಯ, ಶಿಲ್ಪ ಎಲ್ಲವೂ. ಇಂದು ಮೂಲಭೂತ ವಿಜ್ಞಾನವನ್ನು ಅಧ್ಯಯನ ಮಾಡುವ ವಿದ್ಯಾರ್ಥಿಗಳೇ ಕಡಿಮೆಯಾಗಿ ಹೋಗಿದ್ದಾರೆ. ಇದೆಲ್ಲದರಿಂದಾಗಿ ನಮ್ಮ ವ್ಯಕ್ತಿತ್ವದ ಸಮಗ್ರತೆಯೇ ನಾಶವಾಗ್ತಾ ಇದೆ. ಲೋಹಿಯಾ ಹೇಳ್ತಾ ಇದ್ರು, ಸಮಾಜವಾದಿ ನಾಗರೀಕತೆಯ ಒಂದು ಲಕ್ಷಣವಾಗಿ ಸಮಾಜ ಯಾವತ್ತೂ ಸಮಗ್ರ ದಕ್ಷತೆಯನ್ನು ಬೆಳೆಸಿಕೊಳ್ಳಬೇಕೇ ಹೊರತು, ಗರಿಷ್ಠ ದಕ್ಷತೆಯನ್ನಲ್ಲ

ಅಂತ. ಅಂದ್ರೆ ಮನುಷ್ಯನ ದಕ್ಷತೆ ಒಂದೇ ದಿಕ್ಕಿನಲ್ಲಿ ಬೆಳೀಬಾರದು. ಅವನ ಎಲ್ಲ facultyಗಳೂ ಬೆಳೀಬೇಕು; ಆಗ ಮಾತ್ರ ನಾವು ಆರೋಗ್ಯಕಾರಿ ಸಮಾಜವೊಂದನ್ನು ಸೃಷ್ಟಿಸೋದಕ್ಕೆ ಸಾಧ್ಯ ಅಂತ. ಆದರೆ ಇವೊತ್ತು ನಾವು ಲೌಕಿಕ ಯಶಸ್ಸಿನ ಒಂದೇ ಗುರಿಯನ್ನಿಟ್ಟುಕೊಂಡು ನಮ್ಮ ವ್ಯಕ್ತಿತ್ವದಲ್ಲಿನ ತುಂಬಾ essential ಆದ ಒಂದು ಭಾಗವನ್ನ, ಶೀಲವನ್ನ, characterನ್ನ ಕಳಕೊಳ್ತಾ ಇದೀವಿ, ಜಾಗತೀಕರಣದ ಒತ್ತಡಕ್ಕೆ ಸಿಕ್ಕಿ. ಇದು ನಾಶವಾದರೆ ಏನಾಗಬಹುದು? ಇದಕ್ಕಿಂತ ನಾಶ ಇನ್ನಾವುದು ನಮಗೆ? ಗುಜರಾತ್ ಕೋಮು ಹತ್ಯಾಕಾಂಡದಲ್ಲಿ ಕಂಡು ಬಂದ ಕ್ರೌರ್ಯ ಸ್ವರೂಪ ಮತ್ತು ವೈವಿಧ್ಯ ಇದ್ದಕ್ಕಿದ್ದಂತೆ ಅವಿಷ್ಕಾರಗೊಂಡಿದ್ದೇ?

ಎಲ್ಲ ರಾಷ್ಟ್ರೀಯ ಮತ್ತು ಪ್ರಮುಖ ಪ್ರಾದೇಶಿಕ ನಿಯತಕಾಲಿಕಗಳಲ್ಲಿ ಗುಜರಾತ್ ಹತ್ಯಾಕಾಂಡದ ಒಂದು ಪ್ರಾತಿನಿಧಿಕ ಚಿತ್ರ ಪ್ರಕಟವಾಗಿದೆ - ಚಿತ್ರ ಅಂದರೆ photo. ನಿಜವಾಗಿ ಕಂಡ ದೃಶ್ಯ. ಕಪ್ಪು ಬಣ್ಣದ ಮಧ್ಯವಯಸ್ಕ - ಹಿಂದುಳಿದ ವರ್ಗಕ್ಕೆ ಸೇರಿದವನೂಂತ ಮೇಲ್ನೋಟಕ್ಕೆ ಗೊತ್ತಾಗುವಂತಿದೆ - ಹಳೆಯ ಒಂದು ಅಮೆರಿಕನ್ ಟೀಶರ್ಟ್ ಮತ್ತು ಜೀನ್ಸ್ ಧರಿಸಿ ಹಣೆಗೊಂದು ಕೇಸರಿ ತುಂಡು ಬಟ್ಟೆ ಕಟ್ಟಿಕೊಂಡು ಕೈಯಲ್ಲಿ ಒಂದು ತ್ರಿಶೂಲ ಹಿಡಿದು ಉದ್ರಿಕ್ತನಾಗಿ ನಿಂತಿದ್ದಾನೆ. ಈ ರೀತಿ ಯಾಕೆ ಆಗಿದೇಂದ್ರೆ, ಯಾವುದೇ ಒಂದು ಸಮಾಜಕ್ಕೆ ಪ್ರತಿ ಕಾಲದಲ್ಲಿ ಕೂಡಾ ಆ ಸಮಾಜದ ಮನಸ್ಸನ್ನು ತುಂಬುವಂತಹ ಒಂದು ಆದರ್ಶವೋ ಸಿದ್ಧಾಂತವೋ ಬೇಕಾಗಿರುತ್ತೆ. ಆದರೆ ಇವೊತ್ತು ಎಲ್ಲ ಆದರ್ಶ ಸಿದ್ಧಾಂತಗಳೂ ಅಪ್ರಸ್ತುತ ಅನ್ನಿಸಿಬಿಟ್ಟಿವೆ - ನಿಜವಾಗಿಯೂ ಅಪ್ರಸ್ತುತವಾಗಿಯೋ ಇಲ್ಲವೋ ಅದು ಪ್ರತ್ಯೇಕ ವಿಷಯ. ಆದ್ದರಿಂದ ಆ ಖಾಲಿ ಜಾಗದಲ್ಲಿ ಏನಾದರೂ ತುಂಬಿಕೊಳ್ಳಲೇಬೇಕು. ಸುಲಭವಾಗಿ ತುಂಬಬಹುದಾದದ್ದು ಹುಸಿ ಧಾರ್ಮಿಕತೆ. ತನ್ನ character ಕಡೆ ಗಮನ ಕಳೆದುಕೊಂಡ, ಅಂದರೆ ತನ್ನ ನಿಜವಾದ ಧಾರ್ಮಿಕತೆಯನ್ನು ಕಳೆದುಕೊಂಡ ಸಮಾಜದೊಳಕ್ಕೆ ಹುಸಿ ಧಾರ್ಮಿಕತೆ ಪ್ರವೇಶಿಸುವುದು ಸಹಜವೇನೇ. ಜಾಗತೀಕರಣದ ಅತ್ಯಂತ ಅಪಾಯಕಾರಿ manifestation ಇದು. ಗುಜರಾತ್ ಹತ್ಯಾಕಾಂಡದ mindset ದೇಶಾದ್ಯಂತ ವಿಸ್ತರಿಸಿದರೆ ಏನಾಗಬಹುದು? ಆ ಹತ್ಯಾಕಾಂಡ ಒಂದು ಪ್ರಯೋಗ ಮಾತ್ರ ಅನ್ನೋ ವರದಿಯ ಹಿನ್ನೆಲೆಯಲ್ಲಿ ನನ್ನ ಈ ಆತಂಕ. ನಾವು ಒಂದು ಸಮಾಜವಾಗಿ - ರಾಷ್ಟ್ರವಾಗಿ ನಾಶವಾಗುವ ಆತಂಕ. ಮತ್ತೆ ಪಶ್ಚಿಮದ ಪ್ರಭುತ್ವವೊಂದರ ಕೈವಶವಾಗುವ ಆತಂಕ.

ಹೀಗೆ ಜಾಗತೀಕರಣ ವ್ಯಕ್ತಿ ಮತ್ತು ಸಮಾಜ-ಈ ಎರಡರ integrity ಯನ್ನೂ ನಾಶ ಮಾಡಹೊರಟಿದೆ. ಇಂತಹ ಸಂದರ್ಭದಲ್ಲಿ ಜಾಗತೀಕರಣಕ್ಕೆ ಪರ್ಯಾಯವೊಂದನ್ನು ನಾವು ಹುಡುಕಲೇ ಬೇಕಾಗಿದೆ. ನನಗೆ ತಕ್ಷಣಕ್ಕೆ ಕಾಣೋದು ಗಾಂಧೀಜಿನೇ. ಅವರೊಬ್ಬರೇ ಆಧುನಿಕವೆಂದು ಕರೆಯಲಾಗುವ ಪಶ್ಚಿಮದ ತಂತ್ರಜ್ಞಾನಾಧಾರಿತ ವ್ಯಕ್ತಿನಿಷ್ಠ ನಾಗರೀಕತೆಯ ವಿರುದ್ಧ ದಿಟ್ಟವಾಗಿ - ಯಾರೂ ಅದರ ವಿರುದ್ಧ ಮಾತನಾಡಿ ಸಂಪ್ರದಾಯವಾದಿ ಎಂದೆನಿಸಿ ಕೊಳ್ಳಲು ಸಿದ್ಧವಿಲ್ಲದಿದ್ದಾಗ - ಮಾತನಾಡಿದವರು. ಇವೊತ್ತು manifest ಆಗುತ್ತಿರುವ ಅದರ ಅಪಾಯಗಳನ್ನು ಅವರು ಆಗಲೇ ಮುನ್ನೋಡಿದ್ದರು. ಯಾಕೆಂದರೆ ಅವರು ಈ ಯುಗದ

ಅಪರೂಪದ ಮೂಲಭೂತ ಚಿಂತಕರಾಗಿದ್ದರು. ಅವೊತ್ತು ಈ ಅಪಾಯಗಳ ವಿರುದ್ಧ ಅವರು ಸೂಚಿಸಿದ್ದ ಪರಿಹಾರಗಳು ಇಂದು ಎಷ್ಟು ಸಾಧು, ಅನ್ವಯ ಸಾಧ್ಯ ಎಂಬುದನ್ನು ನಾವು ಪರಿಶೀಲಿಸಬೇಕಾಗಿದೆ; ತಂತ್ರಜ್ಞಾನ ಕುರಿತ ಅವರ ಚಿಂತನೆಯಿಂದ ಸ್ಫೂರ್ತಿ ಪಡೆದು ಹೊಸ ಅವಿಷ್ಕಾರಗಳನ್ನೇನಾದರೂ ಮಾಡಲು ಸಾಧ್ಯವೇ ನೋಡಬೇಕಾಗಿದೆ. ಇಂತಹ ಪ್ರಯೋಗಗಳು ನಮ್ಮ ಮಲೆನಾಡಿನಲ್ಲಿ ಸಾಕಷ್ಟು ನಡೆದಿವೆ. ರಾಜೇಂದ್ರ ಸಿಂಗ್ ಮತ್ತು ಅಣ್ಣಾ ಹಜಾರೆ ಮಟ್ಟದ ಯಶಸ್ಸು ಸಾಧಿಸದಿದ್ದರೂ, ಆ ದಿಕ್ಕಿನಲ್ಲಿ ಕೆಲಸ ಮಾಡುತ್ತಿರುವ ಅನೇಕ ಪುರುಷ ಮಹಿಳೆಯರು ನಮ್ಮ ಹಳ್ಳಿಗಾಡುಗಳಲ್ಲಿ ಇದ್ದಾರೆ. ಅವರನ್ನು ಗುರುತಿಸಿ ಪ್ರೋತ್ಸಾಹಿಸಿ ಹೊಸ ಪರ್ಯಾಯ ಸೃಷ್ಟಿಸಲು ಸಾಧ್ಯವೇನೋ ನೋಡಬೇಕು. ತೇಜಸ್ವಿ ಎಲ್ಲೋ ಹೇಳಿದ್ದಾರೆ, ನಾವು ಹಿಂದಕ್ಕೆ ಬರಲಾಗದಷ್ಟು ಗಾಂಧಿಯಿಂದ ಮುಂದೆ ಹೋಗಿಬಿಟ್ಟಿದ್ದೇವೆ ಅಂತ. ನಿಜ, ಆದರೆ ಹಿಂದೆ - ಮುಂದೆ ಅನ್ನುವುದು ಸಾಪೇಕ್ಷ ಪರಿಕಲ್ಪನೆಗಳು ಅನ್ನೋದು ಅಷ್ಟೇ ನಿಜ. ಆದ್ರಿಂದ ನಮಗೆ ಮುಂದೆ ಹೋದ್ರೆ ತೊಂದರೆ ಇದೆ ಅನ್ನೋದಾದ್ರೆ ಹಿಂದಕ್ಕೆ ಬರಲೇಬೇಕು. ಹಾಗೇ ಪ್ರಗತಿಯ - ಅಭಿವೃದ್ಧಿಯ ಜಿಜ್ಞಾಸೆ ಕೂಡಾ. ವೈಯಕ್ತಿಕ ನೆಮ್ಮದಿ ಮತ್ತು ಸಾಮಾಜಿಕ ಶಾಂತಿಯನ್ನು ಯಾವುದು ಸಾಧಿಸಬಲ್ಲುದೋ ಅದೇ ಅಭಿವೃದ್ಧಿ. ೨೪ ತಾಸೂ ಕ್ರಿಯಾಶೀಲವಾಗಿರುವ ಟಿವಿ ವಾಹಿನಿಗಳು, ಗಂಟೆಗೆ ೨೦೦ ಕಿ.ಮೀ. ವೇಗದಲ್ಲಿ ಓಡುವ ಕಾರುಗಳ ಲಭ್ಯತೆ ಅಲ್ಲ.

ಇದೆಲ್ಲವೂ ಮೊದಲು ನಮಗೆ ಮನದಟ್ಟಾಗಬೇಕು. ಈ ಮನದಟ್ಟಾಗುವ ಪ್ರಕ್ರಿಯೆಯಲ್ಲಿ ಈಗ ಸವಕಲಾಗಿ ಹೋಗಿರುವ ರಾಜಕೀಯ ಪರಿಭಾಷೆಗೆ ಬದಲಾಗಿ ಹೊಸದೊಂದು ರಾಜಕೀಯೇತರ ಪರಿಭಾಷೆ ಹುಟ್ಟಬೇಕು. ಗಾಂಧೀಜಿ ಬಳಿ ಮರಳಿ ಹೋಗುವ - ಗಾಂಧೀಜಿಯನ್ನು ಇಂದಿನ ಸಂದರ್ಭಕ್ಕೆ ಪುನರನ್ವೇಷಿಸಿಕೊಳ್ಳುವ - ನಮ್ಮ ನಡಿಗೆಯಲ್ಲಿ, ಇಂದು ಉದ್ಘಾಟನೆಯಾಗುವ ರಾಮ ಮನೋಹರ ಲೋಹಿಯಾ ಟ್ರಸ್ಟ್, ಸಮಾಜವಾದಿ ಚಿಂತನೆಗೆ ಇನ್ನಷ್ಟು ಗಾಂಧಿವಾದಿ ಆಯಾಮವನ್ನು ಒದಗಿಸುವ ಒಂದು ಕಮ್ಮಟವಾಗಿ ಕೆಲಸ ಮಾಡುವ ಮೂಲಕ ಬೆಂಬಲವಾಗಿ ಬರಲಿ ಎಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ನಮಸ್ಕಾರ.

(೨೩-೩-೨೦೦೨ರಂದು ಮೈಸೂರಿನಲ್ಲಿ ಡಾ. ರಾಮಮನೋಹರ ಲೋಹಿಯಾ ಟ್ರಸ್ಟ್ ಉದ್ಘಾಟನೆಯಾದ ಸಂದರ್ಭದಲ್ಲಿ ಏರ್ಪಡಿಸಲಾಗಿದ್ದ 'ಜಾಗತೀಕರಣ ಮತ್ತು ಕೋಮುವಾದದ ಸ್ವರೂಪ ಮತ್ತು ಆತಂಕಗಳು' ಕುರಿತ ವಿಚಾರ ಸಂಕಿರಣದಲ್ಲಿ ಆಡಿದ ಮಾತುಗಳು)

ಅವನತಿಗೊಳ್ಳುತ್ತಿರುವ ನಮ್ಮ ಸಾಮಾಜಿಕ ಚಳುವಳಿಗಳು

ಕಂಬಾಲಪಲ್ಲಿ ದೌರ್ಜನ್ಯದ ಮೊಕದ್ದಮೆಯಲ್ಲಿ ಆಪಾದಿತರೆಲ್ಲರೂ ಬಿಡುಗಡೆಗೊಂಡ ಸುದ್ದಿ ಕಳೆದೊಂದು ತಿಂಗಳಿಂದ ವಿವಿಧ ರೂಪಗಳ ಸುದ್ದಿಯಾಗಿ ಹಾರಾಡುತ್ತಿದೆ. ದಲಿತ ಸಂಘರ್ಷ ಸಮಿತಿಯ ವಿವಿಧ ಗುಂಪುಗಳ ವಕ್ತಾರರಿಂದ ಪತ್ರಿಕಾ ಹೇಳಿಕೆಗಳು, ಪ್ರತಿಭಟನೆಗಳು, ಧರಣಿ ಇತ್ಯಾದಿಗಳು ವೃತ್ತಪತ್ರಿಕೆಗಳಲ್ಲಿ ಸುದ್ದಿ ಮಾಡುತ್ತಿವೆ. ಈ ದೌರ್ಜನ್ಯವನ್ನು ರಾಷ್ಟ್ರೀಯ ಸುದ್ದಿಯಾಗಿ ಪ್ರತಿಬಿಂಬಿಸಿ, ರಾಷ್ಟ್ರೀಯ ಕರ್ತವ್ಯವೊಂದನ್ನು ಮಾಡಿದಂತೆ ಬೀಗಿದ ರಾಷ್ಟ್ರೀಯ ವಾರ್ತಾ ವಾಹಿನಿಗಳೂ, ಈಗ ತಮಗೂ ಇದಕ್ಕೂ ಸಂಬಂಧವಿಲ್ಲದಂತೆ ತೆಪ್ಪಗಿವೆ. ಇದರಲ್ಲಿ ಕೊಲೆಯಾದವರು, ಜೆಸ್ಸಿಕಾ ಲಾಲ್‌ರಂತಹ ಥಳಕು-ಬಳುಕು ಲೋಕದ ಕನ್ಯೆಯರಲ್ಲವಲ್ಲ- ಈ ಬಗ್ಗೆ ಅವು ತಮ್ಮ ಮಾಧ್ಯಮಗಳಲ್ಲಿ ಪ್ರಚಾರ ನಡೆಸಿ, ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು! ಸರ್ಕಾರ ಕೂಡಾ, ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವ ಇಂಗಿತ ವ್ಯಕ್ತಪಡಿಸಿದ್ದರೂ, ಈ ದಿಸೆಯಲ್ಲಿ ತ್ವರಿತವಾಗಿ ಕ್ರಮ ಕೈಗೊಳ್ಳುವ ತುರ್ತೇನೂ ಕಾಣಬರುತ್ತಿಲ್ಲ. ಮೇಲ್ಮನವಿ ಸಲ್ಲಿಸಿದರೂ, ಹಂಗರಹಳ್ಳಿ ಜೀತ ಪ್ರಕರಣದಂತೆಯೇ ಈ ಪ್ರಕರಣವೂ ಅಂತಿಮವಾಗಿ 'ಏನೂ ಮಾಡಲಾಗದ ಪರಿಸ್ಥಿತಿ'ಯಿಂದಾಗಿ 'ಖುಲಾಸೆ'ಯಾದರೆ ಆಶ್ಚರ್ಯವಿಲ್ಲ.

ದೌರ್ಜನ್ಯಕ್ಕೆ ಒಳಗಾದವರೇ ಪ್ರತಿಕೂಲ ಸಾಕ್ಷ್ಯ ಅಥವಾ ಹೇಳಿಕೆ ನೀಡುವ ಅಸಹಾಯಕ ಸಂದರ್ಭ ಸೃಷ್ಟಿಯಾದರೆ, ನ್ಯಾಯಾಲಯಗಳಾದರೂ ಏನು ಮಾಡಿಯಾವು? ಆದರೆ ಈಚೆಗೆ ಇಂತಹ ಸಂದರ್ಭಗಳಲ್ಲಿ ನ್ಯಾಯಾಲಯ-ನ್ಯಾಯಾಧೀಶರನ್ನೇ ಟೀಕಿಸುವ ಸಾಮಾಜಿಕ ನ್ಯಾಯವಾದಿಗಳಿಗೇನೂ ನಮ್ಮಲ್ಲಿ ಕೊರತೆಯಿಲ್ಲ. ಉದಾಹರಣೆಗೆ, ಇತ್ತೀಚೆಗೆ ಸರ್ವೋನ್ನತ ನ್ಯಾಯಾಲಯವು ಹಿಂದುಳಿದ ವರ್ಗಗಳಿಗೆ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಶೇ.೨೭ರಷ್ಟು ಮೀಸಲಾತಿ ನೀಡುವ ಕೇಂದ್ರ ಸರ್ಕಾರದ ಕ್ರಮಕ್ಕೆ ತಡೆಯಾಜ್ಞೆ ನೀಡಿದ್ದಕ್ಕೆ, ಈ ತೀರ್ಪು ನೀಡಿದ ನ್ಯಾಯಾಧೀಶರುಗಳ ಜಾತಿ ಹಿನ್ನೆಲೆಯೇ ಕಾರಣವೆಂದು ಉದಿತ್ ರಾಜ್ ಎಂಬ ಸಾಮಾಜಿಕ ನ್ಯಾಯವಾದಿಯೊಬ್ಬರು ಮೊನ್ನೆ ಟಿ.ವಿ.ಚರ್ಚೆಯೊಂದರಲ್ಲಿ ನೇರವಾಗಿ ಆಪಾದಿಸಿ, ಎಲ್ಲರನ್ನೂ ದಂಗುಬಡಿಸಿದರು! ಅಲ್ಲದೆ, ಚರ್ಚೆಯಲ್ಲಿ ಭಾಗವಹಿಸಿದ್ದ ಇತರರಿಗೆ ಮಾತನಾಡಲೂ ಅವಕಾಶ ಕೊಡದಷ್ಟು ಉದ್ವಿಗ್ನರಾಗಿ ಒಂದೇ ಸಮನೆ ಕಿರುಚಾಡಿ ಹಾಸ್ಯಾಸ್ಪದರೆನಿಸಿದರು. ಇದು ಸಾಮಾಜಿಕ ನ್ಯಾಯದ ಪರಿಕಲ್ಪನೆ ಮತ್ತು ಚಳುವಳಿ ಮುಟ್ಟಿರುವ ಅಧೋರೂಪ. ತನ್ನ ಜಾತಿಯವರ ಹೊರತಾಗಿ ಉಳಿದವರಿಂದ ನ್ಯಾಯ ಸಿಗದು ಎಂಬ ನಂಬಿಕೆಯನ್ನು ಬಿತ್ತ ಬಯಸುವ ಚಳುವಳಿ ಎಂತಹ ಸಮಾಜವನ್ನು ನಿರ್ಮಿಸಹೊರಟಿದೆ ಎಂದು ಊಹಿಸಿದರೇ ಭಯವಾಗುತ್ತದೆ.

ಇದಕ್ಕೆ ಮುಖ್ಯ ಕಾರಣ, ಸಮಾಜವಾದಿ ಚಳುವಳಿಯ ಅಂಗವಾಗಿ ರೂಪು ತಳೆದ ಈ ಸಾಮಾಜಿಕ ನ್ಯಾಯ ಚಳುವಳಿ, ತನ್ನ ಆರಂಭಿಕ ಯಶಸ್ಸಿನ ಮತ್ತಿನಲ್ಲಿ ಸಮಾಜವಾದವನ್ನೇ ಕೈಬಿಟ್ಟು ಹಿಡಿದು ಹೊರಟ ಅಡ್ಡದಾರಿಯೇ ಕಾರಣವಾಗಿದೆ. ಸಮಾಜವಾದ ಮುನ್ನೋಡಿದ್ದ ಜಾತಿರಹಿತ ಸಮಾಜ, ಜಾತ್ಯತೀತತೆ, ಸರಳ–ಸಭ್ಯ ಜೀವನ ಶೈಲಿ ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ, ಮಿತಿಗಳುಳ್ಳ ಬದುಕಿನ ಕಲ್ಪನೆ – ಇವೆಲ್ಲವನ್ನೂ ಕೈಬಿಟ್ಟು, ತಮಗೆ ಅನ್ಯಾಯ ಮಾಡಿದುವೆಂದು ಹೇಳಲಾದ ಜಾತಿಗಳ ಸ್ಥಾನ ಮಾನಗಳನ್ನು ಪಡೆಯುವುದನ್ನೇ ಸಾಮಾಜಿಕ ನ್ಯಾಯವೆಂದು ಪ್ರತಿಪಾದಿಸುವ ಜನಪ್ರಿಯ ರಾಜಕೀಯ ವರಸೆಗೆ ಬಲಿಯಾದ ಈ ಚಳುವಳಿ, ಸಹಜವಾಗಿಯೇ ಕರ್ನಾಟಕದಲ್ಲಿನ ಇತರ ಸಾಮಾಜಿಕ ಚಳುವಳಿಗಳಾದ ದಲಿತ ಹಾಗೂ ರೈತ ಚಳುವಳಿಗಳನ್ನೂ ದಾರಿ ತಪ್ಪಿಸುವಲ್ಲಿ ಯಶಸ್ವಿಯಾಯಿತು. ಇವೆರಡೂ, ಸಮಾಜವಾದಿ ಆದರ್ಶಗಳೊಂದಿಗೆ ಆರಂಭವಾಗಿದ್ದರೂ, ಅವುಗಳ ನಾಯಕರ ಕೈಮೀರಿ ಅಂತಿಮವಾಗಿ ಜಾತಿ ಹಿತಾಸಕ್ತಿಗಳನ್ನು ಸಂರಕ್ಷಿಸಿಕೊಳ್ಳುವ ಸಾಮಾಜಿಕ ವಿಭಜನಾ ಶಕ್ತಿಗಳಾಗಿ ಕೊನೆಗೊಂಡಿದ್ದನ್ನು ವಿಷಾದದಿಂದ ಗಮನಿಸಿದ್ದೇವೆ. ಇದರಿಂದ ಬುದ್ಧಿ ಕಲಿಯದ ನಾವು, ಶೇ.೨೭ರ ಮೀಸಲಾತಿ ಬಗ್ಗೆ ಕೆಲವು ಸ್ಪಷ್ಟೀಕರಣಗಳನ್ನು ಕೇಳಿ ತಾತ್ಕಾಲಿಕ ತಡೆಯಾಜ್ಞೆಯನ್ನಷ್ಟೇ ನೀಡಿರುವ ನ್ಯಾಯಾಂಗದ ವಿರುದ್ಧ ಬಂದ್, ಧರಣಿ, ಪ್ರದರ್ಶನ, ಗೊತ್ತುವಳಿ ಅಂಗೀಕಾರ, ಟೀಕೆ–ಟಿಪ್ಪಣಿ ಇತ್ಯಾದಿಗಳಿಗೆ ಕೈ ಹಾಕುವ ಮೂಲಕ ಸಾಮಾಜಿಕ ನ್ಯಾಯ ಚಳುವಳಿಯ ಎಂತಹ ಹಿನ್ನಡೆಗೆ ಕಾರಣರಾಗುತ್ತಿದ್ದೇವೆ ಎಂಬುದನ್ನೇ ಅರಿಯದವರಾಗಿದ್ದೇವೆ. ನ್ಯಾಯಾಲಯ ಶೇ.೨೭ರ ಮೀಸಲಾತಿಯನ್ನು ಈಗಾಗಲೇ ತಾತ್ವಿಕವಾಗಿ ಒಪ್ಪಿಕೊಂಡಿದೆ ಹಾಗೂ ಅದರ ಅನುಷ್ಠಾನಕ್ಕೆ ಅಗತ್ಯವಾದ ಮಾಹಿತಿಯನ್ನಷ್ಟೇ ಅದು ಕೇಳುತ್ತಿದೆ ಎಂಬುದನ್ನು ಮರೆತು, ನ್ಯಾಯಾಂಗದ ಮೇಲೇ ಜಾತೀಯತೆಯ ಆರೋಪ ಹೊರಿಸುವುದು ನಮ್ಮ ಜಾತೀಯತೆಯ ಪ್ರದರ್ಶನ ಮಾತ್ರವಾಗುತ್ತದೆ ಎಂಬ ಪ್ರಜ್ಞೆ ನಮಗಿದ್ದರೆ ಒಳಿತು.

ಈ ಮೀಸಲಾತಿಯನ್ನು ವಿರೋಧಿಸುತ್ತಿರುವ ವಿದ್ಯಾರ್ಥಿ ಸಮೂಹವನ್ನು ನಾವು ಶತ್ರುವಂತೆ ನೋಡುವಂತಾಗಿದ್ದರೆ, ನಮ್ಮ ಸಾಮಾಜಿಕ ನ್ಯಾಯ ಚಳುವಳಿಯ ಚಿಂತನೆಯ ಮಟ್ಟ, ಕನಿಕರ–ಸಹಾನುಭೂತಿಗಳಿಗಷ್ಟೇ ಅರ್ಹವಾದ ಆ ವಿದ್ಯಾರ್ಥಿಗಳ ಚಿಂತನೆಯ ಮಟ್ಟಕ್ಕಿಂತ ಮೇಲೇರಿಲ್ಲವೆಂದೇ ಅರ್ಥ. ಒಂದು ಚಳುವಳಿ ಸಾಮಾಜಿಕ ಚಳುವಳಿ ಅನ್ನಿಸಿಕೊಳ್ಳಬೇಕಾದರೆ, ಅದು ಜಾತಿ–ವರ್ಗಗಳನ್ನು ಮೀರಿ ಇಡೀ ಸಮಾಜವನ್ನು ದೃಷ್ಟಿಯಲ್ಲಿರಿಸಿಕೊಂಡು ತನ್ನ ತಾತ್ವಿಕತೆಯನ್ನು ರೂಪಿಸಿಕೊಳ್ಳಬೇಕಾಗುತ್ತದೆ ಹಾಗೂ ಅದರ ಆಧಾರದ ಮೇಲೆ ತನ್ನ ಹೋರಾಟವನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಸಾಮಾಜಿಕ ನ್ಯಾಯ ಚಳುವಳಿ ಸಮಾಜವಾದಿ ಚಳುವಳಿಯ ಅಂಗವಾಗಿ ಆ ರೀತಿಯಲ್ಲೇ ಹುಟ್ಟಿತಾದರೂ, ಹಾಗೇ ಬೆಳೆಯಲಿಲ್ಲವಾದ್ದರಿಂದಲೇ ಅದು ಇತ್ತೀಚೆಗೆ ಒಂದು ವರ್ಗದ ಪ್ರಬಲ ವಿರೋಧವನ್ನು ಸತತವಾಗಿ ಎದುರಿಸುವಂತಾಗಿದೆ. ಅಂದರೆ, ನಮ್ಮ ಸಾಮಾಜಿಕ ನ್ಯಾಯ ಚಳುವಳಿ ತನ್ನ ಜವಾಬ್ದಾರಿಗಳನ್ನು ಸರಿಯಾಗಿ ನಿರ್ವಹಿಸಿಲ್ಲವೆಂದೇ ನಾವು ತಿಳಿಯಬೇಕಿದೆ. ಇಂದು ನ್ಯಾಯಾಲಯ ಈ ಚಳುವಳಿಯ ಮುಂದೆ ಹಲವು ಪ್ರಶ್ನೆಗಳನ್ನಿಟ್ಟಿದ್ದರೆ, ಅದು ಈ ಚಳುವಳಿ ನಿರ್ವಹಿಸದೇ ಹೋದ ಈ ಜವಾಬ್ದಾರಿಗಳನ್ನು ತಾನು ನಿರ್ವಹಿಸ ಹೊರಟಿದೆ ಎಂದೇ ಅರ್ಥ. ಶೇ.೨೭ರ ಪ್ರಮಾಣ

ನಿಗದಿಗೆ ಅನುಸರಿಸಿದ ಮಾನದಂಡವೇನು ಹಾಗೂ ಮೀಸಲಾತಿಯ ಹೊರತಾಗಿ ಸಾಮಾಜಿಕ ನ್ಯಾಯ ಸಾಧನೆಗೆ ಬೇರೆ ಮಾರ್ಗಗಳಿಲ್ಲವೇ ಎಂಬ ಪ್ರಶ್ನೆಗಳನ್ನು ನ್ಯಾಯಾಲಯ ಕೇಳಿದ್ದರೆ, ಸಾಮಾಜಿಕ ನ್ಯಾಯ ಚಳುವಳಿಕಾರರು ಇದು ತಮ್ಮ ಚಳುವಳಿಯ ಗುರಿಗಳ ವಿಷದೀಕರಣ ಹಾಗೂ ಸಮರ್ಥನೆಗಾಗಿಯೇ ಎಂದು ತಿಳಿಯುವಷ್ಟು ವಿನಯವನ್ನು ಮೈಗೂಡಿಸಿಕೊಳ್ಳಬೇಕಿದೆ.

ಆದರೆ, ನಮ್ಮ ಸಾಮಾಜಿಕ ಚಳುವಳಿಯ ನಾಯಕರು ಇದನ್ನು ತಿಳಿಯಲಾಗದಷ್ಟು ಮೀಸಲಾತಿ ಮೌಢ್ಯಕ್ಕೆ ಒಳಗಾಗಿರುವುದು ಎದ್ದುಕಾಣುತ್ತಿದೆ. ಸಾಮಾಜಿಕ ನ್ಯಾಯ ಕಲ್ಪನೆಯನ್ನು ಉದ್ಯೋಗ ಮೀಸಲಾತಿಗಷ್ಟೇ ಸೀಮಿತಗೊಳಿಸಿರುವುದರಿಂದಾಗಿ ಸೃಷ್ಟಿಯಾಗಿರುವ ಇಂತಹ ಮೌಢ್ಯದಿಂದಾಗಿಯೇ, ಜನಗಣತಿಯಲ್ಲಿ ಜಾತಿಯ ಕಾಲಂಗಾಗಿ ಒತ್ತಾಯಿಸುವ ಕಾರ್ಯಕ್ರಮದ ಅಥವಾ ಚಳುವಳಿಯ ಅಗತ್ಯವೇ ಅದಕ್ಕೆ ಈವರೆಗೆ ಹೊಳೆದಿಲ್ಲ. ಹಾಗೇ ಮೀಸಲಾತಿ ವ್ಯವಸ್ಥೆಯು, ಮೀಸಲಾತಿಯನ್ನು ಅಗತ್ಯಗೊಳಿಸಿದ ಜಾತಿವ್ಯವಸ್ಥೆಗೆ ಹೊಸ ಪಾವಿತ್ರ್ಯ ಹಾಗೂ ಮಾನ್ಯತೆಗಳನ್ನೊದಗಿಸುವ ದಾರಿ ಹಿಡಿದಿರುವ ಬಗೆಗೆ ಅದಕ್ಕೆ ಚಿಂತೆಯೂ ಇಲ್ಲದಾಗಿದೆ! ಆದುದರಿಂದ ಸಾಮಾಜಿಕ ಚಳುವಳಿಗೇನಾದರೂ ಸಾಮಾಜಿಕ ಮರ್ಯಾದೆಯ ಪರಿವೆ ಇದ್ದಲ್ಲಿ, ಅದು ನ್ಯಾಯಾಲಯವನ್ನು ಕುರುಡಾಗಿ ಟೀಕಿಸದೆ, ನ್ಯಾಯಾಲಯ ಕೇಳಿರುವ ಮಾಹಿತಿಯನ್ನು ಪೂರೈಸುವ ದಿಸೆಯಲ್ಲಿ ತುರ್ತು ಕ್ರಮ ಕೈಗೊಳ್ಳುವಂತೆ ಹಾಗೂ ಅಲ್ಲಿಯವರೆಗೆ ಮೀಸಲಾತಿಗೆ ತಾತ್ಕಾಲಿಕ ಅನುಮತಿ ನೀಡುವಂತೆ ನ್ಯಾಯಾಲಯಕ್ಕೆ ಕೋರಿಕೆ ಸಲ್ಲಿಸಲು ಸರ್ಕಾರವನ್ನು ಒತ್ತಾಯಿಸಬೇಕಿದೆ.

ಕಂಬಾಲಪಲ್ಲಿ ಮೊಕದ್ದಮೆಯ ವೈಫಲ್ಯವೂ ಸಾಮಾಜಿಕ ನ್ಯಾಯ ಚಳುವಳಿಯ ಇಂತಹುದೇ ವಿಕ್ಷಿಪ್ತತೆಯ ಪರಿಣಾಮವೇ ಆಗಿದೆ. ದಲಿತರ ಆತ್ಮಗೌರವದ ಚಳುವಳಿಯಾಗಿ ಆರಂಭವಾದ ದಲಿತ ಚಳುವಳಿ: ೨೮ ವರ್ಷಗಳ ಹಿಂದೆ ಶೇಷಗಿರಿಯಪ್ಪನ ಕೊಲೆ ಪ್ರಕರಣವನ್ನು ಹೇಗೆ ಯಶಸ್ವಿಯಾಗಿ ನಿರ್ವಹಿಸಿತೆಂಬುದನ್ನು ನೆನಪಿಸಿಕೊಂಡರೆ, ಕಂಬಾಲಪಲ್ಲಿ ಮೊಕದ್ದಮೆಯ ವೈಫಲ್ಯದ ಕಾರಣಗಳು ಹೊಳೆಯುತ್ತವೆ. ಶೇಷಗಿರಿಯಪ್ಪನ ಕೊಲೆ ಪ್ರಕರಣದ ವಿಷಯದಲ್ಲಿ ದಲಿತ ಚಳುವಳಿಗೆ ಇಡೀ ಸಮಾಜದ ಸಹಾನುಭೂತಿ ದೊರಕಿತ್ತು. ಆದರೆ, ಕಂಬಾಲಪಲ್ಲಿ ದೌರ್ಜನ್ಯದ ಹೊತ್ತಿಗೆ ದಲಿತ ಚಳುವಳಿ ಎಡ, ಬಲಗಳೆಂದು ಮಾತ್ರವಲ್ಲದೆ ವ್ಯಕ್ತಿನಿಷ್ಠ ಗುಂಪುಗಳಾಗಿ ಕೂಡ ಹಲವು ದಿಕ್ಕುಗಳಲ್ಲಿ ಒಡೆದು ಹೋಗಿ, ರಾಜಕೀಯ ಪುಢಾರಿಗಿರಿಯ ಹಾಳು ಮಂಟಪದಂತಾಗಿ ಸಾರ್ವಜನಿಕರ ಸಹಾನುಭೂತಿ ಕಳೆದುಕೊಂಡಿತ್ತು. ಇಂತಹ ವಾತಾವರಣದಲ್ಲಿ ಈ ಸಂಬಂಧದ ಮೊಕದ್ದಮೆಯು ಕೇವಲ ಒಂದು ಸರ್ಕಾರಿ ಮೊಕದ್ದಮೆಯಾಗಿ ಪರಿವರ್ತಿತವಾಗಿ, ತಾನು ಕಾಣಬೇಕಾದ ಗತಿಯನ್ನೇ ಕಂಡಿದೆ. ಅನ್ಯಾಯಕ್ಕೊಳಗಾದವರಿಗೆ ಅಗತ್ಯ ಅಭಯ ಹಾಗೂ ರಕ್ಷಣೆ ಸಿಗದೆ, ಅವರು ಸಿಕ್ಕಿರುವ ಪರಿಹಾರದಲ್ಲಿ ಹೇಗೋ ಬದುಕಿಕೊಂಡರೆ ಸಾಕಪ್ಪಾ ಎಂಬ ಅಸಹಾಯಕತೆಗೆ ಶರಣಾಗಿ ಮೊಕದ್ದಮೆ ಬುಡಮೇಲು ಗೊಂಡಿದೆ.

ಇದಕ್ಕೆ ಸರ್ಕಾರದ ಬೇಜವಾಬ್ದಾರಿತನ ಎಷ್ಟು ಕಾರಣವೋ, ದಲಿತ ಚಳುವಳಿಯ ಬೇಜವಾಬ್ದಾರಿತನವೂ ಅಷ್ಟೇ ಕಾರಣವಾಗಿದೆ. ದೌರ್ಜನ್ಯವಾದಾಗ ಹುಯಿಲೆಬ್ಬಿಸಿದ ದಲಿತ

ನಾಯಕರು ಈಗ ಮತ್ತೆ ಸುದ್ದಿಯಲ್ಲಿರುವುದು ಮೊಕದ್ದಮೆ ವಿಫಲವಾದಾಗ ಹುಯಿಲೆಬ್ಬಿಸುವ ಮೂಲಕವೇ. ವರ್ಷ ಪೂರ್ತಿ ಅಂಬೇಡ್ಕರ್ ಜಯಂತಿ ಆಚರಿಸುತ್ತಾ ಸ್ವಯಂ ಮರುಕ ಹಾಗೂ ಅನ್ಯಾಕ್ರಮಣಗಳ ಸಂಭ್ರಮದಲ್ಲೇ ಮುಳುಗಿ ಹೋಗುತ್ತಿರುವ ಇಂದಿನ ದಲಿತ ಚಳುವಳಿಗೆ ಅಂಬೇಡ್ಕರ್ ಜಯಂತಿ ಆಚರಣೆಗಿಂತ ಮುಖ್ಯ ಕೆಲಸ, ಕಂಬಾಲಪಲ್ಲಿ ಮೊಕದ್ದಮೆಯಲ್ಲಿ ನ್ಯಾಯ ಪಡೆಯುವುದು ಎಂಬುದು ಅರ್ಥವಾದಾಗ ಮಾತ್ರ ಅದು ಮತ್ತೆ ಆತ್ಮಗೌರವದ ಚಳುವಳಿಯಾಗಬಲ್ಲುದು ಹಾಗೂ ಈಚಿನ ದಿನಗಳಲ್ಲಿ ಹೆಚ್ಚುತ್ತಿರುವ ದಲಿತ-ಸವರ್ಣೀಯ ಘರ್ಷಣೆಗಳಿಗೆ ಕಡಿವಾಣ ಹಾಕಬಹುದು. ಆದರೆ ನಮ್ಮ ಎಲ್ಲ ಸಾಮಾಜಿಕ ಚಳುವಳಿಗಳು ತಮ್ಮ ಅಂತಿಮ ಗುರಿಗಳ ಕಲ್ಪನೆಯನ್ನೇ ಕಳೆದುಕೊಂಡು ಅಲ್ಪಾವಧಿ ಲಾಭಗಳಿಗಷ್ಟೇ ಎಚ್ಚೆತ್ತುಕೊಳ್ಳುವ ಹುಯಿಲುಗಳಾಗಿ ಅವನತಿಗೊಂಡಿರುವಾಗ ಯಾರೇನು ಮಾಡಬಲ್ಲರು?

(ವಿಕ್ರಾಂತ ಕರ್ನಾಟಕ ಏಪ್ರಿಲ್ ೨೭, ೨೦೦೭)

ನಾರಾಯಣಮೂರ್ತಿ ಮಾದರಿ: ಬಾಣಲೆಯಿಂದ ಬೆಂಕಿಗೆ?

ಕಳೆದ ವಾರದ(ಏಪ್ರಿಲ್ ೨೭, ೨೦೦೭) ನನ್ನ 'ವಾರದ ಒಳನೋಟ' ಅಂಕಣದ ಬರಹ ತಲುಪಿದ ದಿನವೇ 'ವಿಕ್ರಾಂತ ಕರ್ನಾಟಕ' ಪತ್ರಿಕೆಯ ಗೌ॥ ಸಂಪಾದಕರಾದ ಮಿತ್ರ ರವೀಂದ್ರ ರೇಷ್ಮೆಯವರು 'ಇನ್ಫೋಸಿಸ್'ನ ನಾರಾಯಣ ಮೂರ್ತಿಯವರ ಸಾಧನೆಗಳ ಬಗ್ಗೆ ನನ್ನೊಡನೆ ಸುಮಾರು ಅರ್ಧ ತಾಸು ದೂರವಾಣಿಯಲ್ಲಿ ಮಾತನಾಡಿದರು. ಆ ಮಾತುಕತೆಯ ಹೂರಣವೆಲ್ಲ ಅದೇ ಸಂಚಿಕೆಯಲ್ಲಿ ಪ್ರಕಟವಾಗಿರುವ ಅವರ ಮುಖಪುಟ ಲೇಖನದಲ್ಲಿ ಪ್ರಸ್ತುತಗೊಂಡಿದೆ. ರೇಷ್ಮೆಯವರು ನನ್ನೊಡನೆ ಮಾತನಾಡಿದ್ದು ಆ ಲೇಖನವನ್ನು ಬರೆಯುವ ಮುನ್ನವೋ, ಬರೆದ ನಂತರವೋ ತಿಳಿಯದು. ಆದರೆ ಅವರು ನಾರಾಯಣಮೂರ್ತಿಯವರನ್ನು ಕುರಿತ ತಮ್ಮ ನಿಲುವನ್ನು ಪರಿಶೀಲಿಸಿಕೊಳ್ಳಲು ನನ್ನನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾತನಾಡಿದ್ದಲ್ಲಿ, ಅವರಿಗೆ ನಾನು ಕೃತಜ್ಞ. ಏಕೆಂದರೆ, ನಾರಾಯಣ ಮೂರ್ತಿಯವರನ್ನು ಕುರಿತ ನನ್ನ ನಿಲುವನ್ನು ನಾನು ಇನ್ನಷ್ಟು ಸ್ಪಷ್ಟಗೊಳಿಸಿಕೊಳ್ಳಲು ಅವರು ಈ ಮೂಲಕ ನೆರವಾಗಿದ್ದಾರೆ.

ಈ ದೂರವಾಣಿ ಮಾತುಕತೆಯಲ್ಲಿ, ರಾಷ್ಟ್ರಗೀತೆ ಗಾಯನಕ್ಕೆ ಸಂಬಂಧಿಸಿದಂತೆ ನಾರಾಯಣ ಮೂರ್ತಿಯವರು ನೀಡಿದ ಹೇಳಿಕೆ ಹುಟ್ಟು ಹಾಕಿರುವ ಗದ್ದಲದ ವೈಪರೀತ್ಯಗಳ ಬಗ್ಗೆ ನಮ್ಮಲ್ಲಿ ಸಹಮತ ವ್ಯಕ್ತವಾಯಿತು. ಅಂದರೆ, ನಾರಾಯಣ ಮೂರ್ತಿ ಮಾಡಿರುವುದು ಅಕ್ಷಮ್ಯ ಅಪರಾಧವೇನೂ ಅಲ್ಲ; ಒಮ್ಮೆ ಅವರು ಕ್ಷಮೆ ಕೋರಿದೊಡನೆ ಆ ಪ್ರಕರಣ ಮುಕ್ತಾಯವಾಗಬೇಕು. ಆದರೆ ಅದೇ ಸಮಯದಲ್ಲಿ, ಅವರಿಗೆ ಇಂತಹ ಹೇಳಿಕೆಗಳನ್ನು ಪದೇ ಪದೇ ನೀಡುವ (ಉದಾ: ಎಲ್ಲ ಶಾಲೆಗಳನ್ನು ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನಾಗಿ ಪರಿವರ್ತಿಸಲು ಆಗ್ರಹ, ಮೀಸಲಾತಿಗೆ ವಿರೋಧ, ಅಧ್ಯಕ್ಷ ಪದ್ಧತಿಯ ರಾಷ್ಟ್ರಾಡಳಿತದ ಸಲಹೆ ಇತ್ಯಾದಿ) ಧೈರ್ಯದ ಮೂಲ ಹಾಗೂ ಅವು ಹುಟ್ಟಿಸುವ ಪ್ರತಿರೋಧದಿಂದ ಅವರನ್ನು ರಕ್ಷಿಸುವ ಶಕ್ತಿಗಳ ಹಿಂದಿರುವ ರಾಜಕಾರಣದ ಬಗ್ಗೆ ನನ್ನಂತಹವರ ಕುತೂಹಲ ಇದ್ದೇ ಇದೆ. ನಾರಾಯಣ ಮೂರ್ತಿಯವರು ಇಂದು ಭಾರತ ಕಂಡ ಅಪರೂಪದ ಲೌಕಿಕ ಯಶಸ್ಸಿನ ಸಂಕೇತವೆಂದು ರಾಷ್ಟ್ರಾದ್ಯಂತ ಪ್ರಸ್ತುತಪಡಿಸಲ್ಪಡುತ್ತಿದ್ದಾರೆ. ಹಾಗೇ, ಈ ಯಶಸ್ಸಿನ ರುಚಿ ನೋಡಿರುವ ನಮ್ಮ ಸಮಾಜದ ಒಂದು ವರ್ಗದ ಪಾಲಿಗೆ ಅವರು, ಭವಿಷ್ಯದ ರಾಷ್ಟ್ರ ಪ್ರಗತಿಯ ತೋರುಗೈಯಾಗಿ ಪರಿಣಮಿಸಿದ್ದಾರೆ. ಹಾಗಾಗಿ, ಈ ಪರಿಣಾಮಕ್ಕೊಂದು ನೆಲೆ ಕಾಣಿಸುವ ಪ್ರಯತ್ನವಾಗಿಯೇ ಅವರನ್ನು ರಾಷ್ಟ್ರಪತಿ

ಮಾಡುವ ಸಲಹೆಗೆ (ಬಹು ಹಿಂದಿನಿಂದಲೇ) ಚಾಲನೆ ನೀಡಲಾಗಿದ್ದು; ಅದನ್ನು ಈಗ ರಾಷ್ಟ್ರಪತಿ ಚುನಾವಣೆ ಹತ್ತಿರ ಬರುತ್ತಿದ್ದಂತೆ ಚುರುಕುಗೊಳಿಸಲಾಗಿದೆ ಎಂದು ಜನ ಭಾವಿಸತೊಡಗಿದರೆ ಆಶ್ಚರ್ಯವೇನು?

ಭಾರತದ ಯಾವುದೇ ಅರ್ಹ ಪ್ರಜೆ ರಾಷ್ಟ್ರಪತಿಯಾಗುವ ಅವಕಾಶ ಸಂವಿಧಾನದಲ್ಲಿರುವಾಗ, ನಾರಾಯಣ ಮೂರ್ತಿಯವರನ್ನು ರಾಷ್ಟ್ರಪತಿಯನ್ನಾಗಿ ಮಾಡುವ ಪ್ರಯತ್ನಕ್ಕೆ ಯಾರದೇ ಅಡ್ಡಿ ಇರಲಾರದು. ಆದರೆ, ರಾಷ್ಟ್ರಪತಿ ಸ್ಥಾನಕ್ಕೆ ಅವರು ಅಭ್ಯರ್ಥಿಯಾಗುವುದೇ ಆದರೆ; ಯಾರ ಮತ್ತು ಯಾವ ಹಿತಾಸಕ್ತಿಗಳ ಪ್ರತಿನಿಧಿಯಾಗಿ ಈ ಸ್ಥಾನಕ್ಕೆ ಅವರು ಅಭ್ಯರ್ಥಿಯಾಗ ಬಯಸಿದ್ದಾರೆ ಎಂಬುದು ಬಹು ದೊಡ್ಡ ಚರ್ಚೆಯ ವಿಷಯವೇ ಆಗುತ್ತದೆ. ರೇಷ್ಮೆಯವರು ತಮ್ಮ ಲೇಖನದಲ್ಲಿ ಅವರ ಸದ್ಗುಣಗಳ ಪಟ್ಟಿ ಮಾಡಿದ್ದಾರೆ. ನಿರ್ದಿಷ್ಟವಾಗಿ ಕರ್ನಾಟಕದ ಉದ್ಯೋಗ, ಶಿಕ್ಷಣ, ಬೆಂಗಳೂರು ನಗರಾಡಳಿತ ಹಾಗೂ ತನ್ನ ಆಂತರಿಕ ಆಡಳಿತ ವಿಷಯಗಳಲ್ಲಿ ಅವರ ಇನ್ಫೋಸಿಸ್ ಮಾಡಿರುವ ಸಾಧನೆಗಳನ್ನು ವಿಷದೀಕರಿಸಿದ್ದಾರೆ. ಈ ಬಿಡಿ ಬಿಡಿ ಸಾಧನೆಗಳನ್ನು ಬಿಡಿ ಬಿಡಿಯಾಗಿ ನೋಡಿದಾಗ ಯಾರೂ ಅವನ್ನು ಅಲ್ಲಗೆಳೆಯಲಾರರು. ಆದರೆ ಇವುಗಳನ್ನೇ ಆಧಾರವಾಗಿಟ್ಟುಕೊಂಡು, ಇದು ರಾಷ್ಟ್ರಕ್ಕೆ ದೊರಕಿರುವ ಪರ್ಯಾಯ ಅಭಿವೃದ್ಧಿ ಮಾದರಿಯೆಂದು ನಂಬಿಬಿಡುವುದು ಹುಂಬತನ ಮಾತ್ರವಾದೀತು. ಹಾಗಾಗಿಯೇ, ರೇಷ್ಮೆಯವರು ನನ್ನೊಡನೆ ನಡೆಸಿದ ಮಾತುಕತೆಯ ಕೊನೆಗೆ ಪ್ರಸ್ತಾಪ ಮಾಡಿದ, 'ನಾರಾಯಣ ಮೂರ್ತಿಯವರು ಪ್ರತಿನಿಧಿಸುವ ಗುರಿ ಮತ್ತು ಮಾರ್ಗಗಳ ಬಗ್ಗೆ ಅವರೊಂದಿಗೆ ನಮ್ಮಂತಹವರು ಒಂದು ಸಂಭಾಷಣೆಯನ್ನು ಏಕೆ ಆರಂಭಿಸಬಾರದು?' ಎಂಬ ಸಲಹೆಯನ್ನು ಗಂಭೀರವಾಗಿ ಪರಿಗಣಿಸುವ ಮುನ್ನ ನಮಗೆ ನಾವೇ ಸ್ಪಷ್ಟಪಡಿಸಿಕೊಳ್ಳಬೇಕಾದ ಹಲವು ಮುಖ್ಯ ವಿಚಾರಗಳಿವೆ ಎಂದು ನಾನು ಭಾವಿಸಿದ್ದೇನೆ. ಈ ಸಂಬಂಧದ ಮುಖ್ಯ ಪ್ರಶ್ನೆಗಳೆಂದರೆ:

೧. ನಾರಾಯಣ ಮೂರ್ತಿ ಇಂದು ಪ್ರತಿನಿಧಿಸುತ್ತಿರುವ ತ್ವರಿತ ಹಾಗೂ ವಿಪರೀತ ಪ್ರಮಾಣದ ಆಸ್ತಿ ನಿರ್ಮಾಣದ ತರ್ಕ ಹಾಗೂ ಅದು ನಂಬಿರುವ ಮಾಹಿತಿ ತಂತ್ರಜ್ಞಾನದ ಹೊರಗುತ್ತಿಗೆ ಪದ್ಧತಿ ಎಷ್ಟು ಕಾಲ ಬಾಳಬಲ್ಲುದು?

೨. ಈ ಹೊಸ ಕೈಗಾರಿಕಾ ಪದ್ಧತಿ ಸೃಷ್ಟಿ ಮಾಡಿರುವ ಸಮೃದ್ಧಿಯ ದ್ವೀಪಗಳು ಇಡೀ ಸಮಾಜದ ಮೇಲೆ ಯಾವ ಯಾವ ನೆಲೆಗಳಲ್ಲಿ ಮತ್ತು ಯಾವ ಯಾವ ರೀತಿಯ ಒತ್ತಡಗಳನ್ನು ಉಂಟುಮಾಡುತ್ತಿವೆ? ಮಾಹಿತಿ ತಂತ್ರಜ್ಞಾನ ಸೃಷ್ಟಿಸುತ್ತಿರುವ ಸಮಾಜದಲ್ಲಿ ಧ್ಯಾನ ಮತ್ತು ಕೊಲೆ ಸಂಸ್ಕೃತಿಗಳು ಒಟ್ಟೊಟ್ಟಿಗೆ ಬೆಳೆಯುತ್ತಿರುವದರ ಮರ್ಮವಾದರೂ ಏನು?

೩. ಈ ದ್ವೀಪಗಳಲ್ಲಿನ ಜನ ಅಳವಡಿಸಿಕೊಳ್ಳುತ್ತಿರುವ ಜೀವನ ಶೈಲಿ ಸಮಾಜದ ಎಲ್ಲರಿಗೂ ವಿಸ್ತರಿಸುವ ಸಾಧ್ಯತೆ ಎಷ್ಟರಮಟ್ಟಿಗಿದೆ? ಆ ಸಾಧ್ಯತೆ ಹೆಚ್ಚುತ್ತಿದ್ದಂತೆ ನಮ್ಮ ಜೀವ ಪರಿಸರ ಹಾಗೂ ಸಾಮಾಜಿಕ ಪರಿಸರಗಳ ಮೇಲೆ ಆಗುವ ಪರಿಣಾಮಗಳೇನು? ಹಾಗೇ, ಆ ಸಾಧ್ಯತೆ ಕಡಿಮೆಯಾಗುತ್ತಿದ್ದಂತೆ ಉಂಟಾಗಬಹುದಾದ ಸಾಮಾಜಿಕ ಅನಾಹುತಗಳೆಂತಹವು?

೪. ಇನ್ಫೋಸಿಸ್ ಪ್ರತಿನಿಧಿಸುತ್ತಿರುವ ಅಭಿವೃದ್ಧಿ ಮೀಮಾಂಸೆ ಇಡೀ ಜಗತ್ತನ್ನು ನಗರೀಕರಿಸುವ ಅಗತ್ಯದ ಮೇಲೆ ನಿಂತಿದೆ.(ಇದನ್ನು ಈ ಸಂಸ್ಥೆಯ ನಂದನ್ ನಿಲೇಕಣಿ ಅವರು ಇತ್ತೀಚಿನ 'ಔಟ್‌ಲುಕ್' ಪತ್ರಿಕೆಯ ಸಂಚಿಕೆಯ ಲೇಖನವೊಂದರಲ್ಲಿ ಸುಸ್ಪಷ್ಟಗೊಳಿಸಿದ್ದಾರೆ.) ಇದು ನಮ್ಮ 'ದುಡಿಮೆ' ಹಾಗೂ ಅದನ್ನಾಧರಿಸಿದ 'ಸಂಸ್ಕೃತಿ'ಯ ಅರ್ಥಗಳನ್ನೇ ಮೂಲಭೂತವಾಗಿ ಪಲ್ಲಟಗೊಳಿಸುವಂತಹದು. ಈ ಪಲ್ಲಟವನ್ನು ತಡೆದುಕೊಳ್ಳುವ ಶಕ್ತಿ ನಮ್ಮ ಗ್ರಾಮೀಣ ಭಾರತಕ್ಕಿದೆಯೆ? ಇಂತಹ ಪಲ್ಲಟಕ್ಕೆ ಈ ಹಿಂದೆಯೇ ಪ್ರಯತ್ನಿಸಿದ ನೆಹರೂ ಕಾಲದ ಆಧುನೀಕರಣವು ಅದನ್ನು ನಡು ನೀರಿನಲ್ಲಿ ಕೈ ಬಿಟ್ಟಿರುವ ದುರಂತ, ನಿಲ್ಲದ ರೈತರ ಆತ್ಮಹತ್ಯೆ ಸರಣಿ ರೂಪದಲ್ಲಿ ನಮ್ಮ ಕಣ್ಮುಂದೆಯೇ ಸಂಭವಿಸುತ್ತಿಲ್ಲವೇ? ಯಾಕೆ ಮತ್ತು ಯಾರಿಗಾಗಿ ಈ ನಗರೀಕರಣದ ತೆವಲು? ಇಂತಹ ಅಭಿವೃದ್ಧಿ ಮೀಮಾಂಸೆಯ ಹಿಂದಿನ ಜಾಗತಿಕ ರಾಜಕಾರಣ ಇಂದು ಅನೇಕ ರೂಪಗಳಲ್ಲಿ ಬಟ್ಟ ಬಯಲಾಗುತ್ತಿರುವಾಗಲೂ ಏಕೀ ಆಕರ್ಷಣೆ?

೫. ಬರೀ ತಂತ್ರಜ್ಞಾನದ ವೈವಿಧ್ಯಮಯ ಅನ್ವಯವನ್ನೇ ನಂಬಿ ಬೆಳೆಯುತ್ತಿರುವ ಈ ಸಿರಿಗರ ಬಡಿದುಕೊಂಡ ನಾಗರೀಕತೆ, ಮೂಲಭೂತ ವಿಜ್ಞಾನ ಹಾಗೂ ಮಾನವಿಕ ಶಾಸ್ತ್ರಗಳ ಸಾವನ್ನು ಪರೋಕ್ಷವಾಗಿ ಸಾರುತ್ತಾ, ಮನುಕುಲದ ಮನಸ್ಸನ್ನು ಏಕಾಕಾರಕ್ಕೆ ಒಗ್ಗಿಸುತ್ತಿರುವ ಪ್ರಯತ್ನದ ದೂರಗಾಮಿ ಪರಿಣಾಮಗಳೇನು?

ರೇಷ್ಮೆಯವರು ವಿವರಿಸಿರುವ ನಾರಾಯಣ ಮೂರ್ತಿಯವರ ಪ್ರಾಮಾಣಿಕ ಪ್ರಯತ್ನ ಭಾರಿ ಯಶಸ್ಸಿನಂತೆ ಕಾಣುತ್ತಿರುವುದು, ನಮ್ಮ ಸರ್ಕಾರಿ ಯಂತ್ರವು ಭ್ರಷ್ಟಾಚಾರ ಹಾಗೂ ಅದಕ್ಷತೆಗಳಿಂದಾಗಿ ಕುಸಿದು ಬಿದ್ದಿರುವ ದುರಾಡಳಿತದ ಹಿನ್ನೆಲೆಯಲ್ಲಿ ಎಂಬುದನ್ನು ನಾವು ಮರೆಯುವಂತಿಲ್ಲ. ಹಾಗಾಗಿ ನಾವು ಬಾಣಲೆಯಿಂದ ಬೆಂಕಿಗೆ ಬೀಳುವಂತಾಗದಿರಲು, ಮೇಲಿನ ಪ್ರಶ್ನೆಗಳಿಗೆ ಬಹು ಎಚ್ಚರದಿಂದ ಉತ್ತರಗಳನ್ನು ಸ್ಪಷ್ಟಗೊಳಿಸಿಕೊಳ್ಳಬೇಕಿದೆ. ಈ ಉತ್ತರಗಳನ್ನು ಎಲ್ಲೆಯಿಲ್ಲದ ವಿಸ್ತರಣೆಯ ಮಾದರಿಯ ಮೇಲೆ ಕಟ್ಟಲ್ಪಡುತ್ತಿರುವ ಪ್ರಸ್ತುತ ಆಧುನಿಕ ನಾಗರೀಕತೆಯ ಇಬ್ಬರು ಮಹಾನ್ ವಿಮರ್ಶಕರೆನಿಸಿದವರ, ಈ ಎರಡು ಅರ್ಧ ಲೌಕಿಕ ಹಾಗೂ ಅರ್ಧ ದಾರ್ಶನಿಕ ಮಾತುಗಳ ನಿಕಷಕ್ಕೊಡ್ಡಿ ಪರಿಶೀಲಿಸಿಕೊಳ್ಳಬೇಕಿದೆ:

ಇರುವ ಈ ಒಂದು ನಮ್ಮ ಭೂಮಿ ಎಲ್ಲರ ಆಶೆಗಳನ್ನು ಪೂರೈಸಬಲ್ಲದು; ದುರಾಶೆಗಳನ್ನಲ್ಲ– *ಮಹಾತ್ಮ ಗಾಂಧಿ*

ಕೊನೆಗೂ, ಒಬ್ಬ ಮನುಷ್ಯನಿಗೆ ಎಷ್ಟು ಭೂಮಿ ಬೇಕು?–ಮಹರ್ಷಿ ಟಾಲ್‌ಸ್ಟಾಯ್

(ವಿಕ್ರಾಂತ ಕರ್ನಾಟಕ ಮೇ ೪, ೨೦೦೭)

ಪರ್ಯಾಯ ರಾಜಕಾರಣದ ಸಾಧ್ಯತೆಗಳು

ಕಳೆದ ಸಂಚಿಕೆಯ 'ವಾರದ ಒಳನೋಟ'ವನ್ನು ಕೊನೇ ನಿಮಿಷದಲ್ಲಿ ಕಳಿಸಬೇಕಾದ ಅನಿವಾರ್ಯತೆಯ ಅವಸರದಲ್ಲಿ ಒಂದೆರಡು ಕಡೆ ಮುಖ್ಯ ಪದಗಳೇ ಬಿಟ್ಟು ಹೋಗಿ, ಅರ್ಥ ಸಂದಿಗ್ಧತೆ ಉಂಟಾಗಿರುವುದನ್ನು ಓದುಗರು ಗಮನಿಸಿರಬಹುದು. ಹಾಗಾಗಿ, ಅಂಕಣದ ಕೊನೆಯ ವಾಕ್ಯ ಹೀಗಿರಬೇಕಿತ್ತು: '...ಇಂತಹ ಕಾಂಗ್ರೆಸ್ಸಿಗೆ ಪರ್ಯಾಯ ರೂಪಿಸುವವರಾದರೂ ಯಾರಿದ್ದಾರೆ, ಕರ್ನಾಟಕದಲ್ಲಿ?' ಇಲ್ಲಿ ಬಿಟ್ಟು ಹೋಗಿದ್ದ ಪದ: **ಪರ್ಯಾಯ**. ಹೌದು, ರಾಜಕೀಯ ಪರ್ಯಾಯದ ಬಗ್ಗೆ ಇಂದು ನಾವು ಗಂಭೀರವಾಗಿ ಆಲೋಚಿಸುವ ಅನಿವಾರ್ಯತೆ ಉಂಟಾಗಿದೆ.

ಈಗ ರಾಷ್ಟ್ರ ಹಾಗೂ ರಾಜ್ಯ ಮಟ್ಟದಲ್ಲಿ ಯಾವುದೇ ಸರ್ಕಾರ ಬಂದರೂ, ಹೆಚ್ಚೂ ಕಡಿಮೆ ಅದು ಪಾರಂಪರಿಕ ಕಾಂಗ್ರೆಸ್ ಮಾರ್ಗಕ್ಕೇ ಬಂದು ಬೀಳುವುದನ್ನು ನಾವು ಗಮನಿಸುತ್ತಾ ಬಂದಿದ್ದೇವೆ. ಕಾಂಗ್ರೆಸ್‌ಗಿಂತ ಬಹು ಭಿನ್ನವಾದ ರಾಜಕೀಯ ಸಂಸ್ಕೃತಿಯೊಂದಿಗೆ ಬೆಳೆದದ್ದೆಂದು ಹೇಳಲಾದ ಭಾರತೀಯ ಜನತಾ ಪಕ್ಷ ಕೂಡ ಕ್ಷಿಪ್ರವಾಗಿ ಅಧಿಕಾರ ಹಿಡಿಯುವ ಹಠದಲ್ಲಿ ಒಂದು ಸಮೂಹ ಪಕ್ಷವಾಗುತ್ತಿದ್ದಂತೆ, ಅದೂ ಕಾಂಗ್ರೆಸ್ಸೀಕರಣಕ್ಕೆ ಒಳಪಟ್ಟಿರುವುದನ್ನು ನಾವು ಕಳೆದ ಎರಡು ದಶಕಗಳಲ್ಲಿ ಗಮನಿಸಿದ್ದೇವೆ. ಭಾ.ಜ.ಪ. ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ರಂಗ ಸರ್ಕಾರ ಕಳೆದ ಚುನಾವಣೆಗಳಲ್ಲಿ ಅಧಿಕಾರ ಕಳೆದುಕೊಂಡಿದ್ದೇ, ಅದರ ರಾಜಕೀಯ ಕಾಂಗ್ರೆಸ್ಸಿಗಿಂತ ಏನೂ ಭಿನ್ನವಲ್ಲ ಎಂಬ ಕಾರಣಕ್ಕಾಗಿ! ಅದೇ ಭ್ರಷ್ಟಾಚಾರ, ಅದೇ ಸ್ವಜನ ಪಕ್ಷಪಾತ, ಅದೇ ಜನ ವಿಮುಖ ಆರ್ಥಿಕ ನೀತಿ ಹಾಗೂ ಆಡಳಿತ ಮತ್ತು ಅಧಿಕಾರದ ಅಮಲಿನಲ್ಲಿ ನಡೆಸಲಾಗುವ ಅದೇ ಕುಕೃತ್ಯಗಳು, ಹತ್ಯಾಕಾಂಡಗಳು... ಈಚೆಗೆ ಕೇಳಿ ಬರುತ್ತಿರುವ ಕಟಾರ, ರೇಣುಕಾಚಾರ್ಯ, ಗುಜರಾತ್‌ನ ಹುಸಿ ಎನ್‌ಕೌಂಟರ್ ಪ್ರಕರಣಗಳು, ಅದರ ಮುಂದುವರೆದ ಉದಾಹರಣೆಗಳಷ್ಟೆ.

ದುರಂತವೆಂದರೆ, ಈ ಕಾಂಗ್ರೆಸ್ ಹಾಗೂ ಭಾ.ಜ.ಪ. ಹೊರತಾದ ಮೂರನೆಯ ಶಕ್ತಿಯನ್ನು ಕಟ್ಟುವ ಪ್ರಯತ್ನ ಕೂಡಾ ಈ ಎರಡು ಪಕ್ಷಗಳ ಸಹಕಾರವಿಲ್ಲದೆ ಯಶಸ್ವಿಯಾಗಲಾರದು ಎಂಬುದೂ, ಇಂತಹ ಎರಡು ಪ್ರಯತ್ನಗಳ ವೈಫಲ್ಯದಿಂದ (ಒಂದು, ಭಾ.ಜ.ಪ. ಬೆಂಬಲದ ವಿ.ಪಿ.ಸಿಂಗ್ ಸರ್ಕಾರ; ಇನ್ನೊಂದು ಕಾಂಗ್ರೆಸ್ ಬೆಂಬಲದ ದೇವೇಗೌಡರ ಸರ್ಕಾರ) ಈಗ ಖಾತರಿಯಾಗಿದೆ. ಹಾಗಾಗಿ ಈಗ ರಾಜಕೀಯ ಅನುಕೂಲತೆಗಳಿಗನುಸಾರ ಜೊತೆಗಾರರು ಬದಲಾಗುವ ಎರಡು ರಾಜಕೀಯ ರಂಗಗಳು ಇಂದು ರಾಷ್ಟ್ರದಲ್ಲಿ ಅಸ್ತಿತ್ವದಲ್ಲಿವೆ. ಇದರಿಂದಾಗಿ,

ಯಾರೇ ಅಧಿಕಾರಕ್ಕೆ ಬರಲಿ, ರಾಜಕಾರಣವು ಒಂದು ತಾತ್ವಿಕ ಬದ್ಧತೆಯಿಲ್ಲದೆ, ಅಭಿವೃದ್ಧಿಯ ದಿಕ್ಕಿನ ಬಗ್ಗೆ ಒಂದು ಸ್ಪಷ್ಟತೆಯಿಲ್ಲದೆ; ಜೊತೆಗಾರ ಪಕ್ಷಗಳ ರಾಜಕೀಯ ಒತ್ತಡಗಳಿಗನುಸಾರ ಆಡಳಿತ ಮತ್ತು ಅಭಿವೃದ್ಧಿ ನೀತಿಗಳನ್ನು ಅತ್ತಿತ್ತ ಎಳೆದಾಡುತ್ತ, ಹೇಗೋ ಐದು ವರ್ಷದ ಅಧಿಕಾರಾವಧಿಯನ್ನು ಮುಗಿಸುವುದೇ ಒಂದು ಸಾಧನೆ ಎಂದು ಮೆಚ್ಚುವ ಹಾಗೂ ಅದನ್ನು ಭಾರತೀಯ ಪ್ರಜಾಪಭುತ್ವದ ಯಶಸ್ಸು ಎಂದು ಕೊಂಡಾಡುವ ಪರಿಸ್ಥಿತಿಗೆ ನಾವು ಬಂದಿದ್ದೇವೆ. ಇದರ ಉಪಯೋಗ ಪಡೆದ ಅಂತಾರಾಷ್ಟ್ರೀಯ ರಾಜಕೀಯ ಹಿತಾಸಕ್ತಿಗಳು, ಜಾಗತೀಕರಣದ ಹೆಸರಿನಲ್ಲಿ ನಮ್ಮ 'ಅಭಿವೃದ್ಧಿ'ಯ ಹಾದಿಯನ್ನು ತಾವೇ ನಿರ್ಧರಿಸತೊಡಗಿವೆ. ಇದರಿಂದಾಗಿ ರಾಷ್ಟ್ರ ಜೀವನದ ಚುಕ್ಕಾಣಿ ಜನತಾ ಶಕ್ತಿಯ ಕೈ ತಪ್ಪಿ, ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಕೈವಶವಾಗುತ್ತಿರುವ ದುರಂತವನ್ನು ನಾವು ಕಾಣುತ್ತಿದ್ದೇವೆ.

ಜನತೆಯನ್ನು ಇತ್ತ, ಬಿ.ಪಿ.ಎಲ್. ಕಾರ್ಡ್, ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಸಂಧ್ಯಾ ಸುರಕ್ಷಾ, ಭಾಗ್ಯಲಕ್ಷ್ಮಿ, ಮಧ್ಯಾಹ್ನದ ಬಿಸಿಯೂಟ, ಶಾಲಾ ಮಕ್ಕಳಿಗೆ ಸೈಕಲ್, ತಾಳಿ ಭಾಗ್ಯ ಮುಂತಾದ ದಾನ-ಧರ್ಮ-ಸಹಾನುಭೂತಿ ಶೈಲಿಯ ಕಾರ್ಯಕ್ರಮಗಳ ಮೂಲಕ ಸಂತೈಸುತ್ತ; ಅತ್ತ, ದೇಶವನ್ನು ಕಾರ್ಪೊರೇಟ್ ಲಾಭದ ಒಂದು ಅಂಗಡಿಯನ್ನಾಗಿ ಪರಿವರ್ತಿಸುವ ನೀತಿ ಇಂದು 'ಅಭಿವೃದ್ಧಿ' ಎಂದು ಮಾನ್ಯತೆ ಗಳಿಸುತ್ತಿದೆ. ಇದರಿಂದಾಗಿ, 'ಅಭಿವೃದ್ಧಿ' ಎಂಬುದು ಆತ್ಯಂತಿಕವಾಗಿ ಮಾನವ ಸಂಪನ್ಮೂಲಗಳ ಅಭಿವೃದ್ಧಿಯ ಸೂಚಕವಾಗದೆ, ನೈಸರ್ಗಿಕ ಸಂಪನ್ಮೂಲಗಳ ಹೆಚ್ಚೆಚ್ಚು ಹಾಗೂ ಹೊಸ ಹೊಸ ರೀತಿಯ ಬಳಕೆಯ ಸಾಧ್ಯತೆಗಳ ಸೂಚಕವಾಗುತ್ತಿದೆ. ಇದು, ಮನುಷ್ಯನನ್ನು ಕೇವಲ ವೈಯುಕ್ತಿಕ ಸುಖಾಪೇಕ್ಷೆಯ ಸಾಹಸಗಳಲ್ಲಿ ತೊಡಗಿಸಿ, ಅವನನ್ನು ಸಾಮಾಜಿಕ ಹಾಗೂ ಜೈವಿಕ ಎಚ್ಚರಗಳ ಸೂಕ್ಷ್ಮಗಳಿಗೆ ಎರವಾಗಿಸುತ್ತಿದೆ.

ಇದರ ಪರಿಣಾಮವೆಂದರೆ, ಈವರೆಗೆ ರಾಷ್ಟ್ರದ ಚೈತನ್ಯವನ್ನು ಒಡೆದಿಟ್ಟದ್ದ ಜಾತಿ ವ್ಯವಸ್ಥೆ ಈಗ ಹೊಸ ಪ್ರತ್ಯೇಕತೆ ಹಾಗೂ ಶ್ರೇಣೀಕರಣಗಳ ರೂಪಗಳಲ್ಲಿ ಕಾಣತೊಡಗಿದ್ದು, ಸಾಮುದಾಯಿಕ ವೈರತ್ವದ ಹೊಸ ಹೊಸ ಮಾದರಿಗಳು ಸೃಷ್ಟಿಯಾಗುತ್ತಾ ಸಾಮಾಜಿಕ ಬಿಗುವು ಆಸ್ಫೋಟನಕಾರಿ ಹಂತ ತಲುಪಿದೆ. ಇಂತಹ ಆಸ್ಫೋಟಗಳು, ಹೆಚ್ಚುತ್ತಿರುವ ಆತ್ಮಹತ್ಯೆ, ಕೊಲೆ, ಹೊಸ ಹೊಸ ರೀತಿಯ ಲೈಂಗಿಕ ಅಪರಾಧಗಳು, ಕೋಮು ಅಶಾಂತಿಯೂ ಸೇರಿದಂತೆ ವಿವಿಧ ರೀತಿಯ ಸಾಮಾಜಿಕ ಹಿಂಸಾಚಾರಗಳು ಮತ್ತು ದಿನ ನಿತ್ಯದ ರಸ್ತೆ ಅಪಘಾತಗಳ ರೂಪದಲ್ಲಿಯೂ ಕಾಣತೊಡಗಿವೆ. ಇವು ಈಗ ಬಿಡಿ ಬಿಡಿಯಾಗಿ ಅಲ್ಲಲ್ಲಿ ಚದುರಿದಂತೆ ಸಂಭವಿಸುತ್ತಿರುವಂತೆ ತೋರುತ್ತಿವೆಯಾದರೂ, ಇವೆಲ್ಲ ಬರಲಿರುವ ದೊಡ್ಡ ಸಾಮಾಜಿಕ ಅಶಾಂತಿಯ ಆರಂಭಿಕ ಸೂಚನೆಗಳಾಗಿದ್ದರೆ ಆಶ್ಚರ್ಯವಿಲ್ಲ.

ಇಂತಹ ಅಶಾಂತಿಯ ಮುನ್ಸೂಚನೆಗಳಾಗಿಯೇ, ಕರ್ನಾಟಕದಲ್ಲಿ ಬಹು ಹಿಂದೆಯೇ ದಲಿತ ಚಳುವಳಿ, ರೈತ ಚಳುವಳಿ, ಕನ್ನಡ ಚಳುವಳಿ ಹಾಗೂ ಪರಿಸರ ಚಳುವಳಿಗಳು ಆರಂಭವಾದವು. ಅವೆಲ್ಲ, ಕರ್ನಾಟಕದ ಅಭಿವೃದ್ಧಿ-ಆಡಳಿತದ ದಾರಿಯ ಬಗ್ಗೆ ಬಹು ಹಿಂದೆಯೇ ಸಾಮಾನ್ಯ ಜನತೆ ವ್ಯಕ್ತಪಡಿಸಲಾರಂಭಿಸಿದ್ದ ಪ್ರತಿಭಟನೆಯ ಸಂಕೇತಗಳೇ ಆಗಿದ್ದವು. ಅಷ್ಟೇ ಅಲ್ಲ, ಅವುಗಳಲ್ಲಿ ಕೆಲವು-ದಲಿತ ಹಾಗೂ ರೈತ ಚಳುವಳಿಗಳು-ಒಗ್ಗೂಡಿ ಕರ್ನಾಟಕಕ್ಕೆ ಪರ್ಯಾಯ ಅಭಿವೃದ್ಧಿ ಮಾದರಿಯೊಂದನ್ನು ರೂಪಿಸಬಲ್ಲ ಹೊಸ ರಾಜಕಾರಣವನ್ನು ಆರಂಭಿಸುವ ಸೂಚನೆಗಳನ್ನೂ ನೀಡಿದ್ದವು. ಆದರೆ, ಪ್ರೊ. ನಂಜುಂಡ ಸ್ವಾಮಿ ಹಾಗೂ ಪ್ರೊ.

ಬಿ ಕೃಷ್ಣಪ್ಪನವರ ಹಠಮಾರಿತನಗಳಿಂದಾಗಿ ಅದು ಕೈಗೂಡಲಿಲ್ಲ. ನಂತರ ನಂಜುಂಡ ಸ್ವಾಮಿಯವರ ನೇತೃತ್ವದಲ್ಲಿ ರೈತ ಸಂಘ ಏಕಾಂಗಿಯಾಗಿ ಮಾಡ ಹೊರಟ ರಾಜಕಾರಣ ಅಷ್ಟೇನೂ ಯಶಸ್ವಿಯಾಗದೆ, ರೈತ ಸಂಘವೇ ಇಬ್ಭಾಗವಾಗುವುದರಲ್ಲಿ ಕೊನೆಗೊಂಡಿತು. ಇನ್ನು ಕೃಷ್ಣಪ್ಪನವರು ಜನತಾ ಪಕ್ಷದ ಬಾಗಿಲು ಬಡಿದು ಕೋಲಾರ ಕ್ಷೇತ್ರದಲ್ಲಿ ಚುನಾವಣೆಗೆ ನಿಂತು ಸೋತು ನಿರಾಶರಾಗಿ, ನಂತರದಲ್ಲೇ ಬಿ.ಎಸ್.ಪಿ. ಸೇರುವುದರೊಂದಿಗೆ ದಲಿತ ಚಳುವಳಿಯೂ ಛಿದ್ರವಾಗುತ್ತಾ ಹೋದದ್ದು ಈಗ ಇತಿಹಾಸ.

ಇಷ್ಟಾದರೂ, ರಾಜ್ಯದಲ್ಲಿ ಪರ್ಯಾಯ ರಾಜಕಾರಣದ ಆಸೆ ಇಂಗಿಲ್ಲ. ಅದಕ್ಕೆ ಕಾರಣ, ದಿನೇ ದಿನೇ ಅಧೋಗತಿಗಿಳಿಯುತ್ತಿರುವ ರಾಜ್ಯದ ರಾಜಕಾರಣವೇ ಆಗಿದೆ. ಹೋದ ವರ್ಷ ತಾನೇ, ದಲಿತ ಚಳುವಳಿಯೊಂದಿಗೆ ಇದ್ದೂ ಇಲ್ಲದಂತಿರುವ ನಾಯಕ ದೇವನೂರ ಮಹಾದೇವ ಹಾಗೂ ರೈತ ಸಂಘದ ಕೆ.ಎಸ್. ಪುಟ್ಟಣ್ಣಯ್ಯ ಸಮಾನ ಮನಸ್ಕರೊಡನೆ ಸೇರಿ ಆಗ ಅತಿ ಅನಿವಾರ್ಯವಾಗಿದ್ದಂತೆ 'ಸರ್ವೋದಯ ಕರ್ನಾಟಕ' ಪಕ್ಷದ ಸ್ಥಾಪನೆಯ ಘೋಷಣೆ ಮಾಡಿದರು. ಅದಕ್ಕೆ ತಕ್ಕದಾಗಿ ಕೆಲವು ನವೀನ ಕಾರ್ಯಕ್ರಮಗಳನ್ನೂ ರಾಜ್ಯದ ಜನತೆಯ ಮುಂದಿಟ್ಟರು. ಈ ಕುರಿತು ರಾಜ್ಯಾದ್ಯಂತ ಅಲ್ಲಲ್ಲಿ ಭರವಸೆಯ ಸಂಚಲನ ಶುರುವಾಗುತ್ತಿದ್ದಂತೆಯೇ, ಅದೇಕೋ ಏನೋ ಈ ಪ್ರಯತ್ನವೇ ಹಿನ್ನೆಲೆಗೆ ಸರಿದುಹೋಯಿತು! ಈ ಬಗ್ಗೆ ದೇವನೂರ ಮಹಾದೇವರನ್ನು ಕೇಳಿದರೆ, ಸಮಜಾಯಿಷಿ ಕೊಡುವ ಶೈಲಿಯಲ್ಲಿ 'ಇಲ್ಲ, ಕೆಲಸ ನಡೀತಾ ಇದೆ' ಎನ್ನುತ್ತಿದ್ದಾರೆ. ಆದರೆ, ಎಲ್ಲಿ, ಏನು ಕೆಲಸ ನಡೆಯುತ್ತಿದೆ ಎಂಬುದು ಯಾರಿಗೂ ಗೊತ್ತಾಗುತ್ತಿಲ್ಲ! ಇನ್ನು ಪುಟ್ಟಣ್ಣಯ್ಯ ಮೊನ್ನೆ ಸಭೆಯೊಂದರಲ್ಲಿ ಸ್ವಯಂ ಪ್ರೇರಿತರಾಗಿ, 'ಪಕ್ಷದ ವಿಳಾಸವನ್ನ ಕಳೀದೆ ಜೋಪಾನವಾಗಿ ಮಡಿಕ್ಕಂಡಿದ್ದೀವಿ' ಎಂದು ವ್ಯಂಗ್ಯವಾಗಿ ಹೇಳುವ ಮೂಲಕ ಈ ಪ್ರಯತ್ನದಲ್ಲಿ ತಮಗೇ ನಂಬಿಕೆ ಹೋಗಿರುವುದನ್ನು ಸೂಚಿಸಿದ್ದಾರೆ.

ಜನರಲ್ಲಿ ಸುಪ್ತವಾಗಿರುವ ಪರ್ಯಾಯ ರಾಜಕಾರಣದ ನಿರೀಕ್ಷೆಯ ಮೇಲಾಗಲೀ ಅಥವಾ ತಮ್ಮ ಮೇಲಾಗಲೀ ನಂಬಿಕೆ ಇಲ್ಲದೆ; ಬಂಗಾರಪ್ಪ ರಾಜ್ಯದಲ್ಲಿ ಸಮಾಜವಾದಿ ಪಕ್ಷ ಸ್ಥಾಪಿಸಿ ಮತ್ತು ಸಿದ್ಧರಾಮಯ್ಯ ಕಾಂಗ್ರೆಸ್ ಸೇರಿ ತಮ್ಮ ಪ್ರಯತ್ನಕ್ಕೆ ಆಘಾತ ಮಾಡಿದರು ಎಂದು ಖಾಸಗಿಯಾಗಿ ಅಲವತ್ತುಕೊಳ್ಳುತ್ತಿರುವ ಈ ನಾಯಕರಿಗೆ, ತಾವು ಹೊಸ ರಾಜಕಾರಣದ ಕಾರ್ಯಕ್ರಮ ನಕ್ಷೆಯನ್ನು (Agenda) ಮುಂದಿಟ್ಟು, ಅದರ ಆಧಾರದ ಮೇಲೆ ಸದ್ಯದ ರಾಜಕಾರಣದ ಚೌಕಟ್ಟಿನಿಂದ ಹೊರಬರಲಿಚ್ಛಿಸುವ ಮರ್ಯಾದಸ್ಥ ರಾಜಕೀಯ ನಾಯಕರನ್ನು ಆಕರ್ಷಿಸುವ ರಚನಾತ್ಮಕ ಪ್ರಯತ್ನ ಮಾಡದೆ, ಇದಕ್ಕೆ ವಿರುದ್ಧವಾದ ಪ್ರಯತ್ನಕ್ಕೆ ಕೈಹಾಕಿದ್ದರಿಂದಲೇ 'ಸರ್ವೋದಯ ಕರ್ನಾಟಕ'ವನ್ನು ಜನತೆಯ ಮುಂದೆ ತರಲು ಧೈರ್ಯವಿಲ್ಲದಾಗಿದೆಯೇನೋ ಅನ್ನಿಸುತ್ತಿದೆ.* ಅದೇನೇ ಇರಲಿ, 'ಸರ್ವೋದಯ ಕರ್ನಾಟಕ'ದ ತಾತ್ವಿಕ ಕಲ್ಪನೆ ನಿಜವಾಗಿಯೂ ಪರ್ಯಾಯ ರಾಜಕಾರಣಕ್ಕೊಂದು ಅದ್ಭುತ ಮಾದರಿಯಂತಿದ್ದು, ಅದರ ನಾಯಕರು ಜನತೆಯಲ್ಲಿ ನಂಬಿಕೆಯಿಟ್ಟು ತೆರೆಮರೆಯ ದಲಿತ-ರೈತ ರಾಜಕಾರಣದ ಜಟಿಲತೆಗಳನ್ನು ನಿರ್ಲಕ್ಷಿಸಿ ಸಾರ್ವಜನಿಕರ ಮಧ್ಯೆ ಬಂದಿದ್ದರೆ, ಈ ಹೊತ್ತಿಗೆ ಅದು ರಾಜ್ಯಾದ್ಯಂತ ಒಂದು ಆಂದೋಲನವಾಗಿ ಬೆಳೆಯುವ ಸಾಧ್ಯತೆಗಳಿದ್ದವು.

---

* ಅನುಬಂಧ – ೧ ನೋಡಿ

ಈ ಮಾತನ್ನು ನಾನು ಇಷ್ಟು ವಿಶ್ವಾಸದಿಂದ ಏಕೆ ಹೇಳುತ್ತಿದ್ದೇನೆಂದರೆ, ಪ್ರಸಕ್ತ ರಾಜಕಾರಣದಿಂದ ಬೇಸತ್ತು, ಹೊಸ ರಾಜಕೀಯ ಸಂಸ್ಕೃತಿಯ ಅಗತ್ಯವನ್ನು ಮನದಾಳದೊಳಗೆಲ್ಲೋ ಹೊಳಾಹಾಗಿ ಕಾಣುತ್ತಿರುವ ದೊಡ್ಡ ಜನಸ್ತೋಮವೇ ಇದ್ದು; ಇದರ ಬಿಡಿ ಬಿಡಿ ಅಭಿವ್ಯಕ್ತಿ ರೂಪಗಳಾಗಿ, ಈ ದಿಸೆಯಲ್ಲಿ ಕ್ರಿಯಾಶೀಲರಾಗಲು ಅಥವಾ ತಮ್ಮ ಮಿತಿಗಳಲ್ಲೇ ಕೊಡುಗೆ ಸಲ್ಲಿಸಲು ಸಿದ್ಧವಿರುವ ಗುಂಪುಗಳು ರಾಜ್ಯಾದ್ಯಂತ ಅಲ್ಲಲ್ಲಿ ಕ್ರಿಯಾಶಾಲಿಯಾಗಿರುವುದನ್ನು ನಾನು ಸ್ವತಃ ಗಮನಿಸಿದ್ದೇನೆ ಹಾಗೂ ಅವುಗಳಲ್ಲಿ ಕೆಲವುಗಳೊಡನೆ ಒಡನಾಡಿದ್ದೇನೆ. ಉದಾಹರಣೆಗೆ ಮೊನ್ನೆ ತಾನೆ, ಹಾಸನದಂತಹ ಚಿಕ್ಕ ಊರಲ್ಲಿ 'ಜನತಾ ಮಾಧ್ಯಮ' ಪತ್ರಿಕೆ ಸಂಪಾದಕ ಆರ್.ಪಿ.ವೆಂಕಟೇಶಮೂರ್ತಿ ಪರ್ಯಾಯ ರಾಜಕಾರಣದ ಸಾಧ್ಯತೆಗಳನ್ನು ಚರ್ಚಿಸಲು ಕೊನೇ ನಿಮಿಷದಲ್ಲಿ ಕರೆದಿದ್ದ ಹಾಗೂ ಮಾರನೆಯ ದಿನ ಮಧ್ಯಾಹ್ನ ಅದೇ ಉದ್ದೇಶದಿಂದ ಏರ್ಪಡಿಸಿದ್ದ 'ತೇಜಸ್ವಿ ನಮನ' ಹಾಗೂ 'ಲೋಹಿಯಾ ನೆನಪು' ಕಾರ್ಯಕ್ರಮಕ್ಕೆ, ಅಂದು ಕಛೇರಿ ದಿನವಾಗಿದ್ದರೂ ಬಂದಿದ್ದ ಜನರ ಆಸೆ-ಆಸಕ್ತಿ ನೋಡಿದರೆ, 'ಸರ್ವೋದಯ ಕರ್ನಾಟಕ'ದ ನಾಯಕರು ನಂಬಿಕೆ ಕಳೆದು ಕೊಳ್ಳುವ ಅಗತ್ಯವಿಲ್ಲವೆಂದು ಕಾಣುತ್ತದೆ. ಏಕೆಂದರೆ, 'ಸರ್ವೋದಯ ಕರ್ನಾಟಕ'ದ ಸ್ಥಾಪನೆಯ ಸಂದರ್ಭದಲ್ಲಿ ಅದರ ನಾಯಕರೇ ಹೇಳಿಕೊಂಡಿದ್ದಂತೆ, ಅದರ ಸದ್ಯದ ಉದ್ದೇಶ ಅಧಿಕಾರ ಹಿಡಿಯುವುದಾಗಿರದೆ, ರಾಜ್ಯದಲ್ಲಿ ಹೊಸದೊಂದು ರಾಜಕೀಯ ಸಂಸ್ಕೃತಿಯನ್ನು ಬಿತ್ತಿ ಬೆಳೆಯುವುದೇ ಆಗಿದೆ.

ಇದು ಇಂದಿನ ತುರ್ತು ಅಗತ್ಯವಷ್ಟೇ ಅಲ್ಲ, ಈಗ ಕರ್ನಾಟಕವನ್ನು ಸಾರ್ವತ್ರಿಕ ಲೂಟಿಯಿಂದ ರಕ್ಷಿಸಲು ಅನಿವಾರ್ಯವೂ ಆಗಿದೆ. ಹಾಗಾಗಿ ಈ ದಿಸೆಯಲ್ಲಿ ಗಂಭೀರ ಪ್ರಯತ್ನ ಮತ್ತೆ ಆರಂಭವಾಗಬೇಕಿದೆ.

(*ವಿಕ್ರಾಂತ ಕರ್ನಾಟಕ* ಮೇ ೧೮, ೨೦೦೭)

ಇದು ಭಾರತ! ಇದು ಭಾರತ !

ಬರೋಡದಲ್ಲಿನ ಅಂತಾರಾಷ್ಟ್ರೀಯ ಖ್ಯಾತಿಯ ಕಲಾಶಾಲೆಯಲ್ಲಿ, ಚಂದ್ರಮೋಹನ್ ಎಂಬ ವಿದ್ಯಾರ್ಥಿ ತನ್ನ ಪರೀಕ್ಷೆಗಾಗಿ ಬರೆದಿದ್ದ ಚಿತ್ರ ಅಶ್ಲೀಲ ಹಾಗೂ ಧರ್ಮದ್ರೋಹಿ ಎಂದು ಆರೋಪಿಸಿ ಕೆಲವು ಹಿಂದೂ ಸಂಘಟನೆಗಳಿಂದ ಆ ಶಾಲೆಯಿದ್ದ ವಿಶ್ವವಿದ್ಯಾಲಯದ ಆವರಣದ ಮೇಲೆ ದಾಳಿ. ದಾಂಧಲೆಯ ಮೂಲಕ ಭಯದ ವಾತಾವರಣ ಸೃಷ್ಟಿ. ವಿದ್ಯಾರ್ಥಿಸಮೂಹ ಹಾಗೂ ಶಿಕ್ಷಕ ಸಿಬ್ಬಂದಿಗೆ ಬೆದರಿಕೆ. ವಿಭಾಗದ ಮುಖ್ಯಸ್ಥನ ಅಮಾನತಿಗೆ ಆಗ್ರಹ ಹಾಗೂ ಅದರಲ್ಲಿ ಯಶಸ್ವಿ. ಚಂದ್ರಮೋಹನನ ಮೇಲೆ ಸ್ಥಳೀಯ ನ್ಯಾಯಾಲಯುದಲ್ಲಿ ಆರೋಪ ಸಲ್ಲಿಕೆ. ಆ ವಿದ್ಯಾರ್ಥಿಗೆ ಐದು ದಿನಗಳ ಸೆರೆಮನೆವಾಸದ ಶಿಕ್ಷೆ. ಇದನ್ನೆಲ್ಲ ಪೋಲೀಸ್ ಸಹಕಾರದಿಂದಲೇ ಒಂದೇ ದಿನದಲ್ಲಿ ಮಾಡಲಾಗಿದೆ! ಅಷ್ಟೇ ಅಲ್ಲ, ಆ ವಿದ್ಯಾರ್ಥಿಗೆ ಜಾಮೀನು ನೀಡುವ ಅಧಿಕಾರವಿರುವ ನ್ಯಾಯಾಧೀಶ ಇದ್ದಕ್ಕಿದ್ದಂತೆ ರಜೆ ಮೇಲೆ ಹೋಗುತ್ತಾರೆ... ಯಾರು ಹೇಳಿದರು, ನಮ್ಮ ನ್ಯಾಯಾಂಗ ನಿಧಾನ ಗತಿಯದೆಂದು?

ಮಧ್ಯ ಪ್ರದೇಶಧ ಇಂದೂರಿನಲ್ಲಿ ಮುಸ್ಲಿಮೇತರ(ಸಿಂಧಿ) ಹುಡುಗಿಯೊಬ್ಬಳು ಮುಸ್ಲಿಂ ಹುಡುಗನನ್ನು ಮದುವೆಯಾದದ್ದಕ್ಕಾಗಿ, ಹಿಂದೂ ಧರ್ಮ ರಕ್ಷಣೆಗಾಗಿ ಇರುವುವೆಂದು ಹೇಳಲಾಗುವ ಸಂಘಟನೆಗಳಿಂದ ಊರು ತುಂಬ ಪ್ರತಿಭಟನೆ. ಉದ್ರೇಕಕಾರಿ ಘೋಷಣೆಗಳು. ಮದುವೆಯನ್ನು–ನವ ವಧು ವರರ ಕೋರಿಕೆಯ ಮೇರೆಗೇ–ಸಾರ್ವಜನಿಕ ಮಾನ್ಯತೆ ಹಾಗೂ ಬೆಂಬಲಕ್ಕಾಗಿ ಒಂದು ಸುದ್ದಿ ತುಣುಕಾಗಿ ಪ್ರಸಾರ ಮಾಡಿದ ಟಿ.ವಿ. ವಾಹಿನಿಯ ಮೇಲೆ ಈ ಸಂಘಟನೆಗಳ ಬೆಂಬಲಿಗರಿಂದ ಹಲ್ಲೆ. ಗುಜರಾತ್–ರಾಜಸ್ಥಾನ್–ಗುಜರಾತ್ ಸರ್ಕಾರಗಳಿಂದ ಅಂತರ್ಧರ್ಮೀಯ ಮದುವೆಗಳು ರಾಷ್ಟ್ರ ವಿರೋಧಿ ಕೃತ್ಯಗಳೆಂಬಂತೆ, ಅವುಗಳ ಗಣತಿಗಾಗಿ ಗುಪ್ತ ಆದೇಶ! ಇವೆಲ್ಲವುಗಳ ಮಧ್ಯೆ, ವಿಶ್ವ ಹಿಂದೂ ಪರಿಷತ್‌ನ ಗಿರಿರಾಜ ಕಿಶೋರರಿಂದ, 'ಮುಸ್ಲಿಮ್ ಹುಡುಗರ ಆಕರ್ಷಣೆ ಎಂದರೆ, ಮುಂಜಿ ಮಾಡಿಸಿಕೊಂಡ ಅವರು ಮುಸ್ಲಿಮೇತರ ಹುಡುಗಿಯರಿಗೆ ಹೆಚ್ಚಿನ ಶಾರೀರಿಕ ಸುಖ ನೀಡುತ್ತಾರೆ' ಎಂಬ ಕುತೂಹಲಕರ ಸಂಶೋಧನೆ ಬೇರೆ!

ಹಿಂದೂ ದೇವತೆಗಳನ್ನು ಅಶ್ಲೀಲವಾಗಿ ಚಿತ್ರಿಸಿದ್ದಾರೆಂಬ ಮೊಕದ್ದಮೆಯ ಸಂಬಂಧ ನ್ಯಾಯಾಲಯಕ್ಕೆ ಹಾಜರಾಗಲಿಲ್ಲವೆಂಬ ಕಾರಣದ ಮೇಲೆ, ಹರಿದ್ವಾರದ ಸ್ಥಳೀಯ ನ್ಯಾಯಾಲಯದಿಂದ ರಾಷ್ಟ್ರದ ಸುವಿಖ್ಯಾತ ಕಲಾವಿದ ಎಂ.ಎಫ್.ಹುಸೇನರ ಆಸ್ತಿ–ಪಾಸ್ತಿ ಮುಟ್ಟುಗೋಲಿಗೆ ಆಜ್ಞೆ! ಸದ್ಯ, ಸರ್ವೋಚ್ಚ ನ್ಯಾಯಾಲಯದಿಂದ ಕೆಳ ನ್ಯಾಯಾಲಯದ ವಿಚಾರಣೆಗೆ ತಡೆಯಾಜ್ಞೆ.

ಹಿರಿಯ ಕ್ರಿಕೆಟಿಗ ರವಿಶಾಸ್ತ್ರಿ ಎಲ್ಲೋ ಗೋಮಾಂಸ ತಿಂದನೆಂದು ನ್ಯಾಯಾಲಯದಲ್ಲಿ ದಾವೆ. ಅದಕ್ಕೆ ನ್ಯಾಯಲಯದ ಮನ್ನಣೆ!

ಗುಜರಾತ್‌ನಲ್ಲಿ ಒಂದಾದರಮೇಲೊಂದು ಬಹಿರಂಗಗೊಳ್ಳುತ್ತಿರುವ ನಕಲಿ ಎನ್‌ಕೌಂಟರ್‌ಗಳಲ್ಲಿ ಸತ್ತವರು ಮುಸ್ಲಿಮರೆಂಬ ಕಾರಣಕ್ಕೆ, ಈ 'ಎನ್‌ಕೌಂಟರ್' ಗಳನ್ನು ನಡೆಸಿದ ಪೋಲೀಸ್ ಅಧಿಕಾರಿಗಳ ಪರವಾಗಿ ಹಿಂದೂ ಸಂಘಟನೆಗಳ ಪ್ರಚಾರಾಂದೋಲನ! ಈ ಪ್ರಕರಣಗಳ ಹಿಂದಿರುವುದು ದೇಶಭಕ್ತಿಯಲ್ಲ, ಗುಜರಾತ್-ರಾಜಸ್ಥಾನಗಳ ರಿಯಲ್ ಎಸ್ಟೇಟ್-ಗ್ರಾನೈಟ್ ಉದ್ಯಮಗಳ ತಿಮಿಂಗಿಲಗಳು ತಮ್ಮ ದುರ್ವ್ಯವಹಾರಗಳ ರಕ್ಷಣೆಗಾಗಿ ಪೋಲೀಸರಿಗೆ ಕೊಟ್ಟ ಸುಪಾರಿ ಎಂಬುದು ಕ್ರಮೇಣ ಸ್ಪಷ್ಟವಾಗುತ್ತಿದ್ದರೂ, ಈ ಪ್ರಕರಣದ ರೂವಾರಿ ಹಾಗೂ ಕೋಟ್ಯಾಂತರ ರೂಪಾಯಿಗಳ ಅಕ್ರಮ ಆಸ್ತಿ ಗಳಿಸಿರುವ ಗುಜರಾತ್ ಪೋಲೀಸ್ ಅಧಿಕಾರಿ ವನ್ಜಾರನ ಪರ ಅವನ ಜಾತಿ ಸಮುದಾಯದವರಿಂದ ಪ್ರತಿಭಟನೆ!

ಕೊಲ್ಲಾಪುರದಲ್ಲಿ ಮತಾಂತರದಲ್ಲಿ ತೊಡಗಿದ್ದರೆಂದು ಹೇಳಲಾದ ಇಬ್ಬರು ಕ್ರೈಸ್ತ ಪಾದ್ರಿಗಳ ಮೇಲೆ ರಕ್ತಸಿಕ್ತವಾದ ಹಲ್ಲೆ. ಪೋಲೀಸ್ ನಿಷ್ಕ್ರಿಯತೆ ಸೇರಿದಂತೆ ಪ್ರಕರಣದ ಬಗ್ಗೆ ಮಹಾರಾಷ್ಟ್ರ ಸರ್ಕಾರದಿಂದ ತನಿಖೆಗೆ ಆಜ್ಞೆ!

ಮಹಿಳೆಯರನ್ನು ಅಕ್ರಮವಾಗಿ ವಿದೇಶಗಳಿಗೆ ಸಾಗಿಸುವ ದಂಧೆಯಲ್ಲಿ, ತಮ್ಮ ಸಭೆಗಳಲ್ಲಿ 'ಮಾತೆಯರಿಗೇ ಪ್ರತ್ಯೇಕ ಸ್ಥಳ ಕಾದಿರಿಸುವ' ಸಂಘ ಪರಿವಾರದ ಪಕ್ಷವೂ ಸೇರಿದಂತೆ, ನಾಲ್ಕಾರು ಪಕ್ಷಗಳಲ್ಲಿ ಹರಡಿ ಹೋಗಿರುವ ಸಂಸತ್ ಸದಸ್ಯರು ಮತ್ತು ವಿಧಾನ ಸಭಾ ಸದಸ್ಯರೇ ಭಾಗಿಯಾಗಿ; ವಿಚಾರಣೆ ಮುಂದುವರೆದಂತೆ ಒಬ್ಬೊಬ್ಬರೇ ಪೋಲೀಸರಿಗೆ ಶರಣು!

ತಮಿಳ್ನಾಡಿನ ಮಧುರೈನಲ್ಲಿ, ಅಲ್ಲಿನ ಮುಖ್ಯಮಂತ್ರಿಯ ಕುಟುಂಬ ರಾಜಕಾರಣದ ವೈಶಮ್ಯದಿಂದಾಗಿ, ಪ್ರತಿಕೂಲ ರಾಜಕೀಯ ಸಮೀಕ್ಷೆಯ ನೆಪದಲ್ಲಿ ಪತ್ರಿಕೆಯೊಂದರ ಮೇಲೆ ದಾಳಿ, ಹಲವರ ಮರಣ! ದಕ್ಷ ಕೇಂದ್ರ ಮಂತ್ರಿಯೊಬ್ಬರ ರಾಜಕೀಯ ಬಲಿ!

ಕರ್ನಾಟಕಕ್ಕೆ ಬಂದರೆ, ನಮ್ಮ ಜಲ ಸಂಪನ್ಮೂಲ ಮಂತ್ರಿ ಕೆ.ಎಸ್.ಈಶ್ವರಪ್ಪನವರಿಂದ ಗೋಹತ್ಯೆ ಮಾಡಿದವರ ಕೈ ಕತ್ತರಿಸಲು ಕರೆ! ನಂತರದಲ್ಲೇ, ಅದಕ್ಕೆ ಅವಕಾಶ ಮಾಡಿಕೊಡುವ ಕಾನೂನು ಮಾಡಲು ಸಲಹೆ ಮಾತ್ರ ನೀಡಿದ್ದಾಗಿ ಸ್ಪಷ್ಟನೆ!

ಜಾತಿ ಆಧಾರದ ಮೇಲೆ ಊಟದ ವ್ಯವಸ್ಥೆ ಮಾಡಿದ್ದ ಮತ್ತು ಗೋಮೂತ್ರ ಸರ್ವರೋಗ ನಿವಾರಿಣಿ ಎಂದು ವೈಜ್ಞಾನಿಕವಾಗಿ ಸಿದ್ಧವಾಗಿದೆ ಎಂದು ಹುಸಿ ಘೋಷಣೆ ಮಾಡಿ, ದನಗಳ ಹೆಸರಲ್ಲಿ ಜನರನ್ನು ಮರಳು ಮಾಡಿದ 'ವಿಶ್ವ ಸಮ್ಮೇಳನ'ವೊಂದಕ್ಕೆ ನಮ್ಮ ಸರ್ಕಾರದಿಂದ ಎರಡು ಕೋಟಿ ರೂಪಾಯಿಗಳಷ್ಟು ಸಾರ್ವಜನಿಕ ಹಣದ ಕೊಡುಗೆ! ನಮ್ಮ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತಿಗಳ ಪ್ರಕಾರ, ಸರ್ಕಾರ ಮಾಡಲಾಗದ ಕೆಲಸಗಳನ್ನು ಮಠ ಮಾನ್ಯಗಳು ಮಾಡುತ್ತಿವೆ! ಎಂತಹ ತಪ್ಪೊಪ್ಪಿಗೆ! ಅಥವಾ...ವ್ಯಂಗ್ಯ....?

ಈ ಟೀಕೆಗಳಿಂದ ಕೆರಳಿದ ಯಡಿಯೂರಪ್ಪನವರಿಂದ ಈಗ ಸರ್ಕಾರಿ ಖಜಾನೆ ತಮ್ಮ ಅಥವಾ ತಮ್ಮ ಪಕ್ಷದ ಖಾಸಗಿ ಆಸ್ತಿಯೆಂಬಂತೆ, ಮತ್ತೆ ಆ ಮಠಕ್ಕೆ ಹತ್ತು ಕೋಟಿ ರೂಪಾಯಿ ಕೊಟ್ಟೇನು ಎಂಬ ಠೇಂಕಾರದ ಮಾತು!

ಕಂಬಾಲಪಲ್ಲಿ ದೌರ್ಜನ್ಯ ಪ್ರಕರಣದಲ್ಲಿ ತೀರ್ಪು ಬಂದು ತಿಂಗಳುಗಳು ಕಳೆದಿದ್ದರೂ, ಸರ್ಕಾರದಿಂದ ಮೇಲ್ಮನವಿಯ ಸುಳಿವಿಲ್ಲ. ಆದರೆ ಕಾಕತಾಳೀಯವೆಂಂತೆ, ರಾಜ್ಯದ ವಿವಿಧೆಡೆ ಸವರ್ಣೀಯರು ಮತ್ತು ಅಸ್ಪೃಶ್ಯರ ನಡುವೆ ಘರ್ಷಣೆಗಳ ಸ್ಫೋಟ!. ಕೆಲವೆಡೆ, ಅಸ್ಪೃಶ್ಯರಿಗೆ ಬಹಿಷ್ಕಾರ...

ಬೆಂಗಳೂರಲ್ಲಿ ಭೂಮಿಯ ಬೆಲೆ ಚಿನ್ನದ ಬೆಲೆಯನ್ನೂ ಮೀರಿ ಬೆಳೆದಿದ್ದು, ಇಲ್ಲಿ ಸಾವಿರಾರು ಎಕರೆ ಸರ್ಕಾರಿ ಭೂಮಿ ಪ್ರಭಾವಿ ವ್ಯಕ್ತಿಗಳಿಂದಲೇ ಒತ್ತುವರಿಯಾಗಿದೆಯೆಂದು ಸದನ ಸಮಿತಿಯೇ ವರದಿ ನೀಡಿದ್ದರೂ, ಏನೂ ಮಾಡದ ಸರ್ಕಾರದಿಂದ ಸಕ್ರಮಕ್ಕಾಗಿ ಕಾಯುತ್ತಿರುವ ಬಡವರ ಒತ್ತುವರಿ ಭೂಮಿಯನ್ನಷ್ಟೇ ಆಯ್ದು ಹರಾಜು ಹಾಕುವ ಆತುರ...ಈ ಬಗ್ಗೆ ಸರ್ಕಾರದಿಂದ 'ಹೌದೇ, ಪರಿಶೀಲಿಸೋಣ' ಎಂದಷ್ಟೇ ಪ್ರತಿಕ್ರಿಯೆ!

ಸ್ವತಃ ಮುಖ್ಯಮಂತ್ರಿಯೇ ವಿಶ್ವವಿದ್ಯಾಲಯವೊಂದರ ಆವರಣಕ್ಕೆ ನುಗ್ಗಿ, ಮುಷ್ಕರ ನಿರತ ಉದ್ಯೋಗಿಗಳನ್ನು ಉಪಕುಲಪತಿಯ ವಿರುದ್ಧ ಎತ್ತಿ ಕಟ್ಟಿದ್ದನ್ನು ಎಲ್ಲಿಯಾದರೂ ಕೇಳಿದ್ದೀರಾ? ನಮ್ಮ ಯುವ ಮುಖ್ಯಮಂತ್ರಿ ಅದನ್ನು ಮಾಡಿದ್ದಾರೆ. ಏಕೆಂದರೆ, ಇದು ಕುಲ ಬಾಂಧವರ ಹಿತದ ಪ್ರಶ್ನೆ! ಈ ಕುಲ ಬಾಂಧವರೆಲ್ಲ, ಈ ಹಿಂದಿನ ಕುಲಬಾಂಧವನೊಬ್ಬ ಉಪಕುಲಪತಿಯಾಗಿ ಮಾಡಿದ ಅಕ್ರಮ ನೇಮಕಾತಿಯ ಲಾಭ ಪಡೆದವರು. ಅದನ್ನು ಮಾನ್ಯ ಮಾಡಲು ನಿರಾಕರಿಸಿರುವ ಸದ್ಯದ ಉಪಕುಲಪತಿಯನ್ನು ಬೆಂಬಲಿಸಿಬೇಕಾದ ನಮ್ಮ ಮುಖ್ಯಮಂತ್ರಿ ಹೋಗಿ ಅವರನ್ನು ಹೆದರಿಸಿ ಬಂದಿದ್ದಾರೆ. ಇದರ ವಿರುದ್ಧ ಯಾವ ಶಿಕ್ಷಣ ತಜ್ಞನಿಂದಲೂ ಸೊಲ್ಲಿಲ್ಲ!

ಈ ಒಂದೇ ವಾರದಲ್ಲಿ ಸಾಲ ಬಾಧೆ ತಾಳದೆ ಮೂವ್ವರು ರೈತರಿಂದ(ಅದರೊಲ್ಲಬ್ಬರು ತಮ್ಮ ಕಬ್ಬಿನ ಗದ್ದೆಗೆ ಬೆಂಕಿ ಇಟ್ಟು) ಆತ್ಮಹತ್ಯೆ.

–ಇದು ಕಳೆದ ವಾರದ ಭಾರತ! ಇದು ಸರಿ ಸುಮಾರಾಗಿ, ಪ್ರತಿ ವಾರದ ಪ್ರಸ್ತುತ ಭಾರತ ಕೂಡ. ಈ ಭಾರತ ಈಗ ಅಭೂತಪೂರ್ವವಾದ ಶೇ.೧೦ರ ದರದೊಂದಿಗೆ ಪ್ರಗತಿಯ ಹಾದಿಯಲ್ಲಿ ಮುನ್ನಡೆಯುತ್ತಿದೆ ಎಂದು ಮಾಧ್ಯಮಗಳು ಬೊಬ್ಬೆ ಹಾಕುತ್ತಲೇ ಇವೆ. ಆದರೆ, ಮೇಲೆ ಸಂಕ್ಷಿಪ್ತವಾಗಿ ಚಿತ್ರಿಸಿರುವ ಕಳೆದ ಒಂದು ವಾರದ (ಪೂರ್ತಿ ತಲೆ ಕೆಟ್ಟಂತಿರುವ) ಭಾರತವನ್ನು ಗಮನಿಸಿ ನೀವೇನಾದರೂ, ಮುನ್ನಡೆಯುತ್ತಿರುವುದು ಯಾವ ಕಡೆಗೆ ಮತ್ತು ಯಾಕೆ ಎಂದು ಗಾಬರಿಯಿಂದ ಇಂತಹ ಮುನ್ನಡೆಯ ಬಗ್ಗೆ ಅನುಮಾನ ತಾಳುವಿರಾದರೆ; ನೀವು ಹುಚ್ಚರೇ ಸರಿ ಎನ್ನುತ್ತದೆ, ಅದೇ ವಾರದಲ್ಲಿನ 'ಪ್ರಜಾವಾಣಿ' ಪತ್ರಿಕೆಯ ದಿನವಹಿ ಎಸ್.ಎಂ.ಎಸ್. ಸಮೀಕ್ಷೆಯೊಂದು. ಈ ಸಮೀಕ್ಷೆಯಲ್ಲಿ ಕೇಳಲಾದ, 'ಬಿಸಿಯಾಗುತ್ತಿರುವ ಧರೆ ಬಗ್ಗೆ ನೀಡಲಾಗುತ್ತಿರುವ ಮಾಹಿತಿ ಅತಿ ರಂಜಿತವೇ?'ಎಂಬ ಪ್ರಶ್ನೆಗೆ(ಈ ಪ್ರಶ್ನೆಯೇ

ಎಷ್ಟು ಬೇಜವಾಬ್ದಾರಿಯದು ಎಂಬುದನ್ನೂ ಗಮನಿಸಿ) ಪ್ರತಿಕ್ರಿಯಿಸಿರುವವರಲ್ಲಿ ಶೇ.೮೦ರಷ್ಟು ಜನ 'ಹೌದು' ಎಂದು ಎಂದು ಉತ್ತರಿಸಿದ್ದಾರೆ! ಅಂದರೆ ನಮ್ಮ ಜನ(ಈ ಪ್ರಶ್ನೆಯನ್ನು ರೂಪಿಸಿದ ಪತ್ರಕರ್ತನು ಪ್ರತಿನಿಧಿಸುವ ನಮ್ಮ ಮಾಧ್ಯಮದವರೂ ಸೇರಿದಂತೆ!) ಈ ಅಭೂತಪೂರ್ವ 'ಪ್ರಗತಿ'ಯ ಎಂತಹ 'ಸುಖ'ದಲ್ಲಿ ಹೇಗೆ ಮೈ ಮರೆತಿದ್ದಾರೆಂದರೆ, ಅವರಿಗೆ ದೂರದ ಸಿಡಿಲಿನ ಶಬ್ದವಿರಲಿ, ಹತ್ತಿರದ ಬೆಂಕಿಯ ತಾಪವೂ ತಾಗದಾಗಿದೆ!

ಇನ್ನು ಏಳು ವರ್ಷಗಳಲ್ಲಿ ಜಗತ್ತಿನ ಜನತೆ ತನ್ನ ಜೀವನ ಶೈಲಿಯನ್ನು ಬದಲಿಸಿಕೊಳ್ಳಬೇಕು– ಅಂದರೆ, ಬದುಕಿನ ವಿವಿಧ ರಂಗಗಳಲ್ಲಿನ ಪ್ರಸ್ತುತ ಇಂಧನ ಬಳಕೆಯ ರೀತಿ ನೀತಿಗಳನ್ನು ಪರಿಷ್ಕರಿಸಿಕೊಳ್ಳಬೇಕು. ಆ ಮೂಲಕ ಇಂಗಾಲದ ಹೊರಸೂಸುವಿಕೆಯ ಪ್ರಮಾಣವನ್ನು, ಕ್ರಮೇಣ ನಿಗದಿತ ಗತಿಯಲ್ಲಿ ತಗ್ಗಿಸಬೇಕು. ಇಲ್ಲದಿದ್ದಲ್ಲಿ, ಭೂಮಿ ಹಿಂದೆಂದೂ ಕಾಣದಂತಹ ಹವಾಮಾನ ಅಲ್ಲೋಲ ಕಲ್ಲೋಲಗಳಿಗೆ ಸಿಕ್ಕಿ, ಯಾವ ಜೀವ ಸಂತತಿಗೂ ಬದುಕಲು ಯೋಗ್ಯವಾದ ಜಾಗವಾಗಿ ಉಳಿಯಲಾರದು. ಹೀಗೆಂದು ಸ್ವತಃ ವಿಜ್ಞಾನಿಗಳೇ, ವಿಶ್ವ ಸಂಸ್ಥೆಯ ಮಾರ್ಗದರ್ಶನದಲ್ಲಿ ಏರ್ಪಾಡಾಗಿದ್ದ ಬ್ಯಾಂಕಾಕ್ ವಿಶ್ವ ಪರಿಸರ ಸಮ್ಮೇಳನದಲ್ಲಿ ವೈಜ್ಞಾನಿಕ ಪ್ರಯೋಗ ಹಾಗೂ ಸಮೀಕ್ಷೆಗಳ ಆಧಾರದ ಮೇಲೆ ನಿಷ್ಕರ್ಷಿಸಿ ಹೇಳಿದ್ದರೂ ನಾವು– 'ಪ್ರಜಾವಾಣಿ'ಯ ಪ್ರಕಾರ ಶೇ.೮೦ರಷ್ಟು ಜನ– ನಂಬಲಾರದವರಾಗಿದ್ದೇವೆ! ಇದು, ಹತ್ತು ವರ್ಷಗಳ ಹಿಂದೆ ಕ್ಯೂಟೋ ಸಮ್ಮೇಳನದಲ್ಲಿ ನೀಡಲಾಗಿದ್ದ ಸಲಹೆ ಹಾಗೂ ಎಚ್ಚರಿಕೆಗಳನ್ನು ಗಣನೆಗೆ ತೆಗೆದುಕೊಳ್ಳದೇ ಹೋಗಿರುವ ಜಗತ್ತಿಗೆ, ಈಗ ವಿಜ್ಞಾನಿಗಳು ನೀಡಿರುವ ಕೊನೆಯ ಎಚ್ಚರಿಕೆ. ಆದರೂ ನಾವು ಕೇಳಲು ನಿರಾಕರಿಸುತ್ತಿದ್ದೇವೆ... ಆಶ್ಚರ್ಯವೆಂದರೆ, ಯಾವ ವಿಜ್ಞಾನದ ಸುಖ ಫಲಗಳನ್ನು ಉಣ್ಣುತ್ತ ಈ ಆಧುನಿಕ ನಾಗರೀಕತೆಯನ್ನು ನಾವೂ ಸ್ವಾಗತಿಸಿದ್ದೆವೋ, ಆ ವಿಜ್ಞಾನವೇ ಇಂದು ಈ ನಾಗರೀಕತೆಗೆ ಕಡಿವಾಣ ಹಾಕಬೇಕೆಂದು ಬಾರಿ ಬಾರಿ ಹೇಳುತ್ತಿದ್ದರೂ, ಅದಕ್ಕೆ ಪ್ರತಿಸ್ಪಂದಿಸುವ ಶಕ್ತಿಯನ್ನೇ ನಾವಿಂದು ಕಳೆದುಕೊಂಡಿದ್ದೇವೆ. ಎಂತಹ ಅಂಗವಿಕಲತೆ ಇದು!

ಮನಸ್ಸನ್ನು ವಿಸ್ತರಿಸಬೇಕಾದ ವಿಜ್ಞಾನ, ಮನಸ್ಸನ್ನು ಮುಚ್ಚಿಬಿಡುವ ತಂತ್ರಜ್ಞಾನವಾಗಿ ಅವನತಿಗೊಳ್ಳುವ ಈ ದುರಂತವನ್ನೇ ಗಾಂಧೀಜಿ, ಆಧುನಿಕ ನಾಗರೀಕತೆಯ ಆಂತರಿಕ ದೌರ್ಬಲ್ಯವೆಂದು ಗುರುತಿಸಿ, ಅದರ ವಿರುದ್ಧ ಎಚ್ಚರಿಕೆ ನೀಡಿದ್ದು. ಆ ಎಚ್ಚರಿಕೆಯೇ ಇಂದು ಆಧುನಿಕ ಪರಿಭಾಷೆಯಲ್ಲಿ ಪರಿಸರದ ಪ್ರಶ್ನೆಯಾಗಿ ನಮ್ಮ ಮುಂದೆ ಪ್ರಸ್ತುತಗೊಳ್ಳುತ್ತಿದೆ. ಆದರೇನು, ಈ ನಾಗರೀಕತೆಯ ಸದ್ಯದ ನಾಯಕತ್ವ ವಹಿಸಿರುವ ಮತ್ತು ಧರೆಯ ಬಿಸಿಯೇರಿಕೆಗೆ ಬಹು ದೊಡ್ಡ ಕೊಡುಗೆ ನೀಡುತ್ತಿರುವ ದೇಶವಾದ ಅಮೆರಿಕಾದ ಅಧ್ಯಕ್ಷ ಜಾರ್ಜ್ ಬುಷ್ ಈಗಲೂ ಕೂಡ, 'ನನ್ನ ಜನ ತಮ್ಮ ಬದುಕಿನ ಶೈಲಿಯನ್ನು ಬದಲಿಸಿಕೊಳ್ಳಲು ಸಿದ್ಧರಿಲ್ಲ' ಎಂದು ಘೋಷಿಸುವ ಮೂಲಕ ಈ ನಾಗರೀಕತೆ ಮೂರ್ಖತನದ ಪರಮಾವಧಿಯನ್ನು ಮುಟ್ಟಿರುವ ಸೂಚನೆಯನ್ನು ನೀಡಿದ್ದಾರೆ. ಕ್ಯೂಟೋ ಸಮ್ಮೇಳನ ರೂಪಿಸಿದ ಪರಿಸರ ಒಪ್ಪಂದಕ್ಕೆ ಸಹಿ ಹಾಕಲು ನಿರಾಕರಿಸಿ ತಳೆದ ನಿಲುವನ್ನು, ಅಮೆರಿಕಾ ಹತ್ತು ವರ್ಷಗಳ ನಂತರವೂ ಬದಲಾಯಿಸಿ ಕೊಂಡಿಲ್ಲ. ಅಂದರೆ, 'ಇರಾಕ್ ಯುದ್ಧ'ಗಳಿಗೆ ಸದ್ಯಕ್ಕಂತೂ ಕೊನೆಯಿಲ್ಲ!

ಇದು ಮಾನವತೆ ಪ್ರವೇಶಿಸಿರುವ ಪಾತಾಳ ಲೋಕ. ಸುಖದ ಅಮಲಿನಲ್ಲಿ ಅಥವಾ ನಿರೀಕ್ಷೆಯಲ್ಲಿ ಎಲ್ಲ ಸೂಕ್ಷ್ಮಗಳನ್ನೂ, ಸಂವೇದನಾಶೀಲತೆಯನ್ನೂ ಕಳೆದುಕೊಳ್ಳುತ್ತಿರುವ ಜನಾಂಗವೊಂದು ಜಗತ್ತಿನಾದ್ಯಂತ ಸೃಷ್ಟಿಯಾಗುತ್ತಿರುವ ದುರಂತ ಚಿತ್ರವಿದು. ಇದಕ್ಕೆ ಕಾರಣ, ಸಮಾಜದ ಒಳಚೇತನವಾದ 'ಧಾರ್ಮಿಕತೆ' ಎನ್ನುವುದು ವಿಕ್ಷಿಪ್ತಗೊಳ್ಳುತ್ತಿರುವುದೇ ಆಗಿದೆ. ಮನುಷ್ಯನ ಎಲ್ಲ ಸಹಜ ದೌರ್ಬಲ್ಯಗಳ ವಿರುದ್ಧ ಮನಸ್ಸಾಕ್ಷಿಯ ರೂಪದಲ್ಲಿ ಅರಳಿಕೊಳ್ಳಬೇಕಾದ ಧರ್ಮವಿಂದು ಆಧುನೀಕರಣದ ಒತ್ತಡಗಳಿಗೆ ಸಿಕ್ಕಿ, ಕೇವಲ ವಿಧಿ-ನಿಷೇಧಗಳ ಕರ್ಮಕಾಂಡವಾಗಿ ಕ್ರಿಯಾಶೀಲವಾಗತೊಡಗಿದೆ. ಸಿರಿವಂತರ ಸಿರಿ ಹೆಚ್ಚಿದಷ್ಟೂ ಈ ಕರ್ಮಕಾಂಡ ಅವರ ಪಾಪಪ್ರಜ್ಞೆಯ ಪ್ರತೀಕವಾಗುತ್ತಾ ಹಲವು ಹಿಂಸಾತ್ಮಕ ರೂಪಗಳನ್ನು ಪಡೆಯುತ್ತಿರುವುದನ್ನು ನಾವಿಂದು ನೋಡುತ್ತಿದ್ದೇವೆ. ಅಮೇರಿಕಾದಂತಹ ಅಮೆರಿಕಾವೇ ಇಂದು 'ನವ ಸಂಪ್ರದಾಯವಾದಿ'(Neo conservatives) ಗಳ ಕೈವಶವಾಗಿ, ಅಮೆರಿಕನ್ ಸರ್ಕಾರದ ನೀತಿ ನಿರ್ಧಾರಗಳ ಹಿಂದೆ ಅಲ್ಲಿನ ಚರ್ಚ್‌ನ ಕೈವಾಡ ಎದ್ದು ಕಾಣುತ್ತಿದೆ. ಇನ್ನು ಮುಸ್ಲಿಂ ರಾಷ್ಟ್ರಗಳ ಕಥೆ ಹೊಸದೇನೂ ಅಲ್ಲ. ಹೊಸದು ಅಂದರೆ, ಉದಾರವಾದಿ ಮುಸ್ಲಿಂ ಸಮಾಜಗಳನ್ನು ಸಲಹುತ್ತಿದ್ದ ಟರ್ಕಿ, ಈಜಿಪ್ಟ್, ಇರಾಕ್, ಇಂಡೋನೇಷ್ಯಾ ಹಾಗೂ ಬಂಗ್ಲಾದೇಶಗಳಲ್ಲೂ ಈಗ ಮತೀಯ ಮೂಲಭೂತವಾದ ದೊಡ್ಡ ಪ್ರಮಾಣದಲ್ಲಿ ತಲೆ ಎತ್ತುತ್ತಿರುವುದು. ದುಃಖದ ಸಂಗತಿಯೆಂದರೆ, ಭಾರತವೂ ಇದೇ ಹಾದಿಯಲ್ಲಿ ನಡೆಯುವ ಆತಂಕ ಈಗ ಎದುರಾಗಿರುವುದು. ಈ ಬರಹದ ಮೊದಲಲ್ಲಿ ನೀಡಿರುವ ನಮ್ಮ ಇಂದಿನ ದೈನಂದಿನ ಬದುಕಿನ ವಿವರಗಳ ಪರೋಕ್ಷ ಸಂದೇಶ ಇದೇ ಆಗಿದೆ.

ಭಾರತದ ಧರ್ಮ ಇತರ ಧರ್ಮಗಳ 'ಹಾವಳಿ'ಯನ್ನು ಎದುರಿಸಲು ಹೋಗಿ, ತಾನೇ ಅವುಗಳಂತಾಗುವ ದುರಂತವನ್ನೀಗ ಎದುರಿಸುತ್ತಿದೆ. ಇತರ ಧರ್ಮಗಳ ಈ ಹಾವಳಿಗೆ, ತಾನು ತನ್ನೆಲ್ಲ ಆಧ್ಯಾತ್ಮಿಕತೆಯನ್ನು ಕಳೆದುಕೊಂಡಿರುವುದೇ ಕಾರಣವಾಗಿದೆ ಎಂಬ ಜ್ಞಾನೋದಯ ಭಾರತದ ಧರ್ಮಕ್ಕಿನ್ನೂ ಆಗಿಲ್ಲ. ಆಗುವಂತೆಯೂ ತೋರುತ್ತಿಲ್ಲ, ಅದರ ನಾಯಕತ್ವದ ಸದ್ಯದ ಶಸ್ತ್ರಾಸ್ತ್ರ ಸ್ವರೂಪ ನೋಡಿದರೆ! ಇದರ-ಇಂತಹ ವಾತಾವರಣದ- ಪರಿಣಾಮಗಳು ಇಂದು, ನಮ್ಮ ಶಾಸಕಾಂಗವಿರಲಿ-ಅದನ್ನು ಹೇಗೋ ಚುನಾವಣೆಗಳ ಮೂಲಕ ನಿವಾರಿಸಿಕೊಳ್ಳಬಹುದು- ನಮ್ಮ ಕಾರ್ಯಾಂಗ(ವಿಶೇಷವಾಗಿ ಪೋಲೀಸ್ ಇಲಾಖೆ) ಮತ್ತು ಮುಖ್ಯವಾಗಿ ನ್ಯಾಯಾಂಗದ ಮೇಲೆ ಆಗುತ್ತಿರುವ ರೀತಿ ನೋಡಿದರೆ, ನಾವು ಹೆಚ್ಚು ಹೆಚ್ಚು ಆಧುನಿಕವಾಗುತ್ತಾ ಹೋದಂತೆ ಹೇಗೆ ಹೆಚ್ಚೆಚ್ಚು ಅನಾಗರೀಕವಾಗುತ್ತಾ ಹೋಗುತ್ತಿದ್ದೇವೆ ಎಂಬುದು ಸ್ಪಷ್ಟವಾಗುತ್ತದೆ. ಪೋಲೀಸ್ ಹಾಗೂ ನ್ಯಾಯಾಂಗದ ಕೆಳ ಹಂತಗಳಿಗಷ್ಟೇ ಹಬ್ಬಿರುವ ಧಾರ್ಮಿಕ ವಿಕ್ಷಿಪ್ತತೆಯ ಈ ರೋಗ, ಮೇಲಿನ ಹಂತಗಳಿಗೂ ತಲುಪಲು ಬಹು ಕಾಲ ಬೇಕಾಗಲಾರದು, ಪರಿಸ್ಥಿತಿ ಹೀಗೇ ಮುಂದುವರೆದರೆ.* ಅಂದರೆ ಜನತೆ, ಮಾರುಕಟ್ಟೆ-ಆಧುನಿಕತೆಯ ಅಮಲಿನಲ್ಲಿ ತನ್ನ ಪಜ್ಞೆಯನ್ನೇ ಕಳೆದುಕೊಳ್ಳುತ್ತಾ, ಕೊನೆಗೆ ಭೂಮಿಯನ್ನೇ ಕಳೆದುಕೊಳ್ಳುವ ಸ್ಥಿತಿಯನ್ನು ಆಹ್ವಾನಿಸುವ ದಾರಿಯಲ್ಲಿ ನಡೆಯುತ್ತಾ ಹೋದರೆ!

---

*ಈಚೆಗೆ ಅಲಹಾಬಾದ್ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರೊಬ್ಬರು ಭಗವದ್ಗೀತೆಯನ್ನು ರಾಷ್ಟ್ರೀಯ ಧರ್ಮಗ್ರಂಥವನ್ನಾಗಿ ಘೋಷಿಸಬೇಕೆಂದು 'ತೀರ್ಪು' ನೀಡಿದ್ದಾರೆ!

ಈ ನಡಿಗೆಯ ದಿಕ್ಕನ್ನು, ರಾಜಕೀಯ ಇಚ್ಛಾಶಕ್ತಿಯಿದ್ದರೆ ಬದಲಾಯಿಸಬಹುದು ಎಂಬ ವಿಶ್ವಾಸವನ್ನು ಹುಟ್ಟಿಸುವಂತಿದೆ, ಉತ್ತರ ಪ್ರದೇಶದ ಇತ್ತೀಚಿನ ಚುನಾವಣೆಯ ಫಲಿತಾಂಶಗಳು. ಇಲ್ಲಿ ನಾನು ಬಿ.ಎಸ್.ಪಿ.ಯ ವಿಜಯದ ಬಗ್ಗೆ ಹೇಳುತ್ತಿಲ್ಲ. ಏಕೆಂದರೆ, ಮನುಷ್ಯನ ಪ್ರಜ್ಞೆ ತಪ್ಪಿಸುವ ಆಧುನಿಕ ನಾಗರೀಕತೆ ಕುರಿತಂತೆ ಬಿ.ಎಸ್.ಪಿ. ನಾಯಕರ ನಿಲುವು–ಅವರು ಬುದ್ಧನಿಗೆ ನಮಿಸುವವರಾದರೂ, ಅದು ಬರೀ ಪ್ರತೀಕಾರಾರ್ಥವಾದುದಾಗಿರುವುದರಿಂದ–ಇತರ ಪಕ್ಷಗಳ ನಾಯಕರಿಗಿಂತ ವಿಭಿನ್ನವಾಗಿರುವಂತೆ ಕಾಣುತ್ತಿಲ್ಲ. ಸಿರಿ ಸಂಪತ್ತನ್ನು ಕುರಿತಂತೆ ಅವರ ನಾಯಕಿ ಪದೇ ಪದೇ ಪ್ರದರ್ಶಿಸುತ್ತಿರುವ ದೌರ್ಬಲ್ಯವೇ ಇದಕ್ಕೆ ಸಾಕ್ಷಿಯಾಗಿದೆ. ನಿಜ, ಬಿ.ಎಸ್.ಪಿ. ಸದ್ಯದ ಎಲ್ಲ ರಾಜಕೀಯ ಪಕ್ಷಗಳು ಪ್ರತಿನಿಧಿಸುವ ಅವಾಂತರಕಾರಿ ಪರಿಸ್ಥಿತಿಗೆ ಪರ್ಯಾಯವಲ್ಲದಿರಬಹುದು; ಆದರೆ ಕಣ್ಣಿಗೆ ರಾಚುವಂತಹ ದೊಡ್ಡ ಪ್ರತಿಕ್ರಿಯೆಯಂತೂ ಹೌದು. ಅಷ್ಟೇ ಅಲ್ಲ, ಹೀಗೇ ಎಚ್ಚರ ತಪ್ಪುತ್ತಾ ಹೋದರೆ ಎಂತಹ ಪರ್ಯಾಯ ರೂಪುಗೊಳ್ಳಬಹುದು ಎಂಬುದರ ಎಚ್ಚರಿಕೆ ಗಂಟೆ ಕೂಡಾ ಆಗಿರಬಹುದು!

(ವಿಕ್ರಾಂತ ಕರ್ನಾಟಕ ಮೇ ೨೫, ೨೦೦೭)

'ಮಾಯಾವತಿ ವಿಜಯ'ದ ಹಿಂದಿನ ಸತ್ಯಗಳು

ಮೊನ್ನೆ ಉತ್ತರ ಪ್ರದೇಶದಲ್ಲಿ ನಡೆದ ಚುನಾವಣೆಗಳಲ್ಲಿ ಮಾಯಾವತಿಯವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿರುವುದು ಒಂದು ಹೊಸ ರಾಜಕೀಯ ಪರ್ವದ ಆರಂಭ ಎಂದು ರಾಜಕೀಯ ವಿಶ್ಲೇಷಕರು ವ್ಯಾಖ್ಯಾನಿಸುತ್ತಿದ್ದಾರೆ. ಕೇವಲ ಎರಡು ದಶಕಗಳ ಸಕ್ರಿಯ ರಾಜಕಾರಣದಲ್ಲಿ, ಅದೂ ಒಂದು ದಶಕದಿಂದೀಚೆಗೆ ಏಕಾಂಗಿಯಾಗಿ ರಾಜಕಾರಣ ಮಾಡುತ್ತಾ ಬಂದ ದಲಿತ ಮಹಿಳೆಯೊಬ್ಬರು ಯಾರ ಮುಲಾಜೂ ಇಲ್ಲದೆ, ಸ್ವಂತ ರಾಜಕೀಯ ಶಕ್ತಿಯ ಆಧಾರದ ಮೇಲೆ ರಾಷ್ಟ್ರದ ಅತಿ ದೊಡ್ಡ ಹಾಗೂ ರಾಜಕೀಯವಾಗಿ ಅತಿ ಮಹತ್ವವುಳ್ಳ ರಾಜ್ಯವೊಂದರ ಮುಖ್ಯಮಂತ್ರಿಯಾಗುವುದು ಸಾಮಾನ್ಯ ಸಂಗತಿಯಲ್ಲ. ಈ ದೃಷ್ಟಿಯಿಂದ ಮಾಯಾವತಿಯವರು ಅಭಿನಂದನಾರ್ಹರಷ್ಟೇ ಅಲ್ಲ, ಮುಂದಿನ ದಿನಗಳ ರಾಜಕಾರಣವನ್ನು ಗುಣಾತ್ಮಕವಾಗಿ ಬದಲಾಯಿಸಬಲ್ಲ ರೀತಿಯಲ್ಲಿ ಅವರು ಆಡಳಿತ ನಡೆಸಲಿ ಎಂಬ ಹಾರೈಕೆಗೂ ಬಾಧ್ಯರಾಗಿದ್ದಾರೆ.

ಆದರೆ ಈ ಉತ್ಸಾಹದಲ್ಲಿ, ಉತ್ತರ ಪ್ರದೇಶ ಚುನಾವಣಾ ಫಲಿತಾಂಶವನ್ನು ರಾಜಕಾರಣದ ಹೊಸ ಪರ್ವವೆಂದು ಘೋಷಿಸುವಂತಹ ಕ್ರಾಂತಿಕಾರಕ ಬದಲಾವಣೆಯೇನೂ ಈ ಚುನಾವಣೆಯಲ್ಲಿ ಘಟಿಸಿಲ್ಲ ಎಂಬುದನ್ನೂ ನಾವು ಮರೆಯಬಾರದು. ಏಕೆಂದರೆ, ಮಾಯಾವತಿ ಉತ್ತರ ಪ್ರ.ದೇಶದ ಮುಖ್ಯಮಂತ್ರಿಯಾಗುತ್ತಿರುವುದು ಇದು ಮೊದಲೇನಲ್ಲ; ಇದು ನಾಲ್ಕನೇ ಬಾರಿ. ಅಂದರೆ, ದಲಿತ ನಾಯಕತ್ವವನ್ನು ನಮ್ಮ ರಾಜಕಾರಣ ಈಗಾಗಲೇ ಒಪ್ಪಿಕೊಂಡಿದೆ. ಆದುದರಿಂದ ಇದೇನೂ ಹೊಸ ಬೆಳವಣಿಗೆಯಲ್ಲ. ಇನ್ನು ಮಾಯಾವತಿ ಈ ಚುನಾವಣೆ ಹೊತ್ತಿಗೆ ರೂಪಿಸಿಕೊಂಡ ಜಾತಿ ಸಮೀಕರಣವೂ ನಮ್ಮ ರಾಜಕಾರಣಕ್ಕೆ ಹೊಸದೇನೂ ಅಲ್ಲ. ಏಕೆಂದರೆ ಪ್ರತಿ ಚುನಾವಣೆಯಲ್ಲೂ ಹಲವು ಜಾತಿ ಸಮೀಕರಣಗಳ ಪ್ರಯೋಗಗಳು ನಡೆದೇ ಇರುತ್ತವೆ. ಕಾಂಗ್ರೆಸ್, ಬಿಜೆಪಿಗಳು ಅಧಿಕಾರ ಗದ್ದುಗೆ ಏರಿದ್ದೂ ಇಂತಹ ಜಾತಿ ಸಮೀಕರಣಗಳ ಯಶಸ್ಸಿನ ಆಧಾರದ ಮೇಲೇ. ಈಗ ಬಿ.ಎಸ್.ಪಿ. ಯಶಸ್ವಿಯಾಗಿ ಸಾಧಿಸಿರುವ ದಲಿತ+ಬ್ರಾಹ್ಮಣ+ಮುಸ್ಲಿಂ ಸಮೀಕರಣ ೨೫ ವರ್ಷಗಳ ಹಿಂದಿನವರೆಗೆ ಕಾಂಗ್ರೆಸ್ ಯಶಸ್ವಿಯಾಗಿ ಪ್ರಯೋಗಿಸುತ್ತಿದ್ದ ಜಾತಿ ಸಮೀಕರಣವೇ ಆಗಿದೆ. ಒಂದು ಬದಲಾವಣೆ ಎಂದರೆ ಈ ಸಮೀಕರಣ ಈಗ ತಲೆಕೆಳಗಾಗಿ ನಿಂತಿದೆಯಷ್ಟೆ: ನಾಯಕತ್ವ ಮೇಲ್ಜಾತಿಯಿಂದ ಅಸ್ಪೃಶ್ಯ ಜಾತಿಗೆ ಹೋಗಿದೆ. ಇದನ್ನು ಬಿ.ಎಸ್.ಪಿ. ಸ್ವಂತ ಬಲದಿಂದ ಸಾಧಿಸಿದೆ ಎಂದು ಹೇಳುವುದೂ ಅರ್ಧ ಸತ್ಯದ ಮಾತು ಮಾತ್ರ ಆಗುತ್ತದೆ.

ಬಿ.ಎಸ್.ಪಿ., ಎಲ್ಲ ದ್ವಿಜ ಜಾತಿಗಳ(ಬ್ರಾಹ್ಮಣ, ಕ್ಷತ್ರಿಯ, ವೈಶ್ಯ) ವಿರುದ್ಧ ರಣಕಹಳೆ ಊದುತ್ತ; ಜಾತಿ ಶ್ರೇಣೀಕರಣದಲ್ಲಿ ಅಂತರ್ಗತವಾಗಿದೆ ಎಂದು ಹೇಳಲಾದ 'ಮನುವಾದಿ' ರಾಜಕಾರಣವನ್ನೇ ತನ್ನ ತಾತ್ವಿಕ ಕೇಂದ್ರವಾಗಿಟ್ಟುಕೊಂಡು ರಾಜಕಾರಣ ಆರಂಭಿಸಿತ್ತು. ಈಗ ಅದು, ತನ್ನ ಚುನಾವಣಾ ಚಿಹ್ನೆ ಆನೆಯನ್ನು 'ಇದು ಆನೆಯಲ್ಲ, ಸಾಕ್ಷಾತ್ ಗಣೇಶ' ಎಂದು ಘೋಷಿಸಿಕೊಂಡು, ಅದೇ ಜಾತಿಗಳ ಓಲೈಕೆಯೊಂದಿಗೆ ರಾಜಕಾರಣ ಮಾಡುವ ಸ್ಥಿತಿಗೆ ಈಡಾಗಿದೆ. ಈ ವಿರೋಧಾಭಾಸವನ್ನು ವಿವರಿಸುವುದಾದರೂ ಹೇಗೆ? ಇದನ್ನು 'ಸಮಕಾಲೀನ ವಾಸ್ತವ ರಾಜಕಾರಣ' ಎಂದು ಕರೆಯುವುದಾದರೆ ಹೊಸ ರಾಜಕೀಯ ಪರ್ವದ ಆರಂಭದ ಮಾತಿಗೇನಿದೆ ಅರ್ಥ? ನಾಯಕತ್ವದ ಜಾತಿ ಬದಲಾವಣೆಯನ್ನೇ ಸಾಮಾಜಿಕ ಕ್ರಾಂತಿಯ ಆರಂಭ ಎಂದು ನಂಬುವ ಕಾಲ ಎಂದೋ ಮುಗಿದು ಹೋಗಿದೆ. ಯಾಕೆಂದರೆ ಒಂದಲ್ಲ ಒಂದು ಹಂತದಲ್ಲಿ ನಮ್ಮ ರಾಷ್ಟ್ರ-ರಾಜ್ಯ ರಾಜಕಾರಣದಲ್ಲಿ ಎಲ್ಲ ಜಾತಿಗಳ ನಾಯಕತ್ವದ ಪ್ರಯೋಗ ಆಗಿ ಹೋಗಿದೆ. ಅವೆಲ್ಲವೂ ರಾಜಕಾರಣದಲ್ಲಿ ಯಾವುದೇ ಮೂಲಭೂತ ಬದಲಾವಣೆ ತರುವಲ್ಲಿ ವಿಫಲವಾಗಿರುವುದನ್ನು ಸಮಕಾಲೀನ ರಾಜಕೀಯ ಚರಿತ್ರೆ ಹೇಳುತ್ತಿದೆ.

ಪಟ್ಟಭದ್ರ ಹಿತಾಸಕ್ತಿಗಳೆಂದು ಸರಿಯಾಗಿಯೇ ಗುರುತಿಸಲ್ಪಟ್ಟಿದ್ದ ಬ್ರಾಹ್ಮಣ-ಬನಿಯಾ ಜಾತಿ ರಾಜಕಾರಣದ ವಿರುದ್ಧ ಅರವತ್ತರ ದಶಕದಲ್ಲಿ ತಾತ್ವಿಕವಾಗಿ ಹೋರಾಟ ಆರಂಭಿಸಿದ ಸಮಾಜವಾದಿ ರಾಜಕಾರಣ ಕಾಲಾಂತರದಲ್ಲಿ ಭ್ರಷ್ಟಗೊಂಡು, ಹಲವು ಪಕ್ಷಗಳ ರೂಪದಲ್ಲಿ ಕೌಟುಂಬಿಕ ಪಾಳೇಗಾರಿ ರಾಜಕಾರಣವಾಗಿ ಅವನತಿಗೊಂಡಿರುವುದನ್ನು ನಾವಿಂದು ನೋಡುತ್ತಿದ್ದೇವೆ. ಯಾವ ಜಾತಿ ಪದ್ಧತಿಯಿಂದಾಗಿ ಅನೇಕ ಅನ್ಯಾಯಗಳಾಗಿದ್ದವೋ ಅವನ್ನು ಸರಿಪಡಿಸಲೆಂದೇ ಆರಂಭವಾದ ರಾಜಕಾರಣ, ಅದೇ ಜಾತಿ ಪದ್ಧತಿಯನ್ನು ಸ್ಥಿರಗೊಳಿಸುವ ಪ್ರಯತ್ನವಾಗಿ ಪರಿವರ್ತಿತವಾಗಿರುವ ವಿಪರ್ಯಾಸವಿದು! ಜಾತಿ ರಾಜಕಾರಣ ಎರಡಲಗಿನ ಕತ್ತಿಯಿದ್ದಂತೆ: ಎಚ್ಚರ ತಪ್ಪಿದರೆ ಅದು ಜಾತೀಯ ರಾಜಕಾರಣವಾಗುತ್ತದೆ. ಈಗ ಆಗಿರುವದೂ ಅದೇ. ಒಂದು ನಿರ್ದಿಷ್ಟ ಅರ್ಥದ ಸಾಮಾಜಿಕ ನ್ಯಾಯವನ್ನೇ ಸಮಾಜವಾದದ ಪರಮ ಮೌಲ್ಯವೆಂದು ಪ್ರತಿಪಾದಿಸುವ ಈ ರಾಜಕಾರಣವನ್ನು ಸಮಾಜವಾದಿ ರಾಜಕಾರಣವೆಂದು ಕರೆಯುವುದು, ಸಮಾಜವಾದಕ್ಕೆ ಮಾಡಬಹುದಾದ ದೊಡ್ಡ ಅಪಚಾರವೇ ಆಗುತ್ತದೆ. ಬಿ.ಎಸ್.ಪಿ. ಹುಟ್ಟಿದ್ದೇ ಇಂತಹ ವಕ್ರ ಸಮಾಜವಾದದ ರಾಜಕಾರಣಕ್ಕೆ ಪ್ರತಿಕ್ರಿಯೆಯಾಗಿ.

ಈ ಹಿನ್ನೆಲೆಯಲ್ಲಿ ಉತ್ತರ ಪ್ರದೇಶದಲ್ಲಿನ ಮಾಯಾವತಿ ವಿಜಯ; ಅರ್ಥ ಅವರ ವಿಜಯವಾಗಿದ್ದರೆ, ಇನ್ನರ್ಧ ಮುಲಾಯಂ ಸಿಂಗ್ ಯಾದವರ ಅಪಜಯವಾಗಿದೆ. ಸಮಾಜವಾದದ ಹೆಸರು ಹೇಳಿಕೊಂಡೇ ಅಮರ್ ಸಿಂಗ್‌ರಂತಹ ಅಸಭ್ಯ ಮತ್ತು ಅಮಿತಾಭ್ ಬಚ್ಚನ್‌ರಂತಹ ಅವಕಾಶವಾದಿ ರಾಜಕೀಯ ದಲ್ಲಾಳಿಗಳ ಸಹವಾಸದಲ್ಲಿ, ಅನಿಲ್ ಅಂಬಾನಿಯಂತಹ ಸಮಯ ಸಾಧಕ ಬಂಡವಾಳಶಾಹಿಗಳ ಜೊತೆ ಶಾಮೀಲಾಗಿ ರಾಜ್ಯಭಾರ ಮಾಡತೊಡಗಿದ್ದ ಮುಲಾಯಂ ಸೃಷ್ಟಿಸಿದ ಆಡಳಿತಾತ್ಮಕ ಅವಾಂತರಗಳೇ ಬಿ.ಎಸ್.ಪಿ.ಗೆ ವರವಾಗಿ ಪರಿಣಮಿಸಿದವು. ಮುಲಾಯಂರ ಜಾತಿ ಬಾಂಧವರು ಗ್ರಾಮಾಂತರ ಪ್ರದೇಶಗಳಲ್ಲಿ ಹಾಗೂ ಅಮರಸಿಂಗ್‌ರ ಬಾಡಿಗೆ ಬಂಟರು ನಗರ ಪ್ರದೇಶಗಳಲ್ಲಿ ನಡೆಸುತ್ತಿದ್ದ ದುಂಡಾವರ್ತಿ; ರಾಜ್ಯದಲ್ಲಿ ಮೊದಲು ಕಾನೂನು ಹಾಗೂ ಶಿಸ್ತು ಪರಿಪಾಲನೆಯಾಗಬೇಕಿದೆ, ನಂತರ ಅಭಿವೃದ್ಧಿಯ ವಿಷಯ ಎಂಬ ಅಭಿಪ್ರಾಯವನ್ನು ಕೆಳಜಾತಿ ಹಾಗೂ ಮೇಲ್ಜಾತಿಗಳೆರಡರಲ್ಲೂ ಗಟ್ಟಿಗೊಳಿಸಿತು.

ಇದಕ್ಕೆ ತಕ್ಕನಾಗಿ, ಈ ಹೊತ್ತಿಗೆ ಮಾಯಾವತಿಗೆ ಹಿಂದಿನ ಚುನಾವಣೆಗಳ ಮತ್ತು ಅಧಿಕಾರಾವಧಿಗಳ ಅನುಭವದ ಆಧಾರದ ಮೇಲೆ, ಬರೀ ದಲಿತರ ಮತಗಳ ಮೇಲ ತಮ್ಮ ರಾಜಕೀಯ ಕನಸು ನನಸಗಾದೆಂದು ಮನವರಿಕೆಯಾಗತೊಡಗಿತ್ತು. ತಮ್ಮ ಗುರು ಕಾನ್ಶಿರಾಮರಿಂದ ದಲಿತ ರಾಜಕಾರಣದ ಯಶಸ್ಸಿಗೆ ಯಾವ ರಾಜಕೀಯ ಪರಿಸ್ಥಿಯನ್ನು ಹೇಗೆ ಬಳಸಿಕೊಳಬೇಕು ಎಂಬ ಎಲ್ಲ ಪಾಠಗಳನ್ನು ಕಲಿತಿದ್ದ ಅವರು, ಜಾತಿ ರಾಜಕಾರಣದ ಹೊಸ ಅಧ್ಯಾಯಕ್ಕಾಗಿ ವೇದಿಕೆಯನ್ನು ಸಿದ್ಧಪಡಿಸಿದ್ದರು. ಈಗ ಸತೀಶ್ ಚಂದ್ರ ಮಿಶ್ರ ಎಂಬ ಉತ್ತರ ಪ್ರದೇಶದ ದಕ್ಷ ಮತ್ತು ಜಾಣ ಬ್ರಾಹ್ಮಣ ಐ.ಎ.ಎಸ್. ಅಧಿಕಾರಿಯನ್ನು ತಮ್ಮ ಆಪ್ತ ಸಲಹೆಗಾರನನ್ನಾಗಿ ಆಯ್ದುಕೊಂಡ ಮಾಯಾವತಿ, ರಾಜ್ಯಾದ್ಯಂತ ಸೋದರತಾ ಸಮ್ಮೇಳನಗಳನ್ನು ಏರ್ಪಡಿಸುತ್ತಾ ಹೋದರು. ಆ ಮೂಲಕ ಅವರು, ತಮ್ಮದು ಹೆಸರಿಗೆ ಬಹುಜನ ಪಕ್ಷವಾದರೂ, ಅದು ವಾಸ್ತವವಾಗಿ ಸರ್ವಜನರ ಪಕ್ಷವಾಗಲು ಬಯಸಿದೆ ಎಂಬ ಸಂದೇಶವನ್ನು ಬಿತ್ತರಿಸತೊಡಗಿದರು. ಹಾಗೇ, ಹಿಂದಿನ ಚುನಾವಣೆಯ ಹೊತ್ತಿಗೇ ಆರಂಭಿಸಿದ್ದ ಮೇಲ್ಜಾತಿ ಜನರಿಗೂ ತಮ್ಮ ಪಕ್ಷದ ಟಿಕೆಟ್ ಕೊಡುವ ನೀತಿಯನ್ನು ಈ ಚುನಾವಣೆಗಳಲ್ಲಿ ಇನ್ನಷ್ಟು ವಿಸ್ತರಿಸಿ, ರಾಜ್ಯದಲ್ಲಿ ಅತ್ಯಂತ ಹೆಚ್ಚು ಮೇಲ್ಜಾತಿ ಜನರಿಗೆ ಟಿಕೆಟ್ ನೀಡಿದ 'ಹೆಗ್ಗಳಿಕೆ'ಯನ್ನು ಬಿ.ಎಸ್.ಪಿ.ಗೆ ತಂದುಕೊಟ್ಟರು!

ಕೆಲವೇ ವರ್ಷಗಳ ಹಿಂದಿನವರೆಗೆ ದ್ವಿಜ ಜಾತಿಗಳ ವಿರುದ್ಧದ ದ್ವೇಷಮಯ ಘೋಷಣೆಗಳ ಮೂಲಕವೇ ರಾಜಕಾರಣ ಮಾಡುತ್ತಿದ್ದ ಬಿ.ಎಸ್.ಪಿ.ಯ ಈ ಉತ್ತರೋತ್ತರ ಬದಲಾವಣೆಯನ್ನು, ದ್ವಿಜ ಜಾತಿಗಳೂ ಸೇರಿದಂತೆ ಮುಲಾಯಂರ ಆಳ್ವಿಕೆಯಲ್ಲಿ ತೊಂದರೆ ಅನುಭವಿಸಿದ್ದ ಎಲ್ಲ ಜಾತಿಗಳು, ರಾಜ್ಯದಲ್ಲಿ ಕುಸಿದು ಬಿದ್ದಿದ್ದ ಕಾನೂನು ಮತ್ತು ಶಿಸ್ತಿನ ಹಿನ್ನೆಲೆಯಲ್ಲಿ ಒಪ್ಪಿಕೊಂಡದ್ದು ಸಹಜವೇ ಆಗಿತ್ತು. ಈ ಸಮುದಾಯಗಳು ಮಾಯಾವತಿ ತಮ್ಮ ಈ ಹಿಂದಿನ ಅಧಿಕಾರಾವಧಿಯಲ್ಲಿ ಕಾನೂನು ಮತ್ತು ಶಿಸ್ತಿನ ವಿಷಯದಲ್ಲಿ ಎಷ್ಟು ಕಟ್ಟುನಿಟ್ಟಾದ ನಿರ್ಧಾರ ಕೈಗೊಳ್ಳಬಲ್ಲರೆಂಬುದನ್ನು ಗಮನಿಸಿದ್ದರು. ಅಲ್ಲದೆ, ರಾಜ್ಯದ ಇನ್ನೊಂದು ಪ್ರಮುಖ ಪಕ್ಷವಾಗಿದ್ದ ಬಿ.ಜೆ.ಪಿ., ಮುಖ್ಯವಾಗಿ ಕ್ಷತ್ರಿಯರ ಹಾಗೂ ಯಾದವೇತರ ಮಧ್ಯಮ ಜಾತಿಗಳ ಪಕ್ಷವಾಗಿ ಪರಿವರ್ತಿತವಾಗಿದ್ದುದರಿಂದ, ಈ ಜಾತಿಗಳಿಗೆ ಅಲ್ಲಿ ಜಾಗವಿಲ್ಲದೇ ಹೋಗಿತ್ತು. ಜೊತೆಗೆ, ಮುಲಾಯಂ ತಮ್ಮ ಕಾಂಗ್ರೆಸ್ ವಿರೋಧಿ ರಾಜಕಾರಣದ ಅಂಗವಾಗಿ ಬಿ.ಜೆ.ಪಿ.ಯೊಂದಿಗೆ ತೆರೆಮರೆಯಲ್ಲಿ ಚೆಲ್ಲಾಟ ನಡೆಸುತ್ತಿದ್ದುದನ್ನು ಗಮನಿಸುತ್ತಿದ್ದ ಮುಸ್ಲಿಮರು, ಚುನಾವಣೆಗಳು ಹತ್ತಿರವಾಗುತ್ತಿದ್ದಂತೆ ಗೆಲ್ಲುವ ಕುದುರೆ ಬಿ.ಎಸ್.ಪಿ.ಯೇ ಎಂದು ಗೊತ್ತಾಗುತ್ತಿದ್ದಂತೆ ತಮ್ಮ ನಿಷ್ಠೆಯನ್ನು ಬದಲಾಯಿಸಿ, ಬಹುಪಾಲು ಮಾಯಾವತಿ ಪಕ್ಷಕ್ಕೇ ಮತ ಹಾಕಿದರು.

ಹೀಗಾಗಿ ಮಾಯಾವತಿ ವಿಜಯ ಒಂದು ಅನುಕೂಲಕರ ರಾಜಕೀಯ ಪರಿಸ್ಥಿತಿಗೆ ತಕ್ಕನಾಗಿ ಅನುಸರಿಸಿದ ಜಾಣ ರಾಜಕೀಯ ತಂತ್ರದ ಗೆಲುವಾಗಿದೆಯೇ ಹೊರತು, ಯಾವುದೇ ರಾಜಕೀಯ ದರ್ಶನ ಅಥವಾ ಒಳನೋಟವನ್ನಾಧರಿಸಿದ ವಿಜಯವಾಗಿಲ್ಲ. ನಿಜ, ನಮ್ಮ ರಾಜಕಾರಣದ ಇತ್ತೀಚಿನ ಎಲ್ಲ ಗೆಲುವುಗಳೂ ಇಂತಹವೇ ಆಗಿವೆ. ಆದರೆ, ಅರವತ್ತು ವರ್ಷಗಳ ರಾಷ್ಟ್ರ ರಾಜಕಾರಣದ ಸಾಮಾಜಿಕ ಸಂರಚನೆಯನ್ನೇ ಬುಡಮೇಲುಗೊಳಿಸಿದ ಈ ವಿದ್ಯಮಾನ, ಯಾವುದೇ ತಾತ್ವಿಕ ಬೆನ್ನೆಲುಬಿಲ್ಲದ ಜಾತಿ ಸಮೀಕರಣವೊಂದರ ತಾಂತ್ರಿಕ ಯಶಸ್ಸಿನ ಆಧಾರದ ಮೇಲೆ ಘಟಿಸಿರುವುದು ಭವಿಷ್ಯದ ರಾಜಕಾರಣದ ದೃಷ್ಟಿಯಿಂದ ಆಶಾದಾಯಕ ಸಂಗತಿಯೇನೂ ಅಲ್ಲ. ಮಾಯಾವತಿ ಅಧಿಕಾರ ಸ್ವೀಕರಿಸಿದೊಡನೆ ಮಾಡಿದ ಮೊದಲು

ಪ್ರಕಟಣೆಗಳನ್ನು ಗಮನಿಸಿ. ಮೊದಲನೆಯದು, ತಮ್ಮ ಹಿಂದಿನ ಅಧಿಕಾರಾವಧಿಯಲ್ಲಿ ತಮ್ಮ ರಾಜಕೀಯ ಅಸ್ಮಿತೆಯ ಸಂಕೇತವಾಗಿ ಸ್ಥಾಪಿಸಿದ್ದ ಅಂಬೇಡ್ಕರ್ ವನವನ್ನು ನಿರ್ಲಕ್ಷಿಸಲಾಗಿದೆಯೆಂದು ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥನನ್ನು ಅಮಾನತ್ತಿನಲ್ಲಿಟ್ಟಿದ್ದುದು. ಎರಡನೆಯದು, ಮೇಲ್ಜಾತಿಗಳ ಬಡವರಿಗೂ ಮೀಸಲಾತಿ ವಿಸ್ತರಿಸುವ ಪ್ರಸ್ತಾಪ. ಇವೆರಡೂ ಯಾವುದೇ ಸಾಮಾಜಿಕ ದರ್ಶನವಿಲ್ಲದ ರೂಕ್ಷ ಜಾತಿ ರಾಜಕಾರಣ ತಂದುಕೊಡುವ ಅಗ್ಗದ ಜನಪ್ರಿಯತೆಯ ಮೇಲೆ ಕಣ್ಣಿಟ್ಟ ರಾಜಕೀಯ ಅಪ್ರಬುದ್ಧತೆಯ ನಿದರ್ಶನಗಳೇ ಆಗಿವೆ.

ಇಷ್ಟೆಲ್ಲ ಮಿತಿಗಳ ನಡುವೆಯೂ, ಮಾಯಾವತಿಯವರ ಈ ಪ್ರಯೋಗ ತಕ್ಕ ಮಟ್ಟಿಗಾದರೂ ಯಶಸ್ವಿಯಾಗಿ, ಹೊಸ ರಾಜಕಾಣದ ನಾಂದಿ ಪ್ರಯೋಗವಾದರೂ ಆಗಲಿ ಎಂದು ಆಸೆಯಿಂದ ಹಾರೈಸುವವರಲ್ಲಿ ಕೂಡಾ ಅವರ ರಾಜಕೀಯ ಯಶಸ್ಸಿನ ಬಗ್ಗೆ ಗಂಭೀರ ಅನುಮಾನಗಳಿವೆ. ಕಾರಣಗಳು ಹಲವಾರು: ಅವರು ಪಕ್ಷ ಕಟ್ಟಿರುವ ಸರ್ವಾಧಿಕಾರಿ ರೀತಿ, ಅವರ ಅರಮನೆಗಳಂತಹ ಬಂಗಲೆಗಳು ಮತ್ತು ದುಂದು ವೆಚ್ಚದ ಅವರ ಹುಟ್ಟುಹಬ್ಬದ ಸಮಾರಂಭಗಳಲ್ಲಿ ಪ್ರದರ್ಶಿತವಾಗುವ ವಜ್ರಾಭರಣಗಳ ವೈಭೋಗ ಹಾಗೂ ಅಧಿಕಾರಕ್ಕಾಗಿ ಎಲ್ಲ ಮೌಲ್ಯಗಳನ್ನೂ ಧಿಕ್ಕರಿಸಿ ನಿಲ್ಲುವ ಅವರ ರಾಜಕೀಯ ಭಂಡತನ. ಅತಿ ಹೆಚ್ಚು ಮೇಲ್ಜಾತಿಯವರಿಗೆ ಟಿಕೆಟ್ ಕೊಟ್ಟ ಹೆಗ್ಗಳಿಕೆ ಇರುವ ಇವರ ಪಕ್ಷದ ಇನ್ನೊಂದು ಹೆಗ್ಗಳಿಕೆಯೆಂದರೆ, ಅತ್ಯಂತ ಹೆಚ್ಚು ಜನ ಅಪರಾಧಿಗಳಿಗೆ ಟಿಕೆಟ್ ಕೊಟ್ಟದ್ದು. ಅವರಲ್ಲಿ ಅರ್ಧದಷ್ಟು ಜನ ಗೆದ್ದು ಮಂತ್ರಿಮಂಡಲದ ಅರ್ಧ ಭಾಗವನ್ನು ಆಕ್ರಮಿಸಿಕೊಂಡಿದ್ದಾರೆ! ಇದು ಸಾಧ್ಯವಾದದ್ದು, ಪಕ್ಷದ ಬಹುತೇಕ ಟಿಕೆಟ್‌ಗಳನ್ನು ಅತಿ ಹೆಚ್ಚು 'ಶುಲ್ಕ' ನೀಡುವವರಿಗೆ 'ಹರಾಜು' ಹಾಕಿದುದರಿಂದಾಗಿ. ಹಾಗಾಗಿಯೇ ಹೆಚ್ಚು ಶ್ರೀಮಂತ ಅಭ್ಯರ್ಥಿಗಳ ವಿಷಯದಲ್ಲಿಯೂ ಇವರ ಪಕ್ಷ ಪ್ರಥಮ ಸ್ಥಾನದಲ್ಲಿತ್ತು!

ಹೀಗೆ ಯಾವುದೇ ರಾಜಕೀಯ ಮುನ್ನೋಟದ ಪ್ರಣಾಳಿಕೆಯೇ ಇಲ್ಲದೆ, ಜಾತಿಯೊಂದಿಗೆ ಹಣದ ರಾಜಕೀಯವನ್ನೇ ನಂಬಿ ಮಾಯಾವತಿ ಈ ಚುನಾವಣೆಗಳಲ್ಲಿ ಯಶಸ್ಸು ಸಾಧಿಸಿದ್ದಾರೆ. ಆದರೆ, ಅವರನ್ನು ಈ ಯಶಸ್ಸಿನವರೆಗೆ ಕರೆದು ತಂದಿರುವ ಅವರ ಈವರೆಗಿನ ಹದಿನೈದು ವರ್ಷಗಳ ಸಕ್ರಿಯ ರಾಜಕಾರಣದ ಸ್ವರೂಪದ ಮೇಲೆ ಬೆಳಕು ಚೆಲ್ಲುವಂತಿವೆ, ಅವರ ವಿರುದ್ಧ ದಾಖಲಾಗಿರುವ ಈ ಭ್ರಷ್ಟಾಚಾರದ ಮೊಕದ್ದಮೆಗಳು: ಸುಪ್ರೀಂ ಕೋರ್ಟಿನ ಸೂಚನೆಯನ್ವಯ ದಾಖಲಾಗಿರುವ ೧೭೫ ಕೋಟಿ ರೂಪಾಯಿಗಳ ತಾಜ್ ಕಾರಿಡಾರ್ ಹಗರಣ ಮತ್ತು ಸಿ.ಬಿ.ಐ. ದಾಖಲಿಸಿರುವ ೮.೭೭ ಕೋಟಿ ರೂಪಾಯಿಗಳ ಅಕ್ರಮ ಆಸ್ತಿ ಹಾಗೂ ೭.೩೬ ಕೋಟಿ ರೂಪಾಯಿಗಳ ಲೆಕ್ಕ ತೋರಿಸದ ನಗದು ಹಣದ ಮೊಕದ್ದಮೆಗಳು; ಜೊತೆಗೆ ಹತ್ತು ಕೋಟಿ ರೂಪಾಯಗಳಿಗೂ ಹೆಚ್ಚಿನ ಮೌಲ್ಯದ ಬೇನಾಮಿ ಆಸ್ತಿ ಸಂಬಂಧ ನಡೆಯುತ್ತಿರುವ ತನಿಖೆ. ಇವುಗಳ ಎದುರಿನಲ್ಲಿ ಮತ್ತು ತದ್ವಿರುದ್ಧ ರಾಜಕೀಯ ನಿರೀಕ್ಷೆಗಳನ್ನು ಪ್ರತಿನಿಧಿಸುವ ಜಾತಿ ಶಕ್ತಿಗಳ ಮಧ್ಯೆ, ಇಡೀ ಸಮಾಜದ ಸಾರ್ವತ್ರಿಕ ಉನ್ನತಿಯಿರಲಿ; ಸರ್ವಜಾತಿಗಳ ಬಡವರ ಉದ್ಧಾರಕ್ಕಾಗಿಯಾದರೂ ಅವರು ಯಾವ ತಾತ್ವಿಕ ಮತ್ತು ನೈತಿಕ ನೆಲೆಗಟ್ಟಿನಲ್ಲಿ ಕೆಲಸ ಮಾಡಲು ಸಾಧ್ಯವಾಗುವುದೋ ಕಾದು ನೋಡಬೇಕು.

(ವಿಕ್ರಾಂತ ಕರ್ನಾಟಕ ಜೂನ್ ೮, ೨೦೦೭)

ರೈತರ ಆತ್ಮಹತ್ಯೆ : ತುಕ್ಕು ಹಿಡಿದ ಚರ್ಚೆ

ರೈತರ ಆತ್ಮಹತ್ಯೆ ತಡೆಯಲು ರಾಜ್ಯ ಸರ್ಕಾರ ಅಧ್ಯಯನ ಸಮಿತಿಯೊಂದನ್ನು ರಚಿಸಿದೆ. ಅದು, ಹೋದ ವಾರ ಮುಖ್ಯಮಂತ್ರಿಗಳು ಕರೆದಿದ್ದ ರೈತರೊಡನೆಯ ಸಂವಾದ ಕಾರ್ಯಕ್ರಮದಲ್ಲಿ ವ್ಯಕ್ತವಾದ ಸಲಹೆ-ಸೂಚನೆಗಳ ಆಧಾರದ ಮೇಲೆ ಅದು ಪರಿಹಾರ ಸಾಧ್ಯತೆಗಳನ್ನು ಪರಿಶೀಲಿಸುವುದಂತೆ. ಆದರೆ, ಈ ಕಾರ್ಯಕ್ರಮದಲ್ಲಿ ವ್ಯಕ್ತವಾದ ಸಲಹೆ-ಸೂಚನೆಗಳು ಎಷ್ಟರ ಮಟ್ಟಿಗೆ ಹೊಸವು ಮತ್ತು ಈವರೆಗೆ ಪರಿಶೀಲನೆಗೆ ಒಳಗಾಗಿಲ್ಲದಂತಹವೇ ಎಂಬ ಪ್ರಶ್ನೆ ಇದ್ದೇ ಇದೆ. ಈ ದೃಷ್ಟಿಯಿಂದ ನೋಡಿದಾಗ ಮತ್ತು ಸಂವಾದ ಕಾರ್ಯಕ್ರಮದ ಕೊನೆಯಲ್ಲಿ ಮುಖ್ಯಮಂತ್ರಿಗಳು ಆಡಿದ ಮಾತುಗಳು ವಿದಾಯ ಭಾಷಣದ ಶೈಲಿಯಲ್ಲಿದ್ದುದನ್ನು ಗಮನಿಸಿದಾಗ, ಇಡೀ ಕಾರ್ಯಕ್ರಮ ಯಾವುದೋ ತತ್ಕಾಲೀನ ರಾಜಕೀಯ ಬಿಕ್ಕಟ್ಟಿನಿಂದ ಬಚಾವಾಗುವ ಪ್ರಯತ್ನವೆಂಬಂತೆಯೂ ಕೆಲವರಿಗೆ ಕಂಡಿದ್ದರೆ ಆಶ್ಚರ್ಯವಿಲ್ಲ.

ರಾಷ್ಟ್ರದಲ್ಲಿ ಈವರೆಗೆ ಒಂದೂವರೆ ಲಕ್ಷಕ್ಕೂ ಹೆಚ್ಚು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರಾಜ್ಯದಲ್ಲಿ ಆರೇಳು ವರ್ಷಗಳಲ್ಲಿ ಆತ್ಮಹತ್ಯೆ ಮಾಡಿಕೊಂಡವರ ಸಂಖ್ಯೆ ಮುವ್ವತ್ತು ಸಾವಿರವನ್ನು ಮೀರಿದೆ. ಈ ಸರ್ಕಾರ ಬಂದ ಮೇಲೆ ಈ ಆತ್ಮಹತ್ಯೆ ಪ್ರವೃತ್ತಿ ಇನ್ನಷ್ಟು ತೀವ್ರಗೊಂಡಿರುವುದು ಇನ್ನೊಂದು ವಿಶೇಷ. ಅಲ್ಲದೆ, ಈವರೆಗೆ ಕೇಂದ್ರ ಹಾಗೂ ವಿವಿಧ ರಾಜ್ಯ ಸರ್ಕಾರಗಳು ಈ ಸಂಬಂಧ ಕೈಗೊಂಡ ಅಧ್ಯಯನಗಳು ಮಾಡಿದ ಶಿಫಾರ್ಸುಗಳ ಆಧಾರದ ಮೇಲೆ ಸಾಲ ಮನ್ನಾ, ಸುಲಭ ಬಡ್ಡಿ ದರದ ಸಾಲ ಸೌಲಭ್ಯ, ಬೀಜ ಪೂರೈಕೆ ಹಾಗೂ ಸಂಗ್ರಹ ಸಾಮರ್ಥ್ಯದ ಸುಧಾರಣೆ, ಕನಿಷ್ಠ ಮತ್ತು ಬೆಂಬಲ ಬೆಲೆ ಘೋಷಣೆ ಮುಂತಾದ ಪರಿಹಾರ ಕ್ರಮಗಳನ್ನು ಪ್ರಕಟಿಸುತ್ತಾ ಹೋದಂತೆ, ರೈತರ ಆತ್ಮಹತ್ಯೆ ಪ್ರಕರಣಗಳೂ ಹೆಚ್ಚುತ್ತಿರುವುದನ್ನೂ ಗಮನಿಸಬೇಕಿದೆ. ನಮ್ಮ ಮುಖ್ಯಮಂತ್ರಿಗಳ ಸಂವಾದ ಕಾರ್ಯಕ್ರಮ ನಡೆಯುತ್ತಿದ್ದ ಸಮಯದಲ್ಲೇ ಮತ್ತು ಆನಂತರವೂ ರಾಜ್ಯದ ಹಲವಾರು ಕಡೆಯಿಂದ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿವೆ. ಇದೆಲ್ಲ ಏನನ್ನು ಸೂಚಿಸುತ್ತದೆ?

ರೈತರ ಸಮಸ್ಯೆಯು ಸಾಲ, ಬೀಜ ಪೂರೈಕೆ, ಬೆಳೆ ಬೆಲೆ ಮುಂತಾದ ಕಸುಬು ಸಂಬಂಧಿ ಸಮಸ್ಯೆಯಾಗಿ ಮಾತ್ರ ಉಳಿದಿಲ್ಲ. ಸಂವಾದದಲ್ಲಿ ಪಾಲ್ಗೊಂಡಿದ್ದ ರೈತ ಮುಖಂಡರೊಬ್ಬರು ಸೂಕ್ಷ್ಮವಾಗಿ ಹೇಳಿದಂತೆ, ರೈತರ ಆತ್ಮಬಲ ಕುಸಿದು ಹೋಗಿರುವುದೇ ಆತ್ಮಹತ್ಯೆಗೆ ಮೂಲ ಕಾರಣವಾಗಿದೆ. ಆದರೆ, ಈ ಸೂಚನೆ ನೀಡಿದ ಮುಖಂಡರು ಅದನ್ನು ವಿಸ್ತರಿಸಿ ವಿಶ್ಲೇಷಿಸಲು ಹೋಗಲಿಲ್ಲ. ನಮ್ಮ ರೈತ ಚಳುವಳಿಯಿಂದ ನಮ್ಮ ರೈತ ಮುಖಂಡರಿಗೆ ಬಳುವಳಿಯಾಗಿ

ಬಂದ ದೌರ್ಬಲ್ಯವಿದು. ರೈತ ಚಳುವಳಿಯನ್ನು ಸ್ಥೂಲವಾಗಿ ಬೆಳೆ ಬೆಲೆ ಕೇಂದ್ರಿತವಾದ ಕಾರ್ಯಕ್ರಮವಾಗಿ ರೂಪಿಸಿದ ಅದರ ನಾಯಕರು, ರೈತನ ಸಮಸ್ಯೆ ಹೇಗೆ ಒಟ್ಟಾರೆ ವ್ಯವಸ್ಥೆಯ ಸಮಸ್ಯೆಯೇ ಆಗಿದೆ ಎಂಬುದನ್ನರಿತು ವಿವರಿಸಿ ಚಳುವಳಿಯನ್ನು ಕಟ್ಟುವ ವ್ಯವಧಾನವಿಲ್ಲದೆ, ಅದನ್ನು ಸರ್ಕಾರ ವಿರೋಧಿ ಕಾರ್ಯಕ್ರಮವನ್ನಾಗಿ ಬೆಳಸುವ ವೀರಾವೇಶದಲ್ಲೇ ತಮ್ಮೆಲ್ಲ ಶಕ್ತಿಯನ್ನು ವ್ಯಯಿಸಿಕೊಂಡರು. ಈ ಚಳುವಳಿ ಶಿಖರ ಸ್ಥಿತಿಯಲ್ಲಿದ್ದಾಗ, ಚಳುವಳಿಯ ಮುಖ್ಯ ನಾಯಕರೊಬ್ಬರು, ರೈತರೇಕೆ ಐ.ಎ.ಎಸ್. ಅಧಿಕಾರಿಗಳ ಜೀವನ ಶೈಲಿಗಾಗಿ ಆಸೆಪಡಬಾರದೆಂದು ಕೇಳಿ ನನ್ನನ್ನು ದಂಗುಬಡಿಸಿದ್ದರು! ತಮ್ಮ ದುಃಸ್ಥಿತಿಗೆ ಕಾರಣವಾದ ವ್ಯವಸ್ಥೆಯ ಬಗೆಗೇ ಸಿಟ್ಟಿಲ್ಲದ ಇವರು, ರೈತರ ಸಮಸ್ಯೆ ಬಗೆಗೆ ಮಾತ್ರ ಸಿಟ್ಟಾಗತೊಡಗಿದ್ದುದು ರೈತ ಚಳುವಳಿಯ ಮೂಲ ದೌರ್ಬಲ್ಯವಾಗಿತ್ತು.

ಹಾಗಾಗಿಯೇ ಇಂದು ಕೂಡಾ ರೈತ ಮುಖಂಡರೆನಿಸಿಕೊಂಡವರು, ಈ ಆತ್ಮಹತ್ಯೆಗಳು ಏಕೆ ಕಳೆದ ಹತ್ತುವರ್ಷಗಳಿಂದೀಚೆಗೆ, ಅದೂ ನೀರಾವರಿ ಇರುವ ಪ್ರದೇಶಗಳಲ್ಲೇ ಹೆಚ್ಚು ಸಂಭವಿಸುತ್ತಿವೆ ಎಂಬ ಬಗ್ಗೆ ಆಲೋಚನೆಯನ್ನೇ ಮಾಡಿದಂತಿಲ್ಲ. ಅಂದಾಕ್ಷಣ ಹತ್ತು ವರ್ಷಗಳ ಹಿಂದೆ ಹಾಗೂ ನೀರಾವರಿ ಇಲ್ಲದ ಪ್ರದೇಶಗಳ ರೈತರು ಸುಖದಿಂದಿದ್ದರು ಅಥವಾ ಇದ್ದಾರೆ ಎಂದು ಇದರರ್ಥವಲ್ಲ. ಆದರೆ ಈ ಹಿಂದೆ ಕ್ಷಾಮ-ಢಾಮರಗಳ ಭಯಂಕರ ಬವಣೆಗಳನ್ನು ಎದುರಿಸಿದ ನಮ್ಮ ರೈತರು, ಆತ್ಮಹತ್ಯೆ ಅನಿವಾರ್ಯವಾಗುವಂತಹ ಮಹಾ ಸಂಕಟಕ್ಕೆ ಇತ್ತೀಚಿನ ವರ್ಷಗಳಲ್ಲಿ ಮಾತ್ರ ಮತ್ತು ಹೆಚ್ಚಾಗಿ ನೀರಾವರಿ ಬೆಳೆ ಪ್ರದೇಶದಲ್ಲೇ ಏಕೆ ತುತ್ತಾಗುತ್ತಿದ್ದಾರೆ ಎಂಬುದು ಚಿಂತನಾರ್ಹವಾಗಿದೆ ಎಂದಷ್ಟೇ ಹೇಳುತ್ತಿರುವೆ. ಹಸಿರು ಕ್ರಾಂತಿ ಪರಿಚಯಿಸಿದ ಕೃಷಿ ವ್ಯವಸ್ಥೆ ತನ್ನ ಶಿಖರ ಸ್ಥಿತಿ ಮುಟ್ಟಿ ಸ್ಥಗಿತಗೊಂಡಿರುವುದೇ ಇದಕ್ಕೆ ಮುಖ್ಯ ಕಾರಣವೆನಿಸುತ್ತದೆ. ಅದು ಸೃಷ್ಟಿಸಿದ ಆಧುನಿಕ ನೀರಾವರಿ ಮೂಲ ಸೌಲಭ್ಯಗಳು, ಕೃಷಿ ಪದ್ಧತಿಗಳು, ಹಣಕಾಸು ವ್ಯವಸ್ಥೆ ಹಾಗೂ ಅವುಗಳನ್ನಾಧರಿಸಿದ ರೈತರ ಜೀವನ ದರ್ಶನ ಮತ್ತು ಶೈಲಿ ಇಂದು ಸಂಪೂರ್ಣ ಬಿಕ್ಕಟ್ಟಿನಲ್ಲಿವೆ. ನೀರಿನ ಮೂಲಗಳು ಬತ್ತಿಹೋಗಿ, ಬೃಹತ್ ಜಲಾಶಯಗಳಲ್ಲಿ ಹೂಳು ತುಂಬಿ, ಕಾಲುವೆಗಳು ಶಿಥಿಲಗೊಂಡು, ಭೂಮಿ ವಿಷಯುಕ್ತವಾಗಿ ಬಂಜರುಗೊಂಡು, ಬೆಳೆ ಮತ್ತು ಬೆಲೆಗಳೆರೆಡೂ ಏರುಪೇರಾಗಿ, ಬಂಡವಾಳ ಹೂಡಿಕೆಯ ಚಕ್ರ ಸ್ಥಗಿತಗೊಂಡ ಪರಿಣಾಮವಾಗಿ ಸಾಲ ಮೈಮೇಲೆ ಬಿದ್ದು; ಹೊಸ ಆರ್ಥಿಕ ನೀತಿಗಳಿಂದಾಗಿ ಬದಲಾದ ಸಾರ್ವಜನಿಕ ಬದುಕಿನ ದರ್ಶನ ಹಾಗೂ ಶೈಲಿಗಳ ಮಧ್ಯೆ ಹೊರದಾರಿಗಳೇ ಇಲ್ಲದೆ ಅವನಿಗೆ ಉಸಿರುಗಟ್ಟಿದಂತಾಗಿದೆ. ಇದನ್ನರಿತೇ ವಿದರ್ಭದಲ್ಲಿ ಪ್ರಯೋಗಾತ್ಮಕವಾಗಿ ಆರಂಭಿಸಿದ ಮಾನಸಿಕ ಪುನರುಜ್ಜೀವನ ಚಿಕಿತ್ಸಾ ಕಾರ್ಯಕ್ರಮಗಳು ಅಷ್ಟಾಗಿ ಫಲ ನೀಡದೆ, ಆತ್ಮಹತ್ಯೆಗಳು ಮುಂದುವರೆದಿವೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಮುಖ್ಯಮಂತ್ರಿಯೋ, ರೈತ ಮುಖಂಡರೋ ಕೈಮುಗಿದು 'ದಯವಿಟ್ಟು ಆತ್ಮಹತ್ಯೆ ಮಾಡಿಕೊಳ್ಳಬೇಡಿ' ಎಂದು ಬೇಡಿಕೊಂಡರೆ ಆತ್ಮಹತ್ಯೆ ನಿಂತಾವೆಯೇ?

ಅಲ್ಲದೆ, ಕೃಷಿ ಸಮಾಜವನ್ನು ಇದ್ದಕ್ಕಿದ್ದಂತೆ ಕೈಗಾರಿಕಾ ಸಮಾಜವನ್ನಾಗಿ ಪರಿವರ್ತಿಸುವ ವಿಶೇಷ ಆರ್ಥಿಕ ವಲಯ, ರೈತರ ಭಾಗವಹಿಸುವಿಕೆಯೇ ಇಲ್ಲದ ಜೈವಿಕ ಕೃಷಿ ತಂತ್ರಜ್ಞಾನ

ಚಟುವಟಿಕೆಗಳ ವಿಸ್ತರಣೆ, ಬೃಹತ್ ಬೆಂಗಳೂರಿನಂತಹ ರೈತ ಸಂಸ್ಕೃತಿಯ ಬುಡವನ್ನೇ ಅಲ್ಲಾಡಿಸುವಂತಹ ಅತಿ ನಗರೀಕರಣದ ಯೋಜನೆಗಳನ್ನು ಹೊಸ ಬದುಕಿನ ನಾಂದಿ ಕಾರ್ಯಕ್ರಮಗಳಂತೆ ಯುದ್ಧೋಪಾದಿಯಲ್ಲಿ ಆರಂಭಿಸಿ, ಆ ಹೊಸ ಬದುಕಿನಲ್ಲಿ ಅವನ ಸ್ಥಾನವೇನು ಎಂಬುದು ಗೊತ್ತಾಗದ ರೀತಿಯಲ್ಲಿ ಅವನ್ನು ಜಾರಿಗೊಳಿಸುತ್ತಿರುವ ಸಂದರ್ಭದ ಒತ್ತಡವೂ ಆತನಲ್ಲಿ, ತನ್ನ ಅಸ್ತಿತ್ವದ ಆಧ್ಯಾತ್ಮಿಕತೆಯನ್ನು ಸ್ಪರ್ಶಿಸಿದ್ದರೆ ಆಶ್ಚರ್ಯವಿಲ್ಲ. ರೈತನನ್ನು ಹಳೆಯ ಊಳಿಗಮಾನ್ಯ ವ್ಯವಸ್ಥೆಯ ಪ್ರತಿನಿಧಿಯನ್ನಾಗಿ ಮಾತ್ರ ನೋಡುವ ಆಧುನಿಕ ಮನಸ್ಸಿಗೆ ಈ ಸಂಕಟದ ಸಂಕೀರ್ಣತೆ ಅರ್ಥವಾಗದು. ಹಾಗೇ, ಚಳುವಳಿಯ ಯಶಸ್ಸಿನ ಮೇಲೆ ಮಾತ್ರ ಕಣ್ಣಿಟ್ಟು ರೈತನ ಬದುಕನ್ನು ಆರ್ಥಿಕ ಪ್ರಶ್ನೆಯ ನೆಲೆಗೇ ಇಳಿಸಿ ನೋಡುವಂತಹ ಚಳುವಳಿಕೋರ ರೈತ ನಾಯಕರ ಸಮೀಪ ದೃಷ್ಟಿಗೂ ಇದು ಸಿಗದು. ಲೆಕ್ಕ ಇಟ್ಟವನು ರೈತನಾಗಲಾರ ಎಂಬ ರೈತ ನಾಯಕ ಕಡಿದಾಳು ಶಾಮಣ್ಣ ಅವರ ಮಾತು ಇಂದಿನ ಸಂದರ್ಭದಲ್ಲಿ ಸ್ವಲ್ಪ ಉತ್ಪ್ರೇಕ್ಷೆಯ ಮಾತೆನ್ನಿಸಿದರೂ, ರೈತ ಬರಿ ಬೆಳೆ ಉತ್ಪಾದಕನಲ್ಲ;ಅವನೊಂದು ಜೀವನ ಕ್ರಮದ ಪ್ರತೀಕ ಎಂಬರ್ಥದಲ್ಲಿ ಅವರ ಮಾತನ್ನು ಅರ್ಥ ಮಾಡಿಕೊಂಡರೆ, ರೈತರ ಆತ್ಮಹತ್ಯೆ ಕುರಿತ ನಮ್ಮ ನೋಟಕ್ರಮ ಮೂಲಭೂತವಾಗಿ ಬದಲಾಗಬಲ್ಲದು. ರೈತರ ಆತ್ಮಹತ್ಯೆ ವಿದ್ಯಮಾನವನ್ನು ಒಟ್ಟಾರೆ, ಜಾಗತೀಕರಣದ ಒತ್ತಡಗಳು ನಿರ್ಮಿಸುತ್ತಿರುವ ಒಂದು ದೊಡ್ಡ ಸಾಮಾಜಿಕ-ಸಾಂಸ್ಕೃತಿಕ ಬಿಕ್ಕಟ್ಟನ್ನಾಗಿ ಪರಿಗ್ರಹಿಸಿದಾಗ ಮಾತ್ರ ಅದರ ಪರಿಹಾರಗಳೂ ಹೊಳೆದಾವು ಎನ್ನಿಸುತ್ತದೆ. ಹೀಗಾಗಿ ಇಂದಿನ ಮುಖ್ಯ ಪ್ರಶ್ನೆ, ಇಂದು ನಾವು ಕಾಣುತ್ತಿರುವ ದುಡಿಮೆ, ಈ ದುಡಿಮೆಯ ಗುರಿ, ದುಡಿಮೆಯ ಆನಂದ ಹಾಗೂ ಅವುಗಳಿಂದ ಹೊಮ್ಮುವ ಬದುಕಿನ ಸಾರ್ಥಕತೆಯ ಅರ್ಥ ಪಲ್ಲಟಗಳನ್ನು ನಾವು ಎಷ್ಟರ ಮಟ್ಟಿಗೆ ಒಪ್ಪಿಕೊಳ್ಳಬಹುದು ಎಂಬುದೇ ಆಗಿದ್ದು ಅದಕ್ಕೆ ಸಿಗುವ ಉತ್ತರವನ್ನು ಆಧರಿಸಿಯೇ ಈ ಪರಿಹಾರಗಳ ಸ್ವರೂಪವನ್ನು ನಿರ್ಧರಿಸಬೇಕಾಗುತ್ತದೆ. ರೋಗ ಚಿಹ್ನೆಯನ್ನೇ ರೋಗವೆಂದು ಬಗೆವ ತಪ್ಪಾಗಬಾರದು.

ಸಾಲಮನ್ನಾ, ಸಾಲ ಸೌಲಭ್ಯ, ಬೀಜ ಸೌಲಭ್ಯ, ಸಕಾಲದಲ್ಲಿ ವಿದ್ಯುತ್ ಸರಬರಾಜು, ನ್ಯಾಯೋಚಿತ ಬೆಂಬಲ ಬೆಲೆ ಇತ್ಯಾದಿ ಪರಿಹಾರ ಕ್ರಮಗಳು ರೈತರನ್ನು ಮುಟ್ಟುವ ವೇಳೆಗೆ; ಅಧಿಕಾರಶಾಹಿಯ ಆಲಸ್ಯ, ತಾಂತ್ರಿಕ ಕೊಕ್ಕೆಗಳು ಮತ್ತು ಭ್ರಷ್ಟತೆಯಿಂದಾಗಿ ಅವು ತಮ್ಮ ಗುರಿ ಕಳೆದುಕೊಂಡು ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುವ ಸಾಧ್ಯತೆಗಳು ರೈತ ಪ್ರತಿನಿಧಿಗಳ ಮಾತುಗಳ ಮೂಲಕ ಮಾತ್ರವಲ್ಲ, ಸ್ವತಃ ಮುಖ್ಯಮಂತ್ರಿಗಳ ಮಾತುಗಳ ಮೂಲಕವೇ ಅಂದಿನ ಸಂವಾದ ಸಭೆಯ ಸಂದರ್ಭದಲ್ಲಿ ದುರಂತಮಯವಾಗಿ ಮೂಡಿಬಂತು. ಮುಖ್ಯಮಂತಿಯೊಬ್ಬರು, ತಮ್ಮ ಸದುದ್ದೇಶದ ಯೋಜನೆಗಳೆಲ್ಲವೂ ಅಧಿಕಾರಶಾಹಿಯ ಮಧ್ಯಪ್ರವೇಶದಿಂದಾಗಿ ಹಾಳಾಗುವ ಸಾಧ್ಯತೆಗಳನ್ನು ಬಹಿರಂಗವಾಗಿ ಹೇಳಿಕೊಳ್ಳುವ ಸ್ಥಿತಿ ಉಂಟಾಗಿದೆಯೆಂದರೆ, ಈ ಮೇಲೆ ಪ್ರಸ್ತಾಪಿಸಿದ ಸಾಮಾಜಿಕ-ಸಾಂಸ್ಕೃತಿಕ ಬಿಕ್ಕಟ್ಟು ನಮ್ಮ ರಾಜಕಾರಣವನ್ನು ಎಷ್ಟು ದಿಕ್ಕೆಡಿಸಿದೆ ಎಂಬುದು ಗೊತ್ತಾಗುತ್ತದೆ. ಶಾಸಕಾಂಗ ತನ್ನ ಪರಮ ಭ್ರಷ್ಟತೆ, ಅದಕ್ಷತೆ ಹಾಗೂ ಕರ್ತವ್ಯ ವಿಮುಖತೆಗಳ ಮೂಲಕ ವಿಶ್ವಾಸಾರ್ಹತೆ ಕಳೆದುಕೊಂಡು, ಈ ವಿಷಯಗಳಲ್ಲಿ ಕಾರ್ಯಾಂಗದೊಂದಿಗೆ ಶಾಮೀಲಾಗಿರುವುದೇ, ಕಾರ್ಯಾಂಗವು ಶಾಸಕಾಂಗವನ್ನು -- ಮುಖ್ಯಮಂತ್ರಿಗಳು ಹೀಗೆ ಬಹಿರಂಗವಾಗಿ ಅಲವತ್ತುಕೊಳ್ಳುವ ಮಟ್ಟದಲ್ಲಿ- ಯಾಮಾರಿಸುತ್ತಿರುವುದಕ್ಕೆ

ಕಾರಣವಾಗಿದೆ. ಅಧಿಕಾರಿಗಳಿಗೆ ಕಟ್ಟುನಿಟ್ಟಾದ ನಿರ್ದೇಶನ ನೀಡಲು ಅಗತ್ಯವಾದಂತಹ ಒಂದು ರಾಜಕೀಯ ತಾತ್ವಿಕತೆಯ ಬೆನ್ನೆಲುಬಾಗಲೀ, ದೀರ್ಘ ರಾಜಕೀಯ ಅನುಭವ ತಂದುಕೊಡುವ ಆಡಳಿತಾತ್ಮಕ ತಿಳುವಳಿಕೆಯಾಗಲೀ, ಕೈ-ಬಾಯಿ ಶುದ್ಧವಾಗಿಟ್ಟುಕೊಂಡ ನೈತಿಕ ಸ್ಥೈರ್ಯವಾಗಲೀ ಸದ್ಯದ ರಾಜಕೀಯ ನಾಯಕತ್ವಕ್ಕೆ ಇಲ್ಲದೇ ಹೋಗಿರುವುದೇ ಶಾಸಕಾಂಗದ ಈ ವೈಫಲ್ಯಕ್ಕೆ ಕಾರಣವಾಗಿದೆ.

ಜಾಗತೀಕರಣ ಒತ್ತಾಯಿಸುವ ಅಭಿವೃದ್ಧಿ ಮಾದರಿ ಹಾಗೂ ಆದ್ಯತೆಗಳು ಸಮಾಜದ ಆಯಕಟ್ಟಿನ ಸ್ಥಾನಗಳಲ್ಲಿರುವ ಜನರ ಪಾಲಿಗೆ, ದುಡಿಮೆ ಇಲ್ಲದೆಯೇ ಸುಲಭ ಹಾಗೂ ಲೆಕ್ಕಕ್ಕೆ ಸಿಗದ ಅಪಾರ ಹಣ ಗಳಿಸುವ ಭ್ರಷ್ಟಾಚಾರದ ದಿಡ್ಡಿ ಬಾಗಿಲುಗಳನ್ನು ತೆರೆದಿಟ್ಟಿರುವ ಈ ಸಂದರ್ಭದಲ್ಲಿ, ಕೋಟ್ಯಾಂತರ ರೂಪಾಯಿಗಳ ವೆಚ್ಚದ ರೆಸಾರ್ಟ್ ರಾಜಕಾರಣದ ಮೂಲಕ ನಾಯಕನಾಗಿ ಮತ್ತು ಅದರ ಬಲದ ಮೇಲೇ ನಾಯಕನಾಗಿ ಮುಂದುವರಿಯ ಬೇಕಾಗಿರುವುದರಿಂದಾಗಿ ಮುಖ್ಯಮಂತ್ರಿ ಅನುಭವಿಸಬೇಕಾಗಿರುವ ಅಸಹಾಯಕತೆ-ಅವಮಾನವಿದು! ಇದು ರಾಜ್ಯದ ಜನತೆ ಅನುಭವಿಸಬೇಕಾಗಿರುವ ಅಸಹಾಯಕತೆ-ಅವಮಾನವೂ ಆಗಿದೆ. ಇಂತಹ ಇಕ್ಕಟ್ಟಿನಲ್ಲಿರುವ ಮುಖ್ಯಮಂತ್ರಿಯಿಂದ, ರೈತರ ಆತ್ಮಹತ್ಯೆಗೆ ಕಾರಣವಾಗಿರುವ ವ್ಯವಸ್ಥೆಯ ಬದಲಾವಣೆಯನ್ನು ನಿರೀಕ್ಷಿಸುವುದು ಕಷ್ಟವೇ ಸರಿ. ಏಕೆಂದರೆ, ತಾವೂ ಭಾಗಿಯಾಗಿರುವ ಸಮಕಾಲೀನ ರಾಜಕಾರಣದ ಚಾರಿತ್ರ್ಯಹೀನತೆಯೇ ಈ ಎಲ್ಲ ದುರಂತಗಳಿಗೆ ಕಾರಣ ಎಂಬ ಮೂಲಭೂತ ಅರಿವೇ ಇಲ್ಲದವರು ಎಷ್ಟೇ ಜನಪರತೆಯ ಕಣ್ಣೀರು ಹರಿಸಿದರೂ ರೈತರ ಆತ್ಮಹತ್ಯೆ ಪ್ರತಿನಿಧಿಸುವ ಜನತೆಯ ಕಣ್ಣೀರು ನಿಲ್ಲಲಾರದು.

(ವಿಕ್ರಾಂತ ಕರ್ನಾಟಕ ಜೂನ್ ೨೯, ೨೦೦೭)

ಬುದ್ಧ ಮತ್ತು ಹಿಂದೂ ಧರ್ಮ: ಕೆಲವು ಚಿಂತನೆಗಳು

'ವಿಕ್ರಾಂತ ಕರ್ನಾಟಕ'ದ ಜೂನ್ ೨೯, ೨೦೦೭ರ ಸಂಚಿಕೆಯಲ್ಲಿ, ಬೆಂಗಳೂರಿನಲ್ಲಿ ಕೆಲವು ವಾರಗಳ ಹಿಂದೆ ಕೆಲವು ದಲಿತ ಗೆಳೆಯರ ನೇತೃತ್ವದಲ್ಲಿ ಎರಡು ಸಾವಿರ ಜನರು ಬೌದ್ಧ ಧರ್ಮಕ್ಕೆ ಮತಾಂತರವಾದ ಘಟನೆ ಬಗ್ಗೆ ಎರಡು ಬರಹಗಳಿವೆ. ಒಂದು, ಸಹಾನುಭೂತಿಪರವಾದ ವರದಿಯಂತಿದ್ದರೆ, ಇನ್ನೊಂದು ಅದನ್ನು ವಿಮರ್ಶಿಸುವ ಸಂಪಾದಕೀಯ ಲೇಖನವಾಗಿದೆ. ಮತಾಂತರ ಇಂದು ಭಾವನೆಗಳನ್ನು ಕೆರಳಿಸುವ ವಿದ್ಯಮಾನವೆನಿಸಿದ್ದರೆ, ಅದಕ್ಕೆ ಕಾರಣ ಬಹುಪಾಲು ಎಲ್ಲ ಮತಾಂತರಗಳೂ ಬಹು ಸಂಖ್ಯಾತ ಹಿಂದೂ ಧರ್ಮದಿಂದ ಇತರ ಧರ್ಮಗಳಿಗೆ ಆಗುತ್ತಿರುವುದೂ ಮತ್ತು ಇವುಗಳ ಹಿಂದೆ ಧಾರ್ಮಿಕ ಕಾರಣಗಳಿಗೆ ಹೊರತಾದ ಬೇರೆಯೇ ಕಾರಣಗಳಿವೆ ಎಂಬ ನಂಬಿಕೆಯೇ ಆಗಿದೆ. ಆದರೆ, ಬೌದ್ಧ ಧರ್ಮಕ್ಕೆ ಆಗುವ ಮತಾಂತರಗಳ ಬಗ್ಗೆ ಹಿಂದೂ ಧರ್ಮಪಾಲಕರಲ್ಲಿ ಅಷ್ಟೇನೂ ಕ್ಷೋಭೆ ಉಂಟಾಗದಿರಲು, ಅದು ಹಿಂದೂ ಧರ್ಮದ ಒಂದು ಭಾಗವೇ ಆಗಿದೆ ಎಂಬ ಸುಪ್ತ ಭಾವನೆಯೇ ಕಾರಣವಾಗಿದೆ. ಹತ್ತಾರು ಜನ ಹಿಂದೂಗಳು ಕ್ರಿಶ್ಚಿಯನ್ನರೋ, ಮುಸಲ್ಮಾನರೋ ಆಗ ಹೊರಟಾಗ ಹಿಂದೂ ಸಂಘಟನೆಗಳು ಮಾಡುವ ರಾದ್ಧಾಂತ, ಐವತ್ತು ವರ್ಷಗಳ ಹಿಂದೆ ಅಂಬೇಡ್ಕರ್ ಅವರು ತಮ್ಮ ಸಾವಿರಾರು ಅನುಯಾಯಿಗಳೊಂದಿಗೆ ಆರಂಭಿಸಿದ ಬೌದ್ಧ ಧರ್ಮದೆಡಗಿನ ಮತಾಂತರದಿಂದ ಹಿಡಿದು ಮೊನ್ನೆಯ ಬೆಂಗಳೂರಿನ ಮತಾಂತರದವರೆಗೆ ಎಲ್ಲಿಯೂ ಕಂಡುಬಂದಿಲ್ಲ ಎಂಬುದು ಗಮನಾರ್ಹ. ರವೀಂದ್ರ ರೇಷ್ಮೆಯವರ ಸಂಪಾದಕೀಯದಲ್ಲಿ ಕಾಣಬರುವ 'ಇದರಿಂದೇನು ಪ್ರಯೋಜನ?' ಎಂಬಂತಹ ಗೊಣಗಾಟಗಳ ಹೊರತಾಗಿ, ಮತ್ತಾವ ರೀತಿಯ ಉಗ್ರ ಪ್ರತಿಕ್ರಿಯೆಗಳನ್ನೂ ಈ ಮತಾಂತರಗಳು ಎದುರಿಸಿಲ್ಲ.

ಹಾಗೆ ನೋಡಿದರೆ, ಭಾರತ ತನ್ನ ಇತಿಹಾಸದಲ್ಲಿ ಇಂತಹ ಅನೇಕ ಮತಾಂತರಗಳನ್ನು ಕಂಡಿದೆ. ಬದುಕಿನ ಅರ್ಥವನ್ನು ತಿಳಿಯುವ ಮನುಷ್ಯನ ಮೂಲಭೂತ ಹಂಬಲದಿಂದ ಪ್ರೇರಿತವಾದ ತಾತ್ವಿಕ ಅನ್ವೇಷಣೆಯ ಪರಿಣಾಮವಾಗಿ ನಡೆದ ಮತಾಂತರಗಳು ಮನುಷ್ಯನ ಬದುಕನ್ನು ಹೆಚ್ಚೆಚ್ಚು ಸಂಪನ್ನಗೊಳಿಸಿವೆ. ಕ್ರಿ.ಪೂ. ಮೂರರಿಂದ ಆರನೇ ಶತಮಾನದವರೆಗೆ ಭಾರತದಲ್ಲಿ ನಡೆದ ಇಂತಹ ತಾತ್ವಿಕ ಅನ್ವೇಷಣೆಗಳು ಶ್ರಮಣ ಸಂಸ್ಕೃತಿಯ ರೂಪದಲ್ಲಿ ಭಾರತೀಯ ತತ್ವಜ್ಞಾನಕ್ಕೆ ಅನೇಕ ಅಭೂತಪೂರ್ವ ಕೊಡುಗೆಗಳನ್ನು ನೀಡಿದೆ. ಭಾರತೀಯ ತತ್ವಜ್ಞಾನದ ಷಡ್ದರ್ಶನಗಳು ಸ್ಪಷ್ಟ ರೂಪು ತಳೆದದ್ದೇ ಇಂತಹ ಅನೇಕ 'ಮತಾಂತರ'ಗಳ ಮೂಲಕ. ಮತಾಂತರ ಎಂದರೆ, ಬದುಕನ್ನು ಕುರಿತ ಹೊಸ ಒಳನೋಟಗಳ ಮೂಲಕ ಬದುಕನ್ನು ಕುರಿತ ತನ್ನ ಆಧಾರ ನಂಬಿಕೆಗಳನ್ನು ಬದಲಿಸಿಕೊಳ್ಳುವುದು ಎಂದರ್ಥ.

ಆದರೆ, ನಾಗರೀಕತೆಯ ಬೆಳವಣಿಗೆಯೊಂದಿಗೆ(ಇದರಲ್ಲಿ ಸಂಸ್ಕೃತಿ ವಿಸ್ತರಣೆಯೂ ಸೇರಿದೆ), ಅಲ್ಲಲ್ಲಿ ಹರಡಿ ಹೋಗಿದ್ದ ಜನಸಮುದಾಯಗಳು ಪರಸ್ಪರ ಸಂಪರ್ಕ ಸಾಧಿಸಿಕೊಂಡು ಬೆರೆಯುವ ಅನಿವಾರ್ಯತೆ ಉಂಟಾದಾಗ; ನಂಬಿಕೆಗಳ ಮೇಲಾಟ ಶುರುವಾಗಿ, ಮತದ ಪ್ರಶ್ನೆಯು ರಾಜಕೀಯ ನಿಷ್ಠೆಯ ಪ್ರಶ್ನೆಯೂ ಆಗಿ ಪರಿವರ್ತಿತವಾಗತೊಡಗಿತು. ಹೀಗಾಗಿ, ಮತಾಂತರದ ಅರ್ಥವೇ ಬದಲಾಯಿತು. ಇದರ ಪರಿಣಾಮಗಳು ತಾತ್ವಿಕ ಅನ್ವೇಷಣೆಯ ರೀತಿ–ನೀತಿಗಳ ಮೇಲೂ ಆಗದಿರಲಿಲ್ಲ. ಹೀನಯಾನ–ಮಹಾಯಾನ–ವಜ್ರಯಾನ, ಥೇರವಾದ, ಯೋಗಾಚಾರ, ಚಾರ್ವಾಕ, ಶೈವ, ವೈಷ್ಣವ, ಶಾಕ್ತ, ಕಾಳಾಮುಖ ಮುಂತಾಗಿ ಇದರಲ್ಲಿ ಉಂಟಾದ ಸೂಕ್ಷ್ಮ ಉಪ ವಿಂಗಡಣೆಗಳು ಮತ್ತು ಅವಕ್ಕೆ ಸಂಬಂಧಪಟ್ಟ ಶಾಸ್ತ್ರಾಚಾರಗಳೂ ಇದರ ಫಲಗಳೇ ಆಗಿವೆ. ಗುಡಿಗಳು, ವಿಹಾರಗಳು, ಬಸದಿಗಳು ಕೇವಲ ಮತಶ್ರದ್ಧೆಯ ಕೇಂದ್ರಗಳಾಗದೆ, ರಾಜಕೀಯ ಶಕ್ತಿ ಕೇಂದ್ರಗಳೂ ಆಗತೊಡಗಿದ್ದೂ, ಪುರೋಹಿತಶಾಹಿಯೆಂಬ ಮಧ್ಯವರ್ತಿ ವರ್ಗವೊಂದು ಸೃಷ್ಟಿಯಾದದ್ದೂ, ಮತ ಮತ್ತು ರಾಜಕಾರಣ ಪರಸ್ಪರ ಹಾಸು ಹೊಕ್ಕಾಗತೊಡಗಿದ್ದೂ ಈ ಸಂಕ್ರಮಣ ಕಾಲಘಟ್ಟದಲ್ಲೇ.

ಈ ಪ್ರಕ್ರಿಯೆಯಲ್ಲಿ, ಜನಸಮುದಾಯದ ಮಟ್ಟಿಗೆ ಅನೇಕ ತಾತ್ವಿಕ ಸೂಕ್ಷ್ಮಗಳು ಸ್ಥೂಲಗೊಂಡು, ಆವರೆಗಿನ ಎಲ್ಲ ತಾತ್ವಿಕ ಪ್ರಯೋಗಗಳೂ ಕಲಸು ಮೇಲೋಗರವಾಯಿತು. ಇದರ ಸಗಟು ರೂಪವೇ–ಸಿಂಧು ನದಿಯಾಚೆಯ ಜನ ಸಮುದಾಯದ ಜೀವನ ಕ್ರಮ ಎಂಬರ್ಥದಲ್ಲಿ–'ಹಿಂದೂ ಧರ್ಮ'ವೆಂಬುದು ಗುರುತಿಸಲ್ಪಟ್ಟು, ವಿಕಾಸ ಹೊಂದುತ್ತಾ ನಡೆಯಿತು. ಈ ಸಂಕ್ರಮಣ ಸಂದರ್ಭದಲ್ಲಿ ಹೊರಗಿನಿಂದ ಬಂದ ಅನೇಕ ಕುಲಗಳು(ಉದಾ: ಹೂಣರು, ಕುಶಾನರು ಇತ್ಯಾದಿ) ಇಲ್ಲಿನ ಈ ಮತ–ರಾಜಕಾರಣದ ಸಂಘರ್ಷದಲ್ಲಿ ತಾವೂ ಭಾಗಿಯಾಗಿ, ಅದರ ಫಲವಾದ ಹೊಸ ಮತ–ರಾಜಕೀಯ ವ್ಯವಸ್ಥೆಯ ಭಾಗವೇ ಆಗಿ; ಇಲ್ಲಿನ ಕುಲಗಳೊಳಕ್ಕೇ ಸೇರಿಹೋದರು. ಆದರೆ ನಂತರದ ದಿನಗಳಲ್ಲಿ ವಿವಿಧ ಉದ್ದೇಶಗಳೊಂದಿಗೆ ಬರಲಾರಂಭಿಸಿದ ಕುಲಗಳು(ಉದಾ: ಅರಬ್ಬರು, ಪರ್ಷಿಯನ್ನರು, ಯೂರೋಪಿಯನ್ನರು) ಬರಿ ಕುಲಗಳಾಗಿರದೆ, ಮತನಿಷ್ಠ ಸಮುದಾಯಗಳೂ ಆಗಿದ್ದುದರಿಂದ, ಭಾರತದಲ್ಲಿ ಮತ–ರಾಜಕಾರಣದ ಮತ್ತೊಂದು ತಳಮಳ ಶುರುವಾಯಿತು. ಪುರಾತನ ವರ್ಣವ್ಯವಸ್ಥೆಯಿಂದ ಕಾಲಾನುಕ್ರಮದಲ್ಲಿ ಮೂಡಿದ ಜಾತಿವ್ಯವಸ್ಥೆಯ ಎರಕದಲ್ಲಿ ಒಂದು ಸ್ಥಿರ ಸ್ಥಿತಿಯನ್ನು ತಲುಪಿದ್ದ ಭಾರತದ ಮತಾಧಾರಿತ ರಾಜಕೀಯ ವ್ಯವಸ್ಥೆ, ಈ ಹೊಸ ಕುಲಗಳಿಂದ ಹೊಸ ರೀತಿಯ ಸವಾಲುಗಳನ್ನು ಎದುರಿಸಬೇಕಾಯಿತು: ಯಾವ ಜಾತಿ ಪದ್ಧತಿ ಈ ಮುನ್ನ ಭಾರತೀಯ ಕುಲ ವ್ಯವಸ್ಥೆಯ ಸ್ಥಿರತೆಗೆ ಕಾರಣವಾಗಿತ್ತೋ, ಅದೇ ಜಾತಿ ಪದ್ಧತಿ ಈಗ ಈ ಹೊಸ ತಳಮಳದ ವೇಗವರ್ಧಕವಾಗಿ ಕೆಲಸ ಮಾಡುವ ವಿಪರ್ಯಾಸ ಸೃಷ್ಟಿಯಾಯಿತು. ಒಂದು ಸಾಮಾಜಿಕ ಒಪ್ಪಂದದಂತೆ ಕೆಲಸ ಮಾಡುತ್ತಿದ್ದ ಜಾತಿ ಪದ್ಧತಿ ಕಾಲಕ್ರಮದಲ್ಲಿ ಸಾಮಾಜಿಕವಾಗಿ ಶ್ರೇಣೀಕರಣಗೊಂಡ ಪ್ರತ್ಯೇಕತೆಗಳನ್ನು ನಿರ್ಮಿಸಿದ್ದುದರಿಂದ, ಈ ಹೊಸ ಮತೀಯ ಕುಲಗಳೊಂದಿಗೆ ಆತ್ಮವಿಶ್ವಾಸದಿಂದ ಅನುಸಂಧಾನ ನಡೆಸುವ ಅವಕಾಶವನ್ನೂ, ಶಕ್ತಿಯನ್ನೂ ಈ 'ಹಿಂದೂ ಧರ್ಮ' ಕಳೆದುಕೊಂಡಿತು. ಇದರಿಂದಾಗಿ, ಈ ತಳಮಳದಲ್ಲಿ ಅನುಸಂಧಾನಕ್ಕಿಂತ ಸಂಘರ್ಷವೇ ಮೇಲುಗೈ ಪಡೆಯಿತು.

ಮಧ್ಯಯುಗದಲ್ಲಿನ ಭಕ್ತಿ ಪಂಥ, ಸೂಫಿ ಪಂಥ ಹಾಗೂ ಆಧುನಿಕ ಯುಗದಲ್ಲಿನ ಮಿಷನರಿ ಸೇವೆ ಮತ್ತು ಹೊಸ ವೈಚಾರಿಕತೆ–ವೈಜ್ಞಾನಿಕತೆಗಳ ಅನಾವರಣವು, ಈ ತಳಮಳದ

ಅಂಗವಾಗಿ ನಡೆದ ಅನುಸಂಧಾನಗಳ ಸಿಹಿ ಫಲಗಳಾಗಿದ್ದರೆ; ರಾಜಕೀಯ ಪ್ರೇರಿತ ಮತಾಂತರಗಳು, ಅವು ಸಾಮಾಜಿಕ ಜೀವನದಲ್ಲಿ ಉಂಟು ಮಾಡಿದ ಅನೇಕ ರೀತಿಯ ಅಲ್ಲೋಲಕಲ್ಲೋಲಗಳು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ, ಭಾರತವೆಂಬ ಆಧುನಿಕ ರಾಜ್ಯ ವ್ಯವಸ್ಥೆಯ ಉದಯದೊಂದಿಗೇ ಸಂಭವಿಸಿದ ರಾಷ್ಟ್ರ ವಿಭಜನೆ, ಈ ತಳಮಳ ಉಂಟು ಮಾಡಿದ ಸಂಘರ್ಷದ ಕಹಿ ಫಲಗಳಾಗಿವೆ. ಆದರೆ, ಸಿಹಿ ಫಲಗಳ ಸಿಹಿಗಿಂತ ಕಹಿ ಫಲಗಳ ಕಹಿಯೇ ಹೆಚ್ಚಾಗಿದ್ದರೆ, ಅದಕ್ಕೆ ಈ ತಳಮಳದಲ್ಲಿ ಮತ ಮತ್ತು ರಾಜಕಾರಣಗಳು ಪರಸ್ಪರ ಅನುಸಂಧಾನಗೊಳ್ಳದೆ, ಕ್ರಮೇಣ ಏಕೀಕರಣಗೊಳ್ಳುತ್ತಾ ಹೋದುದೇ ಕಾರಣವಾಗಿದೆ. ಇದಕ್ಕೆ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಹುಟ್ಟಿಕೊಂಡ ಕೋಮುವಾದಿ ಎಂದು ಕರೆಯಲಾಗುವ ಸಂಸ್ಥೆಗಳು ಎಷ್ಟು ಕಾರಣವೋ, ಈ ಹೋರಾಟದ ನೇತೃತ್ವ ವಹಿಸಿದ್ದ ಕಾಂಗ್ರೆಸ್‌ನ ಅನೇಕ ನಾಯಕರ ಮತೀಯ ವರ್ತನೆಗಳೂ ಕಾರಣವಾಗಿತ್ತು. ಸ್ವತಃ ಮಹಾತ್ಮ ಗಾಂಧಿಯವರು ಹೋರಾಟದ ಆರಂಭದಲ್ಲಿ ತಮ್ಮ ಹೊಸ ರಾಜಕಾರಣದ ಬಲವೃದ್ಧಿಗಾಗಿ; ಹಿಂದೂ-ಮುಸ್ಲಿಂ ಐಕ್ಯತೆ ವರ್ಧಿಸುವುದೆಂದು ತಪ್ಪಾಗಿ ಭಾವಿಸಿ, ಜಾಗತಿಕ ಮುಸ್ಲಿಂ ಆಂದೋಲನದ ಬೀಜರೂಪದಂತಿದ್ದ ಖಿಲಾಫತ್ ಆಂದೋಲನಕ್ಕೆ ಬೆಂಬಲ ಘೋಷಿಸಿ ಜನ ಸಂಘಟನೆಯನ್ನು ತಪ್ಪು ಹೆಜ್ಜೆಯೊಂದಿಗೆ ಆರಂಭಿಸಿದ್ದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ.

ನಂತರ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಇದಕ್ಕೆ ತದ್ವಿರುದ್ಧವಾಗಿ ಹೊಸ ವೈಚಾರಿಕತೆ-ವೈಜ್ಞಾನಿಕತೆಗಳು ಪರಿಚಯಿಸಿದ 'ಸೆಕ್ಯುಲರಿಸಂ' ಎಂಬ ಪರಿಕಲ್ಪನೆಯ ಮೂಲಕ ಮತ ಮತ್ತು ರಾಜಕಾರಣಗಳನ್ನು ಸಂಪೂರ್ಣವಾಗಿ ಪ್ರತ್ಯೇಕಿಸಲು ಎಡಬಿಡಂಗಿ ಪ್ರಯತ್ನಗಳನ್ನು ಮಾಡಲಾಯಿತು. ಭಾರತದ ಬಹು ಮತೀಯ ಸಂದರ್ಭದಲ್ಲಿ ಇದು, ಅನೇಕ ರೀತಿಯ ಸಾಮಾಜಿಕ-ಸಾಂಸ್ಕೃತಿಕ ಬಿಗುವುಗಳನ್ನು ಸೃಷ್ಟಿಸಿದವು. ಅವೇ ಇಂದು ಕೋಮುವಾದಿ ರಾಜಕಾರಣದ ಮೂಲಕ ಅಭಿವ್ಯಕ್ತಿ ಕಂಡುಕೊಳ್ಳುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಹೀಗಾಗಿ, ಹಳೆಯ ಮತೀಯತೆ ಮತ್ತು ಹೊಸ ಆಧುನಿಕತೆಯ ನಡುವಣ ಸಂವೇದನಾಹೀನ ಹಾಗೂ ಸಂವಾದಹೀನ ಸಂಬಂಧವೇ ಇಂದಿನ ಎಲ್ಲ ಮತೀಯ(ಮತ್ತು ಜಾತೀಯ) ವಿಕೃತಿಗಳಿಗೆ ಸದ್ಯದ ಕಾರಣವಾಗಿದೆ ಎನ್ನಬಹುದು. ಸದ್ಯದ ಬೌದ್ಧ ಮತಾಂತರ ಕೂಡ ಇಂತಹ ವಿಕೃತಿಗಳ ಬಗೆಗಿನ ಒಂದು ಸ್ಥಳೀಯ ಪ್ರತಿಕ್ರಿಯೆಯೇ ಆಗಿದೆ. ಇದಕ್ಕೆ ತಕ್ಷಣದ ಪ್ರೇರೇಪಣೆ, ಭೈರಪ್ಪನವರು 'ಆವರಣ'ದ ಮೂಲಕ ಪ್ರಯತ್ನಿಸಿದ 'ಸತ್ಯಾನ್ವೇಷಣೆ' ಎಂಬ ವಿಕೃತಿಯೇ ಆಗಿದ್ದರೆ ಆಶ್ಚರ್ಯ ಪಡಬೇಕಿಲ್ಲ. ಏಕೆಂದರೆ, ದಲಿತರ ಒಂದು ಸಂಘಟಿತ ಗುಂಪು ಅಂಬೇಡ್ಕರ್‌ರ ಮತಾಂತರದ ಐವತ್ತನೇ ವರ್ಷದ ಸಂದರ್ಭದಲ್ಲಿ 'ಮರಳಿ ಮನೆಗೆ' ಎಂಬ ಆಂದೋಲನದಡಿ ಸಾಮೂಹಿಕವಾಗಿ ಬೌದ್ಧರಾಗುವ ಕಾರ್ಯಕ್ರಮ ರೂಪಿಸಿದೆಯಾದರೂ, ಅದಿನ್ನೂ ಪೂರ್ಣ ಪ್ರಮಾಣದಲ್ಲಿ ಚಾಲನೆಗೊಳ್ಳುವ ಮುನ್ನವೇ ಇದ್ದಕ್ಕಿದ್ದಂತೆ ಈ ಮತಾಂತರ ನಡೆದಿದೆ!

ಅದೇನೇ ಇರಲಿ, ಈ ಮತಾಂತರವು ಸ್ಥಳೀಯ ಹಿಂದೂ ಮೂಲಭೂತವಾದಿಗಳಿಗೆ ಒಂದು ಸ್ಥಳೀಯ ಎಚ್ಚರಿಕೆ ಕೊಟ್ಟದ್ದರ ಹೊರತಾಗಿ ಸಾಧಿಸಿದ್ದಾದರೂ ಏನು? ಇಂದಿನ ಸಂದರ್ಭದಲ್ಲಿ ಮತಾಂತರ ಅಂದರೆ, ಒಂದು ಪುರೋಹಿತಶಾಹಿಯಿಂದ ಇನ್ನೊಂದು ಪುರೋಹಿತಶಾಹಿ ವಶಕ್ಕೆ ಹೋದಂತೆ ಅಲ್ಲವೆ? ಕೆಲವು ವರ್ಷಗಳ ಹಿಂದೆ ನಮ್ಮ ಕೆ.ಬಿ.ಸಿದ್ಧಯ್ಯನವರ ಮಗಳ ಮದುವೆ ಬೌದ್ಧ ವಿಧಿಗಳಿಗನುಸಾರ, ಯಾರಿಗೂ ಅರ್ಥವಾಗದ

ಪಾಳಿ ಭಾಷೆಯಲ್ಲಿ ಹಾಗೂ ವೈದಿಕ ಆಚರಣೆಗಳನ್ನೂ ನಾಚಿಸುವಂತಹ ಶಾಸ್ತ್ರಾಚಾರಗಳೊಂದಿಗೆ ನಡೆವ ರೀತಿ ನೋಡಿ ಗಾಬರಿಯಾಗಿದ್ದ ನಾನು ಈಗ, ದೇವನೂರ ಮಹಾದೇವ ಸದರಿ ಮತಾಂತರದ ಸಮಾರಂಭದಲ್ಲಿ ತಮ್ಮ ಗೆಳೆಯರೊಂದಿಗೆ ಬೌದ್ಧ ಪುರೋಹಿತರ-ಭಂತೆಗಳ-ಮಧ್ಯೆ ಬುದ್ಧ ಪ್ರತಿಮೆಯ ಮುಂದೆ ಕೈಮುಗಿದು ನಿಂತ ಭಂಗಿ ನೋಡಿ ಮತ್ತಷ್ಟು ಗಾಬರಿಯಾದೆ. ಅವರನ್ನು ಹತ್ತಾರು ವರ್ಷಗಳಿಂದ ಹತ್ತಿರದಿಂದ ಬಲ್ಲ ನನಗೆ ಅವರ ಈ ಭಂಗಿ ನಗೆಯನ್ನೂ, ಮರುಕವನ್ನೂ ಒಟ್ಟಿಗೆ ಉಂಟು ಮಾಡಿತು. ಹಾಗಾದರೆ, ಮಹಾದೇವ ಇನ್ನು ಮುಂದೆ ಬದುಕನ್ನು ಕುರಿತ ಮೂಲ ನಂಬಿಕೆಗಳಲ್ಲಿ, ಅವರ ಹಾಗೆ ಮತಾಂತರಗೊಳ್ಳದ ನಮಗಿಂತ ಭಿನ್ನವೇ? ಹಾಗಾದರೆ, ಯಾವ ರೀತಿ? ಬಹುಶಃ ಇದನ್ನೇ ತಮ್ಮ ಸಂಪಾದಕೀಯ ಶೀರ್ಷಿಕೆಯಲ್ಲಿ ರೇಷ್ಮೆಯವರು 'ಧರ್ಮ ಬದಲಾದರೆ, ಮನೋಧರ್ಮ ಬದಲಾದೀತೆ?' ಎಂದು ಕೇಳಿರುವುದು. ಇದನ್ನೇ ಇನ್ನೊಂದು ರೀತಿಯಲ್ಲಿ ಬೌದ್ಧ ಗುರು ದಲೈಲಾಮ ಹೀಗೆ ಹೇಳಿರುವುದು: ಬೌದ್ಧನಾಗಲು ಯಾರೇ ತಮ್ಮ ಧರ್ಮ ಬದಲಾಯಿಸುವ ಅಗತ್ಯವಿಲ್ಲ. ಇದರರ್ಥ, ಬೌದ್ಧ ಧರ್ಮ ಮೂಲತಃ ಒಂದು ಮನೋಧರ್ಮವಾಗಿದ್ದು, ಸಾರತಃ ಮತೀಯ ವಿಧಿ-ವಿಧಾನಗಳಿಂದ ಹೊರತಾಗಿದೆ. ಹಾಗಾಗಿ, ಬೌದ್ಧನಾಗಲು ಬೌದ್ಧಮತಕ್ಕೆ ಔಪಚಾರಿಕವಾಗಿ ಸೇರುವ ಅಗತ್ಯವಿಲ್ಲ.

ಹಿಂದೂ ಧರ್ಮವೆನ್ನುವುದು ಹಲವು ಮತಗಳ ಕಲಸು ಮೇಲೋಗರವಾಗಿದ್ದು, ಇದರಲ್ಲಿ ಬೌದ್ಧ ಧರ್ಮವೂ ತನ್ನ ಅನೇಕ ಆವೃತ್ತಿಗಳ ರೂಪದಲ್ಲಿ ಹಾಸುಹೊಕ್ಕಾಗಿದೆ. ಅದು ಹಿಂದೂ ಧರ್ಮ ವೈದಿಕ ಧರ್ಮವಾಗಿ ಪರಿವರ್ತಿತವಾಗದಂತೆ ತಡೆಯುತ್ತಿರುವ ಶಕ್ತಿಯಾಗಿ ಅನೇಕ ರೂಪಗಳಲ್ಲಿ ಕೆಲಸ ಮಾಡುತ್ತಿದೆ. ಹಾಗೆ ನೋಡಿದರೆ, ಭಾರತದಲ್ಲಿ ಬೌದ್ಧ ಧರ್ಮ ಅನೇಕ ರೂಪಾಂತರಗಳನ್ನು ಕಂಡು ತನ್ನ ಮೂಲ ಚಹರೆಗಳನ್ನು ಕಳೆದುಕೊಳ್ಳುತ್ತಾ, ಕಾಲಕ್ರಮದಲ್ಲಿ ಸನಾತನ ಧರ್ಮ(ಅಂದರೆ, ಆದಿ ಧರ್ಮ ಎಂಬರ್ಥದಲ್ಲಿ)ದೊಂದಿಗೆ ಅನುಸಂಧಾನಗೊಳ್ಳುತ್ತಾ ಹೋದ ಪರಿಣಾಮವಾಗಿ; ವೈದಿಕ ಧರ್ಮವೂ ಅನೇಕ ರೂಪಾಂತರಗಳನ್ನು ತಾಳಿ, ತನ್ನ ಮೂಲ ಚಹರೆಗಳನ್ನು ಕಳೆದುಕೊಂಡಿದೆ. ಹಿಂದೂ ಕೋಮುವಾದಿ ತಾತ್ವಿಕತೆಯ ಮೂಲ ಸಿಟ್ಟೂ ಇದೇ ಆಗಿದ್ದು, ಇತರ ಮತಗಳನ್ನು ಕುರಿತ ಅದರ ಅಸಹನೆ ಈ ಮೂಲದಿಂದಲೇ ಬಂದಂತಹದಾಗಿದೆ (ಹೆಚ್ಚಿನ ವಿವರಗಳಿಗಾಗಿ ಭೈರಪ್ಪನವರ 'ಸಾರ್ಥ' ಓದಿ!). ಮುಖ್ಯವಾಗಿ, ಅನಾತ್ಮವಾದಿಯಾದ ಬೌದ್ಧ ಧರ್ಮ ಆತ್ಮವಾದಿಯಾದ ವೈದಿಕ ಧರ್ಮದ ಆತ್ಮ ಮೀಮಾಂಸೆಯನ್ನು ಅದ್ವೈತ, ದ್ವೈತ, ವಿಶಿಷ್ಟಾದ್ವೈತ, ಶಕ್ತಿ ವಿಶಿಷ್ಟಾದ್ವೈತ ಮುಂತಾದ ಅನೇಕಾನೇಕ ಮೀಮಾಂಸಾ 'ಆವರಣ'ಗಳಿಗೆ ಸಿಲುಕಿಸಿ ಅಲುಗಾಡಿಸಿತು. ಇದರಿಂದಾಗಿ ವೈದಿಕ ಧರ್ಮದ ಸಾಮಾಜಿಕ ರಚನೆಗೆ ಅಡಿಗಲ್ಲಿನಂತಿದ್ದ ವರ್ಣ ವ್ಯವಸ್ಥೆಯ ತಾತ್ವಿಕ ಆಧಾರಗಳೇ ಅಲುಗಾಡಿ, ಜಾತಿ ವ್ಯವಸ್ಥೆ ಪ್ರಶ್ನಾರ್ಹವೆನಿಸಿಕೊಂಡಿತು.

ಹೀಗೆ ಬೌದ್ಧ ಧರ್ಮ ಹಿಂದೂ ಧರ್ಮದ ಒಂದು ಒಳಕುದಿಯಾಗಿಯೇ ಕೆಲಸ ಮಾಡುತ್ತಾ, ಕರ್ಮಕಾಂಡದ ರೂಪದಲ್ಲಿದ್ದ ಅದರ 'ಅವಿದ್ಯೆ'ಯನ್ನು ತನ್ನ ಜ್ಞಾನ ಕಾಂಡದ ಮೂಲಕ ನಿವಾರಿಸುವ ಪ್ರಯತ್ನ ಮಾಡಿತು. ಇಂದಿನ ನಮ್ಮ ಅನೇಕ ದೇವರುಗಳು, ಅದರ ಮೂರ್ತಿಗಳು, ಸಂನ್ಯಾಸ, ಮಠ, ಪೂಜೆ, ಧ್ಯಾನ, ಪ್ರಾರ್ಥನೆ, ವ್ರತ, ಹರಕೆ, ಜಾತ್ರೆ, ಅನೇಕ ಜಾನಪದ ಆಚರಣೆಗಳು, ಪ್ರದರ್ಶಕ ಕಲೆಗಳು; ಪ್ರಜ್ಞಾಶಾಸ್ತ್ರವಾಗಿ ಬೆಳೆದಿದ್ದ ಬೌದ್ಧ ಧರ್ಮದ ವಿವಿಧ ಆವೃತ್ತಿಗಳ ಮೂಲಕ ಮಾನಸಿಕ ಚಿಕಿತ್ಸಾ ರೂಪಗಳಲ್ಲಿ ಹಿಂದೂ ಧರ್ಮಕ್ಕೆ ದತ್ತವಾದವು.

ಇವುಗಳಲ್ಲಿ ಕೆಲವು ಮೌಢ್ಯಾಚರಣೆಗಳಾಗಿದ್ದರೆ, ಅದಕ್ಕೆ ಆಯಾ ಬೌದ್ಧ ಆವೃತ್ತಿಗಳೇ ಹೊಣೆಯಾಗಿವೆ ಎಂಬುದನ್ನು ನಾವು ಮರೆಯಬಾರದು. ಹೀಗಾಗಿ ಬೌದ್ಧ ಧರ್ಮವನ್ನು ಭಾರತದಿಂದ ಓಡಿಸಲಾಯಿತು ಎಂಬುದು ಅರ್ಧ ಸತ್ಯ ಮಾತ್ರ. ಏಷ್ಯಾದ ವಿವಿಧ ದೇಶಗಳಲ್ಲಿ ಅದು ವಿವಿಧ ರೂಪಗಳಲ್ಲಿದ್ದಂತೆ ಅದು ಭಾರತದಲ್ಲೂ ಹಿಂದೂ ಧರ್ಮದ ಬಹುಮುಖಿ ಆಚರಣೆ–ನಂಬಿಕೆಗಳಲ್ಲಿ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡು ಬಂದಿದೆ. ಶಂಕರನಿಂದ ಹಿಡಿದು ನಮ್ಮ ಅಲ್ಲಮ–ಬಸವರೂ ಸೇರಿದಂತೆ, ಪರಮಹಂಸ–ವಿವೇಕಾನಂದ–ಮಹಾತ್ಮ ಗಾಂಧಿ–ರಮಣರವರೆಗೆ ಬುದ್ಧ ಭಾರತೀಯ ಜೀವನ ಮತ್ತು ದರ್ಶನಗಳಲ್ಲಿ ವಿವಿಧ ಪ್ರಮಾಣಗಳಲ್ಲಿ ಮತ್ತು ಹದದಲ್ಲಿ ಅಭಿವ್ಯಕ್ತಗೊಂಡಿದ್ದಾನೆ. ಬಹುಸಂಖ್ಯಾತ ಹಿಂದೂಗಳ ಮನೆಯಲ್ಲಿ ಬುದ್ಧನ ಚಿತ್ರವೋ, ಪ್ರತಿಮೆಯೋ ಇರುವುದರ ಅರ್ಥವಾದರೂ ಏನು?

ಇಂದು ಹಿಂದೂ ಕೋಮುವಾದಿಗಳೆನಿಸಿಕೊಂಡವರು, ತಮ್ಮ ಕೃತ್ಯಗಳ ಸಮರ್ಥನೆಯಾಗಿ ತಮ್ಮ ಧರ್ಮ ಇತರ ಧರ್ಮಗಳಿಗೆ ಹೋಲಿಸಿದರೆ, ಸಹನಶೀಲ, ಪ್ರಬುದ್ಧ, ಉದಾರಿ ಎಂದು ಹೇಳಿಕೊಳ್ಳುತ್ತಿದ್ದರೆ, ಅದಕ್ಕೆ ಅದರೊಳಗೆ ಕ್ರಿಯಾಶೀಲವಾಗಿರುವ ಬೌದ್ಧ ಧಾರೆಯೇ ಕಾರಣವಾಗಿದೆ ಎಂಬುದನ್ನು ಅರಿಯದವರಾಗಿದ್ದಾರೆ. ಹಾಗೆ ನೋಡಿದರೆ, ಡಾ॥ ಅಂಬೇಡ್ಕರ್‌ರ ಮತಾಂತರಕ್ಕೆ ಚಾರಿತ್ರಿಕ ಮಹತ್ವವಿದ್ದಷ್ಟು ಧಾರ್ಮಿಕ ಮಹತ್ವವಿರಲಾರದು. ಏಕೆಂದರೆ, ಅವರು ಮಾರ್ಕ್ಸ್‌ವಾದಿ ಮೀಮಾಂಸೆಯ ನೆಲೆಯಲ್ಲಿ ಬೌದ್ಧ ಧರ್ಮದ ಮೂಲ ಆಧಾರ ಕಲ್ಪನೆಯಾದ 'ದುಃಖ'ವನ್ನು ಆಸ್ತಿಗೆ ಸಮೀಕರಿಸುವ ಮೂಲಕ ಅದರ ಭೌತವಾದಿ ನಿರೂಪಣೆಯನ್ನಷ್ಟೇ ಮಂಡಿಸಿ, ಅದಕ್ಕೆ ತಮ್ಮನ್ನೊಪ್ಪಿಸಿಕೊಂಡವರು. ಆದರೆ, ಬೌದ್ಧ ಧರ್ಮದ ಯಾವ ಜಿಜ್ಞಾಸುವೂ ಅವರ ಈ ನಿರೂಪಣೆಯನ್ನು ಒಪ್ಪಿಲ್ಲವೆಂದು ಹೇಳಲಾಗುತ್ತಿದೆ. ಸ್ವತಃ ಅವರೇ ಹೇಳಿಕೊಂಡಂತೆ, 'ದ್ವೇಷ'ದ ಮೇಲೇ("...ದ್ವೇಷ ಭಾವನೆಯಲ್ಲಿಯೇ ನನ್ನ ನಿಜವಾದ ಶಕ್ತಿ ಅಡಗಿದೆ... ಈ ದ್ವೇಷವೇ ನಾನು ಬಲವಾಗಿ ನಂಬಿರುವಂತಹ ತತ್ವಗಳು ಮತ್ತು ಧ್ಯೇಯಗಳ ಬಗ್ಗೆ ನಾನು ಹೊಂದಿರುವ ಪ್ರೀತಿಯ ಪ್ರತಿಬಿಂಬಗಳಾಗಿವೆ.": 'ರಾನಡೆ,ಗಾಂಧಿ ಮತ್ತು ಜಿನ್ನಾ' ಪುಸ್ತಕದ ಪ್ರಸ್ತಾವನೆ) ತಮ್ಮ ರಾಜಕಾರಣವನ್ನು ಕಟ್ಟಿಕೊಳ್ಳಬೇಕಾದ ಅನಿವಾರ್ಯತೆಗೆ ಸಿಕ್ಕಿದ್ದ ಅಂಬೇಡ್ಕರ್, ತಮ್ಮ ಜೀವನದ ಕೊನೆಯ ದಿನಗಳಲ್ಲಿ ತಮ್ಮ ಮಾತನ್ನು ಉಳಿಸಿಕೊಳ್ಳಲು ಮಾತ್ರವೆಂಬಂತೆ, ಎಲ್ಲ 'ದುಃಖ'ದ ಅಂತಿಮ ಪರಿಹಾರವಾಗಿ 'ಕರುಣಾ'ವನ್ನು (ಅಂದರೆ, ಸಕಲ ಜೀವರಾಶಿಯೊಂದಿಗೆ ಸಹ–ಅನುಭೂತಿ) ಬೋಧಿಸಿದ ಧರ್ಮದ ಮೊರೆ ಹೋಗಬೇಕಾದುದು ಒಂದು ರೀತಿಯಲ್ಲಿ ಸಹಜ ಧಾರ್ಮಿಕ ನ್ಯಾಯವೇ ಹೌದು! ಆದರೆ ಆನಂತರ ಅವರ ಅನುಯಾಯಿಗಳು ಪ್ರತೀಕಾರ–ಪ್ರತಿಭಟನಾರ್ಥವಾಗಿ ಬೌದ್ಧ ಧರ್ಮ ಸೇರಿ ಏನಾಯಿತು? ನವ ಬೌದ್ಧರೆಂಬ ಹೊಸ 'ಜಾತಿ' ಸೃಷ್ಟಿಯಾಗಿ, ಮತ್ತೆ ಜಾತಿ–ಅಸ್ಪೃಶ್ಯತೆಗಳ ಶಾಪ–ತಾಪಗಳನ್ನು ತಪ್ಪಿಸಿಕೊಳ್ಳಲು ಮೀಸಲಾತಿಗಾಗಿ ಹೊಡೆದಾಡುವ ಸಂದರ್ಭ ಉಂಟಾಯಿತು. ಬುದ್ಧ ಹೇಳಿದ ಮೊದಲ ಆರ್ಯ ಸತ್ಯವಾದ 'ಸಂಸಾರ ದುಃಖಮಯ' ಎಂಬುದು ಆಳವಾಗಿ ಮನವರಿಕೆಯಾಗದ ಹೊರತು, ಯಾರೂ ಬೌದ್ಧರೆನಿಸಿಕೊಳ್ಳಲಾರು ಮತ್ತು ಬುದ್ಧನ ಹಾದಿಯಲ್ಲಿ ಒಂದು ಹೆಜ್ಜೆಯನ್ನೂ ಮುಂದಿಡಲಾರರು. ಅಲ್ಲಿಯವರೆಗೆ ಅವರಿಗೆ ಹಿಂದೂ ಧರ್ಮವೇ ಸರಿಯಾದ ಜಾಗ; ಅಭ್ಯಾಸ ಕ್ಷೇತ್ರ!

ಪರಿಸ್ಥಿತಿ ಹೀಗಿರುವಾಗ, ಬೆಂಗಳೂರಿನ ಈ ಮತಾಂತರದ ಸಂದರ್ಭದಲ್ಲಿ ಮಹಾದೇವ ಅವರು ಹೇಳಿದ 'ಇದರಿಂದ ದಲಿತರೇನೂ ಕಳೆದುಕೊಳ್ಳುವುದಿಲ್ಲ' ಎಂಬ ಮಾತು ಜಾತಿ

ಪದ್ಧತಿ ಮತ್ತು ಅಸ್ಪೃಶ್ಯತೆಗಳ ಮೇಲಿನ ಸಿಟ್ಟಿನ ನೆಲೆಯಲ್ಲಿ ಮಾತ್ರ ಸತ್ಯವೆನಿಸುವ ಮಾತು. ಇಂತಹ ಮತಾಂತರದಿಂದ ಅಸ್ಪೃಶ್ಯರು ಆ ಸಿಟ್ಟಿನ ನೈತಿಕ ಹಕ್ಕನ್ನು ಕಳೆದುಕೊಳ್ಳುತ್ತಾರೆ ಮಾತ್ರವಲ್ಲ; ತಮ್ಮಂತೆ ಸಾಂಕೇತಿಕವಾಗಿ ಮತಾಂತರಗೊಳ್ಳಲಾಗದಿರುವ ಅಸಂಖ್ಯಾತ ಅಸ್ಪೃಶ್ಯ ಶ್ರೀಸಾಮಾನ್ಯರನ್ನು ತಬ್ಬಲಿಗಳನ್ನಾಗಿ ಮಾಡುತ್ತಾರೆ. ಎಲ್ಲಕ್ಕಿಂತ ಮುಖ್ಯವಾಗಿ, ಇವರು ತಮ್ಮ ಪ್ರತಿಭಟನೆ ಹಾಗೂ ಪರಿಷ್ಕಾರಗಳ ಮೂಲಕ ಹಿಂದೂ ಧರ್ಮದೊಳಗಿನ ಬೌದ್ಧ ಆವೃತ್ತಿಯನ್ನೇ ಸುಧಾರಿಸುತ್ತಾ, ಅದನ್ನು ಬಹು ಸಂಖ್ಯಾತರ 'ನಿಜ'ವೆನ್ನಿಸುವ ಬೌದ್ಧ ಧರ್ಮವನ್ನಾಗಿ ವಿಸ್ತರಿಸುವ ಐತಿಹಾಸಿಕ ಕರ್ತವ್ಯದಿಂದ ಕಳ್ಳ ತಪ್ಪಿಸಿಕೊಂಡು ಹೋಗಿ, ಭಾರತದಲ್ಲಿ ಸಾಂಕೇತಿಕವಾಗಿ ಮಾತ್ರ ಅಸ್ತಿತ್ವದಲ್ಲಿರುವ 'ಅಧಿಕೃತ' ಬೌದ್ಧ ಧರ್ಮದ ಹುದಲಲ್ಲಿ ಕಳೆದು ಹೋಗುತ್ತಾರೆ.

ಇಷ್ಟೆಲ್ಲ ಹೇಳಿದ ಮೇಲೆ ರೇಷ್ಮೆಯವರ ಸಂಪಾದಕೀಯದಲ್ಲಿನ ಒಂದು ಮಾತನ್ನು ಬಲವಾಗಿ ಅಲ್ಲಗೆಳೆಯಲೇ ಬೇಕಿದೆ. ಬೌದ್ಧ ಧರ್ಮವಿರುವ ದೇಶಗಳು ಸರ್ವಾಧಿಕಾರಿ ರಾಷ್ಟ್ರಗಳೋ ಅಥವಾ ಜಪಾನಿನಂತೆ ಉಪಗ್ರಹ ರಾಷ್ಟ್ರವೋ ಆಗಿವೆ ಎಂಬ ಅವರ ಮಾತು, ಎರಡೂವರೆ ಸಾವಿರ ವರ್ಷಗಳ ಇತಿಹಾಸವಿರುವ ಒಂದು ಧರ್ಮದ ಬಗ್ಗೆ ಅರ್ಧ ಶತಮಾನದ ಆಧುನಿಕ ರಾಜಕೀಯ ಇತಿಹಾಸವನ್ನಷ್ಟೇ ಗಮನದಲ್ಲಿಟ್ಟುಕೊಂಡು ಆಡಿರುವ ತುಂಬಾ ಸುಲಭದ ಹಾಗೂ ಬಿಡುಬೀಸಾದ ಮಾತಾಗಿದೆ. ಹಾಗೆ ನೋಡಿದರೆ, ಜಗತ್ತಿನ ಎಲ್ಲ ಧಾರ್ಮಿಕ ಸಮಾಜಗಳೂ ಎಲ್ಲ ತೆರೆನ ರಾಜಕೀಯ ಪ್ರಯೋಗಗಳಿಗೂ ಒಳಗಾಗುತ್ತಾ ಬಂದಿವೆ. ಭಾರತದಲ್ಲಿ ಸಾಮ್ರಾಜ್ಯ ಸ್ಥಾಪನೆಯ ಮೊದಲ ಪ್ರಯತ್ನ ನಡೆಯುತ್ತಿದ್ದ ಸಂದರ್ಭದಲ್ಲಿ ಧರ್ಮ ಪ್ರಚಾರ ಆರಂಭಿಸಿದ ಬುದ್ಧ, ಇಂತಹ ಪ್ರಯತ್ನಗಳ ವಿರುದ್ಧ ರಕ್ಷಣೆಯಾಗಿ ಗ್ರಾಮ ಗಣ ರಾಜ್ಯಗಳ ಮಹಾಪೋಷಕನಾಗಿದ್ದ ಎಂಬುದನ್ನು ನಾವು ಮರೆಯಬಾರದು. ಹಾಗೇ, ಪ್ರಪಂಚದ ಏಕೈಕ 'ಹಿಂದೂ ರಾಷ್ಟ್ರ'ವೆನಿಸಿದ್ದ ನೇಪಾಳ ನಿನ್ನೆ ಮೊನ್ನೆಯವರೆಗೂ 'ಅಣಕು ಪ್ರಜಾಪ್ರಭುತ್ವ'ವೆನಿಸಿಕೊಂಡು ರಾಜಶಾಹಿ ರಾಷ್ಟ್ರವಾಗಿಯೇ ಉಳಿದಿತ್ತು ಎಂಬುದನ್ನು ಕೂಡ.

(ವಿಕ್ರಾಂತ ಕರ್ನಾಟಕ ಜುಲೈ ೧೩, ೨೦೦೭)

ರಾಮದಾಸ್‌ಗೆ ನಮಸ್ಕಾರ

ಸ್ನೇಹಿತರೆ,

ಇದು 'ಚಿಂತನಾಗೋಷ್ಠಿ'. ಆಹ್ವಾನ ಪತ್ರಿಕೆ ಪ್ರಕಾರ ನಾನು ಮಾತನಾಡಬೇಕಾಗಿರುವುದು 'ಸಮಾಜವಾದಿ ಹೋರಾಟ'ದ ಬಗ್ಗೆ. ಆದರೆ ಇದು ಕೆ. ರಾಮದಾಸ್ ಅವರ ನೆನಪಿನ ಕಾರ್ಯಕ್ರಮವೂ ಆಗಿರುವುದರಿಂದ ನಾನು ಮಾತನಾಡಬೇಕಾಗಿರುವುದು ಸಮಾಜವಾದಿ ಹೋರಾಟದ ಬಗೆಗೋ, ಸಮಾಜವಾದಿ ಹೋರಾಟದಲ್ಲಿ ರಾಮದಾಸರ ಪಾತ್ರದ ಬಗೆಗೋ ತಿಳಿಯದಾಗಿದೆ. ಈ ಕಾರ್ಯಕ್ರಮದ ಸಂಘಟಕರು ಇದೀಗ ತಾನೇ, ಎರಡೂ ವಿಷಯ ಸೇರಿಸಿ ಮಾತನಾಡಬಹುದು ಎಂದು ಸೂಚಿಸಿದ್ದಾರೆ. ಹಾಗೆ ನೋಡಿದರೆ, ಆಹ್ವಾನ ಪತ್ರಿಕೆಯನ್ನು ಕಣ್ಣಾರೆ ನೋಡುವವರೆಗೂ ನಾನು ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗುತ್ತದೆನ್ನುವುದು ನನಗೆ ಗೊತ್ತಿರಲಿಲ್ಲ! ಇದನ್ನು ನಾನು ಸಂಘಟಕರ ಲೋಪವನ್ನು ಸೂಚಿಸಲು ಹೇಳುತ್ತಿಲ್ಲ. ಬದಲಿಗೆ, ಲೋಹಿಯಾ, ಗೋಪಾಲಗೌಡರಂತಹ ಹಿರಿಯ ನಾಯಕರಿಂದ ಹಿಡಿದು ರಾಮದಾಸ್‌ರವರೆಗೆ ನಮ್ಮ ಬಹುಪಾಲು ಸಮಾಜವಾದಿಗಳು ಅನಿರೀಕ್ಷಿತ ಅನಾರೋಗ್ಯ ಹಾಗೂ ಅಕಾಲಿಕ ಮರಣಕ್ಕೆ ತುತ್ತಾಗುತ್ತಿರುವುದಕ್ಕೆ, ಹತ್ತಾರು ವರ್ಷಗಳಿಂದ ಸಾರ್ವತ್ರಿಕವಾಗಿ ನಮ್ಮ ಬಹುಪಾಲು ಎಲ್ಲ ಪ್ರಗತಿಪರ ಚಟುವಟಿಕೆಗಳು ಮತ್ತು ನಿರ್ದಿಷ್ಟವಾಗಿ ಸಮಾಜವಾದಿ ಚಟುವಟಿಕೆಗಳು ಹೀಗೆ ಅವ್ಯವಸ್ಥಿತವಾಗಿ, ಯಾವುದೇ ನಿರಂತರತೆ ಇಲ್ಲದೆ–ಒಂದು ಸಮಗ್ರ ಗುರಿಯಿಲ್ಲದೆ–ದಿನವಹಿ ಆಧಾರದ ಮೇಲೆ ನಡೆದುಕೊಂಡು ಬರುತ್ತಿರುವದೂ ಒಂದು ಕಾರಣವಿರಬಹುದಲ್ಲವೇ ಎಂದು ಸೂಚಿಸಲು ಮಾತ್ರ. ದಯವಿಟ್ಟು ಯೋಚಿಸಿ.

ರಾಮದಾಸ್ ಸ್ವತಃ ಹೀಗಿರಲಿಲ್ಲ. ತಮ್ಮ ವೈಯುಕ್ತಿಕ ಬದುಕಿನಲ್ಲಿ ಸಾಕಷ್ಟು ಅಶಿಸ್ತಿನ ಮನುಷ್ಯರಾಗಿದ್ದಂತೆ ತೋರಿದರೂ, ತಾನೇ ಕಾರ್ಯಕ್ರಮವೊಂದನ್ನು ಸಂಘಟಿಸುವ ಜವಾಬ್ದಾರಿಯನ್ನು ಹೊತ್ತುಕೊಂಡಾಗ ಸಕಲ ವಿವರಗಳ ಕಡೆಗೂ ಗಮನ ನೀಡಿ ಕಾರ್ಯಕ್ರಮಕ್ಕೊಂದು ಗುರಿ ಒದಗಿಸುತ್ತಿದ್ದರಲ್ಲದೆ, ಅದು ಆ ಗುರಿ ಮುಟ್ಟುವಂತೆ ಸರ್ವ ಪ್ರಯತ್ನಗಳನ್ನೂ ಮಾಡುತ್ತಿದ್ದರು. ಆ ಸಂದರ್ಭದಲ್ಲಿನ ಅವರ ಪೇಚಾಟವನ್ನು ನೋಡಿ ನಮಗೇ ಕನಿಕರ ಮೂಡುತ್ತಿತ್ತು! ಅವರ ಸಮಾಜವಾದಿ ಬದ್ಧತೆಯೂ ಅಷ್ಟೆ. ಸಮಾಜವಾದಿ ಚಟುವಟಿಕೆಗೆ ಸಂಬಂಧಿಸಿದಂತೆ ಯಾರೇ ಎಲ್ಲಿಗೇ ಕರೆಯಲಿ, ಯಾವುದೇ ನೆಪ ಹೇಳದೆ–ಹಲವು ಬಾರಿ ತೀವ್ರ ಅನಾರೋಗ್ಯದ ನಡುವೆಯೂ–ಸಕಾಲದಲ್ಲಿ ಹಾಜರಾಗಿ ತಮಗನ್ನಿಸಿದ್ದನ್ನು ನಿಷ್ಠುರವಾಗಿ ಹೇಳಿ ಬರುತ್ತಿದ್ದರು ಮತ್ತು ಇಂತಹ ಕಾರ್ಯಕ್ರಮಗಳಲ್ಲಿ ತೆಗೆದುಕೊಳ್ಳುತ್ತಿದ್ದ

ನಿರ್ಣಯಗಳಿಗಳಿಗೆ ಬದ್ಧರಾಗಿರುತ್ತಿದ್ದರು. ಅಷ್ಟೇ ಅಲ್ಲ, ಲೋಹಿಯಾ ಕಾಲದ ಸಮಾಜವಾದಿಯಾದ ಅವರು ಸಮಾಜವಾದಿ ತತ್ವದ ಬಗ್ಗೆ ಎಷ್ಟು ಆಳವಾದ ತಿಳುವಳಿಕೆ ಮತ್ತು ಸ್ಪಷ್ಟತೆ ಹೊಂದಿದ್ದರೆಂದರೆ, ಸಮಾಜವಾದಿ ತತ್ವ ಇತ್ತೀಚಿನ ಜನಪ್ರಿಯ ರಾಜಕಾರಣಕ್ಕೆ ಸಿಕ್ಕಿ ದಿಕ್ಕಾಪಾಲಾಗಿ ಹೋಗಲಾರಂಭಿಸಿದ ಸಂದರ್ಭದಲ್ಲಿ, ಯಾವ ಗೊಂದಲಕ್ಕೂ ಸಿಗದೆ ತಮಗನ್ನಿಸಿದ್ದನ್ನು ನೇರವಾಗಿ ಹೇಳುವ ದಿಟ್ಟತನವನ್ನು ಉಳಿಸಿಕೊಂಡಿದ್ದರು.

ಉದಾಹರಣೆಗೆ, ಇತ್ತೀಚಿನ ವರ್ಷಗಳಲ್ಲಿ ಜಾತಿ ವಿನಾಶದ ಸಮಾಜವಾದಿ ತತ್ವವು ಸಾಮಾಜಿಕ ನ್ಯಾಯ ಚಳುವಳಿಯೆಂಬ ಮೀಸಲಾತಿ ವಿಸ್ತರಣೆಯ ಚಳುವಳಿಯಾಗಿ ಕುಬ್ಜಗೊಂಡು ಜಾತಿ ಸಮಾನತೆಯನ್ನು ಪ್ರತಿಪಾದಿಸ ತೊಡಗಿದಾಗ, ರಾಮದಾಸ್ ಅದನ್ನು ಕಟುವಾಗಿ ಖಂಡಿಸಿದರು. ಈ ಸಂಬಂಧ ಅವರು ಕರ್ನಾಟಕದಲ್ಲಿ ಇಂತಹ ಸಾಮಾಜಿಕ ನ್ಯಾಯ ಚಳುವಳಿಗೆ ಚಾಲನೆ ನೀಡಿದ ಹಾವನೂರ್ ವರದಿಯ ಉದ್ದೇಶದ ಬಗೆಗೇ ತಮ್ಮ ಭಿನ್ನಾಭಿಪ್ರಾಯವನ್ನು (ಶಿವಮೊಗ್ಗದ 'ಬಹುಮತ ಸಂಘಟನೆ'ಗೆ ನೀಡಿದ ಧ್ವನಿಮುದ್ರಿತ ಸಂದರ್ಶನವೊಂದರಲ್ಲಿ) ದಾಖಲಿಸಲು ಅವರು ಹಿಂಜರಿಯಲಿಲ್ಲ. ಹಾವನೂರ್ ವರದಿಯ ಶಿಫಾರ್ಸುಗಳನ್ನು ಅವರು ಸ್ವಾಗತಿಸಿದರಾದರೂ, ವರದಿ ಜಾತಿ ವಿನಾಶಕ್ಕೆ ಬದಲು ಜಾತಿ ಸಮಾನತೆಯ ಗುರಿಯಿಟ್ಟುಕೊಂಡಿದ್ದುದರ ಬಗೆಗೆ ಅವರ ತೀವ್ರ ಅಸಮಧಾನವಿತ್ತು. ಹಾಗೇ ಪ್ರೊ॥ ರವಿವರ್ಮ ಕುಮಾರ್‌ರಂತಹ ಹಾವನೂರ್‌ವಾದಿಗಳು ಜನಸಂಖ್ಯಾಧಾರಿತ ಮೀಸಲಾತಿಯ ಪ್ರಸ್ತಾಪ ಮಾಡಿದಾಗ, ಅದು ಸಾಮಾಜಿಕ ಸ್ಥಗಿತತೆಗೆ ಕಾರಣವಾಗುತ್ತದೆಯೆಂದು ಅದರ ವಿರುದ್ಧ (೨೦೦೨ರಲ್ಲಿ ಚಿತ್ರದುರ್ಗದಲ್ಲಿ ನಡೆದ ದಿ॥ ಬಿ. ಕೃಷ್ಣಪ್ಪ ನೆನಪಿನ ಕಾರ್ಯಕ್ರಮವೊಂದರಲ್ಲಿ) ಎಚ್ಚರಿಕೆ ನೀಡಿದರು. ಇತ್ತೀಚೆಗೆ ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸಬೇಕೆಂದು ಒತ್ತಾಯಿಸುವ ಆಂದೋಲನ ಆರಂಭವಾದಾಗಲೂ, ರಾಮದಾಸ್ ತಮ್ಮ ಹಲವು ಸಮಾಜವಾದಿ ಗೆಳೆಯರ ಪಕ್ಷಾಂತರದಿಂದ ವಿಚಲಿತರಾಗದೆ, ಅದನ್ನು ವಿರೋಧಿಸಿದರು. ಜಾಗತೀಕರಣದ ದುಷ್ಪರಿಣಾಮಗಳ ವಿರುದ್ಧ ಹೋರಾಡಲು ಮಾತೃಭಾಷೆಗಳನ್ನು ಬಲಪಡಿಸಬೇಕಾದುದೂ ಮುಖ್ಯವೆಂದು ಭಾವಿಸಿದ್ದ ಅವರು; ೨೦೦೩ರಲ್ಲಿ ಈ ಸಂಬಂಧ ನಾನು ಬರೆದಿದ್ದ ಕಿರು ಪುಸ್ತಕದ ಬಿಡುಗಡೆ ಸಮಾರಂಭದ ಅಧ್ಯಕ್ಷತೆ ವಹಿಸಿ, ಶಿಕ್ಷಣದಲ್ಲಿ ಮಾತೃಭಾಷೆಯ ಪ್ರಾಥಮಿಕತೆ ಕುರಿತ ಸಮಾಜವಾದಿ ತತ್ವದ ಬಗೆಗಿನ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದ್ದರು.

ಹೀಗೆ ಸಮಾಜವಾದಿ ಚಳುವಳಿ ಕೇವಲ ಹಿಂದುಳಿದ ವರ್ಗಗಳ ಜಾತಿ ರಾಜಕಾರಣವಾಗಿ ಅವನತಿಗೊಳ್ಳುತ್ತಿದ್ದಾಗ, ರಾಮದಾಸ್ ಸಮಾಜವಾದಿ ಚಳುವಳಿ ಅದಕ್ಕಿಂತ ದೊಡ್ಡದು ಎಂಬ ಎಚ್ಚರದೊಂದಿಗೆ ತತ್ಕಾಲೀನ ಬೆಳವಣಿಗೆಗಳ ಬಗ್ಗೆ ಸ್ಪಂದಿಸುತ್ತಿದ್ದರು. ಇತ್ತೀಚೆಗೆ ಅವರು ಪದೇ ಪದೇ ಹೇಳುತ್ತಿದ್ದ ಮಾತೆಂದರೆ, 'ಅಭಿವೃದ್ಧಿ ಎಂಬುದು ಒಂದು ಭ್ರಮೆ' ಎಂಬುದು.(ವಿವರಗಳಿಗಾಗಿ ಎನ್.ಕೆ.ಹನುಮಂತಯ್ಯ ಅವರೊಡನೆಯ ಮಾತುಕತೆಯನ್ನು ನೋಡಿ:'ಊರುಕೇರಿ') 'ಚಾರ್ವಾಕ'ರೆನಿಸಿ ಬದುಕಿನ ಭೌತವಾದಿ ಸ್ವರೂಪದಲ್ಲೇ ನಂಬಿಕೆಯಿರಿಸಿದ್ದ ರಾಮದಾಸ್, ಮನುಷ್ಯನ ಸಾಮಾನ್ಯ ಸುಖ–ಸಂತೋಷಗಳ ಬಗ್ಗೆ ವೈರಾಗ್ಯ ಭಾವವನ್ನೇನೂ ತಾಳಿರಲಿಲ್ಲವಾದರೂ; ಜಾಗತೀಕರಣ ಪ್ರತಿಪಾದಿಸಿ ಜಾರಿಗೆ ತರಲಾರಂಭಿಸಿರುವ 'ಅಭಿವೃದ್ಧಿ' ಕುರಿತು ತೀವ್ರ ಭಿನ್ನಾಭಿಪ್ರಾಯ ಹೊಂದಿದ್ದರು. ತಮ್ಮ ಕೊನೆಯ ದಿನಗಳಲ್ಲಿ ಪರಿಸರ ಚಳುವಳಿ ಕುರಿತು ವಿಶೇಷ ಆಸಕ್ತಿ

ತಾಳಿದ್ದ ಅವರು, ನೆಲ-ನೀರು-ಗಾಳಿ-ಆಕಾಶ-ಪಶು-ಪಕ್ಷಿ-ಗಿಡ-ಮರಗಳನ್ನು ನಾಶ ಮಾಡುತ್ತಾ ಬರುತ್ತಿರುವ 'ಅಭಿವೃದ್ಧಿ' ಬೇಡವೇ ಬೇಡ ಎನ್ನುತ್ತಿದ್ದರು. ಆ ಮೂಲಕ ಅವರು ಈಗ ಸಮಾಜವಾದಿಗಳಿಗೆ ಮರೆತೇ ಹೋಗಿರುವಂತಿರುವ ಸಮಾಜವಾದದ ಜಾಗತಿಕ ಆಯಾಮದ ಕಡೆ ಪರೋಕ್ಷವಾಗಿಯಾದರೂ ಗಮನ ಸೆಳೆಯುವ ಪ್ರಯತ್ನ ಮಾಡಿದ್ದರು. ಕಳೆದ ಮಾರ್ಚ್‌ನಲ್ಲಿ ಚಿತ್ರದುರ್ಗದಲ್ಲಿ 'ಅಭಿರುಚಿ' ವೇದಿಕೆಯಡಿ ಏರ್ಪಡಿಸಲಾಗಿದ್ದ 'ಲೋಹಿಯಾ ನೆನಪು' ಕಾರ್ಯಕ್ರಮದಲ್ಲಿ ರಾಮದಾಸ್ ಮಾತನಾಡಿದ್ದು, ಲೋಹಿಯಾ ಬಗೆಗೂ ಅಲ್ಲ, ಸಮಾಜವಾದದ ಬಗೆಗೂ ಅಲ್ಲ; ಅಭಿವೃದ್ಧಿಯ ಹೆಸರಲ್ಲಿ ನಾಶವಾಗುತ್ತಿರುವ ಪರಿಸರದ ಬಗ್ಗೆ ಮತ್ತು ಈ ಕುರಿತ ಯುವಜನರ ಅನಾಸಕ್ತಿಯ ಬಗೆಗೆ.

ಹಾಗೆ ನೋಡಿದರೆ, ಇಂದು ಸಮಾಜವಾದಿ ಚಳುವಳಿ ಪುನಃಶ್ಚೇತನಗೊಳ್ಳುವ ಸಾಧ್ಯತೆ ಇದ್ದರೆ, ಅದು ಪರಿಸರದ ಪ್ರಶ್ನೆಯನ್ನು ಕೇಂದ್ರವನ್ನಾಗಿಟ್ಟುಕೊಂಡು ತನ್ನ ಸಂಕಥನವನ್ನು ಪುನಾರಚಿಸಿಕೊಳ್ಳುವ ಮೂಲಕ ಮಾತ್ರ. ಇತ್ತೀಚೆಗೆ ಬ್ಯಾಂಕಾಂಕ್‌ನಲ್ಲಿ ನಡೆದ ಜಾಗತಿಕ ಪರಿಸರ ಸಮ್ಮೇಳನದಲ್ಲಿ ಕ್ಯೂಟೋ ಸಮ್ಮೇಳನದ ಘೋಷಣೆಯನ್ನೇ ಪುನಃರುಚ್ಚರಿಸುತ್ತಾ, ಭೂಮಿಯನ್ನು ಉಳಿಸಲು ಇನ್ನು ಏಳು ವರ್ಷಗಳು ಮಾತ್ರ ಬಾಕಿಯಿವೆ ಎಂದು ಸ್ವತಃ ವಿಜ್ಞಾನಿಗಳೇ ಕಟು ಎಚ್ಚರಿಕೆ ನೀಡಿದ್ದಾರೆ. ಆದರೂ, ಧರೆಯ ಆತಂಕಕಾರಿ ಬಿಸಿಯೇರಿಕೆಗೆ ಭಾರತ ಮತ್ತು ಚೀನಾದಂತಹ ಅಭಿವೃದ್ಧಿಶೀಲ ದೇಶಗಳ ಹಿಂದುಳಿದ ತಂತ್ರಜ್ಞಾನವೇ ಕಾರಣ ಎಂದು ವಾದಿಸುತ್ತಾ, ತಮ್ಮ ದೇಶದ ಜನರ ಅತಿ ಗ್ರಾಹಕವಾದಿ ಜೀವನ ಕ್ರಮವನ್ನು ಬದಲಾಯಿಸಿಕೊಳ್ಳಲಿಚ್ಛಿಸದ ಅಮೆರಿಕಾದಂತಹ ಅಭಿವೃದ್ಧಿಗೊಂಡ ಹಠಮಾರಿ ದೇಶಗಳು ಒಂದು ಕಡೆ; ಈ ಬಗೆಗಿನ ವರದಿಗಳೆಲ್ಲ ಉತ್ಪ್ರೇಕ್ಷಿತವೆಂದು ಭಾವಿಸುತ್ತಾ, ಈಗ ತಾನೇ ಅತ್ಯಾಧುನಿಕ ಸುಖ-ಸವಲತ್ತುಗಳ ಪ್ರಪಂಚಕ್ಕೆ ತೆರೆದುಕೊಂಡು ಅವನ್ನು ಸುಲಭವಾಗಿ ಬಿಡಲಾಗದ ಸಂಕಟದಲ್ಲಿರುವ ಭಾರತದಂತಹ ಅಭಿವೃದ್ಧಿಶೀಲ ದೇಶಗಳ ಜನಸ್ತೋಮದ ಹಪಾಹಪಿ ಇನ್ನೊಂದು ಕಡೆ. ಹೀಗೆ ಜಗತ್ತು ಜಾಗತೀಕರಣದ ಅತ್ಯುತ್ಸಾಹದಲ್ಲಿ ಅದರ ಲೌಕಿಕ ಬೆರಗಿಗೆ ಸಿಕ್ಕಿ ಅವಿವೇಕಿಯಂತೆ ವರ್ತಿಸುತ್ತ ಭೂಮಿಯನ್ನೇ ನಾಶ ಮಾಡಹೊರಟಿರುವಾಗ, ಸಮಾಜವಾದ ತನ್ನ ಹಿರಿತನಕ್ಕೆ ತಕ್ಕ ವಿವೇಕದೊಂದಿಗೆ ಜಗತ್ರಕ್ಷಕ ತತ್ವವಾಗಿ ಹೊಸದಾಗಿ ಹೊರಹೊಮ್ಮಬೇಕಿದೆ. ಇದು ಸಮಾಜವಾದದ ಪುನರನ್ವೇಷಣೆ ಕೂಡ.

ಸಮಾಜವಾದಿ ಚಳುವಳಿಯನ್ನು ಭಾರತದಲ್ಲಿ ಕೇವಲ ರಾಷ್ಟ್ರೀಯ ಚೌಕಟ್ಟಿನ ಸಾಮಾಜಿಕ ಚಳುವಳಿಯ ಮಟ್ಟಕ್ಕಷ್ಟೇ ಸೀಮಿತಗೊಳಿಸಿ ಅದರ ಸಾಧ್ಯತೆಗಳೆನ್ನೆಲ್ಲ ಸೂರೆ ಮಾಡಿ ದಿಕ್ಕೆಟ್ಟು ಕೂತಿರುವ ಸಮಾಜವಾದಿಗಳು, ಈಗಲಾದರೂ ಅದರ ಜಾಗತಿಕ ಸ್ವರೂಪದಲ್ಲಿ ಅಡಗಿರುವ ನಿತ್ಯಸತ್ಯದ ಕಡೆ ಗಮನ ಹರಿಸಬೇಕಿದೆ. ಲೋಹಿಯಾ ಪ್ರತಿಪಾದಿಸಿದ ಸಮಾಜವಾದ, ಮೂಲಭೂತವಾಗಿ ಹೊಸ ಅಭಿವೃದ್ಧಿ ಮೀಮಾಂಸೆಯನ್ನು ಆಧರಿಸಿದ ಒಂದು ಜಾಗತಿಕ ರಾಜಕೀಯ ಚಳುವಳಿಯೇ ಆಗಿತ್ತು. ಅದನ್ನು ಹಾಗೆ, ಒಂದು ಹೊಸ ಜಾಗತಿಕ ನಾಗರೀಕತೆಯ ಅಸ್ತಿವಾರದಂತೆ ರೂಪಿಸಲೂ ಲೋಹಿಯಾ ಶ್ರಮಿಸಿದ್ದರು. ವೈಜ್ಞಾನಿಕ ಅನ್ವೇಷಣೆಗಳ ನಿರಂತರ ಅನ್ವಯವನ್ನಾಧರಿಸಿದ ತಂತ್ರಜ್ಞಾನ ಸೃಜಿಸುವ ಸದಾ ಏರುತ್ತಾ ಹೋಗುವ ಜೀವನ ಮಟ್ಟವು ತನ್ನ ಭೌತಿಕ ಹಾಗೂ ಮಾನವ ಸಂಪನ್ಮೂಲಗಳ ಅಗತ್ಯಗಳಿಗಾಗಿ ಜಗತ್ತಿನ ಒಂದು ಭಾಗವನ್ನು ಒಂದಲ್ಲ ಒಂದು ರೂಪದಲ್ಲಿ ವಸಾಹತುವನ್ನಾಗಿ ಮಾಡಿಕೊಳ್ಳುವ ಅನಿವಾರ್ಯತೆಯನ್ನುಂಟು

ಮಾಡಿ, ಒಟ್ಟಾರೆ ಮಾನವತೆಯ ಮಹೋನ್ನತಿಗೆ ಭಂಗ ತರುವುದೆಂದು ಅವರು ವಿಶ್ಲೇಷಿದ್ದರು. ಈ ಹಿನ್ನೆಲೆಯಲ್ಲಿ ಇಡೀ ಜಗತ್ತು ಅನುಸರಿಸಬಹುದಾದ ಸಣ್ಣ ಪ್ರಮಾಣದ ತಂತ್ರಜ್ಞಾನದ ಮೂಲಕ ಸಾಧಿಸಬಹುದಾದ ಮಿತಿಗಳುಳ್ಳ ಒಂದು ಸಭ್ಯ-ಸರಳ ಜೀವನ ಮಟ್ಟವನ್ನು ಲೋಹಿಯಾ ಪ್ರತಿಪಾದಿಸಿದ್ದರು. ಆ ಮೂಲಕ ಅವರ ಈ ಜಾಗತಿಕ ದೃಷ್ಟಿಯ ಸಮಾಜವಾದ ಮನುಷ್ಯನ ಮೂಲಭೂತ ಹಕ್ಕುಗಳು ಹಾಗೂ ಸ್ವಾತಂತ್ರ್ಯಗಳನ್ನು ಕುರಿತಂತೆ ಬಂಡವಾಳವಾದ ಹಾಗೂ ಕಮ್ಯುನಿಸಂಗಳೆರಡೂ ಒಡ್ಡಬಹುದಾದ ಅಪಾಯಗಳ ವಿರುದ್ಧ ರಕ್ಷಣೆ ಒದಗಿಸಬಲ್ಲ ಹೊಸ ಜೀವನ ಕ್ರಮದ ಹೊಳಹನ್ನೂ ನೀಡಿತ್ತು.

ಆದರೆ ಚರಿತ್ರೆಯ ಅನಿವಾರ್ಯ ಒತ್ತಡಗಳಿಗೆ ಹಾಗೂ ಪಿತೂರಿಗೆ ಸಿಕ್ಕ ಸಮಾಜವಾದ, ಕಮ್ಯುನಿಸಂ ಜೊತೆಗೇ ಅಪ್ರಸ್ತುತೀಕರಣಕ್ಕೆ ಒಳಗಾದದ್ದು ಮಾತ್ರ ವಿಷಾದಕರ. ಇದಕ್ಕೆ ಭಾರತವೂ ಸೇರಿದಂತೆ ಜಗತ್ತಿನಾದ್ಯಂತದ ಸಮಾಜವಾದಿಗಳು ಬಂಡವಾಳವಾದ ಹಾಗೂ ಕಮ್ಯುನಿಸಂಗಳ ವಿರುದ್ಧ ಹೋರಾಡಿದಷ್ಟು ಬಲವಾಗಿ ಸ್ವಂತ ತಮ್ಮ ತತ್ವವನ್ನು ಕಾರ್ಯಕ್ರಮಗಳ ರೂಪದಲ್ಲಿ ಪ್ರತಿಪಾದಿಸುವಲ್ಲಿ ಸೋತು ಹೋದುದೂ ಕಾರಣವಾಗಿದೆ. ಆದರೆ ಇಂದು ಕಮ್ಯುನಿಸಂ ತನ್ನ ನೆನಪುಗಳ ಮೂಲಕ ಜಗತ್ತನ್ನು ದುಃಸ್ವಪ್ನದಂತೆ ಕಾಡುವಂತಾಗಿ, ಬಂಡವಾಳವಾದವೀಗ ಜಾಗತೀಕರಣದ ರೂಪದಲ್ಲಿ ಭೂಮಿಯನ್ನೇ ತಿಂದು ತೇಗುವ ಅಪಾಯವನ್ನೊಡ್ಡಿರುವಾಗ; ಮಧ್ಯಮ ಮಾರ್ಗವೆನಿಸಿರುವ ಸಮಾಜವಾದ ಒಂದು ಜಾಗತಿಕ ನೈತಿಕ ಶಕ್ತಿಯಾಗಿ ಹೊರಹೊಮ್ಮುವುದಾದರೆ, ಜನ ಅದನ್ನು ನಿಸ್ಸಂದೇಹವಾಗಿ ಸ್ವಾಗತಿಸಿಯಾರು.

ಭಾರತದಲ್ಲಿನ ರೈತರ ಆತ್ಮಹತ್ಯೆಯ ಜ್ವಲಂತ ಸಮಸ್ಯೆಗೆ ಇಂದು ಇಂತಹ ಒಂದು ನೈತಿಕ ಸಾಂತ್ವನದ ಅಗತ್ಯವಿದೆ. ಕೇಂದ್ರ ಹಾಗೂ ರಾಜ್ಯಗಳು ಎಷ್ಟೇ ದೊಡ್ಡ ದೊಡ್ಡ ಆರ್ಥಿಕ ಪ್ಯಾಕೇಜುಗಳನ್ನು ಪ್ರಕಟಿಸಿದರೂ ರೈತರ ಆತ್ಮಹತ್ಯೆ ನಿಲ್ಲದಿರುವುದರ ಹಿಂದೆ ಜಾಗತೀಕರಣದ ಅನೈತಿಕತೆಯ ಒಂದು ದೊಡ್ಡ ಮಹಾಭಾರತವೇ ಇದೆಯೆಂಬುದನ್ನು ನಾವು ಮರೆಯಬಾರದು. ಹಾಗಾಗಿಯೇ ನಾನು ಶೂನ್ಯ ಬಂಡವಾಳದ ಕೃಷಿ ಇತ್ಯಾದಿ ಪರ್ಯಾಯ ಕೃಷಿ ಪದ್ಧತಿಗಳನ್ನು ಪ್ರಚುರ ಪಡಿಸುತ್ತಿರುವ ಸ್ವಾಮಿ ಆನಂದರಂತಹ ಗೆಳೆಯರಿಗೆ, ಅದನ್ನು ರೈತನ ಸಮಗ್ರ ಎಚ್ಚರದ ಭಾಗವಾಗಿ ಒಂದು ರಾಜಕೀಯ ಚಳುವಳಿಯಂತೆಯೇ ನಡೆಸಿಕೊಂಡು ಹೋಗಿ ಎಂದು ಹೇಳುತ್ತಿರುವುದು. ಜಾಗತೀಕರಣ ಇಡೀ ಜಗತ್ತನ್ನು ನಗರೀಕರಣಕ್ಕೊಳಪಡಿಸಿ, ಕೃಷಿ ಸಂಸ್ಕೃತಿ ಆಧಾರಿತ ಗ್ರಾಮ ಬದುಕಿನ ನೆಲೆಗಳನ್ನು ನಾಶಪಡಿಸ ಹೊರಟಿದೆ. ಈ ನಾಶದ ಒಂದು ಭಾಗವಾಗಿ ರೈತರ ಆತ್ಮಹತ್ಯೆ ನಡೆಯುತ್ತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳದೇ ಹೋದಲ್ಲಿ, ರೈತರ ಆತ್ಮಹತ್ಯೆಯನ್ನೂ ತಡೆಯಲಾಗದು ಹಾಗೂ ಅದರ ಮುಂದಿನ ಪರಿಣಾಮವಾಗಿ ಕೃಷಿ ಸಂಸ್ಕೃತಿ ಆಧಾರಿತ ದೇಶಗಳ 'ಆತ್ಮ'ಹತ್ಯೆಯನ್ನೂ-ಬಹುಶಃ ಚೀನಾ ಆಡಳಿತ ಮಾದರಿಯ ಹೊರತಾಗಿ ಇನ್ನಾವ ಆಡಳಿತ ಮಾದರಿಯ ಮೂಲಕವೂ-ತಡೆಯಲಾಗದು.

ಆದುದರಿಂದ 'ಅಭಿವೃದ್ಧಿ' ಕುರಿತಂತೆ ನಾವಿಂದು ಆಮೂಲಾಗ್ರವಾಗಿ ಪುನರಾಲೋಚಿಸುವ ಅಗತ್ಯವಿದೆ. ಅತಿಗೆ ಹೋಗಿ ಹೇಳುವುದಾದರೆ, 'ಅಭಿವೃದ್ಧಿ ಇನ್ನು ಸಾಕು' ಎಂಬ ದಿಟ್ಟ ಪ್ರಣಾಳಿಕೆಯ ಆಧಾರದ ಮೇಲೇ ಸಮಾಜವಾದವಿಂದು ತನ್ನ ಹೋರಾಟವನ್ನು ಆರಂಭಿಸಬೇಕಿದೆ. ಈವರೆಗಿನ 'ಊರ್ಧ್ವ' ಅಭಿವೃದ್ಧಿಯು 'ಅಗಲ'ವಾಗಿ ಹರಡಿಕೊಳ್ಳುವ ವಿವೇಕ ಕಂಡುಕೊಳ್ಳುವವರೆಗೆ, 'ಊರಿನ ಮರ ಕಡಿದು ಮನೆಗೆ ಹವಾ ನಿಯಂತ್ರಕವನ್ನು ಹಾಕಿಸಿಕೊಳ್ಳುವ' ವಿಕ್ಷಿಪ್ತ ಅಭಿವೃದ್ಧಿಗೆ

ಸಾಕು ಎಂದು ಹೇಳುವ ಧೈರ್ಯವನ್ನು ಸಮಾಜವಾದ ಸಂಘಟಿಸಿಕೊಳ್ಳಬೇಕಿದೆ. ಲೋಹಿಯಾ ಪ್ರತಿಪಾದಿಸಿದ ಸರಳ–ಸಭ್ಯ ಜೀವನ ಮಟ್ಟದ ಕಾರ್ಯಶೀಲ 'ಮಾದರಿ'ಗಳನ್ನು ಸಮಕಾಲೀನ ಜೀವನದ ಮಟ್ಟಿಗೆ ಅಸಂಗತವೂ, ಅವ್ಯವಹಾರಿಕವೂ ಅನ್ನಿಸದ ರೀತಿಯಲ್ಲಿ ನಿರೂಪಿಸಿ ಪ್ರಚಾರ ಮಾಡುವುದೇ, ಸಮಾಜವಾದಿ ಚಳುವಳಿಯ ಸದ್ಯದ ಧರ್ಮವಾಗಬೇಕಿದೆ. ಹಿರಿಯ ಗೆಳೆಯ ರಾಮದಾಸರ ನೆನಪಿನಲ್ಲಿ ಮತ್ತು ನೆಪದಲ್ಲಿ ಇಷ್ಟು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟ ನಿಮಗೆಲ್ಲ ವಂದಿಸಿ ನನ್ನ ಈ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

(ಮೈಸೂರಿನ 'ಪ್ರಗತಿಪರ ಸಂಘಟನೆಗಳ ಒಕ್ಕೂಟ'ವು ಇದೇ ಜುಲೈ ಒಂದರಂದು ಏರ್ಪಡಿಸಿದ್ದ 'ಪ್ರೊ॥ ಕೆ.ರಾಮದಾಸ್: ಒಂದು ನೆನಪು' ಕಾರ್ಯಕ್ರಮದಲ್ಲಿನ 'ಚಿಂತನ ಗೋಷ್ಠಿ'ಯಲ್ಲಿ ಆಡಿದ ಮಾತುಗಳು)

(ವಿಕ್ರಾಂತ ಕರ್ನಾಟಕ ಜುಲೈ ೨೦, ೨೦೦೭)

ಅರವತ್ತರ ಭಾರತದ ಅರಳು ಮರುಳು

ಕಳೆದ ಶುಕ್ರವಾರ(೩.೮.೨೦೦೭) ಎಚ್.ಗಣಪತಿಯಪ್ಪನವರ ೮೪ನೇ ಹುಟ್ಟುಹಬ್ಬ. ಸಾಗರದಲ್ಲಿ ನಡೆದ ಈ ಸಮಾರಂಭದಲ್ಲಿ ಒಬ್ಬ ಅತಿಥಿಯಾಗಿ ಭಾಗವಹಿಸಿದ ಹೆಮ್ಮೆ ನನ್ನದು. ಈ ವಾರ ತನ್ನ ಅರವತ್ತನೇ ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಸ್ವತಂತ್ರ ಭಾರತದಲ್ಲಿ, ಇಂತಹ ಮರೆತು ಹೋದ-ಮತ್ತು ಒಂದರ್ಥದಲ್ಲಿ ತಮ್ಮನ್ನು ತಾವೇ ಮರೆತುಕೊಂಡಿರುವ-ಮಹಾನುಭಾವರ ಹುಟ್ಟು ಹಬ್ಬವನ್ನು ಸಾರ್ವಜನಿಕವಾಗಿ ಆಚರಿಸುವ ಜನ-ಅದೂ ಯುವ ಜನ-ಇನ್ನೂ ಇದ್ದಾರೆ ಎನ್ನುವುದೇ, ಈ ಭಾರತ ಸಾಗುತ್ತಿರುವ ಹಾದಿಯ ಬಗ್ಗೆ ನಾವೆಲ್ಲ ಆಸೆ ಕಳೆದುಕೊಳ್ಳದಿರುವುದಕ್ಕೆ ಕಾರಣವಿರಬಹುದು!

ಅಂದ ಹಾಗೆ, ಯಾರು ಈ ಗಣಪತಿಯಪ್ಪ? ಸ್ವಾತಂತ್ರೋತ್ತರ ಕರ್ನಾಟಕದಲ್ಲಿನ ಪ್ರಥಮ ಜನಾಂದೋಲನವೆನಿಸಿಕೊಂಡ ಕಾಗೋಡು ಸತ್ಯಾಗ್ರಹದ ರೂವಾರಿ ಇವರು. ಎಪ್ಪತ್ತರ ದಶಕದಲ್ಲಿ ದೇವರಾಜ ಅರಸು ಕಾಲದಲ್ಲಿ ಜಾರಿಗೆ ಬಂದ ನಿಜವಾದ ಭೂ ಸುಧಾರಣಾ ಕಾನೂನುಗಳ ಮೂಲಕ ಉಳುವವನೇ ನೆಲದೊಡೆಯನಾದ ಕ್ರಾಂತಿಗೆ ಈ ಸತ್ಯಾಗ್ರಹ ಭೂಮಿಕೆ ಸಿದ್ಧ ಪಡಿಸಿತು ಎಂದು ಹೇಳಲಾಗುತ್ತದೆ. ಈಗ ನಿಂತು ರಾಜಕೀಯ ವಿಮರ್ಶೆ ಮಾಡುವವರಿಗೆ ಆ ಸತ್ಯಾಗ್ರಹದ ಅನೇಕ ಮಿತಿಗಳು ಕಾಣಬಹುದು. ಆದರೆ, ಆಗ ನಾಗರಿಕ ಜೀವನದ ಸಂಪರ್ಕವೇ ಇಲ್ಲದ ಆ ಮಲೆನಾಡಿನ ಮೂಲೆಯೊಂದರಲ್ಲಿ ಭೂ ಮಾಲೀಕರ ದಬ್ಬಾಳಿಕೆಯನ್ನು ಪ್ರಶ್ನಿಸುವ ಪರಿವೆಯೇ ಇಲ್ಲದೆ ಮೂಕ ಪಶುಗಳಂತೆ ದುಡಿದು ಹೀನಾಯ ಸ್ಥಿತಿಯಲ್ಲಿ ಬದುಕುತ್ತಿದ್ದ ಸಮುದಾಯವೊಂದರಲ್ಲಿ, ಸ್ವಾಭಿಮಾನದ ಪ್ರಜ್ಞೆಯನ್ನು ಜಾಗೃತಗೊಳಿಸಿ ತಮ್ಮ ಶೋಷಣೆಯನ್ನು ಪ್ರಶ್ನಿಸುವಂತೆ ಮಾಡಿದ ದೊಡ್ಡ ಜನಶಕ್ತಿ ಗಣಪತಿಯಪ್ಪ. ಗಣಪತಿಯಪ್ಪ ಹೀಗೆ ಮೂಡಿಸಿದ ಎಚ್ಚರವನ್ನೇ ಶಾಂತವೇರಿ ಗೋಪಾಲ ಗೌಡ ಹಾಗೂ ಅವರ ಸಮಾಜವಾದಿ ಪಕ್ಷದ ಕಾರ್ಯಕರ್ತರು ಅಲ್ಲಿ ಒಂದು ಅಭೂತಪೂರ್ವ ಸತ್ಯಾಗ್ರಹವನ್ನಾಗಿ ಮಾರ್ಪಡಿಸಿದ್ದು.

ಶುಭ್ರವಾದ ಖಾದಿ ಕಚ್ಚೆ ಪಂಚೆ, ಜುಬ್ಬಾ, ನೆಹರೂ ಕೋಟು ಮಾತ್ರವಲ್ಲದೆ, ಕಾಂಗ್ರೆಸ್ ಟೊಪ್ಪಿಗೆಯನ್ನೂ ಧರಿಸಿ ಇಂದೂ ನಿರ್ಭಿಡೆಯಿಂದ ಕಾಂಗ್ರೆಸ್ಸಿಗರಾಗಿ ಕಾಣಿಸಿಕೊಳ್ಳುವ ಎಂಭತ್ತನಾಲ್ಕರ ಹರೆಯದ ಈ ಸುಂದರ ಸದೃಢ ಕಾಯದ ಗಣಪತಿಯಪ್ಪನವರನ್ನು ನೋಡಿದಾಗ, ಕಾಂಗ್ರೆಸ್ಸಿನವರನ್ನು ನೋಡಿದಾಗಲೆಲ್ಲ ನೆತ್ತಿಗೆ ಏರುವ ಸಿಟ್ಟು ಸ್ವಲ್ಪ ಇಳಿಯತೊಡಗುತ್ತದೆ. ಹೌದು, ಕಾಂಗ್ರೆಸ್ಸಿನವರು ಹಿಂದೊಮ್ಮೆ ಹೀಗೂ ಗೌರವಾನ್ವಿತರಾಗಿ ಇದ್ದರು ಎಂಬ ನೆನಪು ಆಗತೊಡಗುತ್ತದೆ ಹಾಗೂ ಗಾಂಧಿ ಕಟ್ಟಿದ ಆಂದೋಲನ ಜನರ ವಿಶ್ವಾಸ ಗಳಿಸಿಕೊಂಡದ್ದು

ಸುಮ್ಮನಲ್ಲ ಎಂಬ ಅರಿವು ಮೂಡತೊಡಗುತ್ತದೆ! ೧೯೪೨ರ 'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಭಾಗವಹಿಸಿ ಸರ್ಕಾರಿ ಸೇವೆಯಿಂದ ಹೊರದೂಡಲ್ಪಟ್ಟು, ಆಗಿನ ಮುಂಬೈ ಪ್ರಾಂತ್ಯದ ಸಿದ್ಧಾಪುರದಿಂದ ಮೈಸೂರು ಪ್ರಾಂತ್ಯದ ಶಿವಮೊಗ್ಗ ಜಿಲ್ಲೆಗೆ ತಲೆ ತಪ್ಪಿಸಿಕೊಂಡು ಬಂದ ಇಪ್ಪತ್ತರ ಹರೆಯದ ಗಣಪತಿಯಪ್ಪ, ಆಗ ಅರಣ್ಯದಲ್ಲಿ ಹೆಂಡ ಇಳಿಸುವ ಮತ್ತು ಭೂ ಮಾಲೀಕರ ಬಳಿ ಗೇಣಿ ಮಾಡುವ ಕೆಲಸಗಳಿಗೇ ಸೀಮಿತಗೊಂಡಿದ್ದ ಅಲ್ಲಿನ ದೀವರ ಸಮುದಾಯದ ಬಹುಶಃ ಏಕೈಕ ವಿದ್ಯಾವಂತ. ಆ ವಿದ್ಯೆಯೇ ಆತನನ್ನು ಮೇಲ್ಜಾತಿ ಭೂಮಾಲಿಕರ ಪ್ರಭುತ್ವದ ನಡುವೆಯೂ ವಿಚಲಿತನನ್ನಾಗಿ ಮಾಡದೆ–ತನ್ನ ಜಾತಿಯವರನ್ನು, ಜಾತಿ ಹೆಸರು ಬಿಟ್ಟು–'ಸಾಗರ ತಾಲ್ಲೂಕು ರೈತ ಸಂಘ' ಎಂಬ ಹೆಸರಲ್ಲಿ ಸಂಘಟಿಸಲು ಸಾಧ್ಯವಾದದ್ದು. ಆ ಸಂಘಟನೆಯೊಳಗಿಂದಲೇ ಈಗಿನ ಕಾಗೋಡು ತಿಮ್ಮಪ್ಪ, ಬಂಗಾರಪ್ಪ ಮುಂತಾದ ಅಸ್ಪೃಶ್ಯೇತರ ಕೆಳ ಜಾತಿಗಳ ನಾಯಕತ್ವ–ಅದು ಇಂದು ಇತರ ಜಾತಿಗಳ ನಾಯಕತ್ವಗಳಂತೆಯೇ ಯಾವ ಮಟ್ಟವನ್ನಾದರೂ ಮುಟ್ಟಿರಲಿ–ಮೂಡುವಂತಾದದ್ದು. ಇದರಲ್ಲಿ ಗೋಪಾಲ ಗೌಡ ಹಾಗೂ ಅವರ ಸಮಾಜವಾದಿ ಚಳುವಳಿಯ ದೊಡ್ಡ ಪಾಲು ಇರುವುದಾದರೂ, ಸ್ವಾತಂತ್ರ್ಯೋತ್ತರ ಭಾರತದ ಸಂಸದೀಯ ರಾಜಕಾರಣದ ಸಾಮಾಜಿಕ ಸ್ವರೂಪವನ್ನು ಬದಲಿಸಿ, ಪ್ರಜಾಪ್ರಭುತ್ವಕ್ಕೆ ನಿಜವಾದ ಅರ್ಥ ನೀಡಿದ ಈ ಪ್ರಯತ್ನದಲ್ಲಿ, ಗಣಪತಿಯಪ್ಪ ಈಗಲೂ ಕಷ್ಟಪಟ್ಟು ಪ್ರತಿನಿಧಿಸುತ್ತಿರುವಂತೆ ತೋರುವ ಗಾಂಧಿ ರಾಜಕಾರಣದ ಪಾತ್ರ ಗಮನಾರ್ಹವಾದದು ಎಂಬುದು ಇಲ್ಲಿ ಪ್ರಸ್ತುತ.

ಹಾಗೆ ನೋಡಿದರೆ, ಗಣಪತಿಯಪ್ಪ ಇಂದು ಗಾಂಧಿ ರಾಜಕಾರಣದ ಅವನತಿಯ ಗುಟ್ಟನ್ನೂ ಹೇಳುವ ರಾಜಕೀಯ ಸಂಕಥನವೊಂದರ ನಾಯಕನಂತೆಯೂ ಇದ್ದಾರೆ! ಅವರ ಮಾತುಗಳನ್ನೀಗ ಕೇಳುತ್ತ ಹೋದರೆ, ಯಾರಿಗೆ ಬೇಕು ಈ ಶುದ್ಧ ಹಸ್ತ, ಸರಳ ಸಭ್ಯ ಬದುಕು–ಅದು ಸಮಕಾಲೀನ ಜೀವನದ ರಾಜಕೀಯ ಸಂಕೀರ್ಣತೆಗಳಿಗೆ ಸ್ಪಂದಿಸದೇ ಹೋಗುವಂತಿದ್ದರೆ ಎನ್ನಿಸಿದರೆ ಆಶ್ಚರ್ಯವಿಲ್ಲ. ಕಾಗೋಡು ಸತ್ಯಾಗ್ರಹದ ನಂತರದಲ್ಲೇ ನಡೆದ ರಾಜ್ಯದ ಮೊದಲ ಸಾರ್ವತ್ರಿಕ ಚುನಾವಣೆಗಳಲ್ಲಿ ಸಾಗರ ವಿಧಾನ ಸಭಾ ಕ್ಷೇತ್ರದಿಂದ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿ ಗೋಪಾಲ ಗೌಡರನ್ನು ನಿಲ್ಲಿಸಿ ಗೆಲ್ಲಿಸಿದ ಗಣಪತಿಯಪ್ಪ, ಗೋಪಾಲ ಗೌಡರು ಎಷ್ಟು ಒತ್ತಾಯಿಸಿದರೂ ಸಮಾಜವಾದಿ ಪಕ್ಷ ಸೇರಲು ನಿರಾಕರಿಸಿ ಸ್ಥಳೀಯ ಕಾಂಗ್ರೆಸ್ ಮಡಿ ರಾಜಕಾರಣದಲ್ಲೇ ಈವರೆಗೆ ಕಾಲ ಕಳೆದಿದ್ದಾರೆ! ಗೋಪಾಲ ಗೌಡರೊಮ್ಮೆ ಈ ಬಗ್ಗೆ ಹತಾಶೆಯಿಂದ 'ನಿಮ್ಮಂತಹವರಿಗೆ ಗುಂಡು ಹಾಕದ ಹೊರತು ಸಮಾಜವಾದಿ ಚಳುವಳಿ ಬೆಳೆಯುವುದಿಲ್ಲ' ಎಂದು ಹಸಿ ಹುಸಿಯಾಗಿ ರೇಗಿದ್ದೂ ಉಂಟಂತೆ! ನನಗೆ ಕುತೂಹಲವಾಗಿ, ಮೊನ್ನೆ ಅವರನ್ನು ನೀವು ಸಮಾಜವಾದಿ ಪಕ್ಷವನ್ನೇಕೆ ಸೇರಲಿಲ್ಲ ಎಂದು ಕೇಳಿದೆ. ಅದಕ್ಕವರು ಬೋಳು ಬೋಳಾಗಿ ನಗುತ್ತಾ, ಕಡಿದಾಳು ಮಂಜಪ್ಪನವರನ್ನು ಬಿಟ್ಟು ಬರಲಾಗಲಿಲ್ಲ ಎಂದರು.* ಅವರ ಧ್ವನಿಯಿಂದಲೇ ಇದು ಬರೀ ಸಬೂಬು ಎನ್ನಿಸಿ ನಾನು, 'ನಿಮ್ಮ ಅತಿ ಸಭ್ಯತೆ ಅತಿ ಸಜ್ಜನಿಕತೆಗಳೇ, ಸಮಾಜವಾದಿಗಳ ನೇರ ಮುಖಾಮುಖಿಯ ರಾಜಕಾರಣದಿಂದ ದೂರವಿರುವಂತೆ ಮಾಡಿತು ಅಲ್ಲವೇ?' ಎಂದು ಕೇಳಿದಾಗ ಅವರು

---

* ೧೯೫೭ರ ಚುನಾವಣೆಗಳಲ್ಲಿ ಅವರು ಸಮಾಜವಾದಿ ದಿನಕರ ದೇಸಾಯಿ ಅವರ ಪ್ರೋತ್ಸಾಹದಿಂದ ಶಿರ್ಶಿಯಿಂದ ವಿಧಾನಸಭೆಗೆ ಸ್ಪರ್ಧಿಸಿ ಸೋತದ್ದೂ ಉಂಟು.

ಮತ್ತಷ್ಟು ಬೋಳು ಬೋಳಾಗಿ ನಕ್ಕು; ಮುಖ ಮೇಲೆತ್ತಿ ಬಾಯಿಗೆ ಮುಂಗೈ ಇಳಿಸುವ ಭಂಗಿ ತೋರಿಸುತ್ತಾ, ಸಮಾಜವಾದಿಗಳ ಈ ಅಭ್ಯಾಸ ತಮಗೆ ಸರಿ ಬರಲಿಲ್ಲ ಎಂದು ಮಾರ್ಮಿಕವಾಗಿ ನುಡಿದರು!

ನಿಮಗೆ ಸಮಾಜವಾದಿಗಳಲ್ಲಿ ಆಗ ಅದೊಂದನ್ನು ಬಿಟ್ಟು ಬೇರೇನೂ ಕಾಣಲಿಲ್ಲವೇ ಮತ್ತು ಇಂದು ಈ ಅಭ್ಯಾಸ ಎಷ್ಟು ಕಾಂಗ್ರೆಸ್ಸಿಗರಿಗಿಲ್ಲ ಎಂದೇನೂ ನಾನು ಅವರನ್ನು ಕೇಳಲು ಹೋಗಲಿಲ್ಲ. ಏಕೆಂದರೆ, ಇಂತಹ ಪ್ರಶ್ನೆಗಳೆಲ್ಲ ಜುಜುಬಿ ಎನ್ನಿಸುವಷ್ಟರ ಮಟ್ಟಿಗೆ ಇವೊತ್ತಿನ ರಾಜಕಾರಣ ಗಬ್ಬೆದ್ದು ಹೋಗಿದೆ ಎಂಬುದು ಅವರಿಗೂ ಗೊತ್ತು. ಆದರೆ ಅವರಿಗೆ ಗೊತ್ತಾಗದೇ ಹೋಗಿರುವ ವಿಷಯವೆಂದರೆ, ಇದಕ್ಕೆ ಬರೀ ಸಭ್ಯತೆ–ಸಜ್ಜನಿಕೆಯನ್ನೇ ಸಾರ್ವಜನಿಕ ಜೀವನದ ಮುಖ್ಯ ಗುಣವನ್ನಾಗಿ ಪರಿಗ್ರಹಿಸಿ, ಗಾಂಧಿ ರಾಜಕಾರಣದ ಹಲ್ಲನ್ನೇ ಕಳಚಿಟ್ಟ ತಮ್ಮಂತಹವರ ಅತಿ ಮಡಿವಂತಿಕೆಯ ರಾಜಕಾರಣವೇ ಕಾರಣ ಎಂಬುದು. ಹಾಗಾಗಿಯೇ ಅವರು 'ನಕ್ಸಲೀಯರ ಬಳಿ ನನ್ನನ್ನು ಕರೆದುಕೊಂಡು ಹೋಗಿ; ನಾನು ಅವರ ಮನ ಒಲಿಸುವೆ' ಎಂದು ವೀರಾವೇಶದ ಮಾತಾಡುವರಾದರೂ, 'ಆದರೆ ನಾನು ಅವರೊಂದಿಗೆ ಮಾಡಿಕೊಂಡು ಬರುವ ಒಪ್ಪಂದವನ್ನು ಜಾರಿಗೊಳಿಸುವಂತೆ ಸರ್ಕಾರವನ್ನು ಒಪ್ಪಿಸುವುದು ನಿಮ್ಮ ಜವಾಬ್ದಾರಿ' ಎಂದು ಅಂತಿಮ ಜವಾಬ್ದಾರಿಯನ್ನು ನಮಗೇ ಒಪ್ಪಿಸಿಬಿಡುವಷ್ಟು ಅಸಹಾಯಕರು ಕೂಡ... ಈ ಬಿರುಕು ಅವರಿಗೆ ಸ್ಪಷ್ಟವಾಗುವ ಹೊತ್ತಿಗೆ ಕಾಲ ಮಿಂಚಿತ್ತೆಂದು ಕಾಣುತ್ತದೆ. ಇದನ್ನೇ ಕಾಗೋಡು ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಮತ್ತೋರ್ವ ಹಿರಿಯ ಸಮಾಜವಾದಿ ಜಿ.ಸದಾಶಿವರಾಯರು 'ಸ್ವಾತಂತ್ರ್ಯ ಹೋರಾಟ ಸರಿಯಾಗಿ ನಡೆದಿದ್ದರೆ, ಕಾಗೋಡು ಹೋರಾಟದ ಅಗತ್ಯವೇ ಇರುತ್ತಿರಲಿಲ್ಲ' ಎಂದು ವಿಶ್ಲೇಷಿಸುವ ಮೂಲಕ ಕಾಂಗ್ರೆಸ್ ಹಾಗೂ ಸಮಾಜವಾದಿಗಳ ನಡುವೆ ಇದ್ದದ್ದು ಸಭ್ಯತೆ–ಸಜ್ಜನಿಕೆಯ ವ್ಯತ್ಯಾಸವಲ್ಲ, ದೃಷ್ಟಿಕೋನದ ವ್ಯತ್ಯಾಸ ಎಂದು ಸೂಚಿಸಿದ್ದುದು.

ಇಂದು ೬೦ನೇ ಸ್ವಾತಂತ್ರ್ಯೋತ್ಸವದ ಸಂದರ್ಭದ ಹೊತ್ತಿಗೆ, ಸ್ವಾತಂತ್ರ್ಯ ಹೋರಾಟವನ್ನು ಬೇರೆ ಬೇರೆ ನೆಲೆಗಳಲ್ಲಿ ಪುನರ್ವಿಶ್ಲೇಷಿಸುವ ಇಂತಹ ಅನೇಕ ಪ್ರಯತ್ನಗಳು ಆರಂಭವಾಗಿವೆ. ಸ್ವತಂತ್ರ ಭಾರತದ ೬೦ ವರ್ಷಗಳ ಬದುಕು ದಲಿತರ ಹಾಗೂ ಇತರ ಅನೇಕ ವಂಚಿತ ವರ್ಗಗಳ ದೃಷ್ಟಿಯಿಂದ ಅಷ್ಟೇನೂ ಆಶಾದಾಯಕವಾಗಿಲ್ಲ ಎಂಬ ವಾಸ್ತವದ ಹಿನ್ನೆಲೆಯಲ್ಲಿ ಅಂಬೇಡ್ಕರ್ ಹೆಸರು ಮುಂದೆ ಮಾಡಿಕೊಂಡು ಮತ್ತು ಜಾಗತೀಕರಣ ಉಂಟು ಮಾಡಿರುವ ಸಾಂಸ್ಕೃತಿಕ ಅಸ್ಮಿತೆಯ ಗೊಂದಲದ ಹಿನ್ನೆಲೆಯಲ್ಲಿ ಸಾವರ್ಕರ್–ಗುರೂಜಿಗಳ ಹೆಸರು ಮುಂದೆ ಮಾಡಿಕೊಂಡು; ಗಾಂಧಿ ರಾಜಕಾರಣವನ್ನು–ಅದರ ತತ್ವ ಹಾಗೂ ಆಶಯಗಳನ್ನು–ಅಪಮೌಲ್ಯೀಕರಿಸುವ ಪ್ರಯತ್ನಗಳೂ ನಡೆಯುತ್ತಿವೆ. ಇದಕ್ಕೆ ಹೊಂದಿಕೊಂಡಂತೆ ನಮ್ಮ ಬೇಜವಾಬ್ದಾರಿ ಮಾಧ್ಯಮ ಪ್ರಪಂಚ, ಕೆಲವು ತಿಂಗಳುಗಳ ಹಿಂದೆ ಸಮರ್ಥನೀಯ ಕಾರಣಗಳಿಗಾಗಿಯೇ ನಡೆದ ಬೃಹತ್ ದಲಿತ ಪ್ರತಿಭಟನೆಗಳಿಂದ ಹಾಗೂ ಈಚಿನ ಮಾಯಾವತಿ ವಿಜಯದಿಂದ ಸ್ಫೂರ್ತಿಗೊಂಡು, ತಮ್ಮ ಎಸ್.ಎಂ.ಎಸ್. ಸಮೀಕ್ಷೆಗಾಗಿ 'ರಾಷ್ಟ್ರದಲ್ಲಿ ಗಾಂಧಿ ವಾರಸುದಾರಿಕೆ ಮುಗಿದು, ಅಂಬೇಡ್ಕರ್ ವಾರಸುದಾರಿಕೆ ಆರಂಭವಾಗಿದೆಯೇ?' ಎಂಬಂತಹ ಪ್ರಶ್ನೆಗಳನ್ನೂ ಕೇಳಲಾರಂಭಿಸಿ ಬಿಟ್ಟಿವೆ–ಈಗಾಗಲೇ ಗಾಂಧಿ ವಾರಸುದಾರಿಕೆಯ ಜಾಗವನ್ನು, ಸಾವರ್ಕರ್–ಗುರೂಜಿ ವಾರಸುದಾರಿಕೆ ಸದ್ದಿಲ್ಲದೆ ಆಕ್ರಮಿಸಿಕೊಳ್ಳತೊಡಗಿದೆ ಎಂಬ ಪರಿವೆಯೇ ಇಲ್ಲದೆ!

ಇಂತಹ ಅಮಾಯಕ ಅಸೂಕ್ಷ್ಮತೆಯಿಂದಾಗಿಯೇ, ಇಂದು ಸಂಪೂರ್ಣವಾಗಿ ವ್ಯಾಪಾರಿ ಶಕ್ತಿಗಳ ಕೈವಶವಾಗಿರುವ ನಮ್ಮ ಮಾಧ್ಯಮ ಪ್ರಪಂಚ, ಮುಂಬೈ ಸ್ಫೋಟ ಪ್ರಕರಣದಲ್ಲಿ ವಿವಿಧ ವಯೋಮಾನಗಳ ನೂರು ಜನರಿಗೆ ವಿವಿಧ ರೀತಿಯ ಅಪರಾಧಗಳಿಗಾಗಿ ಗಲ್ಲು ಶಿಕ್ಷೆಯಿಂದ ಹಿಡಿದು ಎರಡು ವರ್ಷಗಳ ಕಠಿಣ ಶಿಕ್ಷೆಯವರೆಗೆ ದಂಡನೆ ಪ್ರಕಟಿಸಿದ್ದರೂ, ತನ್ನ ಸುದ್ದಿ ಪ್ರದರ್ಶನದ 'ಆಟ'ಕ್ಕೆ ಸಂಜಯ ದತ್ತನನ್ನು ಮಾತ್ರ ಆರಿಸಿಕೊಂಡಿದೆ. ಆತನ 'ಗಾಂಧಿಗಿರಿ' ಪಾತ್ರವನ್ನು ನೆನಪಿಸಿ ಅನುಕಂಪ ಸೃಷ್ಟಿಸಲು ಆತನನ್ನು 'ಮುನ್ನಾ ಭಾಯಿ' ಎಂದೇ ಕರೆಯುತ್ತಾ; ಆತನಿಗೆ ಕೊಟ್ಟಿರುವ ಆರು ವರ್ಷಗಳ ಕಠಿಣ ಶಿಕ್ಷೆ ಸಮರ್ಥನೀಯವೇ, ಆತ ಸೆರೆಮನೆಯಲ್ಲಿ ಬೆಳಿಗ್ಗೆಯಿಂದ ಸಂಜೆಯವರೆಗೆ ಏನು ಮಾಡುತ್ತಾನೆ, ಆತನಿಗೆ ನೀಡಲಾಗಿರುವ ಶಿಕ್ಷೆಯ ವಿರುದ್ಧ ಎಂತೆಂತಹ ಜನ ಏನೇನು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ ಇತ್ಯಾದಿ ವಿಷಯಗಳ ಬಗ್ಗೆ ಅದು ಹಗಲೂ ರಾತ್ರಿ ಚರ್ಚೆ-ವರದಿಗಳನ್ನು ನಿರ್ಲಜ್ಜವಾಗಿ ಪ್ರಸ್ತುತ ಪಡಿಸುತ್ತಿದೆ. ಈ ನಿರ್ಲಜ್ಜತನದಿಂದಾಗಿಯೇ ಅದು, ೧೯೮೪ರ ಸಿಖ್ ಹತ್ಯಾಕಾಂಡ, ೧೯೯೨ರ ಬಾಬ್ರಿ ಮಸೀದಿ ಧ್ವಂಸ ಪ್ರಕರಣ ಹಾಗೂ ನಂತರ ನಡೆದ ಮುಂಬೈ ಸ್ಫೋಟ ಪ್ರಕರಣಕ್ಕೆ ಕಾರಣವಾದ ಮುಂಬೈ ಕೋಮು ಗಲಭೆಯ ಅಪರಾಧಿಗಳನ್ನು ಕುರಿತಂತೆ ಏನು ಕ್ರಮ ಕೈಗೊಳ್ಳಲಾಗಿದೆ ಮತ್ತು ಗೋಧ್ರಾ ಹತ್ಯಾಕಾಂಡ ಹಾಗೂ ಆನಂತರದ ಮುಸ್ಲಿಮರ ಮಾರಣ ಹೋಮ ಕಾರ್ಯಕ್ರಮದ ಹಿಂದಿರುವ ನಿಜವಾದ ಅಪರಾಧಿಗಳನ್ನು ಗುರುತಿಸಲು ಏಕಿಷ್ಟು ವಿಳಂಬವಾಗುತ್ತಿದೆ ಎಂಬ ಪ್ರಶ್ನೆಯನ್ನು, ೬೦ವರ್ಷಗಳ ಸ್ವಾತಂತ್ರ್ಯಾಚರಣೆಯ ಸಂದರ್ಭದಲ್ಲಿ ನಡೆಸಬೇಕಾದ ಮುಖ್ಯ ಚರ್ಚೆಯ ಕೇಂದ್ರಕ್ಕೆ ತರುವ ನೈತಿಕತೆಯನ್ನೇ ಕಳೆದುಕೊಂಡಿದೆ. ಬದಲಿಗೆ, ಸಂಜಯ ದತ್ತನ ಶಿಕ್ಷೆಯನ್ನು ಪ್ರಶ್ನಾರ್ಹಗೊಳಿಸುತ್ತಿರುವ ಕಾರ್ಯಕ್ರಮಗಳ ಲಜ್ಜೆಗೇಡಿತನವನ್ನು ಮುಚ್ಚಿಕೊಳ್ಳಲೆಂಬಂತಷ್ಟೇ, ಇದನ್ನು ಚರ್ಚೆಯ ಒಂದು ಉಪ ಪ್ರಶ್ನೆಯೆಂಬಂತೆ ಕೇಳಲಾಗುತ್ತಿದೆ!

ಈ ಪ್ರಶ್ನೆ ೬೦ ವರ್ಷಗಳ ಸ್ವತಂತ್ರ ಭಾರತ ತಾನು ಸಾಗಿ ಬಂದಿರುವ ಹಾದಿಯನ್ನೊಮ್ಮೆ ಹಿಂದಿರುಗಿ ನೋಡುವ ಹಾಗೂ ಆ ಮೂಲಕ ಈ ೬೦ ವರ್ಷಗಳ ಸಾಧನೆಯನ್ನು ಪುನರ್‌ಮೌಲ್ಯೀಕರಣಕ್ಕೊಳಪಡಿಸುವ ದೃಷ್ಟಿಯಿಂದಲಾದರೂ ಮುಖ್ಯವಾಗಬೇಕಿದೆ. ಅನೇಕ ರಾಷ್ಟ್ರೀಯ ಮಾನಸಿಕ ಬಿರುಕುಗಳಿಗೆ, ತಾರತಮ್ಯಗಳಿಗೆ, ಹಿಂಸಾಚಾರಗಳಿಗೆ ಕಾರಣವಾಗಿರುವ ಅಸಮ ನ್ಯಾಯ ವಿತರಣೆಯ ಪ್ರಶ್ನೆ ಇದರಲ್ಲಡಗಿದೆ. ಅನೇಕ ಸಮುದಾಯಗಳಿಂದು ತಾವು ನಿಜವಾಗಿಯೂ ರಾಷ್ಟ್ರೀಯ ಜೀವನದಲ್ಲಿ ಸಮಾನ ಹಕ್ಕುಗಳೊಂದಿಗೆ ಬದುಕುವ ಸ್ಥಿತಿ ಇದೆಯೇ ಎಂದು ಕೇಳಿಕೊಳ್ಳುವಂತಹ ವಾತಾವರಣ ನಿರ್ಮಾಣವಾಗಿದೆ. ಹಾಗಾಗಿ ಇದು ಭಾರತದ ಭವಿಷ್ಯದ ಪ್ರಶ್ನೆಯೂ ಆಗಿದೆ. ಮುಂದೆ ಭಾರತವನ್ನು ಅಂಬೇಡ್ಕರ್ ವಾರಸುದಾರಿಕೆಯಲ್ಲೋ, ಸಾವರ್ಕರ್-ಗುರೂಜಿ ವಾರಸುದಾರಿಕೆಯಲ್ಲೋ ಅಥವಾ ಇವರೆಡರ ಜಾಣ ಸಂಯೋಜನೆಯಂತಿರುವ ಮಾಯಾವತಿ ವಾರಸುದಾರಿಕೆಯಲ್ಲೋ ಕಟ್ಟ ಹೊರಟಿರುವವರು, ಈವರೆಗೆ ಸ್ವತಂತ್ರ ಭಾರತವನ್ನು ನಿಜವಾಗಿಯೂ ಗಾಂಧಿ ವಾರಸುದಾರಿಕೆಯಲ್ಲಿ ಕಟ್ಟಲಾಯಿತೇ ಎಂಬ ಪ್ರಶ್ನೆಯನ್ನು ದಾಟಿಕೊಂಡೇ ಮನ್ನಡೆಯಬೇಕಾಗಿದೆ. ಸ್ವಾತಂತ್ರ್ಯೋತ್ತರ ಕಾಂಗ್ರೆಸ್ಸಿನ ತಪ್ಪು-ಒಪ್ಪುಗಳನ್ನು ಗಾಂಧಿ ವಾರಸುದಾರಿಕೆಯ ಕೊರಳಿಗೆ ಕಟ್ಟುವವರಿಗೆ, ಗಾಂಧಿ ವಾರಸುದಾರಿಕೆಯೆನ್ನುವುದರ ಅರ್ಥವೇ ತಿಳಿದಿರಲಾರದು. ಏಕೆಂದರೆ, ಒಮ್ಮೆ ನೆಹರೂ ಯುಗ ಆರಂಭವಾದೊಡನೆ ರಾಷ್ಟ್ರ ಜೀವನದಲ್ಲಿ ಗಾಂಧಿ ವಾರಸುದಾರಿಕೆ ಎನ್ನುವುದೇ

ಅಸಂಗತವಾಯಿತು. ಇದೊಂದು ರೀತಿಯಲ್ಲಿ, ಗಣಪತಿಯಪ್ಪನವರಂತಹವರ ಅತಿ ಸಭ್ಯತೆ-ಸಜ್ಜನಿಕೆಗಳ ಮೂಲಕ ವ್ಯಕ್ತವಾದ ಗಾಂಧಿವಾದಿಗಳ ಸಾಮೂಹಿಕ ಆತ್ಮಹತ್ಯೆ ಇದ್ದಂತೆ!

ನೆಹರೂ ಎಂಬ ಬ್ರಿಟಿಷ್ ವಾರಸುದಾರನ ಕಾಲದಲ್ಲಿ ಆರ್ಥಿಕ ನೀತಿಗಳ ನೆಲೆಯಲ್ಲಿ ಗಾಂಧಿ ವಾರಸುದಾರಿಕೆಗೆ ತಿಲಾಂಜಲಿ ನೀಡಲಾಯಿತಾದರೆ; ಇಂದಿರಾ ಗಾಂಧಿ ಎಂಬ 'ದುರ್ಗಾ ಮಾತೆ'ಯ ಕಾಲಕ್ಕೆ ಈಶಾನ್ಯ ರಾಜ್ಯಗಳ, ಜಮ್ಮು-ಕಾಶ್ಮೀರ ಹಾಗೂ ಪಂಜಾಬ್ ರಾಜ್ಯಗಳ ಪ್ರಾದೇಶಿಕ ರಾಜಕಾರಣದ ಮೇಲೆ ದಬ್ಬಾಳಿಕೆ ನಡೆಯುವ ಮೂಲಕ ಗಾಂಧಿ ವಾರಸುದಾರಿಕೆಯ ಜಾಗದಲ್ಲಿ ಸಾವರ್ಕರ್-ಗುರೂಜಿ ವಾರಸುದಾರಿಕೆಯನ್ನು ಬೆಳೆಸುವ ಪ್ರವೃತ್ತಿಯನ್ನು ಆರಂಭಿಸಲಾಯಿತೆಂದು ಹೇಳಬಹುದು. ನಂತರ ರಾಜೀವ್ ಗಾಂಧಿ ಎಂಬ ಹುಂಬ ಪ್ರಧಾನಿ ಮಂತ್ರಿಯ ಕಾಲಕ್ಕೆ, ಷಾ ಬಾನು ಪ್ರಕರಣದಲ್ಲಿ ಕಾಂಗ್ರೆಸ್ ವರ್ತಿಸಿದ ರೀತಿ ಹಾಗೂ ಬಾಬ್ರಿ ಮಸೀದಿಯ ಆವರಣದಲ್ಲಿನ ವಿವಾದಾಸ್ಪದ ಮಂದಿರದ ಬಾಗಿಲು ತೆಗೆಸಿ ಪೂಜೆಗೆ ಅವಕಾಶ ಮಾಡಿಕೊಟ್ಟ ; ನರಸಿಂಹರಾವ್ ಎಂಬ ಚಾಣಾಕ್ಷ ರಾಜಕಾರಣಿಯ ಕಾಲಕ್ಕೆ ಅಲ್ಲಿ ಕರಸೇವೆಗೆ ಅನುಮತಿ ನೀಡಿದ ಸಮಯ ಸಾಧಕ ರಾಜಕಾರಣವು, ಸಾವರ್ಕರ್-ಗುರೂಜಿ ವಾರಸುದಾರಿಕೆಯ 'ಹಿಂದುತ್ವ'ದ ರಾಜಕಾರಣಕ್ಕೆ ದೊರೆತ ಪರೋಕ್ಷ ಅಂಗೀಕಾರವೇ ಆಗಿತ್ತು. ನಂತರ ಬಿ.ಜೆ.ಪಿ. ನೇತೃತ್ವದ ಎನ್.ಡಿ.ಎ. ಸರ್ಕಾರದ ಮೂಲಕ ಅದಕ್ಕೆ ಅಧಿಕೃತ ಮನ್ನಣೆ ದೊರಕಿತಷ್ಟೆ. ಇಂದು ಸೋನಿಯಾ ಗಾಂಧಿ-ಮನಮೋಹನ ಸಿಂಗರ ಸರ್ಕಾರದ ಆರ್ಥಿಕ ನೀತಿಗಳನ್ನು ನೋಡಿದರೆ- ಅದು ಕಾಂಗ್ರೆಸ್ ಹೆಸರಿನ ಪಕ್ಷವೊಂದರ ನೇತೃತ್ವದ ಸರ್ಕಾರ ಎಂಬೊಂದು ಕಾರಣಕ್ಕೇ- ಅದನ್ನು ಗಾಂಧಿ ವಾರಸುದಾರಿಕೆಯ ಸರ್ಕಾರ ಎನ್ನಲಾದೀತೆ?

ಹೀಗಾಗಿ ಈ ೬೦ ವರ್ಷಗಳಲ್ಲಿ ವಿಶ್ವಾಸಾರ್ಹತೆ ಕಳೆದುಕೊಂಡಿರುವುದು ಗಾಂಧಿ ವಾರಸುದಾರಿಕೆ ಎಂದು ಹೇಳುವವರು ಅಸಂಬದ್ಧವಾಗಿ ಮಾತನಾಡುತ್ತಿದ್ದಾರೆ ಎಂದೇ ಹೇಳಬೇಕು. ವಾಸ್ತವವಾಗಿ, ಈ ೬೦ ವರ್ಷಗಳಲ್ಲಿ ಗಾಂಧಿ ವಾರಸುದಾರಿಕೆಯನ್ನು ಆರಂಭಿಸುವ ಪ್ರಯತ್ನಗಳು ವಿಫಲವಾಗಿವೆ ಎಂದು ಹೇಳಬೇಕು. ಸಮಾಜವಾದಿ ಚಳುವಳಿ, ಅದರ ಕ್ರೋಢೀಕೃತಗೊಳ್ಳಲಾಗದ ತಾತ್ವಿಕತೆ ಹಾಗೂ ಸಡಿಲ ಸಂಘಟನೆಯ ಕಾರಣಗಳಿಂದ ವಿಫಲವಾದರೆ; ಜೆ.ಪಿ. ಚಳುವಳಿ ಮೂಲಕ ವ್ಯಕ್ತವಾದ ಪ್ರಯತ್ನ, ಅದರ ತಾತ್ವಿಕ ಹಾಗೂ ಸಂಘಟನಾತ್ಮಕ ಸ್ಥೂಲತೆಯಿಂದಾಗಿಯೇ ಗರ್ಭಪಾತಕ್ಕೊಳಗಾಯಿತು. ನಂತರ ವಿ.ಪಿ.ಸಿಂಗ್ ಬಂಡಾಯದ ಮೂಲಕ ಹುಟ್ಟಿಕೊಂಡ ಜನತಾ ದಳದ ರೂಪದ ಇತ್ತೀಚಿನ ಪ್ರಯೋಗ, ಒಂದು ಕಡೆ ಭಾಜಪದಿಂದ, ಇನ್ನೊಂದು ಕಡೆ ಕಮ್ಯುನಿಸ್ಟರಿಂದ ಬೆಂಬಲ ಪಡೆದು ಬದುಕುವ ತನ್ನ ಹುಟ್ಟಿನ ದೋಷದಿಂದಾಗಿಯೇ ಕಣ್ಮುಚ್ಚುವಂತಾಯಿತು. ಹೀಗೆ ಗಾಂಧಿ ವಾರಸುದಾರಿಕೆ ಎನ್ನುವುದು, ಈ ೬೦ ವರ್ಷಗಳಲ್ಲಿ ಪ್ರಭುತ್ವದ ಅನಾಚಾರಗಳ ಎದುರು ಇಂತಹ ಜನಶಕ್ತಿಯ ಬಂಡಾಯಗಳ ರೂಪದಲ್ಲಷ್ಟೇ, ಆಗಾಗ್ಗೆ ಅಭಿವ್ಯಕ್ತಗೊಳ್ಳುತ್ತಾ ಬಂದಿದೆ.

ಆದರೆ, ಇಂತಹ ಬಂಡಾಯಗಳ ಮೂಲಕವೇ ಅದು, ಕಳೆದ ೬೦ ವರ್ಷಗಳಲ್ಲಿ ಭಾರತದ ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವಗಳು- ಅನೇಕ ವಕ್ರತೆ, ವಿಕ್ಷಿಪ್ತತೆಗಳ ನಡುವೆಯೂ- ಉಳಿದುಕೊಂಡು ಬರಲು ನೆರವಾಗಿದೆ ಎಂಬುದನ್ನೂ ನಾವು ಮರೆಯುವಂತಿಲ್ಲ. ಹಾಗಾಗಿ,

ಕಳೆದ ಹದಿನೈದು ವರ್ಷಗಳ ಅಸಮಾನ ನ್ಯಾಯ ವಿತರಣೆಯ ಕಾರಣಗಳಿಂದಾಗಿ ಈಗ ರಾಷ್ಟ್ರೀಯ ಬದುಕಿನಲ್ಲಿ ಕಾಣಿಸಿಕೊಳ್ಳಲಾರಂಭಿಸಿರುವ ಬಿರುಕುಗಳನ್ನು ಇಂತಹ ಮತ್ತೊಂದು ಜನಶಕ್ತಿಯ ಬಂಡಾಯವನ್ನು ಆಯೋಜಿಸುವ ಮೂಲಕವೇ ಮುಚ್ಚುವುದು ಅನಿವಾರ್ಯವಾಗಿದೆ ಎಂದು ಯಾರಿಗಾದರೂ ಅನ್ನಿಸತೊಡಗಿದ್ದರೆ ಆಶ್ಚರ್ಯ ಪಡಬೇಕಿಲ್ಲ. ಏಕೆಂದರೆ, ಸದ್ಯಕ್ಕೆ ಮುಖ್ಯವಾಹಿನಿಯ ರಾಜಕೀಯ ಆಡಳಿತ ಮಾದರಿಗಳಿಗೆ ಪರ್ಯಾಯ ಮಾದರಿಗಳೆಂಬಂತೆ ನಮ್ಮ ಕಣ್ಮುಂದೆ ಈಗ ಕಾಣಿಸಿಕೊಂಡಿರುವ ಮಾಯಾವತಿಯವರ ತತ್ವಹೀನ ಜಾತಿ ರಾಜಕಾರಣ ಹಾಗೂ ತೃತೀಯ ಶಕ್ತಿಯೆಂದು ಹೇಳಿಕೊಳ್ಳುವ ಪಕ್ಷಗಳ ಊಳಿಗಮಾನ್ಯ ಕೌಟುಂಬಿಕ ರಾಜಕಾರಣಗಳೆರಡೂ, ಈ ಬಿರುಕುಗಳ ಪ್ರಯೋಜನ ಪಡೆದು ಮೂಡಿದ ಮಾದರಿಗಳೇ ಆಗಿವೆ.

ಹೀಗಾಗಿ ಇಂದು ಗಾಂಧಿ ವಾರಸುದಾರಿಕೆಯ ಸ್ಫೂರ್ತಿಯಿಂದಲೇ ಒಡಮೂಡಿ ಬರಬೇಕಾದ ಜನಶಕ್ತಿಯ ಬಂಡಾಯ, ಇಂತಹ ಪ್ರತಿಕೂಲ ಪರಿಸ್ಥಿತಿಯಲ್ಲೂ ಗಣಪತಿ ಯಪ್ಪನವರಂತಹರನ್ನು ಗುರುತಿಸಿ ಹೆಮ್ಮೆ ಪಡುವ ಸೂಕ್ಷ್ಮತೆ ಉಳಿಸಿಕೊಂಡಿರುವ ಜಾತ್ಯತೀತ ಯುವಜನರ ನೇತೃತ್ವದಲ್ಲೇ ಆರಂಭವಾಗಬೇಕಿದೆ. ಏಕೆಂದರೆ, ಗಣಪತಿಯಪ್ಪ ಹಾಗೂ ಇತ್ತೀಚೆಗೆ ೮೦ ವರ್ಷ ತುಂಬಿದ ಎಚ್.ಎಸ್.ದೊರೆಸ್ವಾಮಿಯವರಂತಹ ಗಾಂಧಿವಾದಿಗಳು ಕಾಲನ ಒತ್ತಡಗಳಿಗೆ ಸಿಕ್ಕಿ ರಾಜಕೀಯ ಶಕ್ತಿ ಕಳೆದುಕೊಂಡಿದ್ದರೂ, ನೈತಿಕ ಶಕ್ತಿಯ ನಿಧಿಗಳಾಗಿಯೇ ಉಳಿದಿದ್ದಾರೆ. ಗಾಂಧಿ ಮೂಲತಃ ಒಂದು ನೈತಿಕ ಶಕ್ತಿಯಾಗಿಯೇ ಇಂದು ಕ್ರಿಯಾಶೀಲವಾಗಬೇಕಾಗಿರುವ ಅಗತ್ಯದ ಹಿನ್ನೆಲೆಯಲ್ಲಿ ಗಾಂಧಿ ವಾರಸುದಾರಿಕೆ, ರಾಷ್ಟ್ರಾದ್ಯಂತ ಇನ್ನೂ ಅಳಿದುಳಿದಿರುವ ಇಂತಹ ಗಾಂಧಿವಾದಿಗಳ ನೈತಿಕ ಬಲದಿಂದಲೇ ಮತ್ತೆ ತನ್ನ ಅಭಿವ್ಯಕ್ತಿಯನ್ನು ಕಂಡುಕೊಳ್ಳಬೇಕಿದೆ.

ಈ ೬೦ ವರ್ಷಗಳ ಎಲ್ಲ ರೀತಿಯ ರಾಜಕೀಯ ಪ್ರಯೋಗಗಳ ಅಂತಿಮ ಪರಿಣಾಮವೆಂಬಂತೆ ಮೂಡಿ ನಿಂತಿರುವ ಜಾಗತೀಕರಣವೆಂಬ ನವ ಸಾಮ್ರಾಜ್ಯಶಾಹಿಯಲ್ಲಿ ಅಸಮಾನತೆ ಹಾಗೂ ಅಶ್ಲೀಲತೆಗಳು ಅಂತರ್ಗತವಾಗಿವೆ ಎಂಬ ಸತ್ಯ ಇಂದು ನಿಧಾನವಾಗಿ ಗೋಚರವಾಗುತ್ತಿರುವ ಹಿನ್ನೆಲೆಯಲ್ಲಿ, ಮುಂದಿನ ದಿನಗಳಲ್ಲಿ ಗಾಂಧಿ ವಾರಸುದಾರಿಕೆ ಒಂದು ಪೂರ್ಣ ಪ್ರಮಾಣದ ರಾಜಕೀಯ ಶಕ್ತಿಯಾಗಿ ತನ್ನ ವಿಶ್ವಾಸಾರ್ಹತೆಯನ್ನು ಸಾಧಿಸಿಕೊಳ್ಳುವ ಎಲ್ಲ ಸಾಧ್ಯತೆಗಳು ತೆರೆದಿವೆ. ಹಾಗೇ, ಅದು ಈವರೆಗೆ ತಾನು ನಡೆಸಿರುವ ಪ್ರಯೋಗಗಳ ಮೂಲಕ ಸಾಧಿಸಿಕೊಂಡಿರುವ ಎಲ್ಲ ಅನುಸಂಧಾನಗಳ ಸಾಧ್ಯತೆಗಳೊಡನೆ ಪ್ರಕಟಗೊಳ್ಳುವ ಅಗತ್ಯ ಹಾಗೂ ಅನಿವಾರ್ಯತೆ ಉಂಟಾಗಿದೆ ಎಂದೂ ಹೇಳಬಹುದು. ಇದಕ್ಕೆ ಪೂರಕವಾಗಿ, ಈ ದಿಸೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ದೊಡ್ಡ ಕಾರ್ಯ ಪಡೆಯೇ ರಾಷ್ಟ್ರಾದ್ಯಂತ ಕ್ರಿಯಾಶೀಲವಾಗಿದೆ. ಮೇಧಾ ಪಾಟ್ಕರ್ ಇಂತಹ ಕಾರ್ಯಪಡೆಯ ಸಾಮರ್ಥ್ಯ-ಸಾಧ್ಯತೆಗಳ ಒಂದು ಬಹಿರಂಗ ಪ್ರತೀಕವಷ್ಟೆ. ಆ ಪ್ರತೀಕ ರಾಷ್ಟ್ರಾದ್ಯಂತ ವಿಸ್ತರಿಸಿಕೊಂಡು ಜನಶಕ್ತಿಯ ಒಂದು ಸ್ಫೋಟವನ್ನು ಸಾಧಿಸುವ ದಿನಕ್ಕಾಗಿ ರಾಷ್ಟ್ರ ಕಾಯುತ್ತಿದೆ.

ಆದರೆ, ಇದಕ್ಕಾಗಿ ಸಾಮಾಜಿಕ ವಾತಾವರಣ ಹಾಗೂ ರಾಜಕೀಯ ಭೂಮಿಕೆಯನ್ನು ಸಿದ್ಧಪಡಿಸಬೇಕಾದ ನಮ್ಮ ಮಾಧ್ಯಮಗಳನ್ನು ನೋಡಿ. ಇಪ್ಪತ್ತು ನಾಲ್ಕು ತಾಸುಗಳೂ ಸುದ್ದಿ ಪ್ರದರ್ಶನಗಳ ಆಟಗಳ ಮೂಲಕ ಮೇಲ್ವರ್ಗ ಹಾಗೂ ಮಧ್ಯಮ ವರ್ಗಗಳನ್ನು ಹಾಗೂ

ಸಿನೆಮಾ–ಮೆಗಾ ಧಾರಾವಾಹಿ–ಜನಪ್ರಿಯ ಜೀವನ ಶೈಲಿಯ ಸ್ಪರ್ಧೆಗಳ ಮೂಲಕ ಕೆಳ ಮಧ್ಯಮ ಹಾಗೂ ಬಡ ವರ್ಗಗಳನ್ನು ಸೆರೆ ಹಿಡಿದು ಹಾಕಿ; ತಮ್ಮ ಭ್ರಷ್ಟಾಚಾರ ವಿರೋಧಿ ಸಾಹಸಗಳ ಮೂಲಕ ಹಾಗೂ ಅನ್ಯಾಯಕ್ಕೊಳಗಾದವರಿಗೆ ಪರಿಹಾರ ದೊರಕಿಸಿಕೊಡುವ ಸಮಾಜ ಕಲ್ಯಾಣೋದ್ದೇಶದ 'ಇಂಪ್ಯಾಕ್ಟ್' ಕಾರ್ಯಕ್ರಮಗಳ ಮೂಲಕ ಮಿನಿ ಸರ್ಕಾರಗಳಂತೆ ಕಾರ್ಯ ನಿರ್ವಹಿಸುತಿರುವ ನಮ್ಮ ಮಾಧ್ಯಮಗಳು, ಜನರ ಪಾಲಿಗೆ ವಾಸ್ತವ ಸತ್ಯಗಳ ಸ್ವಸಂಸ್ಪರ್ಶದ ಅಗತ್ಯವೇ ಇಲ್ಲದಂತೆ ಮಾಡಿ, ಈಗ ಮಾಧ್ಯಮ ಭಾರತವೆಂಬ 'ಮಿಥ್ಯಾ ಭಾರತ'ವೊಂದನ್ನು ಸೃಷ್ಟಿಸಿವೆ. ವಾಸ್ತವ ಚಿತ್ರವೇ ಕಾಣದಂತೆ ಅದರ ಮೇಲೆ ಅದರ ಬಣ್ಣದ ಪ್ರತಿಬಿಂಬವನ್ನು ಸ್ಥಾಪಿಸುವ ಒಂದು ದೊಡ್ಡ ಮಾಯಾ ಬಜ಼ಾರ್ ಇಂದು ಉದ್ಯಮದ ಹೆಸರಲ್ಲಿ ಬೆಳೆದು ನಿಂತಿದೆ! Medium is the Message ಎಂಬ ಆಧುನಿಕ ಮಾಧ್ಯಮ ತಜ್ಞರ ಮಾತು, ಹೀಗೆ ಆಭಾಸಕರ ರೀತಿಯಲ್ಲಿ ನಿಜವಾಗತೊಡಗಿದೆ... ಜಾಗತೀಕರಣಗೊಂಡ ಭಾರತದ ಅಭಿವ್ಯಕ್ತಿ ಸಾಮರ್ಥ್ಯದ ಪ್ರತೀಕವೆನಿಸಿರುವ ನಮ್ಮ ಮಾಧ್ಯಮ ಪ್ರಪಂಚದ ಸ್ಥಿತಿಯಿದು! ಹೀಗಾಗಿ, ನಮ್ಮಗಳ ಬದುಕೇ ಈಗ ವಾಸ್ತವತೆಯ ಗುರುತ್ವ ಕೇಂದ್ರ ಕಳೆದುಕೊಂಡು ಈ ಮಾಯಾ ಬಜ಼ಾರ್‌ನ ಪ್ರತಿವಾಸ್ತವತೆಯ ಸರಕಾಗಿ ಹೋಗಿದೆ. ಹಾಗಾಗಿಯೇ ಇಂದು ಎಲ್ಲೆಲ್ಲೂ ಮಾಧ್ಯಮ ಪ್ರತಿನಿಧಿಗಳ ನೂಕು ನುಗ್ಗಲು. ಸಾರ್ವಜನಿಕ ಸಮಾರಂಭಗಳಿರಲಿ, ಮದುವೆಗಳಂತಹ ಕೌಟುಂಬಿಕ ಸಮಾರಂಭಗಳಲ್ಲೂ, ಬಂದ ಜನ ಸಾಲುಗಟ್ಟಿ ನಿಂತ ಇವರ ಹಿಂಭಾಗಗಳನ್ನಷ್ಟೇ ನೋಡಿ ಹೋಗುವ ದುಸ್ಥಿತಿ!

ಇದು ಅರವತ್ತರ ಭಾರತಕ್ಕೆ ಬಡಿದಿರುವ ಅರಳು ಮರುಳಲ್ಲದೆ ಮತ್ತೇನು?

(ವಿಕ್ರಾಂತ ಕರ್ನಾಟಕ ಆಗಸ್ಟ್ ೧೭, ೨೦೦೭)

ಅವಕಾಶವಾದಿ ರಾಜಕಾರಣಕ್ಕೆ ಅಧಿಕೃತ ಮುದ್ರೆ!

ಅಂದು ಒಂದು ತಿಂಗಳ ಹಿಂದೆ ಚಿತ್ರದುರ್ಗದಲ್ಲಿ 'ಅಭಿರುಚಿ' ಸಾಹಿತ್ಯಿಕ-ಸಾಂಸ್ಕೃತಿಕ ವೇದಿಕೆ 'ಸಾಂಸ್ಕೃತಿಕ ರಾಜಕಾರಣ' ಕುರಿತು ಏರ್ಪಡಿಸಿದ್ದ ತಿಂಗಳ ಸಂವಾದ ಗೋಷ್ಠಿಯಲ್ಲಿ ಬಿ.ಎಸ್.ಪಿ.ಯ ಪುಡಿ ನಾಯಕನೊಬ್ಬ ಸಂವಾದದ ನೆಪದಲ್ಲಿ ವೇದಿಕೆಯೇರಿ, ಸಂಬಂಧವಿಲ್ಲದೆ ಬಂಜಗೆರೆಯವರ 'ಆನುದೇವ...'ವನ್ನು ಖಂಡಿಸಿ ಮಾತಾಡತೊಡಗಿದಾಗಲೇ ನನಗನ್ನಿಸಿತ್ತು, ಬಿ.ಎಸ್.ಪಿ. ಕರ್ನಾಟಕದಲ್ಲಿ ಲಿಂಗಾಯ್ತರ ಓಟಿಗೆ ಏಟು ಹಾಕಿದೆ ಎಂದು. ಅದನ್ನು ಅಂದೇ ನನ್ನ ಪಕ್ಕದಲ್ಲಿ ಕೂತಿದ್ದ ಆ ವೇದಿಕೆಯ ಸಂಚಾಲಕರ ಕಿವಿಯಲ್ಲಿ ಉಸಿರಿದ್ದೆ. ಆ ಪುಡಿ ನಾಯಕ ಎಷ್ಟು ಆವೇಶದಿಂದ ಹಾಗೂ ನಗ್ನ ಜಾತಿ ಪರಿಭಾಷೆಯಲ್ಲಿ ಆ ಪುಸ್ತಕವನ್ನು ಭಂಡತನದಿಂದ ಖಂಡಿಸತೊಡಗಿದನೆಂದರೆ, ಸಭೆಯಲ್ಲಿ ಅಂದು ವಿಶೇಷವಾಗಿ ಹಾಜರಿದ್ದ ಜಾತಿ ಲಿಂಗಾಯ್ತರೂ ನಾಚಿ ನೀರಾದರು! ತಾನು ಬಂಜಗೆರೆಯವರಂತೆ ಗೊಲ್ಲನಾದರೂ, ಅವರು ವಚನಗಳ ವಾಚ್ಯಾರ್ಥವನ್ನಷ್ಟೇ ಆಧರಿಸಿ ಬರೆದಿರುವ ಈ ಪುಸ್ತಕವನ್ನು ಒಪ್ಪುವುದಿಲ್ಲವೆಂಬ ಸಾಹಿತ್ಯಕ ವ್ಯಾಖಾನವನ್ನೂ ನೀಡಿದ ಆತ; ಉತ್ತರ ಪ್ರದೇಶದಲ್ಲಿ ಬಡವರಿಗೆ ಜಮೀನು, ಸಾಲ ಮುಂತಾದ ಏನೆಲ್ಲ ಸೌಲಭ್ಯ ಕಲ್ಪಿಸಿ ಕೊಟ್ಟು ಮಾಯಾವತಿ ಸಾಧಿಸಿರುವ ಚುನಾವಣಾ ವಿಜಯವನ್ನು ಮರೆ ಮಾಚಲೆಂದೇ ಉದ್ದೇಶಪೂರ್ವಕವಾಗಿ 'ಆನುದೇವ..' ಕುರಿತು ಚರ್ಚೆ ಆರಂಭಿಸಲಾಗಿದೆಯೆಂದು ತಿಕ್ಕಲು-ತಿಕ್ಕಲಾಗಿ ವಾದ ಮಾಡತೊಡಗಿದ! ಅಲ್ಲದೇ, ಅಂದು ನನ್ನ ಅಧ್ಯಕ್ಷ ಭಾಷಣಕ್ಕೆ ಪದೇ ಪದೇ ಅಡ್ಡಿಪಡಿಸಿದ- ಬಸವಣ್ಣನ ತಾಯಿ ತಾನು ಆಧ್ಯಾತ್ಮಿಕ ಸಾಧನೆಗಾಗಿ ನಂಬಿ ಗೌರವಿಸುತ್ತಿದ್ದ ಆಗಿನ ಯೋಗಾಚಾರದ ಭಾಗವಾಗಿ ಮಗನನ್ನು ಪಡೆದಿರಬಹುದಾದದ್ದನ್ನು, ಆ ಕಾಲದ ಬಸವ ವಿರೋಧಿಗಳಂತೆಯೇ ಅನಾಚಾರವೆಂದೇ ಪ್ರಚಾರ ಮಾಡುತ್ತಾ ಪುಸ್ತಕದ ಮುಟ್ಟುಗೋಲನ್ನು ನಿರ್ಲಜ್ಜವಾಗಿ ಸಮರ್ಥಿಸುತ್ತಿರುವ ಸಾಂಸ್ಕೃತಿಕ ಯಜಮಾನರುಗಳ- ಪರ ವಹಿಸಿ ಅಸಂಬದ್ಧವಾಗಿ ಮಾತನಾಡುತ್ತಾ, ತಾನೂ ಆ ಅಡ್ಡಿ ಪಡಿಸುವ ಕಾರ್ಯಕ್ರಮಕ್ಕೆ ತನ್ನ ಗಂಟಲ ಶಕ್ತಿಯನ್ನು ಕೊಡುಗೆಯಾಗಿ ಸಲ್ಲಿಸಿದ!

ತದನಂತರ ಮಾತನಾಡಿದ ಬಿ.ಎಸ್.ಪಿ. ಬುದ್ಧಿಜೀವಿ ನಾಯಕರೊಬ್ಬರು, ತಮ್ಮ ಪ್ರಕಾರ ಭಾರತದ ಇತಿಹಾಸವೆಂದರೆ ಮಾದಿಗರ ಇತಿಹಾಸವೇ ಆಗಿರುವುದರಿಂದಾಗಿ, ಒಂದು ಪಕ್ಷ ಬಂಜಗೆರೆಯವರ ಸಂಶೋಧನೆ ನಿಜವಿದ್ದರೂ, ಅದು ಮಾದಿಗ ಜನಾಂಗದವರಿಗೇನೂ ರೋಮಾಂಚನ ಉಂಟು ಮಾಡಲಾರದೆಂದು ಥಣ್ಣಗೆ ವೈರಾಗ್ಯದ ಧಾಟಿಯಲ್ಲಿ ಮಾತನಾಡಿದಾಗ ನನಗೇನೂ ಆಶ್ಚರ್ಯವಾಗಲಿಲ್ಲ. ಹಾಗಾಗಿ, ಈಗ ಕರ್ನಾಟಕದಲ್ಲಿ ಬಿ.ಎಸ್.ಪಿ. ಅಧಿಕೃತವಾಗಿ ತಾನು ಬ್ರಾಹ್ಮಣರ ಜೊತೆ ಮುಖ್ಯವಾಗಿ ಲಿಂಗಾಯತರ ಮತಕ್ಕಾಗಿ ಚುನಾವಣಾ ತಂತ್ರ ರೂಪಿಸಲು ಹೊರಟಿರುವುದಾಗಿ ಪ್ರಕಟಿಸಿದಾಗಲೂ, ನನಗೇನೂ ಆಶ್ಚರ್ಯವಾಗಲಿಲ್ಲ. ಆದರೆ ವೋಟಿನ ರಾಜಕಾರಣಕ್ಕಾಗಿ ಎಲ್ಲ ಸಾಂಸ್ಕೃತಿಕ ಹಾಗೂ ಸಾಮಾಜಿಕ ಸಂವಾದಗಳನ್ನೂ ಹೀಗೆ

ಹತ್ತಿಕ್ಕಲೆಣಿಸುವ, ಆತ್ಮ ಸಾಕ್ಷಿಯನ್ನೇ ಕೊಂದುಕೊಂಡ ರೂಕ್ಷ ರಾಜಕಾರಣ ಆರಂಭವಾಗುತ್ತಿರುವ ಬಗ್ಗೆ ವಿಷಾದವಂತೂ ಉಂಟಾಯಿತು.

ಜಾತಿ ವ್ಯವಸ್ಥೆ ಕುರಿತು 'ಮನುವಾದ'ದ ಹೆಸರಲ್ಲಿ ಒಂದು ದೊಡ್ಡ ಸೈದ್ಧಾಂತಿಕ ಹೋರಾಟದೊಂದಿಗೆ ತನ್ನ ರಾಜಕಾರಣವನ್ನು ಆರಂಭಿಸಿದ ಕಾನ್ಷಿರಾಮ್ ನೇತೃತ್ವದ ಬಿ.ಎಸ್.ಪಿ., ಇಂದು ಮಾಯಾವತಿ ನೇತೃತ್ವದಲ್ಲಿ ಒಮ್ಮೆ ಅಧಿಕಾರದ ರುಚಿ ನೋಡಿದೊಡನೆ ಎಲ್ಲ ಸಿದ್ಧಾಂತವನ್ನೂ ಕೈಬಿಟ್ಟು ಅನುಕೂಲಕರ ಜಾತಿ ರಾಜಕಾರಣ ಮಾಡಹೊರಟಿದೆ. ಇದು ಎಲ್ಲ ಜಾತಿಗಳಿಗೂ ಅಧಿಕಾರದಲ್ಲಿ ಜನ ಸಂಖ್ಯಾಧಾರಿತ ಪಾಲು ಕೇಳುವ ಜಾತಿ ವ್ಯವಸ್ಥೆಯನ್ನೊಪ್ಪಿ ಕೊಂಡ ತಲೆಕೆಳಗಾದ ಸಾಮಾಜಿಕ ನ್ಯಾಯದ ರಾಜಕಾರಣವೂ ಅಲ್ಲ; ಬದಲಿಗೆ ಇದು, ಚುನಾವಣೆ ಗೆಲ್ಲಬಲ್ಲ ಜಾತಿ ಸಂಯೋಜನೆಯ ತೆಕ್ಕೆಗೆ ಸೇರಬಲ್ಲ ಗಣ್ಯ ಜಾತಿಗಳ ಜಾತಿ ರಾಜಕಾರಣ. ಮಿಕ್ಕೆಲ್ಲ ಪಕ್ಷಗಳೂ, ಮುಂದೆ ತತ್ವ ಹೇಳಿ ಹಿಂದೆ ಜಾತಿ ರಾಜಕಾರಣ ಮಾಡುತ್ತಿದ್ದರೆ, ಬಿ.ಎಸ್.ಪಿ., ತತ್ವದ ಉಸಾಬರಿಯೇ ಬೇಡವೆಂದು ನೇರವಾಗಿ ಜಾತಿ ಲೆಕ್ಕಾಚಾರದ ರಾಜಕಾರಣ ಮಾಡಹೊರಟಿದೆ. ಇತ್ತೀಚಿನ ಉತ್ತರ ಪ್ರದೇಶ ಚುನಾವಣೆಯಲ್ಲಿ ಔಪಚಾರಿಕವಾಗಿಯಾದರೂ ಚುನಾವಣಾ ಪ್ರಣಾಳಿಕೆಯನ್ನೇ ಪ್ರಕಟಿಸದ ಏಕೈಕ ಪಕ್ಷವೆಂದರೆ, ಬಿ.ಎಸ್.ಪಿ.! ಹೀಗೆ ಈ ಪಕ್ಷ ಸಮಕಾಲೀನ ರಾಜಕಾರಣದ ಮಾನ ಮುಚ್ಚಿದ್ದ ಕೊನೆಯ ತುಂಡು ಬಟ್ಟೆಯನ್ನೂ ಕಿತ್ತೆಸೆದಿದೆ –ನಗ್ನ ಅಧಿಕಾರ ರಾಜಕಾರಣಕ್ಕೆ ಮುನ್ನುಡಿ ಬರೆದಿದೆ. ಅಂದರೆ ಇದು ಮತ್ತೇನೂ ಆಗಿರದೆ, ರಾಜಕಾರಣದಲ್ಲಿ ತತ್ವದ ಮಾತಾಡುವುದು ಅನಗತ್ಯವೆಂಬ ಬಹಿರಂಗ ಘೋಷಣೆಯೇ ಆಗಿದೆ. ಸುಮ್ಮನೆ ನೋಡಿದಾಗ ಇದು ಬೇರೆ ಪಕ್ಷಗಳ ಆತ್ಮ ದ್ರೋಹಿ ರಾಜಕಾರಣಕ್ಕೆ ಹೋಲಿಸಿದರೆ, ಒಂದು ರೀತಿಯಲ್ಲಿ ದಿಟ್ಟ ಹಾಗೂ ಪ್ರಾಮಾಣಿಕ ರಾಜಕಾರಣವೆಂದು ತೋರುತ್ತದೆ. ಆದರೆ, ಸ್ವಲ್ಪ ಯೋಚಿಸಿದರೆ ಗೊತ್ತಾಗುತ್ತದೆ, ಇದು ನಮ್ಮ ರಾಜಕಾರಣದ ಅವನತಿಗೆ, ಈವರೆಗೆ ಸ್ವಲ್ಪ ಲಜ್ಜೆಯಿಂದಲಾದರೂ, ಅಪರಾಧಿ ಮನೋಭಾವನೆಯಿಂದಲಾದರೂ ನಡೆಸಲಾಗುತ್ತಿದ್ದ ಅವಕಾಶವಾದಿ ರಾಜಕಾರಣಕ್ಕೆ ಅಧಿಕೃತ ಮುದ್ರೆ ಒತ್ತಿ, ಅದನ್ನು ಅನಿವಾರ್ಯವೆಂದು ಒಪ್ಪಿಸುವ ಅತ್ಯಂತ ಅಪಾಯಕಾರಿ ರಾಜಕಾರಣವೆಂದು. ಯಾವ ತುದಿಯಿಂದ ಯಾವ ತುದಿಗೆ, ಬಿ.ಎಸ್.ಪಿ.ಯ ಈ ರಾಜಕೀಯ ಪಯಣ ಎಂದು ಆಶ್ಚರ್ಯವಾಗುತ್ತದೆ! ಬಿ.ಎಸ್.ಪಿ.ಯನ್ನು ಒಂದು ತಾತ್ವಿಕ ಮುನ್ನೋಟದೊಂದಿಗೆ ಕಟ್ಟತೊಡಗಿದ್ದ ಕಾನ್ಷಿರಾಮ್ ಖಂಡಿತ ಇದನ್ನು ನಿರೀಕ್ಷಿಸಿರಲಾರರು.

ಈ ಹಿಂದೊಮ್ಮೆ, ಇಂದಿನ ಬಿ.ಎಸ್.ಪಿ. ಪ್ರಮುಖ ನಾಯಕರೊಬ್ಬರು ನನ್ನೊಂದಿಗೆ ಮಾತನಾಡುತ್ತಾ, ಈವರೆಗೆ ದಲಿತರು 'ಜಾತಿ ಬಿಡಿ; ದೇಶ ಕಟ್ಟಿ' ಎಂಬ ಘೋಷಣೆಯ ಮೇಲೆ ರಾಜಕಾರಣ ಮಾಡಿ ಸೋತುಹೋಗಿದ್ದಾರೆಂದೂ, ಇನ್ನು ಮುಂದೆ ಅವರ ಘೋಷಣೆ 'ದೇಶ ಬಿಡಿ; ಜಾತಿ ಕಟ್ಟಿ' ಎಂದಾಗಲಿದೆಯೆಂದೂ; ತಾವು ಕರ್ನಾಟಕದಲ್ಲಿ ಕಟ್ಟಹೊರಟಿದ್ದ ಭವಿಷ್ಯದ ಬಿ.ಎಸ್.ಪಿ. ರಾಜಕಾರಣದ ಪರಿಚಯ ಮಾಡಿಕೊಟ್ಟಿದ್ದರು. ಅವರ ಮೊದಲ ಘೋಷಣೆಯ ಸೋಲಿನ ಅನುಭವದ ಮಾತನ್ನು ಅರ್ಧ ಒಪ್ಪಿಕೊಳ್ಳುತ್ತಲೇ, ಆ ಅನುಭವ ಅವರನ್ನು ಮತ್ತಷ್ಟು ವಿವೇಕಿಗಳನ್ನಾಗಿ ಮಾಡದೆ; ಮತ್ತಷ್ಟು ಹತಾಶರನ್ನಾಗಿ ಮಾಡಿದೆ ಎಂದೇ ಹೇಳಬೇಕಾಗುತ್ತದೆ. ಏಕೆಂದರೆ, ಉತ್ತರ ಪ್ರದೇಶದಲ್ಲಿನ ಬಿ.ಎಸ್.ಪಿ.ಯ ವಿಜಯದಿಂದೇನಾದರೂ ಅವರು ಉತ್ಸಾಹಿತರಾಗಿ ಕರ್ನಾಟಕದಲ್ಲಿ ಹೊಸ ಜಾತಿ ಸಮೀಕರಣವನ್ನು ಸಾಧಿಸಲು ನಿರ್ಧರಿಸಿದ್ದರೆ; ಉತ್ತರ ಪ್ರದೇಶದಲ್ಲಿ ದೊರೆತಿರುವ ವಿಜಯ, ಬೇರೆ ಪಕ್ಷಗಳು ಕಿಂಚಿತ್ತಾದರೂ

ತಪ್ಪಿತಸ್ಥ ಮನೋಭಾವದಿಂದ ಮಾಡಿ ಗೆಲ್ಲುತ್ತಿದ್ದಾಗ, ಯಾವುದನ್ನು ನಾವು ಭ್ರಷ್ಟ ರಾಜಕಾರಣವೆಂದು ಕರೆಯುತ್ತಿದ್ದೆವೋ, ಅಂತಹುದೇ ಭ್ರಷ್ಟ ರಾಜಕಾರಣವನ್ನು ಈಗ ಯಾವುದೇ ಎಗ್ಗಿಲ್ಲದೇ, ಸುಯೋಜಿತವಾಗಿ ಹಾಗೂ ದಕ್ಷವಾಗಿ ಮಾಡಿ ಗೆದ್ದಿರುವುದರ ಸೂಚನೆಯಷ್ಟೇ ಆಗಿದೆ ಎಂಬುದನ್ನು ಅವರು ಅರಿತು ಮುಂದುವರೆಯಬೇಕಾಗುತ್ತದೆ. ಏಕೆಂದರೆ, ಆ ರಾಜಕಾರಣದ ಎಲ್ಲ ದುಷ್ಟ ಶಕ್ತಿಗಳೂ ಇಲ್ಲಿಯೂ ಈ ಚುನಾವಣಾ ಪ್ರಕ್ರಿಯೆಯಲ್ಲಿ ಕೆಲಸ ಮಾಡಿದ್ದು ಈಗಾಗಲೇ ಎಲ್ಲ ಕಡೆ ವರದಿಯಾಗಿದೆ. ತಮ್ಮ ವೈಯುಕ್ತಿಕ ಹೆಸರಿನಲ್ಲಿರುವ ದೆಹಲಿ ಹಾಗೂ ಉತ್ತರ ಪ್ರದೇಶದ ಹಲವು ನಗರಗಳಲ್ಲಿನ ವೈಭವೋಪೇತ ಬಂಗ್ಲೆಗಳು, ಅನೇಕ ಬ್ಯಾಂಕ್ ಖಾತೆಗಳಲ್ಲಿನ ಅಪಾರ ಪ್ರಮಾಣದ ನಗದು ಹಾಗೂ ತಮ್ಮ ಅಭಿಮಾನಿಗಳ ಸಂತೋಷಕ್ಕಾಗಿ ಆಗಾಗ್ಗೆ ಧರಿಸುವ ವೈವಿಧ್ಯಮಯ ವಜ್ರಾಭರಣಗಳ ರೂಪದ ಕೋಟ್ಯಾಂತರ ರೂಪಾಯಿಗಳ ಅಕ್ರಮ ಆಸ್ತಿಯನ್ನು ಮೊನ್ನೆ ಮಾಯಾವತಿಯವರು, ಇದೆಲ್ಲ ತಮ್ಮ ಕಾರ್ಯಕರ್ತರು ಪಕ್ಷದ ಹಿತಕ್ಕಾಗಿ ಹತ್ತು-ಇಪ್ಪತ್ತು ರೂಪಾಯಿಗಳ ಪ್ರಮಾಣದಲ್ಲಿ ನೀಡಿದ ಲೆಕ್ಕ ಇಡಲಾಗದ ದೇಣಿಗೆ ಎಂದು ಮುಖ ಹಿಂಡಿಕೊಂಡೇ, ನಿರ್ಭಿಡೆಯಿಂದ ಸಮರ್ಥಿಸಿಕೊಳ್ಳಲಿಲ್ಲವೆ?

ಇದು ಬಿ.ಎಸ್.ಪಿ. ಪಕ್ಷದ ಸದ್ಯದ ಸ್ವರೂಪ. ಅಧಿಕಾರವೊಂದೇ ಅದರ ಗುರಿ. ಆ ಅಧಿಕಾರವೆಲ್ಲವೂ ಅದರೆಲ್ಲ ರೂಪಗಳಲ್ಲೂ ಒಬ್ಬ ವ್ಯಕ್ತಿಯ ಕೈಯಲ್ಲಿ. ಆ ಅಧಿಕಾರವನ್ನು ಹಾಗೆ ಸಗಟಾಗಿ ಒಬ್ಬರಲ್ಲಿ ಕೇಂದ್ರೀಕರಿಸಿರುವುದು ಆ ವ್ಯಕ್ತಿಯ ಮೇಲಿನ ನಂಬಿಕೆಯಿಂದಾಗಿ. ಅಂದರೆ, ಇನ್ನಿತರೆಲ್ಲರ ಮೇಲಿನ ಅಪನಂಬಿಕೆಯಿಂದಾಗಿ! ಇದು ನಮ್ಮ ಅರವತ್ತರ ಇಂಡಿಯಾದ ಪ್ರಜಾಪ್ರಭುತ್ವದ ಸಾಧನೆ! ಏಕೆಂದರೆ, ಇದೆಲ್ಲವೂ ನಡೆದಿರುವುದು ಪ್ರಜಾಪ್ರಭುತ್ವವಾದಿ ಸಂವಿಧಾನದ ನೆರಳಲ್ಲೇ. ಹಾಗಾದರೆ, ನಾವು ಸ್ವಾತಂತ್ರ್ಯದ ಹಾಗೂ ಪ್ರಜಾಪ್ರಭುತ್ವದ ಹೆಸರಿನಲ್ಲಿ ಸಾಗುತ್ತಿರುವುದು ಹಿಂದಕ್ಕೋ ಮುಂದಕ್ಕೋ? ಇದಕ್ಕೆ ಉತ್ತರ ಬೇಕಾದರೆ, ಮೊನ್ನೆ ಗಾಂಧಿ ಸತ್ಯಾಗ್ರಹದ ಶತಮಾನೋತ್ಸವದ ಸಂದರ್ಭದಲ್ಲಿ ಗಾಂಧಿ ಹೋರಾಟದ ನೈತಿಕ ಮಹತ್ವವನ್ನೂ, ಸಮಕಾಲೀನ ಪ್ರಸ್ತುತತೆಯನ್ನೂ, ಭಾರತೀಯರಿಗೆ ಮನದಟ್ಟು ಮಾಡಿಸಿದ ರಾಷ್ಟ್ರದ ಹಿರಿಯ ನಾಯಕರಾದ ಸೋನಿಯಾ ಗಾಂಧಿಯವರು ತೆರೆಮರೆಯಲ್ಲಿ ನಡೆಸಿದ ರಚನಾತ್ಮಕ ರಾಜಕಾರಣ ಕಂಡುಕೊಳ್ಳಬಹುದು. ಈ ಹಿರಿಯ ನಾಯಕರಿಗೆ ಈಚಿನ ರಾಷ್ಟ್ರಪತಿ ಚುನಾವಣೆಯಲ್ಲಿ ತಮ್ಮ ಕನಸಿನ ಭಾರತ ಕಟ್ಟಲು ಅನುಕೂಲಕರವಾದ ಅಭ್ಯರ್ಥಿಯ ಗೆಲುವಿಗಾಗಿ ಮಾಯಾವತಿಯವರ ಬೆಂಬಲದ ಅಗತ್ಯಬಿದ್ದು; ಅದಕ್ಕಾಗಿ ಅವರ ವಿರುದ್ಧವಿದ್ದ ತಾಜ್ ಭ್ರಷ್ಟಾಚಾರದ ಹಗರಣದ ವಿಚಾರಣೆಗೆ, ರಾಜ್ಯಪಾಲರ ಅನುಮತಿ ಸಿಗದಂತೆ ನೋಡಿಕೊಳ್ಳಲಾಯಿತಷ್ಟೆ! ತಾನು ಕದ್ದು ಮುಚ್ಚಿ ಮಾಡುತ್ತಿದ್ದುದನ್ನು ಮಾಯಾವತಿ ಧೈರ್ಯವಾಗಿಯೇ ಮಾಡ ಹೊರಟಿರುವುದನ್ನು ಕಾಂಗ್ರೆಸ್ ಮೆಚ್ಚಿಕೊಂಡು ಪುರಸ್ಕರಿಸ ಹೊರಟಿದೆ! ಹಾಗೆ ನೋಡಿದರೆ, ಬಿ.ಎಸ್.ಪಿ. ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ದೋಸ್ತಿ ಮಾಡಿಕೊಳ್ಳದ ಪ್ರಮುಖ ರಾಜಕೀಯ ಪಕ್ಷವೇ ಇಲ್ಲ. ಹಾಗೇ ಅದರಿಂದ ಕೈಕೊಡಲ್ಪಡದಿರುವ ಪಕ್ಷಗಳೂ ಇಲ್ಲ! ಹೀಗೆ ಬಿ.ಎಸ್.ಪಿ. ಈ ೬೦ ವರ್ಷಗಳ ಸ್ವತಂತ್ರ ಭಾರತ ಎಲ್ಲ ವರ್ಗಗಳಿಗೆ ಒದಗಿಸಿದ ರಾಜಕೀಯ ಅವಕಾಶಗಳನ್ನು ಅಂತಿಮವಾಗಿ ಅವಕಾಶವಾದಿ ರಾಜಕಾರಣವನ್ನು ರೂಪಿಸಲು ಬಳಸಿಕೊಂಡ ದುರಂತದ ಆತ್ಯಂತಿಕ ಪ್ರತೀಕದಂತಿದೆ. ಅಷ್ಟೇ ಅಲ್ಲ, ಅಂತಹ ರಾಜಕಾರಣದ ಸ್ಫೂರ್ತಿದಾಯಕ ಯಶಸ್ಸಿನ ಪ್ರತೀಕವೂ ಆಗಿ ನಮ್ಮ ಮುಂದೆ ನಿಂತಿದೆ!

ಆದರೆ ಈ ಯಶಸ್ಸು ಎಲ್ಲ ಕಾಲಕ್ಕೂ ಎಲ್ಲ ರಾಜ್ಯಗಳಲ್ಲೂ ಸಂಭವಿಸುವುದೆಂದು ಹೇಳಲಾಗದು ಎಂಬುದೇ ಈ ಬೆಳವಣಿಗೆಯ ಹಿಂದಿನ ಆಶಾದಾಯಕ ಸಂಗತಿ. ಏಕೆಂದರೆ ರಾಜಕಾರಣವೆಂದರೆ, ಅಂಕಗಣಿತದ ಲೆಕ್ಕಾಚಾರ ಹಾಗೂ ಅದನ್ನಾಧರಿಸಿದ ಜಾಣ ಚುನಾವಣಾ ತಂತ್ರೋಪಾಯಗಳಿಂದಷ್ಟೇ ನಿಯಂತ್ರಿಸಲ್ಪಡುವ ಆಟವಲ್ಲ. ಅದೊಂದು ನಿರಂತರವಾಗಿ ಬದಲಾಗುತ್ತಾ ಹೋಗುವ ಜನಶಕ್ತಿಯ ಮನೋಭಾವನೆಗಳ ಪ್ರಯೋಗಶಾಲೆ. ಅಷ್ಟೇ ಅಲ್ಲ, ಭಿನ್ನ ಭಿನ್ನ ಸಂಸ್ಕೃತಿಗಳಲ್ಲಿ ತನ್ನ ನಿಯಮಗಳನ್ನು ಭಿನ್ನ ಭಿನ್ನವಾಗಿ ಕ್ರಿಯಾಶೀಲಗೊಳಿಸುವ ನಿಗೂಢ ವಿದ್ಯಮಾನ ಕೂಡ. ಕರ್ನಾಟಕದ ಲಿಂಗಾಯತರು ಉತ್ತರ ಪ್ರದೇಶದ ಬ್ರಾಹ್ಮಣರಂತೆ ಬಹುಜನ ಸಮಾಜ ಪಕ್ಷದ ರಾಜಕಾರಣದ ಚೌಕಟ್ಟಿಗೆ ಸಿಗುವ ರಾಜಕೀಯ ಪರಿಸ್ಥಿತಿಯಾಗಲೀ, ಸಾಮಾಜಿಕ ಪರಿಸ್ಥಿತಿಯಾಗಲೀ ಇಲ್ಲಿ ಸದ್ಯಕ್ಕೆ ಇದೆಯೆಂದು ತೋರುವುದಿಲ್ಲ. ಏಕೆಂದರೆ, ಕರ್ನಾಟಕದಲ್ಲಿ ಅಲ್ಪಸಂಖ್ಯಾತರಾಗಿರುವ ಬ್ರಾಹ್ಮಣರು ಉತ್ತರ ಪ್ರದೇಶದಲ್ಲಿ ಬಹು ಸಂಖ್ಯೆಯಲ್ಲಿರುವ ಬ್ರಾಹ್ಮಣರಂತೆ ಊಳಿಗಮಾನ್ಯಶಾಹಿ ಹಿನ್ನೆಲೆಯಿಂದ ಬಂದು ಸಮಕಾಲೀನ ರಾಜಕಾರಣದಲ್ಲಿ ಪಾತ್ರ ಕಳೆದುಕೊಂಡ ಅನಾಥ ಸ್ಥಿತಿಯಲ್ಲೇನೂ ಇಲ್ಲ. ಇವರು ಮೂಲತಃ ಪುರೋಹಿತಶಾಹಿ ಮೂಲದವರಾಗಿದ್ದು, ರಾಜಕಾರಣದಲ್ಲಿ ವಿಶೇಷ ಆಸಕ್ತಿಯೇನೂ ಇಲ್ಲದ ಮಧ್ಯಮ ವರ್ಗಕ್ಕೆ ಸೇರಿದವರಾಗಿದ್ದಾರೆ. ಇನ್ನೂ ಮುಖ್ಯವಾದ ಸಂಗತಿಯೆಂದರೆ, ಲಿಂಗಾಯತರು ಭೂಮಾಲೀಕರಾಗಿ ಆಧುನಿಕ ಚರಿತ್ರೆಯಲ್ಲಿ ದಲಿತರೊಂದಿಗೆ ವೈರುಧ್ಯಮಯ ಸಾಮಾಜಿಕವಾಗಿ ಸಂಬಂಧವನ್ನೇ ಹೊಂದಿದ್ದು, ಲೌಕಿಕ ಪ್ರಯೋಜನ ಸಿಗುವುದಿದ್ದರೆ ತಮ್ಮ ಸಾಮಾಜಿಕ ಪ್ರತಿಷ್ಠೆಯನ್ನು ಅಮಾನತ್ತಿನಲ್ಲಿಡಬಲ್ಲ ಬ್ರಾಹ್ಮಣರ 'ಆಧುನಿಕತೆ'ಯನ್ನು ಅವರು ಸದ್ಯಕ್ಕಂತೂ ಮೈಗೂಡಿಸಿಕೊಳ್ಳುವ ಸಾಧ್ಯತೆ ಕಾಣಬರುತ್ತಿಲ್ಲ! ಇಂತಹ ಪರಿಸ್ಥಿತಿಯಲ್ಲಿ, ಸದ್ಯದ ಈ ರಾಜಕೀಯ ಹಾಗೂ ಜಾತಿ ಸಮೀಕರಣಗಳನ್ನು ಮೀರಿ, ಅವರನ್ನು ತಾವು ಯೋಜಿಸಿರುವಂತಹ ಚುನಾವಣಾ ಚೌಕಟ್ಟಿಗೆ ತರುವ ರಾಜಕೀಯ ದಕ್ಷತೆ ಹಾಗೂ ಪ್ರಭಾವ ಬಹುಜನ ಸಮಾಜ ಪಕ್ಷದ ಸ್ಥಳೀಯ ನಾಯಕತ್ವಕ್ಕಿದೆಯೇ ಎಂಬುದು ಸದ್ಯದ ಮುಖ್ಯ ಪ್ರಶ್ನೆ. ಹಾಗೇನಾದರೂ ಅದು, ಅದನ್ನು ಸಾಧಿಸಿ ತೋರುವುದಾದರೆ, ಆ ಹೊತ್ತಿಗೆ ಆ ಪಕ್ಷದ ರಾಜಕೀಯ ಸ್ವರೂಪವೇ ಬದಲಾಗಿರುತ್ತದೆ ಎಂಬುದಂತೂ ನಿಜ! ಹಾಗಾದಲ್ಲಿ, ಅದನ್ನು ಕರ್ನಾಟಕ ರಾಜಕೀಯದಲ್ಲಿನ ಹೊಸ ಶಕೆಯ ಆರಂಭ ಎಂದೇ ಹೇಳಬೇಕಾಗುತ್ತದೆ.

ಅದೇನೇ ಇರಲಿ, ನಾನೀಗ ಕರ್ನಾಟಕದಲ್ಲಿ ಈವರೆಗೆ ಗೆಲ್ಲುವ ಪಕ್ಷವೆಂಬುದರ ಸೂಚನೆಯನ್ನೂ ನೀಡದೆ, ಬರೀ ಇತರರನ್ನು ಸೋಲಿಸುವ ಪಕ್ಷವಾಗಿ ಹೆಸರು ಮಾಡಿರುವ ಬಿ.ಎಸ್.ಪಿ. ಬಗ್ಗೆ ಇಷ್ಟೆಲ್ಲಾ ವಿಸ್ತಾರವಾಗಿ ಯೋಚಿಸವಂತಾದುದರ ಕಾರಣ, ಸ್ವತಃ ಬಿ.ಎಸ್.ಪಿ.ಯಲ್ಲ; ಬದಲಿಗೆ ರಾಷ್ಟ್ರ ರಾಜಕಾರಣದಲ್ಲಿ ಅದರ ಯಶಸ್ಸು ಸಾಂಕೇತಿಕವಾಗಿಯಾದರೂ ಸೂಚಿಸುತ್ತಿರುವ ನಮ್ಮ ಒಟ್ಟಾರೆ ರಾಜಕಾರಣದ ಬೌದ್ಧಿಕ ದಾರಿದ್ರ್ಯ ಹಾಗೂ ಕಣ್ಣೆದುರೇ ಕಾಣಲಾರಂಭಿಸಿರುವ ಅದರ ಪರಿಣಾಮಗಳು. ನಮ್ಮಲ್ಲೇ 'ಆನುದೇವಾ...' ಪ್ರಕರಣ ಆದ ಮೇಲೆ ಈಗ, ಮೊನ್ನೆ ಹೈದರಾಬಾದ್‌ನಲ್ಲಿ ಬಂಗ್ಲಾ ಲೇಖಕಿ ತಸ್ಲಿಮಾ ನಸ್ರೀನಳ ಪುಸ್ತಕದ ತೆಲುಗು ಅವತರಣಿಕೆಯ ಬಿಡುಗಡೆ ಸಮಾರಂಭದಲ್ಲಿ ನಡೆದಿರುವ ದಾಂಧಲೆ ಹಾಗೂ ಹಲ್ಲೆ ಬಗ್ಗೆ ನಮ್ಮ ಎಲ್ಲ ರಾಜಕೀಯ ಪಕ್ಷಗಳು ವಹಿಸಿರುವ ನಿರ್ಲಜ್ಜ ಮೌನವನ್ನೇ ಗಮನಿಸಿ. ವೋಟಿನ ರಾಜಕಾರಣ ಅವನ್ನು ಷಂಡರನ್ನಾಗಿ ಮಾಡಿದೆ! ಈ ಷಂಢ ರಾಜಕೀಯ ಪಕ್ಷಗಳಿಂದ ನಮ್ಮ ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವ ರಕ್ಷಣೆಯಾಗಬೇಕಿದೆ! ಈ ಎರಡನ್ನೂ ನಮಗೆ ತಂದುಕೊಟ್ಟಿತೆಂದು ಹೇಳಲಾದ

ಕಾಂಗ್ರೆಸ್ಸನ್ನು ಪ್ರತಿನಿಧಿಸುವ ಆಂಧ್ರ ಸರ್ಕಾರ ವರ್ತಿಸಿರುವ ರೀತಿ ನೋಡಿ. ಅದು, ಹಲ್ಲೆ ನಡೆಸಿದ ಮತೀಯ ಗುಂಪಿನ ಪುಂಡರ ಮೇಲೆ ಸಾರ್ವಜನಿಕ ಒತ್ತಾಯದ ಮೇಲಾದರೂ ತೆಗೆದುಕೊಳ್ಳಬೇಕಾದ ಕಾನೂನು ಕ್ರಮದ ಪರಿಣಾಮವನ್ನು ಸರಿದೂಗಿಸಲೋ ಎಂಬಂತೆ, ಹಲ್ಲೆಗೊಳಗಾದ ಮಹಿಳೆಯ ವಿರುದ್ಧವೂ ಕೋಮು ಅಶಾಂತಿ ಹುಟ್ಟು ಹಾಕಿದ ಮೊಕದ್ದಮೆ ಹೂಡುವ ವಿಕ್ಷಿಪ್ತ ಸೆಕ್ಯುಲರ್ ರಾಜಕಾರಣವನ್ನು ಪ್ರದರ್ಶಿಸಿದೆ! ಮುಖ್ಯವಾಹಿನಿ ರಾಜಕಾರಣವನ್ನು ಪ್ರತಿನಿಧಿಸುವ ಕಾಂಗ್ರೆಸ್ಸಿನ ಇಂತಹ ವಿಕ್ಷಿಪ್ತ ಸೆಕ್ಯುಲರ್ ರಾಜಕಾರಣದ ಬಲದಿಂದಾಗಿಯೇ, ಎಂ.ಐ.ಎಂ. ಎಂಬೊಂದು ಪುಡಿ ಮತೀಯ ಮುಸ್ಲಿಂ ರಾಜಕೀಯ ಪಕ್ಷದ ನಾಯಕರು ಈ ಹಲ್ಲೆಯನ್ನು ಕೈಗೊಂಡು ಅದನ್ನು ಸಮರ್ಥಿಸಿಕೊಂಡಿದ್ದಾರಲ್ಲದೆ, ತಸ್ಲೀಮಾಳ ತಲೆ ಕಡಿಯಲು ಕೊಟ್ಟಿರುವ ಅಂತಾರಾಷ್ಟ್ರೀಯ ಫತ್ವಾವನ್ನು ಪುನರುಚ್ಚರಿಸಿದ್ದಾರೆ. ಆದರೂ ಯಾವ ರಾಜಕೀಯ ಪಕ್ಷವೂ ಈ ಬಗ್ಗೆ ಖಂಡನೆಯನ್ನಿರಲಿ, ದಿಗ್ಭ್ರಮೆಯನ್ನೂ ವ್ಯಕ್ತ ಪಡಿಸುವ ಧೈರ್ಯ ತೋರಿಲ್ಲ. ಬರೀ ವೋಟಿನ ರಾಜಕಾರಣದ ಯಶಸ್ಸು ನಮ್ಮ ಸಾರ್ವಜನಿಕ ಜೀವನವನ್ನು ಎಷ್ಟು ನೀಚ ಹಾಗೂ ಹೃದಯಹೀನವನ್ನಾಗಿಸಿದೆ ಎಂಬುದಕ್ಕೆ ಇದು ಇತ್ತೀಚಿ ಉದಾಹರಣೆಯಷ್ಟೆ.

ತಸ್ಲೀಮಾ ತುಂಬಾ ಒಳ್ಳೆಯ ಲೇಖಕಿಯಲ್ಲದಿರಬಹುದು. ಆದರೆ ಆಕೆಯ ಮೇಲಿನ ಈ ಅನಾಗರಿಕ ಹಲ್ಲೆಯ ಬಗ್ಗೆ ಯಾರೇ ಆದರೂ ಮೌನ ವಹಿಸಲು ಅದು ಕಾರಣವಾಗಬಾರದು. ಆಕೆ ಲೇಖಕಿಯಾಗಿ ಇಸ್ಲಾಂ ಧರ್ಮದ ಬಗ್ಗೆ ಸಾಮಾಜಿಕ ಪ್ರಶ್ನೆಗಳನ್ನೆತ್ತಿದ್ದಾಳೆ. ವಿಶೇಷವಾಗಿ ಸ್ತ್ರೀಯರ ಸ್ಥಾನಮಾನಗಳ ಕುರಿತ ಪ್ರಶ್ನೆಗಳನ್ನು. ಅವಳು ಎತ್ತಿರುವ ಈ ಪ್ರಶ್ನೆಗಳು ಎಷ್ಟು ಪ್ರಸ್ತುತ ಎಂಬುದನ್ನು, ಪ್ರಗತಿಪರ ಸಂಘಟನೆಗಳು ಏರ್ಪಡಿಸುವ ಮಹಿಳಾ ಸಭೆಗಳಿಗೆ ಬುರ್ಖಾಗಳಲ್ಲಿ ಬಂಧಿತರಾಗಿಯೇ ಬರುವ ಮಹಿಳೆಯರು ಹೇಳಿಕೊಳ್ಳುವ ಗೋಳನ್ನು ಕೇಳಿಯೇ ತಿಳಿದುಕೊಳ್ಳಬೇಕು. ಹಾಗಾಗಿ, ಭಾರತದ ಯಾವ ಮುಸ್ಲಿಂ ಬುದ್ಧಿಜೀವಿಯಾಗಲೀ ಹೋರಾಟಗಾರನಾಗಲೀ ತೋರಿಸಲಾಗದ ನಿರ್ಭಯತೆಯೊಂದಿಗೆ ಇಸ್ಲಾಂನ ಆಧುನೀಕರಣಕ್ಕಾಗಿ ಹಠ ತೊಟ್ಟಿರುವಂತೆ ತೋರುವ ಏಷ್ಯಾದ ಈ ದಿಟ್ಟ ಮುಸ್ಲಿಂ ಮಹಿಳೆಗೆ, ಎಲ್ಲ ಧರ್ಮಗಳ ವಿಚಾರವಂತರ ಬೆಂಬಲದ ಅಗತ್ಯವಿದೆ. ಎಲ್ಲ ಧರ್ಮಗಳೂ ಕಾಲ ದೇಶಗಳಿಗೆ ತಕ್ಕಂತೆ ಪರಿವರ್ತನೆಯನ್ನು ಅಳವಡಿಸಿಕೊಂಡಿರುವಾಗ ಇಸ್ಲಾಂ ಏಕೆ ಅಪವಾದವಾಗಿ ಉಳಿದಿದೆ? ಆಗಿರುವ ಪರಿವರ್ತನೆಯನ್ನೂ ಏಕೆ ದಮನ ಮಾಡಲು ಹೊರಟಿದೆ? ಉಳಿದ ಜಗತ್ತಿನೆಲ್ಲ ಕಡೆಯಿಂದ ಕೇಳಿ ಬರುತ್ತಿರುವ ಕೂಗೂ ಸ್ಥೂಲವಾಗಿ ಇದೇ ಆಗಿದೆ. ಆದುದರಿಂದ ತಸ್ಲೀಮಾಳನ್ನು ಅವಳೆಲ್ಲ ಪ್ರಶ್ನೆಗಳ ನೆಲೆಯಲ್ಲಲ್ಲದಿದ್ದರೂ, ನಾವೆಲ್ಲ ಇತರೆಲ್ಲ ಕ್ಷೇತ್ರಗಳಲ್ಲಿ ಒಪ್ಪಿಕೊಂಡಿರುವ ಆಧುನಿಕತೆಯ ಪರಮ ಮೌಲ್ಯವೆನಿಸಿದ–ಭಿನ್ನಾಭಿಪ್ರಾಯದ ಮೂಲಕ ಸಂವಾದ ಆರಂಭಿಸುವ–ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವ ನೆಲೆಯಲ್ಲಾದರೂ ಬೆಂಬಲಿಸಬೇಕಿದೆ. ಏಕೆಂದರೆ, ಪ್ರಶ್ನೆಗಳನ್ನೆತ್ತುವುದೇ ಅಪರಾಧವೆಂದು ಬಗೆದು, ಅದನ್ನು ಭಯೋತ್ಪಾದನೆಯ ಮೂಲಕ ಹತ್ತಿಕ್ಕುವ ಧರ್ಮ, ನಿಜವಾದ ಧರ್ಮ ಅನ್ನಿಸಿಕೊಳ್ಳಲಾರದು. ಆದರೆ ತನ್ನ ಧರ್ಮವನ್ನೇ ಕಳೆದುಕೊಂಡಿರುವ ಇಂದಿನ ರಾಜಕಾರಣಕ್ಕೆ ಈ ಸತ್ಯದ ಅರಿವಾದರೂ ಹೇಗಾದೀತು? ಇದು ನಾವೆಲ್ಲ ಇಂದು ಕೇಳಿಕೊಳ್ಳಬೇಕಾದ ಬಹು ಮುಖ್ಯ ರಾಜಕೀಯ ಪ್ರಶ್ನೆಯೆಂದು ನಾನು ಭಾವಿಸಿದ್ದೇನೆ.

(ವಿಶ್ರಾಂತ ಕರ್ನಾಟಕ ಆಗಸ್ಟ್ ೨೪, ೨೦೦೭)

ಜಾಗತೀಕರಣವೂ, ನಾಗರಿಕ ಪರಮಾಣು ಒಪ್ಪಂದವೂ...

ಜಾಗತೀಕರಣವನ್ನು ಬರೀ ಟೀಕಿಸುವುದರಿಂದ ಏನು ಪ್ರಯೋಜನ? ಸರ್ಕಾರಿ ವಲಯದ ವೈಫಲ್ಯದ ಫಲವಾಗಿ, ಜಾಗತೀಕರಣವೆಂಬ ಮದ್ದಾನೆ ಈಗಾಗಲೇ ಭಾರತವನ್ನು ಪ್ರವೇಶಿಸಿಯಾಗಿದೆ. ಅದನ್ನು ಚೀನಾ ಹಾಗೂ ಕೊರಿಯಾಗಳಂತೆ ನಮ್ಮ ಬಡತನದ ವಜೆಗಳನ್ನೆತ್ತಲು ಬಳಸಿಕೊಳ್ಳಬಾರದೇಕೆ? ಇದು, ೩.೮.೨೦೦೭ರಂದು ಸಾಗರದಲ್ಲಿ ನಾನು ಎಚ್.ಗಣಪತಿಯಪ್ಪ ನವರ ೮೧ನೇ ಹುಟ್ಟು ಹಬ್ಬದಾಚರಣೆಯ ಸಂದರ್ಭದಲ್ಲಿ ಆಡಿದ ಮಾತುಗಳಿಗೆ ಸ್ಥಳೀಯ ಕೃಷಿಕರಾದ ಗಿರಿ ಎನ್ನುವವರು, ಸಮಾರಂಭದ ನಂತರ ನನ್ನ ಪ್ರತಿಕ್ರಿಯೆಗಾಗಿ ನೀಡಿದ ಚೀಟಿಯ ಒಕ್ಕಣೆಯ ಸಾರಾಂಶ. ಸ್ವತಃ ಗಿರಿಯವರು ತಾತ್ವಿಕವಾಗಿ ಸಮಾಜವಾದಿ ಹಿನ್ನೆಲೆಯಿಂದ ಬಂದವರಾದರೂ, ಸಮಾಜವಾದ ಹೊಸ ಜಾಗತಿಕ ಸಂದರ್ಭಕ್ಕೆ ತಕ್ಕಂತೆ ತನ್ನ ನೀತಿಯನ್ನು ಪರಿಷ್ಕರಿಸಿಕೊಳ್ಳಬೇಕೆಂದು ಬಯಸುವವರು. ಅವರ ಬಯಕೆಯೇ ನನ್ನ ಬಯಕೆಯೂ ಆಗಿದೆ ಎಂದು ಹೇಳಿದ ನಾನು, ಜಾಗತೀಕರಣವನ್ನು ಕೇವಲ ಒಂದು ಆರ್ಥಿಕ ವಿದ್ಯಮಾನವಾಗಿ, ವಿದೇಶಿ ಬಂಡವಾಳದ ಸಾಗಣೆ ವಾಹನದಂತೆ ನೋಡುವುದು ತಪ್ಪು ಎಂದು ತಿಳಿಸಿದೆ. ಹಾಗೇ ಈ ಸಂದರ್ಭದಲ್ಲಿ ಚೀನಾ ಮತ್ತು ಕೊರಿಯಾಗಳ ಉದಾಹರಣೆಗಳೊಂದಿಗೆ ಯೋಚಿಸುವುದೂ ತಪ್ಪು ಎಂದೆ. ಏಕೆಂದರೆ, ಅಲ್ಲಿನ ಪ್ರಯೋಗಗಳನ್ನು ಆಯಾ ದೇಶಗಳ ರಾಜಕೀಯ ವ್ಯವಸ್ಥೆಯ ಭಾಗವಾಗಿಯೇ ನೋಡಬೇಕಾಗುತ್ತದೆ; ಹಾಗಾಗಿ ಆ ದೇಶಗಳ ಏಕ ಪಕ್ಷ ಪ್ರಜಾಪ್ರಭುತ್ವ (?) ವ್ಯವಸ್ಥೆಯನ್ನು ಒಪ್ಪುವವರು ಮಾತ್ರ ಅಲ್ಲಿನ ಪ್ರಯೋಗಗಳ ಯಶಸ್ಸನ್ನು ಮೆಚ್ಚಬಲ್ಲರು ಎಂದು ವಿವರಿಸಿದೆ.

ಆದರೂ, ಅಷ್ಟೇನೂ ಸಮಾಧಾನಗೊಳ್ಳದ ಗಿರಿಯವರು, ನಮಗೊಂದು ಮಧ್ಯಮ ಮಾರ್ಗದ ಅವಶ್ಯಕತೆ ಇದೆಯೆಂದರು. ನಾನು ಈ ಹಿಂದಿನ ಒಂದು 'ವಾರದ ಒಳನೋಟ' ಅಂಕಣದಲ್ಲಿ 'ಸೆಕ್ಯುಲರಿಸಂ' ಕುರಿತಂತೆ ಅಂತಹ ಮಧ್ಯಮ ಮಾರ್ಗದ ಅನ್ವೇಷಣೆ ಮಾಡಿರುವುದಾಗಿಯೂ, ಜಾಗತೀಕರಣ ಕುರಿತಂತೆಯೂ ಅಂತಹ ಒಂದು ಮಧ್ಯಮ ಮಾರ್ಗವನ್ನು ಅನ್ವೇಷಿಸುವ ಪ್ರಯತ್ನ ಮಾಡಬೇಕಾಗಿದೆಯೆಂದೂ ಸೂಚಿಸಿದರು. ಅಲ್ಲದೆ, ನಾನು ಸಾಹಿತ್ಯ ವಿಮರ್ಶೆಯ ಜೊತೆಗೆ ರಾಜಕಾರಣದ ಬಗ್ಗೆಯೂ ಬರೆಯುತ್ತಿರುವುದರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಇದ್ದಕ್ಕಿದ್ದಂತೆ 'ವಿಕ್ರಾಂತ ಕರ್ನಾಟಕ'ದ ನನ್ನ ಅಂಕಣದ ಓದುಗರೊಬ್ಬರು ಸಿಕ್ಕ ಖುಷಿಯಲ್ಲಿ ನಾನು, ಜಾಗತೀಕರಣ ಕುರಿತ ನನ್ನ ಬರಹಗಳೆಲ್ಲವೂ ಇಂತಹ ಅನ್ವೇಷಣೆಯ ಪ್ರಯತ್ನಗಳೇ ಆಗಿವೆ ಎಂದು ಹೇಳಿ, ಅವನ್ನು ಓದುವಂತೆ ಕೋರಿ ಅವರೊಂದಿಗಿನ ನನ್ನ ಮಾತುಕತೆಯನ್ನು ಮುಗಿಸಿದೆ.

ನಂತರ ನಾನು ಅಂದು ಸಭೆಯಲ್ಲಿ ಆಡಿದ ಮಾತುಗಳನ್ನು ವಿವರವಾಗಿ ನೆನಪಿಸಿಕೊಂಡೆ. ಗಿರಿಯಂತಹವರು, ನಾನೇಕೆ ಜಾಗತೀಕರಣವನ್ನು ನಿಷ್ಕಾರಣವಾಗಿ ವಿರೋಧಿಸುತ್ತಿದ್ದೇನೆ ಎಂದುಕೊಳ್ಳುವರು ಎಂದು ಯೋಚಿಸಿದೆ. ಬಹುಶಃ ನಾನು ಜಾಗತೀಕರಣವೆಂದರೇನು ಎಂದು ವಿವರಿಸದೆ, ಅದರ ದುಷ್ಪರಿಣಾಮಗಳ ಬಗ್ಗೆ ಮಾತ್ರ ಮಾತಾಡತೊಡಗುವುದು ಈ ತಪ್ಪು ತಿಳುವಳಿಕೆಗೆ ಕಾರಣವಿರಬಹುದು ಎಂದುಕೊಂಡೆ. ಬಹುಶಃ ನನ್ನ ಹಲವು ಬರಹ ಹಾಗೂ ಭಾಷಣಗಳಲ್ಲಿ ಜಾಗತೀಕರಣದ ಸ್ವರೂಪವನ್ನು ವಿವರಿಸಿರುವ ದಟ್ಟ ನೆನಪು ನನ್ನ ಮನಸ್ಸಿನಲ್ಲಿರುವುದರಿಂದ, ಪ್ರತಿ ಭಾಷಣದಲ್ಲೂ ಅದನ್ನು ಪುನರಾವರ್ತಿಸುವುದು ಆಯಾಸವೆನ್ನಿಸಿ, ನಾನು ನೇರವಾಗಿ ಜಾಗತೀಕರಣದ ದುಷ್ಪರಿಣಾಮಗಳ ಬಗ್ಗೆ ಮಾತನಾಡಲು ಹೋಗುತ್ತೇನೇನೋ! ಆದರೆ, ಆ ದುಷ್ಪರಿಣಾಮಗಳನ್ನು ಹೇಳುವಾಗ, ಸಭೆಯ ಸಂದರ್ಭಕ್ಕೆ ತಕ್ಕಂತೆ ಅದರ ವಿವಿಧ ಆಯಾಮಗಳನ್ನು ಕುರಿತಂತೆ ಮಾತನಾಡುವ ಪ್ರಯತ್ನ ನನ್ನದು.

ಅದೇನೇ ಇರಲಿ, ಗಿರಿಯಂತಹವರು ಜಾಗತೀಕರಣವನ್ನು ಭಾರತದಂತಹ ದೇಶಕ್ಕೆ ಬಯಸದೇ ಬಂದ ಭಾಗ್ಯವೆಂಬಂತೆ ಏಕೆ ಭಾವಿಸುವರು? ಅದನ್ನು ಅವರು ಮದ್ದಾನೆ ಎಂದು ಸರಿಯಾಗಿಯೇ ಕರೆದಿದ್ದಾರೆ. ಆದರೆ ಆ ಮದ್ದಾನೆ ತನ್ನ ಮಾವುತನೊಂದಿಗೇ ಪೂರ್ವ ನಿಯೋಜಿತ ಕಾರ್ಯಕ್ರಮಗಳೊಂದಿಗೆ ಬಂದಿದೆ ಎಂಬುದು ಅವರಿಗೆ ತಿಳಿದಂತಿಲ್ಲ! ಹಾಗಾಗಿಯೇ ಅವರು, ಈ ಮದ್ದಾನೆಯಿಂದ ನಾವೇಕೆ ನಮ್ಮ ಕೆಲಸಗಳನ್ನು ಮಾಡಿಸಿಕೊಳ್ಳಬಾರದು ಎಂದು ಮುಗ್ಧವಾಗಿ ಕೇಳುತ್ತಾರೆ! ಕುವೆಂಪು ಕುರಿತ ಇತ್ತೀಚಿನ ಬರಹವೊಂದರಲ್ಲಿ ನಾನು, 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಮಲೆನಾಡಿಗೆ ಮಿಷನರಿಗಳ ಪ್ರವೇಶವನ್ನು ಕುವೆಂಪು ವರ್ಣಿಸಿರುವ ಒಂದು ಅಧ್ಯಾಯದಲ್ಲೇ, ಕನ್ನಡ ಸಮಾಜದ ಮಟ್ಟಿಗೆ ಜಾಗತೀಕರಣದ ಮೊದಲ ಸೂಚನೆ ದೊರೆತಿದೆ ಎಂದಿದ್ದೇನೆ. ಪೂರ್ವವನ್ನು ಎಲ್ಲ ರೀತಿಯಲ್ಲೂ ಪಶ್ಚಿಮ ಮಾಡುವ ರಾಜಕೀಯ ಪ್ರಯತ್ನದ ಆತ್ಯಂತಿಕ ರೂಪವೇ ಜಾಗತೀಕರಣ. ಕ್ರಿಶ್ಚಿಯನ್ ಧರ್ಮ ಒಂದು ಧರ್ಮವಾಗಿ ಮಾತ್ರವಲ್ಲ; ಒಂದು ಜೀವನ ದೃಷ್ಟಿಯಾಗಿ, ಒಂದು ಜೀವನ ಕ್ರಮವಾಗಿ, ಕೀಳರಿಮೆಯನ್ನು ಬಿತ್ತುತ್ತಲೇ ಬಂತು. ಹಾಗೇ ನಂತರದ ದಿನಗಳಲ್ಲಿ ಅದು, ಒಂದು ಸಂಸ್ಕೃತಿಯ ರೂಪದಲ್ಲಿ ಈ ಕೀಳರಿಮೆಯನ್ನು ಕಿತ್ತೆಸೆಯುವ ಸಾಧನವಾಗಿಯೂ ಆಧುನೀಕರಣದ ಹೆಸರಿನಲ್ಲಿ, ಹೊಸ ವಿಜ್ಞಾನ-ತಂತ್ರಜ್ಞಾನಗಳನ್ನೂ ಪರಿಚಯಿಸಿತು. ಇವೆಲ್ಲವೂ ಕಾಲಕ್ರಮದಲ್ಲಿ ಸ್ಥಳೀಯ ಜೀವನ ದೃಷ್ಟಿ, ಕ್ರಮ, ಜ್ಞಾನರೂಪಗಳು ಹಾಗೂ ಕೌಶಲ್ಯಗಳನ್ನು ಅಪ್ರಸ್ತುತಗೊಳಿಸುತ್ತಾ ಹೋಗಿ ಸೃಷ್ಟಿಸಿದ ಬಿಕ್ಕಟ್ಟು, ಈಚೆಗೆ ಹಣಕಾಸಿನ ಬಂಡವಾಳದ ಕೊರತೆಯ ರೂಪದಲ್ಲಿ ಕಾಣಿಸಿ ಕೊಂಡಾಗಲೇ; ಆರ್ಥಿಕ ಸುಧಾರಣೆ, ಉದಾರೀಕರಣ, ಖಾಸಗೀಕರಣಗಳ ಘೋಷಣೆ ಗಳೊಂದಿಗೆ ಆಧುನೀಕರಣವು ಜಾಗತೀಕರಣ ಎಂಬ ಆಕರ್ಷಕ ಹೊಸ ಹೆಸರಿನೊಂದಿಗೆ ನಮಗೆ ಎದುರಾದದ್ದು. ಹೀಗಾಗಿ ಜಾಗತೀಕರಣ ಎಂಬುದು ಹೊಸ ವಿದ್ಯಮಾನವೇನೂ ಆಗಿರದೆ, ನಾವು ಕೀಳರಿಮೆಯನ್ನು ನಿವಾರಿಸಿಕೊಳ್ಳಲು ಅಳವಡಿಸಿಕೊಂಡ ಪಶ್ಚಿಮದ ಆಧುನಿಕತೆಯ ಆತ್ಯಂತಿಕ ರೂಪವೇ ಆಗಿದೆ!

ಹಣಕಾಸಿನ ರೂಪದ ಬಂಡವಾಳಕ್ಕಿಂತ ಹೆಚ್ಚಾಗಿ ವಿಶ್ವಾಸದ, ಸಹಕಾರದ, ಹೊಂದಾಣಿಕೆಯ ಸಾಂಸ್ಕೃತಿಕ ಬಂಡವಾಳವನ್ನು ನೆಚ್ಚಿ ಸಾಗಿದ್ದ ನಮ್ಮ ಗ್ರಾಮ ಮೂಲದ instinctsಗಳನ್ನಾಧರಿಸಿದ ಮಿತಿಯುಳ್ಳ ಬದುಕಿನ ನಮ್ಮ ಆರ್ಥಿಕತೆಯನ್ನು; ಪಶ್ಚಿಮದ ಭೌತವಾದಿ ನಾಗರೀಕತೆಯ, ಮಿತಿಯಿಲ್ಲದ ಬದುಕಿನ ಆರ್ಥಿಕತೆಯನ್ನಾಗಿ ಪರಿವರ್ತಿಸುವ ಪಶ್ಚಿಮದ ಹುನ್ನಾರವೇ ಇಂದು

ಜಾಗತೀಕರಣವೆನಿಸಿದೆ. ನಿಜ, ಗ್ರಾಮ ಮೂಲದ ನಮ್ಮ ಮಿತಿಯುಳ್ಳ ಈ ಬದುಕಿನ ಜೀವನ ದರ್ಶನವನ್ನು ಜಾತಿ ಪದ್ಧತಿ, ವಿಶೇಷವಾಗಿ ಅಸ್ಪೃಶ್ಯತಾ ಆಚರಣೆ ಕಳಂಕಗೊಳಿಸಿತ್ತು. ಆದರೆ ಅದನ್ನು ನಿವಾರಿಸಿಕೊಳ್ಳುವ ಸಾಮಾಜಿಕ ಹಾಗೂ ಸಾಂಸ್ಕೃತಿಕ ಆಂದೋಲನವೊಂದು ಗಾಂಧಿ–ಅಂಬೇಡ್ಕರ್–ಲೋಹಿಯಾ ಅನುಸಂಧಾನದ ಮೂಲಕ ಆರಂಭವಾಗಿತ್ತಾದರೂ, ಪಶ್ಚಿಮದ ಆಧುನಿಕ–ಅಂದರೆ ಸ್ಥೂಲವಾಗಿ ಹೊಸ ವೈಜ್ಞಾನಿಕ ಹಾಗೂ ತಂತ್ರಜ್ಞಾನಾಧಾರಿತ–ಜೀವನ ವಿಧಾನದ ಅಳವಡಿಕೆಯೇ ಜಾತಿ ಪದ್ಧತಿ ಸೃಷ್ಟಿಸಿದ್ದ ಸಾಮಾಜಿಕ–ಆರ್ಥಿಕ ವೈರುಧ್ಯಗಳನ್ನು ಸರಿಪಡಿಸುವವೆಂಬ ನಂಬಿಕೆ, ನೆಹರೂ ಪಂಥದ ಸೆಕ್ಯುಲರಿಸಂನ ಪ್ರಭಾವದಿಂದಾಗಿ ಪ್ರಬಲಗೊಂಡಿತು. ಇದರಿಂದಾಗಿ, ಪಶ್ಚಿಮದ ಆಧುನಿಕತೆ ಭಾರತದ ಆರ್ಥಿಕ ಸಮಸ್ಯೆಗಳನ್ನಲ್ಲದೆ, ಸಾಮಾಜಿಕ ವೈರುಧ್ಯಗಳನ್ನೂ ನಿವಾರಿಸುವ ದಿವ್ಯೌಷಧವಾಗಿ ಪರಿಗಣಿತವಾಯಿತು. ಆದರೆ, ಇಷ್ಟೆಲ್ಲದರ ನಂತರವೂ ನಮ್ಮ ಸಮಾಜದಲ್ಲಿ ಜಾತಿ ಸಂಘರ್ಷ ನಿಂತಿದೆಯೇ; ಹೋಗಲಿ, ಕಡಿಮೆಯಾಗಿದೆಯೇ ಎಂಬ ಪ್ರಶ್ನೆ ಇದ್ದೇ ಇದೆ. ಈ ಎಲ್ಲ ಗೊಂದಲದ ಹಿಂದೆ ಇದ್ದುದು ನಮ್ಮ ಜೀವನ ದೃಷ್ಟಿ ಹಾಗೂ ವಿಧಾನದ ಬಗೆಗಿದ್ದ–ಸ್ಥಗಿತಗೊಂಡಿದ್ದ– ನಮ್ಮ ಆಲೋಚನೆಯ ದಾರಿದ್ರ್ಯ ಹಾಗೂ ಪಶ್ಚಿಮದ ಆಧುನಿಕತೆ ಕುರಿತಂತೆ ಕೀಳರಿಮೆ ತುಂಬಿದ ನಮ್ಮ ಕುತೂಹಲ. ಇದರ ಪರಿಣಾಮವಾಗಿ ಪಶ್ಚಿಮದ ಆಧುನಿಕತೆಯ ವಿರುದ್ಧ ತಮ್ಮದೇ ಕ್ರಾಂತಿಕಾರಿ ಆಲೋಚನೆಗಳ ಮೂಲಕ ಸಮರ ಸಾರಿದ್ದ ಗಾಂಧಿ ಕೂಡ ಕ್ರಮೇಣ ಜನಸಾಮಾನ್ಯರ ಕಣ್ಣಿನಲ್ಲಿ ಅಪ್ರಸ್ತುತರಾಗಿ ಹೋದರು. ಲೋಹಿಯಾ ಹಿಂದೊಮ್ಮೆ ತಮ್ಮ ರೂಪಕ ಭಾಷೆಯಲ್ಲಿ ಕಮ್ಯುನಿಸಮ್ಮನ್ನು ಕ್ರಿಶ್ಚಿಯಾನಿಟಿ ನಂತರ ಪಶ್ಚಿಮವು ಏಷ್ಯಾದ ಮೇಲೆ ಪ್ರಯೋಗಿಸಿರುವ ಅಸ್ತ್ರವೆಂದು ಬಣ್ಣಿಸಿದ್ದರು. ಈಗ ಜಾಗತೀಕರಣವನ್ನೂ ಆ ಪಟ್ಟಿಗೆ ಸೇರಿಸಬಹುದಾಗಿದೆ.

ಹೀಗಾಗಿ ಜಾಗತೀಕರಣವೆಂಬುದು ತನ್ನ ಹೆಚ್ಚುವರಿ ಬಂಡವಾಳದ(ಇದು ಉತ್ಪತ್ತಿಯಾದದ್ದೂ ವಸಾಹತುಶಾಹಿಯಿಂದಾಗಿಯೇ) ಲಾಭದಾಯಕ ಹೂಡಿಕೆಗಾಗಿ ಹೊಸ ಹೊಸ ಮಾರುಕಟ್ಟೆಯನ್ನು ಸೃಷ್ಟಿಸುವ, ಕಂಡುಕೊಳ್ಳುವ ಪಶ್ಚಿಮದ ತಂತ್ರವೇ ಆಗಿದೆ. ನಮ್ಮ ಜೀವನ ದೃಷ್ಟಿಯೇ ತಪ್ಪಾಗಿದೆ, ನಮ್ಮ ಜೀವನ ಕ್ರಮವೇ ಅರ್ಥಹೀನವಾಗಿದೆ ಎಂದು ನಂಬುವ ಹುಂಬರು ಮಾತ್ರ ಜಾಗತೀಕರಣದ ಈ ಆವೃತ್ತಿಯನ್ನು ವರವೆಂದು ಪರಿಗಣಿಸಿಯಾರು. ಹೀಗೆ ಭಾರತೀಯ ಮನಸ್ಸುಗಳಿಗೆ ಅಸಮಧಾನದ, ಅತೃಪ್ತಿಯ ಬೆಂಕಿ ಹಚ್ಚಿ ಅದರ ತಳಮಳದಲ್ಲಿ ಮೈಕಾಯಿಸಿಕೊಳ್ಳುವ ಪಶ್ಚಿಮದ ತಂತ್ರವಾಗಿರುವ ಜಾಗತೀಕರಣವನ್ನು ನಿಯಂತ್ರಿಸುವುದು ಹೇಗೆ? ಅದನ್ನು ಗಿರಿಯವರು ಸೂಚಿಸಿರುವಂತೆ, ನಮ್ಮ ಆದ್ಯತೆಯ ಕ್ಷೇತ್ರಗಳ ಸುಧಾರಣೆಗಾಗಿ ಬಳಸಿಕೊಳ್ಳುವುದು ಹೇಗೆ? ಅವರು ಬಂಡವಾಳ ತೊಡಗಿಸುವುದೇ, ಷರತ್ತುಗಳ ಮೇಲೆ. ನಾವೂ ಷರತ್ತುಗಳನ್ನು ಹಾಕುತ್ತಿರುವೆವಾದರೂ, ಮೂಲತಃ ಅವರ ಅಭಿವೃದ್ಧಿ ಮಾದರಿಯನ್ನು–ಕೈಗಾರೀಕೀಕರಣ ಮತ್ತು ನಗರೀಕರಣವನ್ನು ಆಧರಿಸಿದ ಗ್ರಾಹಕ ಸಮಾಜವೊಂದನ್ನು ಸೃಷ್ಟಿಸುವುದು–ಒಪ್ಪಿಕೊಂಡೇ, ಆಡಳಿತಾತ್ಮಕ ನೆಲೆಯ ಷರತ್ತುಗಳನ್ನಷ್ಟೇ ಹಾಕುವ ಅವಕಾಶವನ್ನು ನಾವು ಹೊಂದಿದ್ದೇವೆ. ಇದರ ಪರಿಣಾಮಗಳನ್ನು ಎರಡು ಉದಾಹರಣೆಗಳ ಮೂಲಕ ವಿಷದೀಕರಿಸಬಹುದು. ಒಂದು ಅತಿ ಚಿಕ್ಕ ಆದರೆ ಸೂಕ್ಷ್ಮ ಉದಾಹರಣೆ: ಜಾಗತೀಕರಣವು ಉದ್ಯೋಗ ಸೃಷ್ಟಿಯ ಹೆಸರಲ್ಲಿ ದೊಡ್ಡ ಪ್ರಮಾಣದಲ್ಲಿ ತಂದಿರುವ ಕಾಲ್ ಸೆಂಟರ್‌ಗಳಲ್ಲಿ ಭಾರತದ ಭವಿಷ್ಯವನ್ನು ರೂಪಿಸಬೇಕಾದ ನಮ್ಮ ಮಕ್ಕಳು, ತಮ್ಮ ಭಾಷಾ ವೈಖರಿಯನ್ನಷ್ಟೇ ಅಲ್ಲದೆ(ಇದನ್ನು ಬೇಕಾದರೆ, ಒಂದು ಕೌಶಲ್ಯವೆಂದು ಪರಿಗಣಿಸಬಹುದು) ತಮ್ಮ ಹೆಸರುಗಳನ್ನೂ

ಬದಲಾಯಿಸಿಕೊಳ್ಳಬೇಕಾದ ಒತ್ತಡದ ಪರಿಣಾಮಗಳಾದರೂ ಎಂತಹುದು? ತಮ್ಮ ಹಗಲುಗಳನ್ನು ಕಳೆದುಕೊಂಡ ಅವರು ಏನಾಗಿದ್ದಾರೆ ಎಂಬ ಬಗ್ಗೆ ನಡೆದಿರುವ ಸಮೀಕ್ಷೆಗಳ ಬಗ್ಗೆ ಯಾರಾದರೂ ತಲೆ ಕೆಡಿಸಿಕೊಂಡಿದ್ದಾರೆಯೇ? ಉದ್ಯೋಗ ಸೃಷ್ಟಿ ಆಗಬೇಕಾಗಿರುವುದು, ರಾಷ್ಟ್ರವನ್ನು ಕಟ್ಟಲೇ ಹೊರತು, ಕೆಡವಲಲ್ಲ ಅಲ್ಲವೇ?

ಇನ್ನೊಂದು ದೊಡ್ಡ ಉದಾಹರಣೆ: ಇತ್ತೀಚೆಗೆ ವಿವಾದಕ್ಕೆ ಸಿಕ್ಕಿ ಕೇಂದ್ರ ಸರ್ಕಾರದ ಅಸ್ತಿತ್ವವನ್ನೇ ಅಲುಗಾಡಿಸುತ್ತಿರುವ ಅಮೆರಿಕಾದೊಡನೆಯ ನಾಗರಿಕ ಪರಮಾಣು ಒಪ್ಪಂದ. ಅದರ ತಾಂತ್ರಿಕ ಅನುಕೂಲಗಳು ಹಾಗೂ ಅನಾನುಕೂಲಗಳು ಏನೇ ಇರಲಿ– ಇದು ಅಮೆರಿಕಾ ತನ್ನ ಅಪಾರ ಪ್ರಮಾಣದ ಅಪಾಯಕಾರಿ ಪರಮಾಣು ಇಂಧನ ತ್ಯಾಜ್ಯವನ್ನು ನಿರ್ವಹಿಸಲಾಗದೆ ಅದನ್ನು ಬೇರೆ ದೇಶಗಳಿಗೆ ಸಾಗ ಹಾಕುವ ಪರೋಕ್ಷ ಯೋಜನೆಯೂ ಆಗಿದೆ ಎಂಬ ಅನುಮಾನವೂ ಸೇರಿದಂತೆ, ಅದೀಗ ರಾಷ್ಟ್ರಾದ್ಯಂತ ಬಿಸಿ ಬಿಸಿ ಚರ್ಚೆಯಾಗುತ್ತಿದೆ –ಅದನ್ನು ಸಮರ್ಥಿಸಲು ನಮ್ಮ ಪ್ರಧಾನಿ ನೀಡಿರುವ ಎರಡು ಕಾರಣಗಳನ್ನು ಗಮನಿಸಿ. ಒಂದು ಈ ಒಪ್ಪಂದವಿಲ್ಲದೆ ನಾವು ಜಾಗತಿಕ ಶಕ್ತಿಯಾಗಲೂ ಸಾಧ್ಯವಿಲ್ಲ. ಎರಡು: ಅಮೆರಿಕಾದ ಈವರೆಗಿನ ಅಧ್ಯಕ್ಷರ ಪೈಕಿ ಬುಷ್‌ರೇ ಭಾರತದ ಬಗ್ಗೆ ಅತ್ಯಂತ ಸ್ನೇಹ ಪ್ರದರ್ಶಿಸಿರುವವರು! ಈ ಎರಡೂ ಎಷ್ಟು ಅನಾಹುತಕಾರಿ ಸಮರ್ಥನೆಗಳೆಂದರೆ, ನಮ್ಮ ಕುಲಗೆಟ್ಟ ರಾಜಕಾರಣಿಗಳ ಮಧ್ಯೆ ತಮ್ಮ ಶುದ್ಧ ಹಸ್ತ ಹಾಗೂ ಸಭ್ಯ ವರ್ತನೆಯ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದ ಮನಮೋಹನ ಸಿಂಗರು, ಗೊತ್ತಿದ್ದೋ ಗೊತ್ತಿಲ್ಲದೆಯೋ, ಭಾರತದ ಪರ ಅಮೆರಿಕಾದ ಎಂತಹ ದಲ್ಲಾಳಿಯಾಗಿದ್ದಾರೆ ಎಂಬ ಆಘಾತಕಾರಿ ಸಂಗತಿ ಸ್ಪಷ್ಟವಾಗುತ್ತದೆ. ಸಾಮ್ರಾಜ್ಯಶಾಹಿಯ ಜಾಣತನವಿರುವುದೇ ತನ್ನ ಕುಕೃತ್ಯಗಳಿಗಾಗಿ ಇಂತಹ ಸರಳರನ್ನೇ ಆರಿಸುವುದರಲ್ಲಿಯೇ ಏನೋ!

ಈ ಪರಮಾಣು ಒಪ್ಪಂದದ ಹಿನ್ನೆಲೆಯಲ್ಲಿ ಜಾಗತಿಕ ಶಕ್ತಿ ಎಂಬುದರ ಅರ್ಥವಾದರೂ ಏನು? ಅಮೆರಿಕಾದಂತಹ 'ದೊಡ್ಡಣ್ಣ'ನಿಗೆ ತಮ್ಮಣ್ಣನಾಗುವುದು ಎಂದೇ? ಇಡೀ ಜಗತ್ತಿನಿಂದ ಹಲವಾರು ಕಾರಣಗಳಿಗಾಗಿ ಹಿಡಿಶಾಪ ಹಾಕಿಸಿಕೊಳ್ಳುತ್ತಿರುವ ಬುಷ್ ನೀಡುತ್ತಿರುವ ಸ್ನೇಹ ಹಸ್ತದ ಹಿಂದಿನ ಉದ್ದೇಶಗಳನ್ನು ನಾವು ಸಂಪೂರ್ಣವಾಗಿ ವಿಶ್ಲೇಷಣೆ ಮಾಡಿದ್ದೇವೆಯೇ? ಮನಮೋಹನ ಸಿಂಗರು ಈ ಒಪ್ಪಂದದ ಮೇಲೆ ತಮ್ಮ ರಾಜಕೀಯ ಜೀವನವನ್ನೇ ಏಕೆ ಪಣವಾಗಿಡಲು ಹೊರಟಿದ್ದಾರೆ? ಈ ಪರಮಾಣು ಒಪ್ಪಂದದ ಹಿಂದೆ ಮಧ್ಯಪ್ರಾಚ್ಯ ಹಾಗೂ ಚೀನಾ ಸೇರಿದಂತೆ ಪೂರ್ವ ಏಷ್ಯಾದ ಮೇಲೆ ರಾಜಕೀಯ ನಿಯಂತ್ರಣ ಸಾಧಿಸಲು ಭಾರತವನ್ನು ತನ್ನ ಒಂದು ಮಿಲಿಟರಿ ಏಜೆಂಟನನ್ನಾಗಿ ರೂಪಿಸುವ ದೀರ್ಘಕಾಲಿಕ ತಂತ್ರವಿಲ್ಲವೇ? ಈ ಬೆಳವಣಿಗೆ ಜಾಗತಿಕ ರಾಜಕಾರಣದ ಸದ್ಯದ ಸಮೀಕರಣಗಳ ಮಧ್ಯೆ ಭಾರತವನ್ನು ಯಾವ ಸ್ಥಿತಿಗೆ ದೂಡಬಹುದು?* ಅದರ ರಾಜಕೀಯ ಸ್ವಾಯತ್ತತೆ ಎಷ್ಟರ ಮಟ್ಟಿಗೆ ಭಂಗಗೊಳ್ಳಬಹುದು? ಮಾರುಕಟ್ಟೆಯನ್ನು ಝುಗಝುಗಿಸುವ ವೈವಿಧ್ಯಮಯ ವಸ್ತುಗಳಿಂದ ಸಮೃದ್ಧಗೊಳಿಸಿ, ಮನುಷ್ಯರನ್ನು ಚಪಲಚಿತ್ತರನ್ನಾಗಿ ಮಾಡುವ ಮೂಲಕ ಇಂತಹ ಮುಖ್ಯ ಪ್ರಶ್ನೆಗಳನ್ನೇ ಮರೆಸಿಬಿಡುವ ಜಾಗತೀಕರಣವನ್ನು ಇಡಿಯಾಗಿ ಒಪ್ಪಿಕೊಳ್ಳುವುದು ಸಾಧ್ಯವೇ?

ಹೀಗಾಗಿ ಇಂದು ಮಧ್ಯಮ ಮಾರ್ಗವೆಂದರೆ, ವಿದೇಶಿ ಬಂಡವಾಳ ಎನ್ನುವುದು ಪಡೆಯುವವರ ಅಗತ್ಯದಷ್ಟೇ ಕೊಡುವವರ ಅಗತ್ಯವೂ ಆಗಿದೆ ಎನ್ನು ರೀತಿಯಲ್ಲಿ ಅದರ

*ಅನುಬಂಧ – ೨ ನೋಡಿ

ಮೇಲಿನ ಷರತ್ತುಗಳನ್ನು, ನಮ್ಮ ಅಭಿವೃದ್ಧಿ ನೀತಿಗನುಗುಣವಾಗಿ ರೂಪಿಸುವ ತಾಕತ್ತುಳ್ಳ ದೇಶೀ ಪ್ರಜ್ಞೆಯ ರಾಜಕಾರಣವನ್ನು ಕಟ್ಟುವುದೇ ಆಗಿದೆ. ವಿಶ್ವ ಸಮಾಜವಾದಿ ಚಿಂತಕರ ಒಕ್ಕೂಟ ಆರಂಭಿಸಿರುವ 'ಇನ್ನೊಂದು ಜಗತ್ತು ಸಾಧ್ಯ' ಚಳುವಳಿಯ ವಕ್ತಾರನಾದ ಬೊಲಿವಿಯಾದ ಅಧ್ಯಕ್ಷ ಶಾಫೆಜ್ ಹೇಳುವ ಹಾಗೆ, ಇಂದಿನ ಅಗತ್ಯ, ಹಣಕಾಸಿನ ಬಂಡವಾಳದ ಜೊತೆಗೇ ಸಾಂಸ್ಕೃತಿಕ ಬಂಡವಾಳದ ವಿನಿಮಯವನ್ನೂ ಆಧರಿಸಿದ ಜಾಗತೀಕರಣ. ಅಂದರೆ, ಜಾಗತೀಕರಣದ ಹಿಂದೆ, ಜಗತ್ತು ಎಲ್ಲ ನೆಲೆಗಳಲ್ಲೂ ಏಕ ಕೇಂದ್ರಿತವಾಗಿರದೆ, ಬಹುಕೇಂದ್ರಿತ ವಾಗಬೇಕೆಂಬ ಆಗ್ರಹ ಇರಬೇಕಾಗುತ್ತದೆ. ಇದನ್ನು, ಇಂದಿನ ರಾಜಕಾರಣ ಸಮರ್ಥಿಸುತ್ತಿರುವ ಜಾಗತೀಕರಣದ ಆವೃತ್ತಿಯ ಅನಾಹುತಗಳನ್ನು ಜನರಿಗೆ ಹೇಳುವ ಮೂಲಕವೇ ಆರಂಭಿಸ ಬೇಕಾಗಿದೆ. ಇದು ಕಷ್ಟದ ದಾರಿ;ಆದರೆ ಅನಿವಾರ್ಯದ ದಾರಿಯೂ ಹೌದು. ಈ ದಾರಿಯಲ್ಲೇ ರಾಜಕಾರಣದ ಪರ್ಯಾಯ ಮಾದರಿಗಳು ಮೂರ್ತ ರೂಪ ಪಡೆಯುವುವು ಎಂಬ ನಂಬಿಕೆ ನನ್ನದು.

ಗಿರಿಯವರಂತಹ ಪ್ರಗತಿಪರ ರೈತರೂ ಜಾಗತೀಕರಣದ ವಿರೋಧವನ್ನು ತಪ್ಪಾಗಿ ಅರ್ಥಮಾಡಿಕೊಳ್ಳುವ ಪರಿಸ್ಥಿತಿ ಬಗ್ಗೆ ಚಿಂತಿತನಾಗಿ ಈ ಬಗ್ಗೆ ಇಷ್ಟು ವಿಸ್ತಾರವಾಗಿ ಬರೆಯಬೇಕಾಯಿತಷ್ಟೆ.

(*ವಿಕ್ರಾಂತ ಕರ್ನಾಟಕ* ಆಗಸ್ಟ್ ೩೧, ೨೦೦೭)

ಕಾವೇರಿ ಚಳುವಳಿ ಹಾಗೂ ಕನ್ನಡ ಕುಲ ಪ್ರಜ್ಞೆ

ಕಾವೇರಿ ನ್ಯಾಯಾಧೀಕರಣದ ತೀರ್ಪು ಪ್ರಕಟವಾಗಿ ಹದಿನೈದು-ಇಪ್ಪತ್ತು ದಿನಗಳಾಗುತ್ತಾ ಬಂದಿದ್ದರೂ, ಅಂದು ರಾಜ್ಯಾದ್ಯಂತ, ವಿಶೇಷವಾಗಿ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಆರಂಭವಾದ ಪ್ರತಿಭಟನೆ-ಮುಷ್ಕರಗಳು ಇನ್ನೂ ನಿಂತಿಲ್ಲ. ಕಾರಣ, ಜನತೆಯ ಪ್ರತಿನಿಧಿಯಾದ ಸರ್ಕಾರ ತೀರ್ಪಿನ ಬಗ್ಗೆ ಬಾಯೇ ಬಿಟ್ಟಿಲ್ಲದಿರುವುದು! ಸಾವಿರ ಪುಟಗಳ ತೀರ್ಪು ಅದರ ಬಾಯನ್ನು ಕಟ್ಟಿ ಹಾಕಿಬಿಟ್ಟಿದೆ - ಸರ್ಕಾರದ ಹೊರತಾಗಿ ಮಿಕ್ಕೆಲ್ಲರೂ 'ಅನ್ಯಾಯ! ಅನ್ಯಾಯ!' ಎಂದು ಕೂಗುತ್ತಿದ್ದರೂ! ನ್ಯಾಯವೋ, ಅನ್ಯಾಯವೋ ವಿವರವಾಗಿ ನೋಡಿ ತೀರ್ಮಾನಿಸೋಣ; ಅನ್ಯಾಯವಾಗಿದ್ದರೆ ನ್ಯಾಯಕ್ಕಾಗಿ ಒಟ್ಟಿಗೆ ಹೋರಾಡೋಣ, ಅಲ್ಲಿಯವರೆಗೆ ವೃಥಾ ಪ್ರತಿಭಟನೆ ಬೇಡ ಎಂದು ಹೇಳುವ ಆತ್ಮವಿಶ್ವಾಸವೂ ಸರ್ಕಾರಕ್ಕಿಲ್ಲವಾಗಿದೆ. ಹೀಗಾಗಿ ವೃತ್ತಿಪರ ಚಳುವಳಿಕಾರರು ಮತ್ತು ಆತಂಕಕ್ಕೊಳಗಾಗಿರುವ ರೈತರ ಜೊತೆಗೆ ಹೆಂಗಸರು - ಮಕ್ಕಳು, ಸಾಹಿತಿಗಳು, ಮಠಾಧೀಶರು, ಸಿನಿಮಾದವರು, ವಿದ್ಯಾರ್ಥಿಗಳು, ವಕೀಲರು, ಐ.ಟಿ. ಉದ್ಯೋಗಿಗಳು, ಲೈಂಗಿಕ ಕಾರ್ಯಕರ್ತರು, ಹಿಜಡಾಗಳು ಹೀಗೆ ಎಲ್ಲರೂ ಪ್ರತ್ಯೇಕ ಪ್ರತ್ಯೇಕವಾಗಿ ಬೀದಿಗಳಲ್ಲಿ ಪ್ರತಿಭಟನೆಗಿಳಿದಿದ್ದಾರೆ.

ರಸ್ತೆ ತಡೆ, ರೈಲು ತಡೆ, ತಮಿಳು ಟಿವಿ ವಾಹಿನಿಗಳ ತಡೆ, ತಮಿಳು ಪತ್ರಿಕೆಗಳ ದಹನ, ಕೇಂದ್ರ ಸರ್ಕಾರ ಕಛೇರಿಗಳ ಮುತ್ತಿಗೆ ಮುಂತಾದ ಸಲ್ಲದ ಕ್ರಮಗಳಿಂದ ಹಿಡಿದು; ರಕ್ತತರ್ಪಣ, ರಕ್ತಪತ್ರ, ಉರುಳು ಸೇವೆ, ನಡುರಸ್ತೆಯಲ್ಲಿ ಅಡುಗೆ, ಆರ್ಕೆಸ್ಟ್ರಾ, ಸಚಿವ ಸ್ಥಾನಕ್ಕೆ ರಾಜೀನಾಮೆ, ಗೊಮ್ಮಟನಿಗೆ ಕಾವೇರಿ ಅಭಿಷೇಕ ಮುಂತಾದ ಒಲ್ಲದ ಕ್ರಮಗಳವರೆಗೆ ಹರಡಿದ ವೈವಿಧ್ಯಮಯ ಭಾವಭಂಗಿಗಳಲ್ಲಿ ವ್ಯಕ್ತವಾಗುತ್ತಿರುವ ಈ ಪ್ರತಿಭಟನೆ, ಕನ್ನಡ ಟಿವಿ ವಾಹಿನಿಗಳಲ್ಲಿ ಮತ್ತು ಕನ್ನಡ ಪತ್ರಿಕೆಗಳಲ್ಲಿ ಪ್ರತಿದಿನ ಪ್ರಮುಖ ಸುದ್ದಿಯಾಗಿ ರಾರಾಜಿಸುತ್ತಿದೆ. ಇದರಿಂದಾಗಿ ಇಡೀ ರಾಜ್ಯವೇ ಒಂದಾಗಿ, ತನಗಾಗಿರುವ ಅನ್ಯಾಯಕ್ಕೆ ಎಚ್ಚೆತ್ತುಕೊಂಡಿದೆ ಎಂಬ ಭಾವನೆ ಮೂಡುವಂತಾಗಿದೆ, ದಕ್ಷಿಣ ಕನ್ನಡ ಹಾಗೂ ಹೈದ್ರಾಬಾದ್ ಕರ್ನಾಟಕದಲ್ಲಿ ರಾಜ್ಯ ಬಂದ್ ವಿಫಲವಾಗಿದ್ದಾಗ್ಯೂ. ಆದರೆ ರಾಜ್ಯದಾಚೆ ಸುದ್ದಿಯೇ ಆಗದ ಈ ಪ್ರತಿಭಟನೆ ಯಾರ ವಿರುದ್ಧ ಮತ್ತು ಏಕೆ ಎಂಬ ಪ್ರಶ್ನೆಗಳಿಗೆ ಎಡೆಕೊಡದೆ, ಕೈಲಾಗದವ ಮೈಪರಚಿಕೊಂಡ ಎಂಬಂತಹ ಆಸ್ಫೋಟನಾಕಾರಿ ಅಸಹಾಯಕತೆಯ ಪರಿಸ್ಥಿತಿಗೆ ದಾರಿ ಮಾಡಿಕೊಡುತ್ತಿದೆ ಎಂಬುದನ್ನು ಯಾರೂ ಗಮನಿಸಿದಂತಿಲ್ಲ.

೧೯೯೧ರಲ್ಲಿ ಕಾವೇರಿ ನ್ಯಾಯಾಧಿಕರಣದ ಮಧ್ಯಂತರ ತೀರ್ಪು ಪ್ರಕಟವಾದಾಗಲೂ ಇದಕ್ಕಿಂತ ಭಯಂಕರ ಚಳುವಳಿ ನಡೆದಿತ್ತು. ಆಗಿನ ಮುಖ್ಯ ಮಂತ್ರಿ ಬಂಗಾರಪ್ಪನವರು ತಾವು ಭಾರತವೆಂಬ ಒಕ್ಕೂಟದ ಅಂಗವಾಗಿರುವ ರಾಜ್ಯವೊಂದರ ಮುಖ್ಯಮಂತ್ರಿಯೆಂಬುದನ್ನು ಮರೆತು; ತೀರ್ಪನ್ನು ಧಿಕ್ಕರಿಸುವ ವೀರಾವೇಶದಲ್ಲಿ ತಮಿಳು ಜನರ ವಿರುದ್ಧ ಕಿಡಿಕಾರಿದ ಕಾರಣದಿಂದಾಗಿ ಹತ್ತಾರು ಜನ ಸತ್ತು, ಸಾರ್ವಜನಿಕರ, ವಿಶೇಷವಾಗಿ ತಮಿಳರ ಕೋಟ್ಯಾಂತರ ರೂಪಾಯಿಗಳ ಆಸ್ತಿಪಾಸ್ತಿ ನಷ್ಟವಾಗಿ, ಬೆಂಗಳೂರು ಸೇರಿದಂತೆ ಇಡೀ ಕಾವೇರಿ ಬಯಲು ರಣರಂಗವಾಗಿತ್ತು. ಈ ಅಪ್ರಬುದ್ಧ ನಿಲುವೇ ಪರೋಕ್ಷ ಕಾರಣವಾಗಿ ಬಂಗಾರಪ್ಪ ಅಧಿಕಾರ ಕಳೆದುಕೊಂಡರು. ಪರಿಣಾಮವಾಗಿ, ಮಧ್ಯಂತರ ತೀರ್ಪಿನ ಪ್ರಕಾರ ತಮಿಳ್ನಾಡಿಗೆ ನೀರು ಬಿಡಲಾಯಿತು. ಚಳುವಳಿ ತಣ್ಣಗಾಯಿತು!

ಇನ್ನು ರಾಜ್ಯ ನಾಯಕರಾಗಿರುವವರೆಗೆ ಪ್ರಾಣವನ್ನಾದರೂ ತೆತ್ತೇನು, ಕಾವೇರಿ ನೀರಿನ ಮೇಲಿನ ನ್ಯಾಯಬದ್ಧ ಹಕ್ಕನ್ನು ಬಿಟ್ಟುಕೊಡುವುದಿಲ್ಲ ಎಂದು ಘೋಷಿಸಿದ್ದ ದೇವೇಗೌಡರು, ಪ್ರಧಾನಮಂತ್ರಿಯಾದ ಕೂಡಲೇ ತಮಿಳು ನಾಡಿಗೆ ನೀರು ಬಿಡಲು ರಾತ್ರೋರಾತ್ರಿ ಆದೇಶಿಸಿದರು! ಆ ನೀರು ಹೇಮಾವತಿ ನೀರು ಎಂದು ಅವರು ಜನರನ್ನು ಯಾಮಾರಿಸಲು ಪ್ರಯತ್ನಿಸಿದ್ದುಂಟು. ೫ ವರ್ಷಗಳ ನಂತರ ಕಾವೇರಿ ಬಯಲಿನ ವರಪುತ್ರ ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಬರಗಾಲ ಬಂದಾಗ, ಅವರೂ ಬಂಗಾರಪ್ಪ ನವರಂತೆಯೇ ವೀರಾವೇಶ ತೋರಿ ನೀರು ಬಿಡಲು ನಿರಾಕರಿಸಿದಾಗ ಈ ವಿವಾದ ಮತ್ತೆ ಭುಗಿಲೆದ್ದಿತು. ಆಗಲೂ ಈಗಿನಂತೆಯೇ ಇಡೀ ರಾಜ್ಯವೇ ಎದ್ದು ನಿಂತು ಕೃಷ್ಣರನ್ನು ಬೆಂಬಲಿಸಿತ್ತು. ಆದರೆ ಆವರೆಗೆ ಕಾವೇರಿ ರೈತ ಹಿತರಕ್ಷಣಾ ಸಮಿತಿಯ ನೇತೃತ್ವ ವಹಿಸಿ ಮಂಡ್ಯದ ಜಿಲ್ಲೆಯ ರೈತರನ್ನು ದೀರ್ಘ ಹೋರಾಟಕ್ಕೆ ಅಣಿ ಮಾಡಿದ್ದ ನಿಷ್ಠುರವಾದಿ ನಾಯಕರೆಂದೇ ಹೆಸರಾಗಿದ್ದ ಜಿ. ಮಾದೇಗೌಡರು, ತನ್ನ ಒಕ್ಕೂಟ ವಿರೋಧಿ ನಿಲುವಿನಿಂದಾಗಿ ಸುಪ್ರೀಂ ಕೋರ್ಟ್‌ನಿಂದ ಛೀಮಾರಿ ಹಾಕಿಸಿಕೊಂಡ ಕೃಷ್ಣರ ಅಧಿಕಾರ ರಕ್ಷಣೆಯ ನಾಜೂಕಿನ ಆಮಿಷ ರಾಜಕಾರಣಕ್ಕೆ ಬಲಿಬಿದ್ದು, ವಿಷಾದ ಯೋಗಕ್ಕೆ ಸಿಕ್ಕಿ ಹೋರಾಟಕ್ಕೆ ಕಡಿವಾಣ ಹಾಕಿದರು. ಅಲ್ಲಿಂದಾಚೆಗೆ ಕಾವೇರಿ ಹೋರಾಟ ಸ್ಥಗಿತ ಗೊಂಡಿತ್ತೆಂದೇ ಹೇಳಬೇಕು. ಆಗ ಮಲಗಿದ ಕನ್ನಡಿಗರು ಈಗ ಕಾವೇರಿಯ ಅಂತಿಮ ತೀರ್ಪು ಹೊಸ್ತಿಲ ಬಳಿ ಬಂದಾಗ ಎದ್ದು, ಮನೆಗೆ ಬೆಂಕಿ ಬಿದ್ದ ಆತಂಕದಲ್ಲಿ ಬಾಯಿ ಬಾಯಿ ಬಡಿದುಕೊಳ್ಳುತ್ತಿದ್ದಾರೆ. ಈ ಅಸಹಾಯಕತೆ - ಗೊಂದಲಗಳಲ್ಲಿ, ಕನ್ನಡಿಗರಿಗೆ ಬೆಂಕಿ ಆರಿಸುವ ನೀರು ಎಲ್ಲಿದೆ ಎಂಬುದರ ಕಡೆ ಗಮನವೇ ಇಲ್ಲದಾಗಿದೆ ಹಾಗೂ ಕನ್ನಡದ ಮನೆಗೆ ಏಕೆ ಹೀಗೆ ಪದೇ ಪದೇ ಬೆಂಕಿ ಬೀಳುತ್ತಿದೆ ಎಂಬುದರ ಬಗ್ಗೆ ಯೋಚಿಸುವ ಶಕ್ತಿಯನ್ನೇ ಅವರು ಕಳೆದುಕೊಂಡಂತೆ ತೋರುತ್ತದೆ.

ಬಂಗಾರಪ್ಪನವರ ಅಪ್ರಬುದ್ಧ ರಾಜಕಾರಣ, ದೇವೇಗೌಡರ ಆತ್ಮವಂಚನೆಯ ರಾಜಕಾರಣ ಹಾಗೂ ಕೃಷ್ಣ-ಮಾದೇಗೌಡರ ಸ್ವಾರ್ಥ ರಾಜಕಾರಣದ ಈ ಪ್ರಸಂಗಗಳು, ಕನ್ನಡಿಗರ ದೀರ್ಘ ಕರ್ಮಕಥೆಯ ಇತ್ತೀಚಿನ ದೃಷ್ಟಾಂತಗಳಾಗಿವೆಯಷ್ಟೇ. ಭಾರತವೆಂಬ ಒಕ್ಕೂಟದ ರಾಜಕಾರಣದಲ್ಲಿ

ತನ್ನದೇ ಆದ ರಾಜಕಾರಣದ ಅವಕಾಶವನ್ನು ಕಲ್ಪಿಸಿಕೊಳ್ಳದೇ ಹೋಗಿರುವ ಕರ್ನಾಟಕದ ರಾಜಕಾರಣ; ಯಾವುದೇ ಪಕ್ಷ ಅಥವಾ ಪಕ್ಷಗಳ ಸರ್ಕಾರವಿದ್ದಾಗಲೂ, ಅಖಿಲ ಭಾರತ ರಾಜಕಾರಣದ ವಿಧೇಯ ಬಾಲಕನಂತೆ ವರ್ತಿಸುತ್ತಾ ಬರುತ್ತಿರುವುದನ್ನು ಕರ್ನಾಟಕದ ೫೦ ವರ್ಷಗಳ ಇತಿಹಾಸದುದ್ದಕ್ಕೂ ನಾವು ಕಾಣಬಹುದು. ಇದರ ಹಿಂದೆ ಕನ್ನಡ ರಾಜ್ಯದ ರಾಜಕಾರಣವು ಟಿಪ್ಪು ಸುಲ್ತಾನ್-ಬ್ರಿಟಿಷ್ ಸರ್ಕಾರದ ಮುಖಾಮುಖಿಯಲ್ಲಿ ಛಿದ್ರ ವಿಚ್ಛಿದ್ರವಾಗಿ ಹೋದ ಐತಿಹಾಸಿಕ ದುರಂತವೂ ಇರಬಹುದು. ಅದರ ಜೊತೆಗೆ, ಕರ್ನಾಟಕ ಏಕೀಕರಣ ಚಳುವಳಿಯು ಕನ್ನಡದ ಜನತೆಯನ್ನು ತನ್ನದೇ ಸಾಂಸ್ಕೃತಿಕ ಪ್ರಜ್ಞೆಯ ಹುರುಪಿನಲ್ಲಿ ಒಗ್ಗೂಡಿಸಿದಂತೆ, ತನ್ನದೇ ರಾಜಕೀಯ ಪ್ರಜ್ಞೆಯ ಎಚ್ಚರದಲ್ಲಿ ಒಗ್ಗೂಡಿಸುವಲ್ಲಿ ವಿಫಲವಾಗುತ್ತ ಬಂದಿರುವ ವರ್ತಮಾನದ ಕನ್ನಡ ಚಳುವಳಿಯ ಬೇಜವಾಬ್ದಾರಿತನವೂ ಇದೆಯೆಂಬುದನ್ನೂ ನಾವು ಮರೆಯಬಾರದು.

ಇಂದು ನಾವು ಕಾವೇರಿ ಚಳುವಳಿಯನ್ನು ಯಾರ ವಿರುದ್ಧ, ಯಾರ ಗಮನ ಸೆಳೆಯಲು ಮಾಡುತ್ತಿದ್ದೇವೆ? ಕಾವೇರಿ ನ್ಯಾಯಾಧಿಕರಣವೇನೂ ಕೇಂದ್ರದ ಅಂಗ ಸಂಸ್ಥೆಯಲ್ಲ. ಅದೊಂದು ಸ್ವಾಯತ್ತ ಸ್ವತಂತ್ರ ನ್ಯಾಯ ಪ್ರಾಧಿಕಾರ. ಅದು ರಚಿತವಾದದ್ದೂ ಸಂಬಂಧಪಟ್ಟ ರಾಜ್ಯಗಳ ನಡುವೆ ಎಲ್ಲ ಸಂಧಾನ ಪ್ರಯತ್ನಗಳು ಮುರಿದು ಬಿದ್ದಾಗ. ಅಲ್ಲಿ, ಈ ಎಲ್ಲ ರಾಜ್ಯಗಳು ತಮ್ಮ ನ್ಯಾಯೋಚಿತ ಪಾಲನ್ನು ಪ್ರತಿಪಾದಿಸುವ ಎಲ್ಲ ಅವಕಾಶಗಳನ್ನು ಹೊಂದಿದ್ದವು. ೧೯೨೪ರಲ್ಲಿ, ಮೈಸೂರು ಸಂಸ್ಥಾನದ ಮೇಲೆ ಪರೋಕ್ಷ ಅಧಿಕಾರ ಹೊಂದಿದ್ದ ಬ್ರಿಟಿಷ್ ಸರ್ಕಾರ, ತಾನು ನೇರ ಅಧಿಕಾರ ಹೊಂದಿದ್ದ ಮದ್ರಾಸ್ ಪ್ರಾಂತ್ಯಕ್ಕೆ ಹೆಚ್ಚು ಕಾವೇರಿ ನೀರನ್ನು ಒದಗಿಸುವ ಒಪ್ಪಂದವನ್ನು ನಮ್ಮ ಮೇಲೆ ಹೇರಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ ಸ್ವಾತಂತ್ರ್ಯ ಪೂರ್ವದ ಆ ಒಪ್ಪಂದವನ್ನು ಭಾರತದ ಹೊಸ ಸಂವಿಧಾನದಡಿಯಲ್ಲಿಯೂ ೧೯೭೪ರ ಇಕ್ಕಟ್ಟಿನ ಸಂದರ್ಭದವರೆಗೂ, ಅದನ್ನು ಪ್ರಶ್ನಿಸಲಾಗದ ಕರ್ನಾಟಕದ ರಾಜಕೀಯ ಇಚ್ಛಾಶಕ್ತಿಯ ದಟ್ಟ ದಾರಿದ್ರ್ಯದ ಬಗ್ಗೆ ಏನು ಹೇಳೋಣ? ಹೆಚ್ಚು ನೀರು ಕೇಳುವುದಕ್ಕೆ ಬೆಂಬಲವಾಗಿ ಅದಕ್ಕೆ ತಕ್ಕುನಾದ ಹೆಚ್ಚುವರಿ ನೀರಾವರಿ ಪ್ರದೇಶಗಳನ್ನು ಅಭಿವೃದ್ಧಿಪಡಿಸಲಾಗದೆ ಹೋದ ನಮ್ಮ ಸರ್ಕಾರಗಳ ದೂರದೃಷ್ಟಿಯ ಅಭಾವದ ಬಗ್ಗೆ ವೀರಕನ್ನಡಿಗರಾದ ನಾವೇಕೆ ಈವರೆಗೆ ಬಾಯಿ ಮುಚ್ಚಿ ಕುಳಿತಿದ್ದೆವು? ತುರ್ತಾಗಿ ಉತ್ತರಿಸಬೇಕಾದ ಪ್ರಶ್ನೆಗಳಿವು.

೧೯೯೧ರ ಮಧ್ಯಂತರ ತೀರ್ಪೇ, ನಾವು ನಮ್ಮ ನ್ಯಾಯೋಚಿತ ಪಾಲನ್ನು ಕೇಳುವಲ್ಲಿ ಹಲವಾರು ನೆಲೆಗಳಲ್ಲಿ ಎಡವುತ್ತಿದ್ದೇವೆ-ತುಕ್ಕು ಹಿಡಿದು ಬದ್ಧತೆ ಕಳೆದುಕೊಂಡಿರುವ ಅಧಿಕಾರಶಾಹಿ, ಅದರ ಜೊತೆ ಶಾಮೀಲಾಗಿರುವ ಭ್ರಷ್ಟ ರಾಜಕೀಯ ವ್ಯವಸ್ಥೆ, ಇದನ್ನು ಸಹಿಸಿಕೊಳ್ಳುತ್ತಾ ಬಂದಿರುವ ಕನ್ನಡ ಜನತೆಯ ಅಭಿಮಾನ ಶೂನ್ಯತೆ - ಎಂಬುದರ ಎಚ್ಚರಿಕೆಯ ಗಂಟೆಯಾಗಬೇಕಿತ್ತು. ಆದರೆ ಈಗ ಹೊರ ಬಿದ್ದಿರುವ ಅಂತಿಮ ತೀರ್ಪು, ಹೆಚ್ಚು ಕಡಿಮೆ ಆ ಮಧ್ಯಂತರ ತೀರ್ಪಿನ ಮುಂದುವರಿಕೆ ಹಾಗೂ ಅಧಿಕೃತ ಆವೃತ್ತಿಯಾಗಿದೆ ಎಂಬುದು ಏನನ್ನು ಸೂಚಿಸುತ್ತದೆ? ಕರ್ನಾಟಕ ಸರ್ಕಾರ ೧೫ ವರ್ಷಗಳ ಅವಧಿಯಲ್ಲಿ ನ್ಯಾಯಾಧಿಕರಣದ

ಮುಂದೆ ತನ್ನ ನ್ಯಾಯೋಚಿತ ಪಾಲನ್ನು ಸೂಕ್ತ ದಾಖಲೆಗಳು, ಅಂಕಿ-ಅಂಶಗಳು ಹಾಗೂ ತನ್ನ ಮುಂದಿನ ನೀರಾವರಿ ಯೋಜನೆಗಳ ಕಾರ್ಯ ಸಾಧ್ಯತೆಯ ವರದಿಗಳ ಮೂಲಕ ಸಮರ್ಥವಾಗಿ ಪ್ರತಿಪಾದಿಸುವಲ್ಲಿ ಸೋತಿದೆ ಎಂದಷ್ಟೇ ಇದು ಸೂಚಿಸುತ್ತದೆ ಅಲ್ಲವೇ? ಇದಕ್ಕೆ ಈವರೆಗೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ? ಕರ್ನಾಟಕದ ಪರ ವಾದಿಸಲು ಕರ್ನಾಟಕದ ಒಬ್ಬ ವಕೀಲನೂ ಸಮರ್ಥನಿಲ್ಲ ಎಂದರೆ ನಾವು ಯಾವ ಸ್ಥಿತಿ ಮುಟ್ಟಿದ್ದೇವೆ! ನಮಗೆ ಉದ್ದೇಶಪೂರ್ವಕ ಅನ್ಯಾಯ ಮಾಡಲು, ನ್ಯಾಯಾಧಿಕರಣದ ಸದಸ್ಯರೇನು ತಮಿಳ್ನಾಡಿನ ಅಳಿಯ - ಭಾವಂದಿರೇನೂ ಅಲ್ಲವಲ್ಲ? ತಮಿಳುನಾಡಿನ ರಾಜಕಾರಣಿಗಳು ಕಾವೇರಿ ನ್ಯಾಯಮಂಡಳಿ ಮೇಲೆ ಪ್ರಭಾವವನ್ನೋ, ಒತ್ತಡವನ್ನೋ ತಂದಿದ್ದಾರೆಂದು ಇಂದು ಜನ ಆಡಿಕೊಳ್ಳುತ್ತಿದ್ದಾರೆ. ಇದು ತಮಿಳುನಾಡಿನ ರಾಜಕಾರಣಿಗಳ ಬದ್ಧತೆಗಿಂತ ಹೆಚ್ಚಾಗಿ ಕರ್ನಾಟಕದ ರಾಜಕಾರಣಿಗಳ ಬೇಜವಾಬ್ದಾರಿತನವನ್ನು ಪ್ರತಿಬಿಂಬಿಸುತ್ತದೆ ಎಂಬ ಪರಿವೆಯಾದರೂ ನಮ್ಮ ರಾಜಕಾರಣಿಗಳಿಗೆ ಬೇಡವೇ? ಇದು ಮತ್ತೆ ಕರ್ನಾಟಕದ ಈವರೆಗಿನ ರಾಜಕೀಯ ನಾಯಕತ್ವದ ವೈಫಲ್ಯವಲ್ಲವೇ?

ಅಂದರೆ ಕರ್ನಾಟಕಕ್ಕೆ ಈವರೆಗೆ ತನ್ನದೆನ್ನಿಸುವ ರಾಜಕೀಯ ನಾಯಕತ್ವ ದೊರೆತೇ ಇಲ್ಲ ಎಂದರ್ಥ. ಅಂತಹ ನಾಯಕತ್ವ ಕಳೆದ ೫೦ ವರ್ಷಗಳಲ್ಲಿ ತಮಿಳ್ನಾಡಿಗೆ ದೊರಕಿರುವುದರಿಂದಲೇ ಅದು ಭಾರತದ ಒಕ್ಕೂಟದ ಚೌಕಟ್ಟಿನಲ್ಲೂ ಏನನ್ನೂ ಕಳೆದುಕೊಳ್ಳದೆ ತನ್ನ ಭಾಷೆ, ಸಂಸ್ಕೃತಿ, ಅಭಿವೃದ್ಧಿ ಈ ಮೂರು ವಿಷಯಗಳಲ್ಲಿ ಯಾವ ರಾಜಿಗೂ ಎಡೆಗೊಡದೆ ತನಗೆ ದಕ್ಕಬೇಕಾದ್ದನ್ನು ದಕ್ಕಿಸಿಕೊಂಡು, ತನ್ನ ಆತ್ಮಗೌರವವನ್ನು ಕಾಪಾಡಿಕೊಂಡು ಬಂದಿದೆ. ಕರ್ನಾಟಕದಲ್ಲಿಯಂತೆಯೇ ತಮಿಳ್ನಾಡಿನಲ್ಲಿಯೂ ಈ ೫೦ ವರ್ಷಗಳಲ್ಲಿ ಅನೇಕ ರಾಜಕೀಯ ಸ್ಥಿತ್ಯಂತರಗಳು ಆಗಿ ಹೋಗಿ ವಿವಿಧ ರಾಜಕೀಯ ದೃಷ್ಟಿಕೋನಗಳ ಪಕ್ಷಗಳು ಸರ್ಕಾರ ನಡೆಸಿವೆಯಾದರೂ, ಅವೆಲ್ಲವೂ ತಮಿಳರ ಸರ್ಕಾರಗಳೆ ಆಗಿದ್ದುದರಿಂದ ಇದು ಸಾಧ್ಯವಾಗಿದೆ ಎಂಬುದನ್ನು ನಾವು ಗಮನಿಸಬೇಕು. ಅಲ್ಲದೆ, ಈ ಸಾಧ್ಯತೆಯ ಹಿಂದೆ ತಮಿಳು ಕುಲ ಪ್ರಜ್ಞೆ ಮೂಲ ಸ್ಫೂರ್ತಿಯಾಗಿ ಕೆಲಸ ಮಾಡುತ್ತಿದೆ; ಅದೇ ತಮಿಳ್ನಾಡಿನ ಹಿತವನ್ನು ಎಲ್ಲ ರಂಗಗಳಲ್ಲೂ ಕಾಪಾಡುತ್ತಿರುವ ಶಕ್ತಿಯಾಗಿದೆ ಎಂಬುದೇ ಇಲ್ಲಿನ ಆಳದ ಸತ್ಯವಾಗಿದೆ. ಆದರೆ ಈವರೆಗಿನ ಕರ್ನಾಟಕ ಸರ್ಕಾರಗಳು ಕನ್ನಡಿಗರ ಸರ್ಕಾರಗಳಾಗಿರದೆ, ಭಾರತ ಒಕ್ಕೂಟದಡಿಯ ಒಂದು ಸಾಮಂತ ಸರ್ಕಾರದಂತೆ ವರ್ತಿಸುವುದರಲ್ಲೇ ತನ್ನ ಧನ್ಯತೆಯನ್ನು ಕಂಡುಕೊಳ್ಳುತ್ತಿರುವುದೇ, ಕರ್ನಾಟಕದ ಜನತೆಯ ಪಾಲಿಗೆ ಶಾಪವಾಗಿದೆ. ನಿಜಲಿಂಗಪ್ಪನವರಿಂದ ಹಿಡಿದು ದೇವೇಗೌಡರ ಕಾಲದವರೆಗೆ ಈ ಶಾಪ ವಿಸ್ತರಿಸುತ್ತ ಬಂದಿದೆ.

ತಮಿಳು ಸಮಾಜಕ್ಕೆ ಒಂದು ಸತತವಾದ ಹಾಗೂ ಸ್ಥಿರವಾದ ಸಾಂಸ್ಕೃತಿಕ ಸ್ಮೃತಿ ಇರುವುದು ಅದರ ಶಕ್ತಿಯಾಗಿದ್ದರೆ, ಕನ್ನಡ ಸಮಾಜ ಒಂದು ಶತಮಾನಕ್ಕೂ ಹಿಂದೆ ಅಂತಿಮ ಮೈಸೂರು ಯುದ್ಧದಲ್ಲಿ ಅದನ್ನು ಕಳೆದುಕೊಂಡದ್ದು ಅದರ ದೌರ್ಬಲ್ಯವಾಗಿ ಇಂದಿಗೂ ಕಾಡುತ್ತಿದೆ. ಆದರೆ ಕಳೆದು ಹೋಗಿರುವ ಈ ಕನ್ನಡ ಕುಲ ಪ್ರಜ್ಞೆಯನ್ನು ಪುನರ್‌ಸಂಘಟಿಸುವ ರೀತಿಯಲ್ಲಿ

ಕರ್ನಾಟಕ ಏಕೀಕರಣ ಚಳುವಳಿ ನಂತರದ ವರ್ಷಗಳಲ್ಲಿ ಕನ್ನಡ ಚಳುವಳಿಯಾಗಿ ಬೆಳೆಯದೇ ಇರುವುದು, ಈ ದೌರ್ಬಲ್ಯ ಒಂದು ಮಾನಸಿಕ ರೋಗವಾಗಿ ಮಾರ್ಪಾಟಾಗಿ ಕನ್ನಡಿಗನ ಅಸಹಾಯಕತೆಗೆ ಕಾರಣವಾಗಿದೆ. ಬರೀ ಭಾವಾವೇಶದ, ಪ್ರದರ್ಶನ ವ್ಯಸನದಿಂದ ಕೂಡಿದ ಈ ಚಳುವಳಿ ಬೆಂಗಳೂರು ಕೇಂದ್ರಿತವಾಗಿ, ಅಲ್ಲಿನ ಕೆಲವರ ನೇತೃತ್ವದಲ್ಲಿ ಒಂದು ದಂಧೆಯಂತೆ ಕಾಣತೊಡಗಿ ಜನಸಾಮಾನ್ಯರ ಗಂಭೀರ ಗಮನವನ್ನು ಸೆಳೆಯದೇ ಹೋಗಿದೆ. ಆದುದರಿಂದ ಕಳೆದುಹೋಗಿರುವ ಕನ್ನಡಿಗರ 'ಆತ್ಮ'ವನ್ನು ಪುನಃಸಂಸ್ಥಾಪಿಸಬಲ್ಲ ಚಳುವಳಿ ಮಾತ್ರ ಈ ಶಾಪವನ್ನು ಪರಿಹರಿಸಬಲ್ಲದು. ಇದು ಸಾಧ್ಯವಾಗುವುದು ಕರ್ನಾಟಕದ ರಾಜಕಾರಣ ತನ್ನ ಶಕ್ತಿ–ವಿಶಿಷ್ಟತೆಯನ್ನು ಒಕ್ಕೂಟದ ರಾಜಕಾರಣದಲ್ಲಿ ತೋರಿಸಬಲ್ಲದಾದಾಗ ಮಾತ್ರ. ಇಂತಹ ಶಕ್ತಿ ಸಂಚಯ ಮಾಡಿಕೊಂಡ ತಮಿಳು ನಾಡು, ಬಂಗಾಳ ಮುಂತಾದ ರಾಜ್ಯಗಳು ಮಾತ್ರ ಭಾರತದ ಒಕ್ಕೂಟದಲ್ಲಿ ಆತ್ಮವಿಶ್ವಾಸದಿಂದ ಮುನ್ನಡೆದಿವೆ.

ಕರ್ನಾಟಕದಂತಹ ವಿಧೇಯ ರಾಜ್ಯಗಳು ಅಳುಬರುಕನಂತೆ ಒಮ್ಮೆ ಯಾರಿಗೂ ಕೇಳದಂತೆ ಅಳುತ್ತ, ಮತ್ತೊಮ್ಮೆ ಎಲ್ಲರೂ ಕೇಳಿಸಿಕೊಂಡು ಸಹಾನುಭೂತಿ ತೋರಲೆಂಬಂತೆ ಚೀರುತ್ತಾ ಕಾಲ ತಳ್ಳುತ್ತಿವೆ. ಹೀಗಾಗಿಯೇ ನಮ್ಮ ಮುಖ್ಯಮಂತ್ರಿಗಳು ಕಾವೇರಿ ತೀರ್ಪಿನ ಬಗ್ಗೆ ಪ್ರಧಾನಿ ಬಳಿ ದೂರು ದುಮ್ಮಾನ ಹೇಳಿಕೊಳ್ಳಲು ಹೋಗಿ, ಕೊನೆಗೆ ಏನೂ ಹೇಳಲಾಗದೆ ಬೇರೇನೋ ಕಷ್ಟ ಸುಖ ಮಾತಾಡಿಕೊಂಡು ಬರುವಂತಾಗಿರುವುದು. ಜಾಗತಿಕ ರಾಜಕಾರಣದ ಉತ್ಪನ್ನದಂತಿರುವ ಆ ಪ್ರಧಾನಿಯೋ, ಕಾವೇರಿ ಗಲಾಟೆಯಿಂದ ಐ.ಟಿ. ಉದ್ಯಮಕ್ಕೆ ತೊಂದರೆಯಾಗಿಲ್ಲ ತಾನೇ ಎಂದು ಕೇಳುವ ಮೂಲಕ ಇಡೀ ರಾಜ್ಯದ ಕ್ಷೇಮ ಸಮಾಚಾರ ವಿಚಾರಿಸಿಕೊಂಡರಂತೆ! ಇದು ಕನ್ನಡಿಗರ ಕರ್ಮ ಕಥೆ...

ಕರ್ನಾಟಕದ ರಾಜಕಾರಣಿಗಳೆಲ್ಲರಿಗೂ ಭಾರತದ ರಾಜಕಾರಣದ ಭಯ! ಬುಡ ಭದ್ರವಿಲ್ಲದವರ ಭಯವಿದು. ಇಲ್ಲಿ ಸಂದರೆ ಅಲ್ಲಿಯೂ ಸಲ್ಲಬಲ್ಲೆವು ಎಂಬುದಕ್ಕೆ ಬದಲಾಗಿ, ಅಲ್ಲಿ ಸಂದರೆ ಮಾತ್ರ ಇಲ್ಲಿ ಸಲ್ಲುವುದು ಎಂಬ ತಲೆ ಕೆಳಗಾದ ರಾಜಕೀಯ ಗ್ರಹಿಕೆ ಇವರದು! ಕುಲಪ್ರಜ್ಞೆ ಇಲ್ಲದ ಜನ ತಮ್ಮ ಮತದಾರ ಕುಲದ ಬಗೆಗೂ ಗೌರವ ಇಟ್ಟುಕೊಳ್ಳಲಾರರೇನೋ... ಹಾಗಾಗಿಯೇ, ಪಕ್ಷ ಬೇಧವಿಲ್ಲದಂತೆ ಕರ್ನಾಟಕದ ಇಡೀ ರಾಜಕೀಯ ನಾಯಕತ್ವವು, ಕಾವೇರಿ ತೀರ್ಪಿನ ವಿವಾದವನ್ನು ಬೀದಿ ಕಾಳಗದ ನಾಯಕರಿಗೆ ಒಪ್ಪಿಸಿಬಿಟ್ಟು, ತಂತಮ್ಮ ಪಕ್ಷಗಳ ರಾಜಕೀಯ ಲಾಭ-ನಷ್ಟಗಳ ಲೆಕ್ಕಾಚಾರದಲ್ಲಿ ತೊಡಗಿ; ತಂತಮ್ಮ ನಿರ್ಣಾಯಕ ಅಭಿಪ್ರಾಯಗಳನ್ನು ಇನ್ನೂ ಕಾದಿರಿಸಿಕೊಂಡಿದ್ದಾರೆ! ನಮ್ಮ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ನೀರಾವರಿ ಮಂತ್ರಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಸರ್ಕಾರದ ಮಹಾಪೋಷಕರೂ, ನೀರಾವರಿ ರಾಜಕಾರಣದ ಅಧ್ವರ್ಯುಗಳೂ ಆದ ದೇವೇಗೌಡರೂ ಸೇರಿದಂತೆ, ಈ ತೀರ್ಪಿನ ಬಗ್ಗೆ ಹದಿನೈದು ದಿನ ಕಳೆದರೂ ತೀರ್ಪಿನ ಸಾವಿರ ಪುಟಗಳ ವಿಸ್ತಾರದ ನೆಪವೊಡ್ಡಿ ಸರ್ಕಾರದ ಪರವಾಗಿ ಯಾರೊಬ್ಬರೂ ಒಂದು ಅಭಿಪ್ರಾಯವನ್ನೋ, ಅನುಸರಿಸಬೇಕಾದ ದಾರಿಯ ದಿಕ್ಕನ್ನೋ ಸೂಚಿಸಲಾಗದಷ್ಟು ಗೊಂದಲದಲ್ಲಿದ್ದಾರೆಂದರೆ, ಈ ನಾಯಕತ್ವಕ್ಕೆ ರಾಜ್ಯದ ಜನತೆ

ಕುರಿತ ಬದ್ಧತೆಗಿಂತ ಹೆಚ್ಚಾಗಿ ಬೇರೇನೋ ಬದ್ಧತೆ ಇದೆಯೆಂದೇ ಅರ್ಥ. ಈ ಬೇರೇನೋ ಬದ್ಧತೆ ಇನ್ನೇನೂ ಆಗಿರದೆ ಕುರ್ಚಿ ಭದ್ರತೆ ಮಾತ್ರವಾಗಿದೆ. ಇದು ಇಡೀ ಕರ್ನಾಟಕದ ರಾಜಕಾರಣವನ್ನು ಬಾಧಿಸುತ್ತಿರುವ ವಾಸಿಯಾಗದ ರೋಗವಾಗಿದೆ.

ಜನ ಹೀಗೆ ಏನೋ ಅಂದುಕೊಳ್ಳುತ್ತಾ, ಊಹಿಸಿಕೊಳ್ಳುತ್ತಾ, ಕೋಪಗೊಳ್ಳುತ್ತಾ, ಅವರಿವರ ಪ್ರತಿಕೃತಿಗಳನ್ನು ಸುಡುತ್ತಾ ಎಷ್ಟು ದಿನ ಕಾಲ ಕಳೆಯಬೇಕು? ಕೊನೆಗೆ ನಮ್ಮ ಸರ್ಕಾರವೇ ಈ ತೀರ್ಪನ್ನು ಒಕ್ಕೂಟ ವ್ಯವಸ್ಥೆಯ ನಿರ್ಬಂಧಗಳಿಂದಾಗಿ ಸಣ್ಣಪುಟ್ಟ ಹೊಂದಾಣಿಕೆಗಳೊಂದಿಗೆ ಒಪ್ಪಬೇಕಾದ ಸಂದರ್ಭ ಬಂದರೆ (ಅಂದರೆ ಕಾರ್ನಾಡರ ಅಭಿಪ್ರಾಯಕ್ಕೆ ಮನ್ನಣೆ ಸಿಗುವಂತಾದರೆ)* ವೀರಾವೇಶದಿಂದ ಚಳುವಳಿ ನಡೆಸುತ್ತಿರುವ ರಾಜ್ಯದ ಜನತೆಗೆ ಆಗುವ ಮುಖ ಭಂಗಕ್ಕೆ ಯಾರು ಹೊಣೆ? ಕೃಷ್ಣ ಕಣಿವೆ ನೀರಿನ ವಿವಾದದ ತೀರ್ಪಿನ ಬಗ್ಗೆ ಮೇಲ್ಮನವಿ ಸಲ್ಲಿಸಿ ಈವರೆಗೂ ನಾವೇನೂ ಪಡೆಯಲಾಗಿಲ್ಲ ಎಂಬ ಅರಿವು ನಮಗಿದೆಯೇ? ಸುಪ್ರೀಂ ಕೋರ್ಟ್ ಈಗಾಗಲೇ ನ್ಯಾಯಾಧಿಕರಣದ ಕಾರ್ಯಾಚರಣೆಗೆ ಸಂಬಂಧಿಸಿದಂತೆ ತಾನು ಹಸ್ತಕ್ಷೇಪ ಮಾಡಬಯಸುವುದಿಲ್ಲ ಎಂದು ಸ್ಪಷ್ಟಪಡಿಸಿರುವುದು ನಮಗೆ ಗೊತ್ತಿದೆಯಲ್ಲವೇ?

ಪರಿಸ್ಥಿತಿ ಇಷ್ಟು ಕಷ್ಟಕರವಿರುವಾಗ, ಕರ್ನಾಟಕದ ಮುಂದೆ ಇರುವ ಸದ್ಯದ ಆಯ್ಕೆಗಳು ಇವು ಮಾತ್ರ :

೧. ಈ ತೀರ್ಪಿನ ದುರ್ಬಲ ಅಂಶಗಳನ್ನು ಗುರುತಿಸಿ, ಅವುಗಳ ಆಧಾರದ ಮೇಲೆ ಮೇಲ್ಮನವಿ ಸಲ್ಲಿಸುವುದು ಮತ್ತು ಇದಕ್ಕೆ ಸಂಬಂಧಪಟ್ಟ ಅಧಿಕಾರಶಾಹಿಯನ್ನು ಜವಾಬ್ದಾರರನ್ನಾಗಿ ಮಾಡಿ, ಹೊಸ ಮಾಹಿತಿ ಹಾಗೂ ಶ್ರದ್ಧೆಯೊಂದಿಗೆ ವಾದ ಮಂಡಿಸುವ ಛಾತಿ ತೋರುವುದು.

೨. ಅಂತಿಮ ತೀರ್ಪಿನಲ್ಲಿ ಅವಕಾಶ ಮಾಡಿಕೊಡಲಾಗಿರುವ ಹೆಚ್ಚಿನ ನೀರಿನ ಪಾಲು ಹಾಗೂ ಹೆಚ್ಚುವರಿ ನೀರಾವರಿ ಪ್ರದೇಶದ ಅಭಿವೃದ್ಧಿಯ ಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವ ರೀತಿಯಲ್ಲಿ ನಮ್ಮ ನೀರಾವರಿ ಪದ್ಧತಿ ಹಾಗೂ ಬೆಳೆ ಪದ್ಧತಿಗಳನ್ನು ವ್ಯವಸ್ಥಿತವಾಗಿ ಪರಿಷ್ಕರಿಸುವುದು. ಉದಾ: ಸಾಧ್ಯವಿದ್ದೆಡೆಯಲ್ಲಿ ಹನಿ ನೀರಾವರಿಯನ್ನು ಸೂಕ್ತ ಸೌಲಭ್ಯಗಳ ಒದಗಿಸುವಿಕೆ ಮೂಲಕ ಕಡ್ಡಾಯಗೊಳಿಸುವುದು.

೩. ತಮಿಳುನಾಡನ್ನು ಪ್ರತಿಸ್ಪರ್ಧಿಯನ್ನಾಗಿ ನೋಡದೆ, ಪ್ರಾದೇಶಿಕ ರಾಜಕಾರಣದ ಯಶಸ್ವಿ ಮಾದರಿ ಎಂಬಂತೆ ಪರಿಗಣಿಸಿ, ಸೋದರಭಾವದಿಂದ ಎರಡೂ ರಾಜ್ಯಗಳ ರೈತ ಬಾಂಧವರ ಮಧ್ಯಸ್ಥಿಕೆಯಲ್ಲಿ ಸಂಧಾನ ಆರಂಭಿಸುವುದು.

ಇದು ಕಾವೇರಿ ಸಮಸ್ಯೆಗಷ್ಟೇ ಪರಿಹಾರ ದಾರಿ ತೆರೆಯಬಹುದು. ಆದರೆ ಕರ್ನಾಟಕ, ನೆಲ, ಜಲ, ಭಾಷೆ, ಸಂಸ್ಕೃತಿ ಮತ್ತು ಅಭಿವೃದ್ಧಿ ಆದ್ಯತೆಗಳಿಗೆ ಸಂಬಂಧಿಸಿದಂತೆ, ಇತ್ತೀಚಿನ

* ಖ್ಯಾತ ನಾಟಕಕಾರ ಗಿರೀಶ್ ಕಾರ್ನಾಡರು ಕಾವೇರಿ ನ್ಯಾಯಾಧಿಕರಣದ ಅಂತಿಮ ತೀರ್ಪನ್ನು ಎಲ್ಲ ರಾಜ್ಯಗಳೂ ಗೌರವಿಸಿ ಒಪ್ಪಿಕೊಳ್ಳಬೇಕೆಂದು ಹೇಳಿ ಕನ್ನಡ ಚಳುವಳಿಕಾರರ ಕೆಂಗಣ್ಣಿಗೆ ಗುರಿಯಾಗಿದ್ದರು!

ವರ್ಷಗಳಲ್ಲಿ ಪದೇ ಪದೇ ಇಂತಹ ಸಂದಿಗ್ಧಗಳಿಗೆ ಸಿಕ್ಕಿ ಹಾಕಿಕೊಳ್ಳುತ್ತಿರುವುದನ್ನು ನಾವು ಗಮನಿಸದೇ ಇರಲಾಗದು. ಇದಕ್ಕೇನು ಕಾರಣವೆಂದು ಕನ್ನಡ ಜನತೆ ಆಳವಾಗಿ ಯೋಚಿಸಿ ಪರಿಹಾರದ ಕಡೆ ಕ್ಷಿಪ್ರ ಗಮನ ಹರಿಸಬೇಕಾಗಿದೆ. ಇಲ್ಲದೇ ಹೋದಲ್ಲಿ ಈಗಾಗಲೇ ಅನ್ಯ ಸಂಸ್ಕೃತಿಗಳ ದುರಾಕ್ರಮಣಕ್ಕೆ ಈಡಾಗಿ ಆತ್ಮದ ಜೊತೆಗೆ ತನ್ನ ಭೌತಿಕ ಚಹರೆಯನ್ನು ಕಳೆದುಕೊಳ್ಳುತ್ತಿರುವ ಕರ್ನಾಟಕ, ತನ್ನ ರಾಜಕಾರಣವನ್ನು ಇತರರಿಗೊಪ್ಪಿಸುವ ಕಾಲ ದೂರವಿಲ್ಲ. ಎಲ್ಲವೂ ಮಾರುಕಟ್ಟೆಯಾಗಿರುವ ಈ ದಿನಗಳಲ್ಲಿ ಕುಲಪ್ರಜ್ಞೆ ಇಲ್ಲದ ರಾಜಕಾರಣಿಗಳನ್ನು ಕೊಳ್ಳುವುದು ಅತಿ ಸುಲಭ. ಇದನ್ನರಿತ ಐ.ಟಿ., ಬಿ.ಟಿ.ಯೂ ಸೇರಿದಂತೆ ವಿವಿಧ ರಂಗಗಳ ಮಾಫಿಯಾಗಳು ಈಗಾಗಲೇ ಬೆಂಗಳೂರಿನಲ್ಲಿ ನೆಲೆಯೂರಿ, ರಾಜ್ಯ ರಾಜಕಾರಣವನ್ನು ನಿಯಂತ್ರಿಸುವ ನಿರಂತರ ಪ್ರಯತ್ನ ಮಾಡುತ್ತಿವೆ. ಹೀಗಿರುವಾಗ ಕನ್ನಡ, ಕರ್ನಾಟಕವನ್ನು ಉಳಿಸಿಕೊಳ್ಳುವ, ಅಂದರೆ ಕನ್ನಡ ಜನರ ಹಿತ ಕಾಪಾಡುವ ಏಕೈಕ ದಾರಿಯೆಂದರೆ ಕನ್ನಡ ಕುಲ ಪ್ರಜ್ಞೆಯನ್ನಾಧರಿಸಿದ ರಾಜಕಾರಣವನ್ನು ರೂಪಿಸುವುದೇ ಆಗಿದೆ. ಇದು ಮಾತ್ರ ಸದ್ಯದ ನರಸತ್ತ ಕನ್ನಡದ ಈಗಿನ ರಾಜಕೀಯ ನಾಯಕತ್ವವನ್ನು ಬುಡಮೇಲುಗೊಳಿಸಬಲ್ಲುದು. ಇದು ಮಾತ್ರ ಅಂತರರಾಷ್ಟ್ರೀಯ ಮಾಫಿಯಾಗಳ ಹುನ್ನಾರಗಳ ಜೊತೆ ಜೊತೆಗೆ ಭಾರತದ ಒಕ್ಕೂಟ ವ್ಯವಸ್ಥೆಯ ಒತ್ತಡಗಳನ್ನು ನಿವಾರಿಸಿಕೊಳ್ಳುವ ಆಂತರಿಕ ಶಕ್ತಿ ಹೊಂದಿರಬಲ್ಲದು–ತಮಿಳುನಾಡಿನ ರಾಜಕಾರಣದ ಹಾಗೆ. ಕನ್ನಡಿಗರು ಯೋಚಿಸಬೇಕಾದ ಕಾಲವೀಗ ಬಂದಿದೆ. ಇದು ಸುಲಭದ ಕೆಲಸವಲ್ಲ. ಆದರೆ ಈ ಕೆಲಸಕ್ಕೆ ಕೈ ಹಾಕದೆ ಕನ್ನಡಿಗರಿಗೆ ಉಳಿಗಾಲವಿಲ್ಲ.

(ನಮ್ಮ ನಾಡು ಫೆಬ್ರವರಿ ೨೦, ೨೦೦೭)

●

ಕನ್ನಡ ಕಟ್ಟುವ ಕಾಯಕ

ಕನ್ನಡವನ್ನು ಕೆಡುವವ ಕಾರ್ಯಕ್ರಮ ಆರಂಭವಾಗಿರುವ ಈ ಹೊತ್ತಿನಲ್ಲಿ ಕನ್ನಡವನ್ನು ಕಟ್ಟುವ ಕಾಯಕದ ಬಗ್ಗೆ ಬರೆಯುವುದು ಮುಜುಗರದ ಕೆಲಸವಷ್ಟೇ ಅಲ್ಲ, ಅಸಂಬದ್ಧ ಕೆಲಸವೂ ಅನಿಸುತ್ತದೆ. ಆದರೆ ಕನ್ನಡ ಸಂಸ್ಕೃತಿ ಚರಿತ್ರೆ ಇಂತಹ ಹಲವಾರು ಕಾಲಘಟ್ಟಗಳನ್ನು ಹಾದು ಬಂದಿರುವುದರಿಂದ ಕನ್ನಡಕ್ಕೆ ಇಂದು ಒದಗಿರುವ ಬಿಕ್ಕಟ್ಟನ್ನು ಆತ್ಯಂತಿಕವೆಂದೇನೂ ತಿಳಿಯದೆ, ಅದನ್ನು ಎದುರಿಸುವ ಹಾಗೂ ಪರಿಹರಿಸುವ ಬಗೆಗಳ ಬಗ್ಗೆ ಯೋಚಿಸುವುದರ ಮೂಲಕ ಈ ಮುಜುಗರ ಹಾಗೂ ಅಸಂಬದ್ಧತೆಯ ಅನಿಸಿಕೆಗಳನ್ನು ಮೀರಬೇಕಾಗಿದೆ. ಕನ್ನಡಕ್ಕೆ ಇಂದು ಒದಗಿರುವ ಬಿಕ್ಕಟ್ಟನ್ನು ವಿವರಿಸುವ ಅಗತ್ಯವಿಲ್ಲದಷ್ಟು, ಅದು ಎದ್ದು ಕಾಣುವಂತಿದೆ. ಜಾಗತೀಕರಣದ ಭರಾಟೆಯಲ್ಲಿ ಸ್ಥಳೀಯವಾದದ್ದೆಲ್ಲವೂ ಬೆಲೆ ಕಳೆದುಕೊಳ್ಳುತ್ತಿದ್ದಂತೆ, ಕನ್ನಡವೂ ಒಂದು ನಿರುಪಯೋಗಿಯಾದ ಗ್ರಾಹಕ ವಸ್ತುವಿನಂತೆ, ಸಾರ್ವಜನಿಕ ಜೀವನವೆಂಬ ಇಂದಿನ ಮಾರುಕಟ್ಟೆಯಿಂದ ಹೊರ ಹಾಕಲ್ಪಡುವ ಪ್ರಕ್ರಿಯೆ ಆರಂಭವಾಗಿದೆ. ಜಾಗತೀಕರಣದ ಪ್ರಕ್ರಿಯೆಯ ಒಂದು ಪ್ರಾತಿನಿಧಿಕ ಸಾಧನದಂತಿರುವ ಕಂಪ್ಯೂಟರ್‌ನ ಕಾರ್ಯ ನಿರ್ವಹಣಾ ಭಾಷೆಯನ್ನು ಕನ್ನಡೀಕರಿಸುವ ಎಲ್ಲ ಪ್ರಯತ್ನಗಳನ್ನೂ ವಿಫಲಗೊಳಿಸುತ್ತಿರುವ ಮೈಕ್ರೋಸಾಫ್ಟ್ ಎಂಬ ಅಂತರಾಷ್ಟ್ರೀಯ ಕಂಪನಿಯಿಂದ ಹಿಡಿದು, ಕರ್ನಾಟಕದಲ್ಲಿ ಕನ್ನಡ ಶಾಲೆಗಳಲ್ಲಿ ಇಂಗ್ಲಿಷನ್ನು ಒಂದನೇ ತರಗತಿಯಿಂದಲೇ ಕಡ್ಡಾಯವಾಗಿ ಕಲಿಸಬೇಕೆಂದು ಇದ್ದಕ್ಕಿದ್ದಂತೆ ಜ್ಞಾನೋದಯ ವಾದಂತೆ ಚಳುವಳಿ ಹೂಡಿದ ಕನ್ನಡದ ಕೆಲವು ಚಿಂತಕವರೇಣ್ಯರವರೆಗೆ, ಅಂತಾರಾಷ್ಟ್ರೀಯ ರಾಜಕಾರಣಕ್ಕೆ ಬಲಿಯಾಗಿ; ಕನ್ನಡ ಕ್ರಮೇಣ ಇತಿಹಾಸದ ಬುಟ್ಟಿಗೆ ಸೇರಲು ಸಿದ್ಧವಾಗುತ್ತಿರುವ ವಸ್ತುವಾಗಿ ಕಾಣತೊಡಗಿದೆ. ಇದರಿಂದಾಗಿ, ಕನ್ನಡವನ್ನು ಪ್ರಾಚೀನ ವಸ್ತು ಸಂಗ್ರಹಾಲಯದ ವಸ್ತುವಾಗಿ ಸಂರಕ್ಷಿಸಿಡಲು ಅಗತ್ಯವಾದ ಶಾಸ್ತ್ರೀಯ ಉಪಾಯಗಳನೇಕವನ್ನು ನಮ್ಮ ಕೆಲವು ಭಾಷಾ ಶಾಸ್ತ್ರಜ್ಞರು ಮುಂದಿಡತೊಡಗಿದ್ದಾರೆ!

ಈ ಕುರಿತು ನಮ್ಮ ಕನ್ನಡ ಚಳುವಳಿಕಾರರೂ ಸೇರಿದಂತೆ, ಸ್ವಾತಂತ್ರ್ಯೋದಯದ ಹುಮ್ಮಸ್ಸಿನೊಂದಿಗೆ ಆರಂಭವಾದ ಕನ್ನಡದ ನವೋದಯದ ಕಾಲದಿಂದ ಕನ್ನಡದ ಪರವಾಗಿ ಕೆಲಸ ಮಾಡಿಕೊಂಡು ಬಂದ ಯಾವ ಶಕ್ತಿಗಳೂ–ಔಪಚಾರಿಕವೆಂಬಂತೆ ಎತ್ತಿದ ಆಕ್ಷೇಪಣೆಗಳ ಹೊರತಾಗಿ–ನಿರ್ಣಾಯಕ ಧ್ವನಿ ಎತ್ತದೆ, ಜಾಗತೀಕರಣದ ಒತ್ತಡಗಳಿಗೆ ಮಣಿಯುತ್ತಿರುವುದು ನಿಜವಾಗಿಯೂ ಆತಂಕಕಾರಿ ಬೆಳವಣಿಗೆಯಾಗಿದೆ. ಈಗ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡರ

ಆಡಳಿತ ನೀತಿಗಳೂ ಅಧಿಕೃತವಾಗಿ ಜಾಗತೀಕರಣದ ಪರವಾಗಿರುವುದರಿಂದ, ಈ ವಿಷಯದಲ್ಲಿ ಸರ್ಕಾರದಿಂದ ಪ್ರತಿರೋಧವಿರಲಿ, ಸಹಾನುಭೂತಿಯನ್ನೂ ನಿರೀಕ್ಷಿಸಲಸಾಧ್ಯವಾಗಿದೆ. ಮಾತೃಭಾಷಾ ಶಾಲಾ ಶಿಕ್ಷಣವನ್ನು ಎತ್ತಿ ಹಿಡಿದ ೧೯೯೩ರ ಸರ್ವೋನ್ನತ ನ್ಯಾಯಾಲಯದ ತೀರ್ಪಿನ ಪ್ರಕಾರ, ಕನ್ನಡ ಮಾಧ್ಯಮ ಶಾಲೆಗಳಿಗೆ ಅನುಮತಿ ಪಡೆದು ಇಂಗ್ಲಿಷ್ ಮಾಧ್ಯಮದಲ್ಲಿ ಬೋಧನೆ ಮಾಡುತ್ತಿದ್ದ ಸಾವಿರಾರು ಶಾಲೆಗಳ ವಿರುದ್ಧ ಸರ್ಕಾರ ದಿಢೀರನೆ ಕಾನೂನು ಕ್ರಮ ಕೈಗೊಂಡಿದ್ದೂ, ಕನ್ನಡ ಶಾಲೆಯ ಮಕ್ಕಳಿಗೆ ಒಂದನೇ ತರಗತಿಯಿಂದ ಕಡ್ಡಾಯವಾಗಿ ಇಂಗ್ಲಿಷ್ ಕಲಿಸುವ ತನ್ನ ಆಜ್ಞೆಗೆ 'ನೈತಿಕ' ಬೆಂಬಲ ಗಳಿಸಿಕೊಳ್ಳಲೆಂದೇ ಎಂಬುದನ್ನು ನಾವು ಗಮನಿಸಬೇಕಿದೆ.

ಇಲ್ಲಿ ಮುಖ್ಯ ಪ್ರಶ್ನೆ, ಈ ಕೆಲವು ಕನ್ನಡ ಚಿಂತಕರಿಗೆ ಇದ್ದಕ್ಕಿದ್ದಂತೆ ಕನ್ನಡದ ಮಕ್ಕಳಿಗೆ ಐದನೇ ತರಗತಿಗೆ ಬದಲಾಗಿ ಒಂದನೇ ತರಗತಿಯಿಂದಲೇ ಕಡ್ಡಾಯವಾಗಿ ಇಂಗ್ಲಿಷ್ ಕಲಿಸಬೇಕೆಂಬ ಪ್ರೇರಣೆಯಾದರೂ ಏಕುಂಟಾಯಿತು ಮತ್ತು ಸರ್ಕಾರದಿಂದ ಇದಕ್ಕೆ ಅಷ್ಟು ಶೀಘ್ರವಾಗಿ ಸಹಾನುಭೂತಿ ಪರ ಬೆಂಬಲ ಸಿಕ್ಕು, ಅನತಿ ಕಾಲದಲ್ಲೇ ಅಂಗೀಕಾರವೂ ದೊರೆಯುವಂತಾದುದರ ತುರ್ತು ಕಾರಣವಾದರೂ ಏನು ಎಂಬುದೇ ಆಗಿದೆ. ಒಡಮೂಡುತ್ತಿರುವ ಹೊಸ ಆರ್ಥಿಕ-ಸಾಮಾಜಿಕ ಪರಿಸ್ಥಿತಿಗೆ ಸ್ಪಂದಿಸಬೇಕಾದ ವಿವೇಕ ಹಾಗೂ ಅನಿವಾರ್ಯತೆ ಎಂಬುದು ಇದಕ್ಕೆ ಕೇಳಿ ಬರುತ್ತಿರುವ ಸಿದ್ಧ ಉತ್ತರ. ಇದನ್ನು ಅನುಮಾನಾಸ್ಪದವಾಗಿ ನೋಡುವವರನ್ನು, ಕನ್ನಡದ ಅಂಧಾಭಿಮಾನಿಗಳೆಂದೋ, ಕಾಲದೊಂದಿಗೆ ಹೆಜ್ಜೆ ಹಾಕಲೊಲ್ಲದ ಅವಾಸ್ತವವಾದಿಗಳೆಂದೋ, ಸಾಮಾಜಿಕ ನ್ಯಾಯ ವಿರೋಧಿಗಳೆಂದೋ ಖಂಡಿಸುವ ದೊಡ್ಡ ಗುಂಪುಗಳೇ ಇಂದು ಹುಟ್ಟಿಕೊಂಡಿವೆ. ಸ್ವತಂತ್ರ ಭಾರತದ ಇತಿಹಾಸದಲ್ಲಿ ಮೊದಲ ಬಾರಿಗೆ ಕರ್ನಾಟಕದಲ್ಲಿ ಇಂಗ್ಲಿಷ್ ಪರ ಚಳುವಳಿಯೊಂದು ಮೆಲುದನಿಯಲ್ಲಿ ಆರಂಭವಾಗಿ, ತನ್ನನ್ನು ಸಮರ್ಥಿಸಿಕೊಳ್ಳಲು ನೀಡಿದ ಕಾರಣಗಳ ಮೂಲಕ ಪರೋಕ್ಷವಾಗಿ ಕನ್ನಡವನ್ನು ಸಾಮಾಜಿಕವಾಗಿ ಅಪ್ರಸ್ತುತಗೊಳಿಸುವ ಚಳುವಳಿಯಾಗಿ ಬೆಳೆದು ತನ್ನ ಉದ್ದೇಶವನ್ನೇ - ಮೇಲ್ನೋಟಕ್ಕೆ ಅದೆಷ್ಟೇ ವ್ಯಾವಹಾರಿಕ ಸಾಧುತ್ವ ತೋರಿದರೂ - ಅನುಮಾನಾಸ್ಪದಗೊಳಿಸಿಕೊಂಡ ವಿಚಿತ್ರ ಘಟನೆ ನಡೆದಿದೆ. ಕಂಪ್ಯೂಟರ್ ತಂತ್ರಜ್ಞಾನವನ್ನು ದೇಶೀಯಗೊಳಿಸಿಕೊಳ್ಳುವ ವಿಪುಲ ಸಾಧ್ಯತೆಗಳಿರುವ ತಂತ್ರಾಂಶವುಳ್ಳದ್ದೆಂದು ಮತ್ತು ಬಹುತೇಕ ಇಂಗ್ಲಿಷೇತರ ದೇಶಗಳು ಅಳವಡಿಸಿಕೊಂಡಿವೆಯೆಂದು ಹೇಳಲಾದ ಲ್ಯೂನಾಕ್ಸ್ ಕಂಪನಿಯ ಉತ್ಪನ್ನಗಳಿಗೆ ಬದಲಾಗಿ; ದೇಶೀ ಭಾಷೆಗಳನ್ನು ಇಂಗ್ಲಿಷೀಕರಿಸಿಯೇ ಕೃತಕವಾದ ದೇಶಿ ತಂತ್ರಾಂಶವನ್ನು ಮಾತ್ರ ಅಭಿವೃದ್ಧಿ ಪಡಿಸಲು - ಅದೂ ಒಲ್ಲದ ಮನಸ್ಸಿನಿಂದಲೇ - ಸಾಧ್ಯವಿರುವ ತಂತ್ರಜ್ಞಾನವನ್ನು ಕೊಡ ಮಾಡುವ ಮೈಕ್ರೋಸಾಫ್ಟ್ ಕಂಪನಿಯೊಂದಿಗೇ ಭಾರತದ ಸರ್ಕಾರಗಳು ಶಾಮೀಲಾಗಿರುವಂತೆ ಮಾಡಿರುವ ಶಕ್ತಿಗಳೇ, ಕನ್ನಡವನ್ನು ಇಂದು ಸಾಮಾಜಿಕವಾಗಿ ಅಪ್ರಸ್ತುತಗೊಳಿಸುವಂತಹ ಚಳುವಳಿಯ ಹಿಂದೆ ಇರುವುದು ಕೂಡಾ. ಇದನ್ನು ಅರ್ಥ ಮಾಡಿಕೊಳ್ಳದ ಹೊರತು ಇಂದು ಕನ್ನಡ ಎದುರಿಸುತ್ತಿರುವ ಬಿಕ್ಕಟ್ಟನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ಹಾಗೇ ಅದಕ್ಕೆ ಪರಿಹಾರ ಮಾರ್ಗಗಳೂ ಕಾಣುವುದಿಲ್ಲ. ನಮ್ಮ ಎಫ್.ಎಂ. ಖಾಸಗಿ ರೇಡಿಯೋ ಹಾಗೂ ಟಿ.ವಿ. ವಾಹಿನಿಗಳಲ್ಲಿ ಚಾಲ್ತಿಗೆ ಬಂದಿರುವ ಚಪಲ ಚಿತ್ತ

ಕಂಗ್ಲಿಷನ್ನು, ಕನ್ನಡ ವಾರ್ತೆಗಳ ಪ್ರಸಾರದ ಜೊತೆಗೆ ಇಂಗ್ಲಿಷ್‌ನಲ್ಲಿ ವಾರ್ತೆಗಳನ್ನು ಪ್ರಕಟಿಸುವ ಮತ್ತು ಕನ್ನಡ ಚಲನಚಿತ್ರಗಳ ಜಾಹೀರಾತುಗಳಲ್ಲಿ ಅವುಗಳಿಗೆ ಇಂಗ್ಲಿಷ್ ಉಪಶೀರ್ಷಿಕೆಗಳನ್ನು ನೀಡುವ ಹೊಸ ಮಾರುಕಟ್ಟೆ ಪ್ರವೃತ್ತಿಯನ್ನು, ಹೊಸ ವರ್ಗ ಹಿತಾಸಕ್ತಿಗಳ 'ಆಟ'ವೆಂದು ನೋಡದೆ, ಅವನ್ನು ಹೊಸ ಕಾಲದ ಸಹಜ ಬೆಳವಣಿಗೆಗಳೆಂಬಂತೆ ಸಾಂಸ್ಕೃತಿಕ ಅಧ್ಯಯನದ ಮನ್ನಣೆ ನೀಡಿ ಕನ್ನಡ ಉಳಿಯುವುದೇ ಹೀಗೆ ಎಂದು ಪವಿತ್ರೀಕರಿಸಲು ಇದೇ ಶಕ್ತಿಗಳು ನಡೆಸಿರುವ ಪ್ರಯತ್ನಗಳನ್ನು, ಕೆಲಸವಿಲ್ಲದ ಬಡಗಿಯ ಕೈತುರಿಕೆಯ ಕೆಲಸಗಳೆಂದು ಉಪೇಕ್ಷಿಸಲಾಗದು.

ಮೊದಲೇ ಹೇಳಿದಂತೆ, ಇತಿಹಾಸದುದ್ದಕ್ಕೂ ಕನ್ನಡ ಇಂತಹ ಬಿಕ್ಕಟ್ಟುಗಳನ್ನು ಎದುರಿಸುತ್ತಲೇ ಬಂದಿದೆ. ಬಹುಶಃ ಭಾರತದ ಎಲ್ಲ ಪ್ರಾದೇಶಿಕ ಭಾಷೆಗಳೂ. ಆದರೆ ಕನ್ನಡದ ಸಮಸ್ಯೆ ಬೇರೆ ತೆರನದ್ದೇ ಆಗಿದೆ ಎಂದು ತೋರುತ್ತದೆ. ಅದರ ಇತಿಹಾಸವನ್ನು ಅದರ ಸೋದರ ಭಾಷೆಗಳ ಇತಿಹಾಸದೊಂದಿಗೆ ನೋಡಿದಾಗ; ವಿಶೇಷವಾಗಿ ತಮಿಳಿನ ಇತಿಹಾಸದ ಜೊತೆ ಹೋಲಿಸಿದಾಗ. ತಮಿಳು ಬಿಟ್ಟರೆ ಕನ್ನಡವೇ ತಾನೆ ಭಾರತ ಅತಿ ಪ್ರಾಚೀನ ಸಂಸ್ಕೃತೇತರ ಭಾಷೆ? ತಮಿಳು ಮೂಲ ದ್ರಾವಿಡದ ಕೂಸಾಗಿ, ಹೊರಗಿನ ಸಾಂಸ್ಕೃತಿಕ ಪ್ರಭಾವವನ್ನು ಆರಂಭದಲ್ಲೇ ತನ್ನ ರಾಜಕೀಯ ಅಸ್ಮಿತೆಯ ಪ್ರಶ್ನೆಯನ್ನಾಗಿ ನೋಡಿ; ಅದರ ವಿರುದ್ಧ ಮುನ್ನೆಚ್ಚರಿಕೆ ವಹಿಸಿತು. ಆದರೆ ಕನ್ನಡ ಭೌಗೋಳಿಕವಾಗಿ ಒಂದು ಸಾಂಸ್ಕೃತಿಕ ಗಡಿ ಪ್ರದೇಶದಲ್ಲಿದ್ದುದರ ಕಾರಣದಿಂದಾಗಿ ಹೊರಗಿನ ಪ್ರಭಾವಕ್ಕೆ ಅನಿವಾರ್ಯವಾಗಿ ಸಿಕ್ಕಿ, ಎಚ್ಚರದ ಮಾರ್ಗದ ಬದಲಾಗಿ ಅನುಸಂಧಾನ ಮಾರ್ಗ ಹಿಡಿಯಿತು. ಈ ಎರಡು ಭಾಷೆಗಳು ಲಿಪಿಯನ್ನು ಪಡೆದುಕೊಂಡ ರೀತಿ ನೀತಿಗಳು ಇದನ್ನು ಇನ್ನಷ್ಟು ಸ್ಪಷ್ಟಗೊಳಿಸುತ್ತದೆ.

ಬ್ರಾಹ್ಮಿಲಿಪಿಯ ಎಲ್ಲ ೫೬ ಅಕ್ಷರಗಳನ್ನು 'ಅಶೋಕ ಬ್ರಾಹ್ಮಿ'ರೂಪದಲ್ಲಿ ಸ್ವೀಕರಿಸಿದ ಕನ್ನಡ, ಬ್ರಾಹ್ಮಿ ಲಿಪಿಯ ಹಿಂದಿನ ಎಲ್ಲ ಸಾಂಸ್ಕೃತಿಕ ಪ್ರಭಾವಗಳಿಗೂ ತನ್ನೊಳಕ್ಕೆ ಪ್ರವೇಶ ಮಾಡಲು ಅವಕಾಶ ಮಾಡಿಕೊಟ್ಟರೆ; ತಮಿಳು ಈ ಕಾರಣಕ್ಕಾಗಿಯೇ ಲಿಪಿಯನ್ನೇ ನಿರಾಕರಿಸಿ ಬಹುಕಾಲ ಬದುಕಿ, ಲಿಪಿ ಬೇಕೆನ್ನಿಸಿದಾಗ, ತನ್ನ ಸಂಸ್ಕೃತಿ ವಿಶಿಷ್ಟ 'ಅಭಿವ್ಯಕ್ತಿ'ಗಷ್ಟೇ ಬೇಕಾದ ೨೬ ಅಕ್ಷರಗಳನ್ನು 'ತಮಿಳು ಬ್ರಾಹ್ಮಿ' ರೂಪದಲ್ಲಿ ಸ್ವೀಕರಿಸಿತು. ಒಂದೇ ತಾಯಿಯ ಮಕ್ಕಳಾದರೂ ತಮಿಳು ಮತ್ತು ಕನ್ನಡ ಸಂಸ್ಕೃತಿಗಳ ನಡುವೆ ಎದ್ದು ಕಾಣುವ ಭಿನ್ನತೆಗಳ ಮೂಲ, ಇಲ್ಲೇ ಇದೆಯೆಂದು ಕೆಲವು ಭಾಷಾ ಸಂಸ್ಕೃತಿ ತಜ್ಞರು ಗುರುತಿಸುತ್ತಾರೆ. ಮುಖ್ಯವಾಗಿ ತಮಿಳರಲ್ಲಿ ಒಂದು ಆಳವಾದ ಕುಲಪ್ರಜ್ಞೆ ಇದ್ದರೆ, ಕನ್ನಡಿಗರಲ್ಲಿ ಅದು ಶಿಥಿಲವಾಗಿದೆ. ಕಾವೇರಿಯಿಂದ (ವಾಸ್ತವವಾಗಿ ಅದರಾಚೆಯಿಂದಲೂ) ಗೋದಾವರಿ (ಬಹುಶಃ ಅದರಾಚೆಗೂ) ವರೆಗಿದ್ದ ಕನ್ನಡ ಇಂದು ಇಷ್ಟು ಕುಗ್ಗಿ ಹೋಗಿರುವುದಕ್ಕೆ ಐತಿಹಾಸಿಕವಾಗಿ ಕನ್ನಡ ಒಂದು ಸಂಸ್ಕೃತಿಯಾಗಿ ಬೆಳೆಯುವಲ್ಲೇ, ಹೀಗೆ ಅದರ ಆಂತರಿಕ ಪ್ರತಿರೋಧ ಶಕ್ತಿ ದುರ್ಬಲವಾಗಿದ್ದುದು ಕಾರಣವೆಂದೂ ಹೇಳಲಾಗುತ್ತದೆ. ಇದನ್ನೀಗ ನಾವು ಉದಾರತೆ, ಸರ್ವ ಭಾಷಾ ಸಹಿಷ್ಣುತೆ,

---

* ಇಂತಹ ಸೂಚನೆಗಳಿಗಾಗಿ ನೋಡಿ : ಡಾ॥ ಷ. ಶೆಟ್ಟರ್ ಅವರ 'ಕವಿರಾಜಮಾರ್ಗ ಮಂಥನ' ಲೇಖನ ಮಾಲೆ : 'ಸಂಕಲನ' ದ್ವೈಮಾಸಿಕ–೨೦೦೬

ಸಹೃದಯ ಆತಿಥೇಯತೆ ಎಂದೆಲ್ಲ ಕರೆದುಕೊಂಡು ಪೆಚ್ಚು ಪೆಚ್ಚಾಗಿ ಹೆಮ್ಮೆ ಪಡುತ್ತಿದ್ದೇವೆ.

ಕನ್ನಡಿಗರ ಈ ತರಹ 'ಸದ್ಗುಣ' ಗಳೇ ಕನ್ನಡವೆಂಬುದು ಸಂಸ್ಕೃತ ಪರಂಪರೆಯೆದುರು ಒಂದು ಸಂಪೂರ್ಣ ದೇಶಿ ಪರಂಪರೆಯಾಗಿ ಬೆಳೆಯದಿರಲು ಹಾಗೂ ಆ ಪರಂಪರೆಯೊಂದಿಗೆ ತನ್ನ ಮೂಲ ಸಂಸ್ಕೃತಿಗೆ ಅನಾನುಕೂಲಕರವಾದ ರೀತಿಯಲ್ಲೇ ಅನುಸಂಧಾನ ಮಾಡಿಕೊಂಡು ಬಂದು, ತನ್ನ ಸಾಮಾಜಿಕ ಹಾಗೂ ಸಾಂಸ್ಕೃತಿಕ ವ್ಯಕ್ತಿತ್ವವನ್ನು ಇಕ್ಕಟ್ಟಿಗೆ ಸಿಲುಕಿಸಿಕೊಳ್ಳಲು ಕಾರಣಗಳಾಗಿವೆ ಎಂದು ಕೆಲವು ಸಂಸ್ಕೃತಿ ಚಿಂತಕರು ಅಭಿಪ್ರಾಯ ಪಡುತ್ತಾರೆ. (ನೋಡಿ: 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ' : ಕೆ.ಪಿ. ಪೂರ್ಣಚಂದ್ರ ತೇಜಸ್ವಿ : ಸಂಕ್ರಮಣ : ೬೦) ಈ ದೃಷ್ಟಿಯಿಂದ ಇತಿಹಾಸದಲ್ಲಿ ಆಂಡಯ್ಯ ಮಾಡಿದ ಸಾಹಿತ್ಯಿಕ ಪ್ರಯೋಗದ ಹಿಂದಿನ ಕೆಚ್ಚು ಕೇವಲ ಕನ್ನಡಾಭಿಮಾನದಿಂದ ಮೂಡಿದ್ದು ಎಂದು ಯಾರಾದರೂ ಹೇಳಿದರೆ ಅದಕ್ಕಿಂತ ಪೆದ್ದು ಪೆದ್ದಾದ ಚರಿತ್ರೆಯ ಓದು ಮತ್ತೊಂದಿರಲಾರದು! ಸಂಸ್ಕೃತದೊಂದಿಗೆ ಮಾತ್ರವಲ್ಲ, ತನ್ನ ಸಂಪರ್ಕಕ್ಕೆ ಬಂದ ಎಲ್ಲ ಭಾಷಾ ಸಂಸ್ಕೃತಿಗಳೊಂದಿಗೂ ಇದೇ ತರಹ ಅನುಸಂಧಾನ (ಇದನ್ನು ಕೆಲವರು ಭೋಜನ ಪರಿಭಾಷೆಯಲ್ಲಿ ಕನ್ನಡದ 'ಜೀರ್ಣಾಗ್ನಿ' ಎಂದೂ ಕರೆಯುತ್ತಾರೆ!) ನಡೆಸುವ ಕನ್ನಡದ ಹುಟ್ಟು ದೌರ್ಬಲ್ಯದಿಂದಾಗಿಯೇ, ಇಂದು ಕನ್ನಡ ಭಾಷಾ ಪ್ರದೇಶವೆಂದು ಅಧಿಕೃತವಾಗಿ ಗುರುತಿಸಲಾಗಿರುವ ಕರ್ನಾಟಕದಲ್ಲಿ ಕನ್ನಡ ಭಾಷಾ ಜನರ ಸಾಂದ್ರತೆ, ಇತರ ರಾಜ್ಯಗಳಲ್ಲಿನ ಸಂಬಂಧಿತ ಪ್ರಧಾನ ಭಾಷಾ ಜನರ ಸಾಂದ್ರತೆಗಿಂತ ಬಹಳ ಕಡಿಮೆ ಇರುವುದು. (ಇತರ ರಾಜ್ಯಗಳಲ್ಲಿ ಶೇಕಡಾ ೮೦ ರಿಂದ ೯೦ ರಷ್ಟಿದ್ದರೆ, ಕರ್ನಾಟಕದಲ್ಲಿ ಶೇಕಡಾ ೬೦ ರಿಂದ ೭೦ರ ಮಧ್ಯೆ ಇದೆ!)

ಬಹುಶಃ ಇಂತಹ 'ಉದಾರವಾದಿ' ಭಾಷಾ ವಾತಾವರಣದಿಂದಾಗಿಯೇ, ಕರ್ನಾಟಕದಲ್ಲಿ ಸ್ವತಃ ಕನ್ನಡದ ಮಕ್ಕಳು ಯಾವುದೇ ಮಟ್ಟದ ಒಂದು ಭಾಷೆಯಾಗಿಯೂ ಕನ್ನಡದ ಒಂದಕ್ಷರವನ್ನೂ ಕಲಿಯದೇ ಶಾಲಾ ಶಿಕ್ಷಣವನ್ನು ಮುಗಿಸುವಂತಹ ಪರಿಸ್ಥಿತಿ ೧೯೮೦ರ ಹೊತ್ತಿಗೆ ಸ್ಫೋಟಗೊಂಡು, ಗೋಕಾಕ್ ವರದಿ ಹಾಗೂ ಅದರ ಅನುಷ್ಠಾನಕ್ಕಾಗಿ ದೊಡ್ಡ ಭಾಷಾ ಆಂದೋಲನ ಸೃಷ್ಟಿಯಾದದ್ದು. ಹಾಗೇ, ಈಗ ಜಗತ್ತಿನ ಯಾವ ಸರ್ಕಾರದ ಅಧಿಪತಿಗೂ ಇಲ್ಲದಿರುವ ಭಾಷಾ ಕೀಳರಿಮೆ ನಮ್ಮ ರಾಜ್ಯದ ಸದ್ಯದ ಮುಖ್ಯಮಂತ್ರಿಗೆ ಉಂಟಾಗಿ, 'ಮುಖ್ಯಮಂತ್ರಿಯಾಗಿ ನನಗೇ ಇಂಗ್ಲಿಷ್ ಸರಿಯಾಗಿ ಮಾತನಾಡಲಾಗದೆ ಅವಮಾನ ಉಂಟಾಗುತ್ತಿರುವಾಗ, ಗ್ರಾಮಾಂತರ ಪ್ರದೇಶದ ಜನಸಾಮಾನ್ಯರ ಗತಿಯೇನು!' ಎಂದು ಕರುಣಾಜನಕವಾಗಿ ಅಲವತ್ತುಕೊಳ್ಳುತ್ತಾ, ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ತಮ್ಮ ಸರ್ಕಾರದ ತೀರ್ಮಾನವನ್ನು ಸಮರ್ಥಿಸಿಕೊಳ್ಳುವ ದುಃಸ್ಥಿತಿ ಉಂಟಾದುದು!

ಹೀಗೆ ಕರ್ನಾಟಕದಲ್ಲಿ ಕನ್ನಡದ ಬಿಕ್ಕಟ್ಟಿನ ಪ್ರಶ್ನೆ ಸಾಂಸ್ಕೃತಿಕ ಪ್ರಶ್ನೆ ಮಾತ್ರವಾಗಿರದೆ; ಮೂಲತಃ ಒಂದು ಐತಿಹಾಸಿಕ ಪ್ರಶ್ನೆಯಾಗಿ ಆರಂಭವಾಗಿ, ಒಂದು ಜನಾಂಗೀಯ ದೌರ್ಬಲ್ಯದ ಪ್ರಶ್ನೆಯಾಗಿ ಬೆಳೆದಿದೆ! ಈ ಹಿನ್ನೆಲೆಯಲ್ಲೇ, ಇತರ ರಾಜ್ಯಗಳಲ್ಲಿ ಈಗ ಇಂಗ್ಲಿಷ್ ಕುರಿತಂತೆ

ಕರ್ನಾಟಕದಲ್ಲಿ ಕಂಡು ಬರುವ ಅಧಿಕೃತ ನಿಲುವೇ ವ್ಯಕ್ತವಾಗುತ್ತಿದ್ದರೂ, ಕರ್ನಾಟಕದಲ್ಲಿ ಕನ್ನಡ ಭಾಷೆಯನ್ನು ಅವಕಾಶ ಸಿಕ್ಕರೆ ಸಾಕು ಅಧಿಕೃತವಾಗಿಯೇ ಗಡಿಪಾರು ಮಾಡಲು ಸಿದ್ಧವಿರುವ ಪಟ್ಟಭದ್ರ ಹಿತಾಸಕ್ತಿಗಳನ್ನು ಪೋಷಿಸುವ, ಮತ್ತು ಕೆಲವರು ನಿರಾತಂಕವಾಗಿ ಅವುಗಳ ದಲ್ಲಾಳಿಗಳಾಗಿ ಕೆಲಸ ಮಾಡುವ ವಾತಾವರಣ ಸದಾ ಇರುತ್ತ ಬಂದಿರುವುದರಿಂದ; ಬೇರೆ ರಾಜ್ಯಗಳಲ್ಲಿನ ಭಾಷಾ ನಿರಾತಂಕ ಇಲ್ಲಿ ಸಲ್ಲದು ಎಂಬ ಎಚ್ಚರಿಕೆಯಲ್ಲೇ ನಾವಿರುವ ಪರಿಸ್ಥಿತಿ ಇದೆ. ಹಾಗಾಗಿ ಕನ್ನಡ ಕಟ್ಟುವ ಕೆಲಸವನ್ನು ಸದಾ ಈ ಎಚ್ಚರದೊಂದಿಗೆ ಮಾಡಬೇಕಿದೆ. ಇಂತಹ ನಿರಂತರ ಎಚ್ಚರದ ಮೂಲಕವೇ, ಐತಿಹಾಸಿಕ ಆಕಸ್ಮಿಕಗಳಿಂದಾಗಿ ಕನ್ನಡದ ವಿರುದ್ಧ ಬೆಳೆದುಕೊಂಡು ಬಂದಿರುವ ವಾತಾವರಣವನ್ನು ಕ್ರಮೇಣ ನಿರ್ಮೂಲನ ಮಾಡಲು ಸಾಧ್ಯವಾಗಬಹುದು. ಹೀಗಾಗಿ ನಿಜವಾದ ಕನ್ನಡ ಕಟ್ಟುವ ಕೆಲಸ ಇಷ್ಟು ಮೂಲಭೂತ ಹಂತದಿಂದ ಆರಂಭವಾಗಬೇಕಿದೆ. ಅಂದರೆ, ಕರ್ನಾಟಕಕ್ಕೆ ಕನ್ನಡ ಏಕೆ ಅಗತ್ಯ ಎಂಬುದನ್ನು ಮತ್ತೆ ಮನವರಿಕೆ ಮಾಡಿಕೊಳ್ಳುವ, ಮಾಡಿಕೊಡುವ (ಬಹುಶಃ ವಿಪರ್ಯಾಸದ) ಪ್ರಯತ್ನಗಳ ಮೂಲಕವೇ ಕನ್ನಡವನ್ನು ಕಟ್ಟುವ ಕಾಯಕವನ್ನು ಕೈಗೊಳ್ಳಬೇಕಿದೆ. ಇದಕ್ಕೆ ಮೊದಲಾಗಿ, ಕರ್ನಾಟಕವೆಂಬುದೇನು ಎಂಬುದನ್ನು ಪುನರ್ನಿರೂಪಿಸಬೇಕಿದೆ.

ಕರ್ನಾಟಕವೆಂಬುದು ಕನಿಷ್ಠ ೨ ಸಾವಿರ ವರ್ಷಗಳ ಇತಿಹಾಸವಿರುವ ಒಂದು ಭಾಷೆಯ ಮೂಲಕ ಕಟ್ಟಿಕೊಂಡ ಒಂದು ಬದುಕಿನ ವಿಕಾಸಯಾತ್ರೆ. ಕಾಲನ ಹೆದ್ದೆರೆಗಳಿಗೆ ಸಿಕ್ಕಿ ಛಿದ್ರ ವಿಚ್ಛಿದ್ರವಾದರೂ, ಅಳಿಯದ ಸ್ಮೃತಿಯೊಳಗೆ ಉಳಿದುಕೊಂಡು ಬಂದ ಭಾವಕೋಶವೊಂದರ ಮೂರ್ತರೂಪ. ಈ ಭಾವಕೋಶದ ಬೀಜ, ಭಾಷೆ. ಅದು ಕನ್ನಡ. ಹಾಗಾಗಿ, ನಮ್ಮ ಆಧುನಿಕ ಸಂವಿಧಾನದಡಿಯೂ ನಾವು ಅಖಂಡ ಕರ್ನಾಟಕದ ಕನಸು ಕಂಡಿದ್ದರೆ, ಅದರ ತಾಯಿ ಬೇರು ಕನ್ನಡವೇ ಆಗಿದೆ. ಅಂದರೆ ಈ ಜನಸಮುದಾಯ ತನ್ನ ಆಧುನಿಕ ಆಶಯಗಳ ಅಭಿವ್ಯಕ್ತಿಯನ್ನು ಬಯಸಿರುವುದೂ ಈ ಭಾಷೆಯಲ್ಲೇ. ಇದರರ್ಥ, ಕರ್ನಾಟಕ ಆಧುನಿಕವಾಗ ಬಯಸಿರುವುದೂ ಕನ್ನಡ ಸಂಸ್ಕೃತಿಯ ಮಾತೃಕೆಗಳ ಮೂಲಕವೇ ಎಂಬುದಾಗಿದೆ. ಹಾಗಾಗಿ ಕನ್ನಡವೆಂದರೆ ಕರ್ನಾಟಕದ ಪಾಲಿಗೆ ಒಂದು ಮೂಲ ಜೀವದ್ರವ್ಯವಿದ್ದಂತೆ. ಕನ್ನಡ ನವೋದಯ ರೂಪುಗೊಂಡಿದ್ದೇ ಈ ಅರಿವಿನ ಮೇಲೆ; ಈ ನಂಬಿಕೆಯ ಮೇಲೆ. ಏಕೆಂದರೆ ಅದಕ್ಕೆ ಪಾರತಂತ್ರ್ಯದ ದಟ್ಟ ನೆನಪಿತ್ತು. ಪಾರತಂತ್ರ್ಯ ಹೇಗೆ ಆರಂಭವಾಯಿತು, ಯಾವ ಮತ್ತು ಎಂತಹ ಪರಿಕರಗಳ ಮೂಲಕ ಅದು ಸಂಘಟಿತಗೊಂಡು ಸದೃಢವಾಗಿ, ದಬ್ಬಾಳಿಕೆಗೆ ಇಳಿಯಿತು ಎಂಬುದರ ಪರಿವೆ ಅದಕ್ಕಿತ್ತು. ಹಾಗಾಗಿ ಆಗ ಕರ್ನಾಟಕವನ್ನು ಕಟ್ಟುವುದೆಂದರೆ, ಕೆಲವು ಆಶಯಗಳೊಂದಿಗೆ ಮಾತ್ರವಲ್ಲ; ಕೆಲವು ಎಚ್ಚರಗಳೊಂದಿಗೂ ಒಂದು ಜೀವನ ಕ್ರಮವನ್ನು ಕಟ್ಟುವ ಕೆಲಸವಾಗಿತ್ತು. ಹೀಗಾಗಿ, ಕನ್ನಡ ನವೋದಯದ ನಾಯಕರು ನಮಗೆ ಕನ್ನಡತ್ವದ ಮಾದರಿಗಳು ಮಾತ್ರವಲ್ಲದೆ; ಒಂದು ಜೀವನಕ್ರಮದ ಮಾದರಿಗಳೂ, ಆ ಮೂಲಕ ಕೆಲವು ನಿರ್ದಿಷ್ಟ ಮೌಲ್ಯಗಳ ಪ್ರತಿನಿಧಿಗಳೂ ಆಗಿದ್ದುದು ಆಕಸ್ಮಿಕವೇನಲ್ಲ

ಆದರೆ ಕಳೆದ ೨೦-೨೫ ವರ್ಷಗಳಲ್ಲಿ ಎಲ್ಲ ಎಷ್ಟು ತಲೆ ಕೆಳಗಾಗಿದೆ ಎಂದರೆ, ಇಂಗ್ಲಿಷನ್ನು

ಶಿಕ್ಷಣ ಕ್ರಮದಿಂದ ತೆಗೆಯದ ಹೊರತು ಗ್ರಾಮಾಂತರ ಹಾಗೂ ಹಿಂದುಳಿದ ವರ್ಗಗಳ ಮಕ್ಕಳಿಗೆ ಭವಿಷ್ಯವಿಲ್ಲ ಎಂದು ಹೇಳುತ್ತಿದ್ದವರೇ ಇಂದು ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸದಿದ್ದರೆ ಅವರಿಗೆ ಭವಿಷ್ಯವಿಲ್ಲ ಎನ್ನುತ್ತಿದ್ದಾರೆ! ಈ ವಿಪರ್ಯಾಸಕ್ಕೆ ಕನ್ನಡ ನವೋದಯ ಕನ್ನಡದ ಜನಕ್ಕಾಗಿ ಮಾದರಿಯೆಂಬಂತೆ ಕಟ್ಟಿಕೊಟ್ಟ ಜೀವನಕ್ರಮ ಇಂದು ಅಪ್ರಸ್ತುತವಾಗಿರುವುದೇ ಕಾರಣವಾಗಿದೆ. ಇದಕ್ಕೆ ಮತ್ತೆ ಈ ಜೀವನಕ್ರಮದ ತಳಹದಿಯಲ್ಲಿದ್ದ ಮೌಲ್ಯಗಳನ್ನು ಪವಿತ್ರೀಕರಿಸಿದ್ದ ಸಾಂಸ್ಕೃತಿಕ ರಾಜಕಾರಣವನ್ನು, ಕಳೆದ ೨೦-೨೫ ವರ್ಷಗಳ ಸಾಮಾಜಿಕ, ಆರ್ಥಿಕ ರಾಜಕಾರಣವು ಪಲ್ಲಟಗೊಳಿಸಿರುವುದೇ ಕಾರಣವಾಗಿದೆ. ಇದು ಕನ್ನಡತ್ವವನ್ನು ಬುಡಮೇಲುಗೊಳಿಸಿರುವ ತಲೆ ಕೆಳಗಾದ ರಾಜಕಾರಣವೂ ಆಗಿರುವುದರಿಂದಲೇ, ಇಂದು ಕನ್ನಡ ಕಟ್ಟುವ ಕೆಲಸ ಇಂತಹ ರಾಜಕಾರಣದ ವಿರುದ್ಧದ ಹೋರಾಟದ ಒಂದು ಭಾಗವಾಗಿಯೇ ನಡೆಯಬೇಕಿದೆ. ಈ ರಾಜಕಾರಣದ ಸಮಕಾಲೀನ ರೂಪ ಜಾಗತೀಕರಣವೇ ಆಗಿರುವುದರಿಂದ, ಕನ್ನಡದ ಹೋರಾಟ ಜಾಗತೀಕರಣ ವಿರುದ್ಧದ ಹೋರಾಟದ ಒಂದು ಭಾಗವಾಗಿಯೇ ಹೊರ ಹೊಮ್ಮಬೇಕಿದೆ. ಈ ಪ್ರಜ್ಞೆ ಇಲ್ಲದಿರುವುದರಿಂದಲೇ ಇಂದಿನ ಕನ್ನಡ ಹೋರಾಟ ಅನ್ಯಭಾಷಿಕ ಫಲಕಗಳನ್ನು, ಅನ್ಯಭಾಷಿಕರ ನಾಯಕರ ಮುಖಗಳನ್ನು ಕೆಡಿಸುವ; ರೈಲ್ವೇ ಹಾಗೂ ಬಸ್ ಟಿಕೆಟ್‌ಗಳ ಮೇಲೆ ಕನ್ನಡ ಅಕ್ಷರಗಳನ್ನು ಪುನಃ ಸ್ಥಾಪಿಸುವ; ಕರ್ನಾಟಕದಲ್ಲಿನ ಉದ್ಯಮಗಳಲ್ಲಿ ಕನ್ನಡಿಗರಿಗೆ ಗುಮಾಸ್ತೆ-ಜವಾನರ ಹುದ್ದೆಗಳನ್ನು ಮೀಸಲಿರಿಸಲು ಧರಣಿ ನಡೆಸುವ; ಕನ್ನಡ ವಿರೋಧಿ ರಾಜಕಾರಣ ಮಾಡುವ ರಾಜಕಾರಣಿಗಳ ಕಛೇರಿ ಮೇಲೋ, ಮನೆ ಮೇಲೋ ಕಲ್ಲೆಸೆಯುವಂತಹ ಹತಾಶ, ಅಲ್ಪಕಾಲಿಕ ಹಾಗೂ ವ್ಯರ್ಥ ಕಾರ್ಯಕ್ರಮಗಳಲ್ಲಿ ತೃಪ್ತವಾಗಿರು ವಂತಾಗಿರುವುದು.

ಕನ್ನಡ ಕಟ್ಟುವ ಕೆಲಸ ಮುಖ್ಯವಾಗಿ ತನ್ನ ಗಮನವನ್ನು ಕೇಂದ್ರೀಕರಿಸಬೇಕಾಗಿರುವುದು, ಕನ್ನಡ ನವೋದಯವು ಸ್ವಾತಂತ್ರ್ಯ ಹೋರಾಟದಿಂದ ಸ್ಫೂರ್ತಿ ಪಡೆದು ಪುನರ್‌ಸ್ಥಾಪಿಸಿದ್ದ ಸ್ಥಳೀಯ ಸೌಂದರ್ಯದ ಸೊಗಸಿನಲ್ಲಿನ ನಂಬಿಕೆಯನ್ನು ಹಾಗೂ ಅದು ನಮ್ಮ ಬದುಕಿನ ಸ್ವಾಯತ್ತತೆ ಹಾಗೂ ಅರ್ಥವಂತಿಕೆಗಳೊಂದಿಗೆ ಹೊಂದಿರುವ ಸಾವಯಯವ ಸಂಬಂಧವನ್ನು ಮನದಟ್ಟು ಮಾಡುವ ಕಡೆಗೆ. ಇದನ್ನು, ಜಾಗತೀಕರಣ ಹೇಗೆ ತನ್ನ ಜಾಗತಿಕ ವ್ಯಾಪಾರ ಜಾಲದ ಆಶೋತ್ತರಗಳು ಸೃಷ್ಟಿಸಿದ ಬೆಡಗು ಬಿನ್ನಾಣಗಳೊಂದಿಗೆ ಸ್ಥಳೀಯ ಸೌಂದರ್ಯದ ಪರಿಕಲ್ಪನೆಯನ್ನೇ ಅಪಮೌಲ್ಯಗೊಳಿಸಿ ಕನ್ನಡ ಕಟ್ಟುವ ಕೆಲಸವನ್ನು ನಾಶಮಾಡುವ ಮೂಲಕ ನಮ್ಮ ಬದುಕಿನ ಸ್ವಾಯತ್ತತೆ ಹಾಗೂ ಅರ್ಥವಂತಿಕೆಗಳ ಅಡಿಗಲ್ಲುಗಳನ್ನು ಅಲ್ಲಾಡಿಸುತ್ತಿದೆ ಎಂಬುದನ್ನು ವಿವರಿಸುವಂತಹ ಸಾಂಸ್ಕೃತಿಕ ಚಳುವಳಿಯಾಗಿ ರೂಪಿಸುವ ಮೂಲಕ ಸಾಧಿಸಬಹುದಾಗಿದೆ. ಇದು ಇನ್ನೊಂದು ರೀತಿಯಲ್ಲಿ ಕನ್ನಡದ ಸ್ವಾತಂತ್ರ್ಯ ಹೋರಾಟವೇ ಆಗಿ ಮೂಡಿಬರಬೇಕಿದೆ. ಮೊದಲಾಗಿ ಇದು ರಾಜ್ಯಾದ್ಯಂತ ಎಲ್ಲ ಕನ್ನಡದ ಮಕ್ಕಳಿಗೆ ಕನ್ನಡದಲ್ಲೇ (ಕನ್ನಡೇತರ ಮಕ್ಕಳಿಗೆ ಕಾರ್ಯಸಾಧ್ಯವಿದ್ದೆಡೆಯಲ್ಲೆಲ್ಲಾ ಅವರ ಮಾತೃಭಾಷೆಯಲ್ಲಿ; ಆದರೆ ಕನ್ನಡವನ್ನು ಕಡ್ಡಾಯವಾಗಿ ಒಂದು ಭಾಷೆಯಾಗಿ ಕಲಿಸುವ) ಶಾಲಾ ಶಿಕ್ಷಣವನ್ನು

ದೊರಕಿಸಿಕೊಡುವಂತಹ ಏಕರೂಪದ ಶಿಕ್ಷಣಕ್ಕಾಗಿ (ಈಗ ತೀರ್ಪು ಕಾಯ್ದಿರಿಸಲ್ಪಟ್ಟಿರುವ ಮಾತೃಭಾಷಾ ಶಿಕ್ಷಣ ಒದಗಿಸುವ ಸರ್ಕಾರದ ಹಕ್ಕಿಗೆ ಸಂಬಂಧಿಸಿದ ತಡೆಯಾಜ್ಞೆ ತೆರವುಗೊಳಿಸುವ ಮೊಕದ್ದಮೆ, ಸರ್ಕಾರದ ಪರವಾಗಿಯೇ ಇತ್ಯರ್ಥವಾದರೂ, ೧೯೯೪ಕ್ಕಿಂತ ಮುಂಚೆ ಸ್ಥಾಪಿತವಾದ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ಮಾತೃಭಾಷಾ ಶಾಲೆಗಳನ್ನಾಗಿ ಪರಿವರ್ತಿಸಲು ಕಾನೂನುಕ್ರಮ ಕೈಗೊಳ್ಳುವಂತೆಯೂ) ಒತ್ತಾಯಿಸುವ ಚಳುವಳಿ ರೂಪದಲ್ಲಿ ಆರಂಭವಾಗಬೇಕಿದೆ. ಜೊತೆಗೆ ಹೊಸ ಕಾಲದ ಸವಾಲುಗಳನ್ನು ದೇಶೀಯ ವಿವೇಕದ ಮೂಲಕವೇ ಎದುರಿಸುವ ಛಾತಿಯನ್ನು ಮಕ್ಕಳಲ್ಲಿ ಬೆಳೆಸುವಂತಹ ದೇಶಿ ಶಿಕ್ಷಣ ಕ್ರಮವೊಂದನ್ನು ರೂಪಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಬೇಕಿದೆ. ಇದರ ಅಂಗವಾಗಿಯೆ, ಶಾಲಾ ಶಿಕ್ಷಣ ಮುಗಿಸುವ ಹೊತ್ತಿಗೆ ಮಗು ಇಂಗ್ಲಿಷ್‌ನಲ್ಲೂ ವ್ಯಾವಹಾರಿಕ ಸಾಮರ್ಥ್ಯ ಸಾಧಿಸುವ ರೀತಿಯ, ಪೂರಕ ಸರಳ ಇಂಗ್ಲಿಷ್ ಭಾಷಾ ಕಲಿಕಾ ಕ್ರಮವೊಂದನ್ನು ರೂಪಿಸುವ ಕಡೆಯೂ ಗಮನ ಹರಿಸಬೇಕಿದೆ.

ಒಮ್ಮೆ ನಮ್ಮ ಮಕ್ಕಳನ್ನು ದೇಸಿ ಸೌಂದರ್ಯ ಹಾಗೂ ಆಶಯಗಳಲ್ಲಿ ಬೇರು ಬಿಡುವಂತೆ ಮಾಡಿದಲ್ಲಿ, ಜಾಗತೀಕರಣದ ಹಿಂದಿನ ರಾಜಕೀಯ ಹುನ್ನಾರಗಳನ್ನು ಅರಿಯುವ ಸಾಮರ್ಥ್ಯ ಅವರಲ್ಲೇ ಮೂಡಿ, ಜಾಗತೀಕರಣದ ವ್ಯಾವಹಾರಿಕ ಅನುಕೂಲಗಳನ್ನಷ್ಟೇ ನಮ್ಮ ಲೌಕಿಕ ಅಭಿವೃದ್ಧಿಗಾಗಿ ರೂಢಿಸಿಕೊಳ್ಳುವ ಔಚಿತ್ಯ ಪ್ರಜ್ಞೆ ಮತ್ತು ತಾರತಮ್ಯ ಜ್ಞಾನಗಳಿಂದ ಕೂಡಿದ 'ದೇಶೀ ಪ್ರತಿಭೆ' ಅವರಲ್ಲಿ ವಿಕಾಸಗೊಳ್ಳಲು ಸಹಾಯಕವಾಗುತ್ತದೆ. ಹೀಗೆ ಮುಖ್ಯವಾಗಿ ಕನ್ನಡ ಕಟ್ಟುವ ಕೆಲಸ, ಜಾಗತಿಕ ಆರ್ಥಿಕ ರಾಜಕಾರಣಕ್ಕೆ ಬಲಿಯಾಗಿ ನಮ್ಮ ಸಮಾಜಕ್ಕೆ ಅನ್ಯವಾಗುತ್ತ ಹೋಗುತ್ತಿರುವ ನಮ್ಮ ಶಿಕ್ಷಣ ಕ್ರಮವನ್ನು ಪುನರ್ರೂಪಿಸುವ ಕೆಲಸದಿಂದ ಆರಂಭಿಸಬೇಕಿದೆ. ಹಾಗೆ ನೋಡಿದರೆ, ನಿಜವಾದ ಅರ್ಥದಲ್ಲಿ ಇದೊಂದು ರಾಜಕೀಯ ಕಾರ್ಯಕ್ರಮವೇ ಆಗಿದೆ. ಹಾಗೇ ಇದು, ಜಾಗತೀಕರಣದ (ಮತ್ತು ಇದಕ್ಕೆ ಕಾರಣವಾದ ವಿಶ್ವಾಸಾರ್ಹತೆ ಕಳೆದುಕೊಂಡ ನಮ್ಮ ಎಡಪಂಥೀಯ ರಾಜಕಾರಣದ) ಫಲವಾಗಿ ಸಮೃದ್ಧಿಯಯ ಅನೇಕ 'ರೋಗ'ಗಳಿಗೆ ತುತ್ತಾಗಿ ವಿಕ್ಷಿಪ್ತಗೊಂಡಿರುವ ಸಮಾಜದ ಒಂದು ಭಾಗವನ್ನು ಮತ್ತು ಇದರ ಫಲವಾಗಿಯೇ ಅತಿ ಬಡತನದ 'ರೋಗ'ಗಳಿಗೆ ತುತ್ತಾಗಿ ವ್ಯಗ್ರವಾಗಿರುವ ಇನ್ನೊಂದು ಭಾಗವನ್ನು ಹತ್ತಿರಕ್ಕೆ ತಂದು, ಇಂತಹ 'ಅತಿ'ಗಳ ರೋಗಗಳಿಗೆ ಸಿಕ್ಕದಂತೆ ಸಮಾಜವನ್ನು ರಕ್ಷಿಸುವ ಸಾಂಸ್ಕೃತಿಕ ವಿವೇಕದ ಅರಿವು ಮೂಡಿಸುವ ಕಾರ್ಯಕ್ರಮವೂ ಆಗಿದೆ. ಅಲ್ಲದೆ ಇದು ದುಡಿಮೆ ಏಕೆ, ಹೇಗೆ ಮತ್ತು ಎಷ್ಟು ಹಾಗೂ ಒಟ್ಟು ಬದುಕಿನಲ್ಲಿ ಇದರ ಪಾತ್ರವೇನು, ಅದರ ಅರ್ಥಪೂರ್ಣತೆಗೇನು ಮತ್ತು ಎಷ್ಟು ಅದರ ಕೊಡುಗೆ ಎಂಬುದನ್ನು ಮನವರಿಕೆ ಮಾಡಿಕೊಡುವ ಆಧ್ಯಾತ್ಮಿಕ ಕಾರ್ಯಕ್ರಮವೂ ಆಗಿದೆ. ಸಮುದಾಯದ ಅರಿವಿನ ತಳ ತಲುಪುವ ಈ ಕೆಲಸ, ಸಮುದಾಯದ 'ಮಾತೃ' ಭಾಷೆಯಲ್ಲೇ ನಡೆಯಬೇಕಿದೆ.

ಇದು ನಡೆಯದೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಪುಸ್ತಕ ಪ್ರಾಧಿಕಾರಗಳಂತಹ ಔಪಚಾರಿಕ ಸಂಸ್ಥೆಗಳ ಮೂಲಕ ನಡೆಯುವ 'ಕನ್ನಡ ಅಭಿವೃದ್ಧಿ' ಕೆಲಸಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದ ವಿವಿಧ ಅಕಾಡೆಮಿಗಳು ನಡೆಸುವ ಜಾತ್ರೆಗಳು, ಹಬ್ಬಗಳ, ಸಮ್ಮೇಳನಗಳು,

ವಿಚಾರ ಸಂಕಿರಣಗಳು, ನಾಟಕೋತ್ಸವಗಳು ಹಾಗೂ ಸಾಹಿತ್ಯ ಪರಿಷತ್ತು ವಿವಿಧ ಮಟ್ಟಗಳಲ್ಲಿ ನಡೆಸುವ ಸಾಹಿತ್ಯ ಸಮ್ಮೇಳನಗಳು; ಸರ್ಕಾರವೂ ಸೇರಿದಂತೆ ನಾವೆಲ್ಲರೂ ಲೌಕಿಕ ಅಭಿವೃದ್ಧಿಯ ಹೆಸರಲ್ಲಿ ನಡೆಸುತ್ತಿರುವ ಕನ್ನಡ ಅಪ್ರಸ್ತುತೀಕರಣ ಕಾರ್ಯಕ್ರಮದ ಬಗ್ಗೆ ನಮ್ಮಲ್ಲೇ ಮೂಡುತ್ತಿರುವ ಅಪರಾಧಿ ಮನೋಭಾವನೆಯನ್ನು ಹತ್ತಿಕ್ಕಲಷ್ಟೇ ವಿಶೇಷ ಆಸ್ಥೆ ಹಾಗೂ ಸಂಭ್ರಮಗಳಿಂದ ಆಯೋಜಿಸುವ ಮಾನಸಿಕ ಪರಿಹಾರದ ಕಾರ್ಯಕ್ರಮಗಳಾಗಿ ಮಾತ್ರ ಕಾಣತೊಡಗುತ್ತವೆ. ಹಾಗಾಗಿ, ವೈಯಕ್ತಿಕ ನೆಲೆಯಲ್ಲಿ, ನಮ್ಮ ಮಕ್ಕಳನ್ನು ಕನ್ನಡ ಮಾಧ್ಯಮ ಶಾಲೆಗಳಿಗೆ ಕಳಿಸುವ ಮತ್ತು ಜ್ಞಾನವನ್ನು ಲಭ್ಯವಿರುವ ಮಟ್ಟದವರೆಗೆ ಕನ್ನಡದ ವಿವಿಧ ಮಾಧ್ಯಮಗಳ ಮೂಲಕವೇ ಪಡೆಯುವ ಹಾಗೂ ಸಾರ್ವಜನಿಕ ಜೀವನದಲ್ಲಿ ಸಾಧ್ಯವಿದ್ದೆಡೆಯಲ್ಲೆಲ್ಲಾ ಕನ್ನಡವನ್ನೇ ಬಳಸುವ ಅಗತ್ಯ ಮತ್ತು ಅನಿವಾರ್ಯತೆಗಳನ್ನು ಮನಗಾಣಿಸುವಂತಹ ಸಾಂಸ್ಕೃತಿಕ ಪುನರುಜ್ಜೀವನದ ಕಾರ್ಯಕ್ರಮಗಳು ಮಾತ್ರ ಇಂದು ನಿಜವಾಗಿ ಕನ್ನಡ ಕಟ್ಟುವ ಕೆಲಸಗಳಾಗಬಲ್ಲವು. ಸರ್ಕಾರೇತರ ಹಾಗೂ ಸಾರ್ವಜನಿಕರ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು, ಇಂತಹ ಕೆಲಸಗಳ ಮೂಲಕವೇ ನಿಜವಾಗಿ ಜೀವಂತವಾಗಬಹುದಾದ ಸಾಧ್ಯತೆ ಇರುವ ಸಂದರ್ಭವಿದು. ಹೋಬಳಿ ಮಟ್ಟದವರೆಗೂ ಘಟಕಗಳನ್ನು ಹೊಂದಿರುವ ಏಕ ಮಾತ್ರ ಸಾಂಸ ತಿಕ ಸಂಸ್ಥೆಯಾದ ಪರಿಷತ್ತು ಇಂದು ನಿಜವಾಗಿ ಮಾಡಬೇಕಾದ ಕೆಲಸಗಳಿವು. ಹಾಗೆ ನೋಡಿದರೆ ಪರಿಷತ್ತು ಸ್ಥಾಪನೆಯಾದದ್ದು ಇಂತಹುದೇ ಬಿಕ್ಕಟ್ಟಿನ ಸಂದರ್ಭದಲ್ಲಿ ಹಾಗೂ ಇಂತಹುದೇ ಕೆಲಸಗಳಿಗಾಗಿ! ಸಾಹಿತ್ಯ ಸಮ್ಮೇಳನಗಳನ್ನು ಆಯೋಜಿಸಬೇಕಾದದ್ದು, ಇಂತಹ ಕೆಲಸಗಳ ಸಿದ್ಧಿಯನ್ನು ಆಚರಿಸಲು ಮಾತ್ರ. ಆದರೆ ಪರಿಷತ್ತು ಈಗ ಕೊನೆಯಲ್ಲಿ ಮಾಡಬೇಕಾದ ಕೆಲಸಗಳನ್ನು ಮೊದಲು ಮಾಡಲು ಹೊರಟಂತಿದೆ!

ಹೀಗೆ ಕನ್ನಡ ಕಟ್ಟುವ ಕೆಲಸವನ್ನು ಸರ್ವ ವ್ಯಾಪಕ ನೆಲೆಗಳಲ್ಲಿ, ಆದ್ಯತೆಯ ಆಧಾರದ ಮೇಲೆ ಕ್ರಮಾಗತವಾಗಿ ಪುನಃ ಆರಂಭಿಸುವ ಕಾಲ ಈಗ ಬಂದಿದೆ. ಈ ಹಿಂದೆ ನಾನೊಮ್ಮೆ ಕನ್ನಡದ ಅಸ್ಮಿತೆಯ ಬಗ್ಗೆ ಬರೆಯುತ್ತಾ (ನೋಡಿ : 'ಆ ಗಣ ರಾಜ್ಯ - ಈ ಕರ್ನಾಟಕ' 'ವಿಕ್ರಾಂತ ಕರ್ನಾಟಕ' ೧೬ ಫೆಬ್ರವರಿ ೦೭) ಅದನ್ನು ಅಚ್ಚ ಕನ್ನಡದ ವ್ಯಕ್ತಿತ್ವವೆನಿಸುವ ಬಸವಣ್ಣನ ಆಂದೋಲನದ ಮಾದರಿಯ (ನಮ್ಮ ತನು-ಮನ-ಧನದ ಹಿತದೃಷ್ಟಿಯಿಂದಲೇ) ಹೋರಾಟದ ಮೂಲಕವೇ ಪುನರ್ಸ್ಥಾಪಿಸಬೇಕಾಗಿದೆ ಎಂದಿದ್ದುದು ಈ ಅರ್ಥದಲ್ಲೇ. ಅಂದರೆ ಇಂಥಹ ಚೌಕಟ್ಟಿನಲ್ಲೇ ಆಧುನಿಕ ಕರ್ನಾಟಕದ ಜನಪರ ಹೋರಾಟಗಳೆನಿಸಿದ ರೈತ ಚಳುವಳಿ, ಕೃಷಿ ಕಾರ್ಮಿಕರ ಚಳುವಳಿ, ಅಸಂಘಟಿತ ಕಾರ್ಮಿಕರ ಚಳುವಳಿ, ದಲಿತ ಚಳುವಳಿ, ಹಿಂದುಳಿದ ವರ್ಗಗಳ ಚಳುವಳಿ, ಕನ್ನಡ ಚಳುವಳಿ, ಪರಿಸರ ಚಳುವಳಿ ಇತ್ಯಾದಿಗಳು ತಮ್ಮೆಲ್ಲ ವರ್ಗೀಯ ಹಿತಾಸಕ್ತಿಗಳನ್ನು ಮರು ಹೊಂದಾಣಿಕೆ ಮಾಡಿಕೊಳ್ಳುವ ಮೂಲಕ ವ್ಯತ್ಯಾಸಗಳನ್ನು ಕರಗಿಸಿಕೊಂಡು, ಸಮಗ್ರ ಕನ್ನಡದ ಹೋರಾಟವಾಗಿ ಪುನರೂಪಿತವಾಗುತ್ತದೆ; ಆಗಲೇ ಕನ್ನಡ ಕಟ್ಟುವ ನಿಜವಾದ ಸಾಂಸ್ಕೃತಿಕ ಕೆಲಸ ಆರಂಭವಾಗುತ್ತದೆ ಎಂಬರ್ಥದಲ್ಲಿ.

(೭೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಉಡುಪಿ–೨೦೦೭ರ ಸ್ಮರಣ ಸಂಚಿಕೆಗಾಗಿ ಬರೆದ ಲೇಖನ)

ಲೋಹಿಯಾ ಸಮಾಜವಾದ : ಮುಂದೇನು?

ಲೋಹಿಯಾ ಜಗತ್ತಿನಲ್ಲಿ ಏಳು ರೀತಿಯ ಅನ್ಯಾಯಗಳನ್ನು ಗುರುತಿಸಿದ್ದರು. ಸಮಾಜವಾದದ ಮೂಲಕ ಇವುಗಳ ನಿವಾರಣೆಗಾಗಿ 'ಸಪ್ತ ಕ್ರಾಂತಿ' ಕಲ್ಪನೆಯನ್ನು ಮುಂದಿಟ್ಟಿದ್ದರು :

೧. ಗಂಡು ಮತ್ತು ಹೆಣ್ಣಿನ ನಡುವೆ ಸಮಾನತೆ.

೨. ಎಲ್ಲ ರೀತಿಯ ರಾಜಕೀಯ ಗುಲಾಮಗಿರಿ ಹಾಗೂ ಸಾಮ್ರಾಜ್ಯಶಾಹಿಯ ನಾಶ.

೩. ದೇಶದ ಜನತೆಯ ನಡುವೆ ಮತ್ತು ದೇಶಗಳ ನಡುವೆ ಆರ್ಥಿಕ ಸಮಾನತೆ.

೪. ಸಾಮೂಹಿಕತೆಯ ಅತಿಗಳ ವಿರುದ್ಧ ಮನುಷ್ಯನ ಖಾಸಗಿತನದ ರಕ್ಷಣೆ.

೫. ವಿಶೇಷ ಪ್ರಾಶಸ್ತ್ಯದ ಮೂಲಕ ಜಾತಿ ನಿರ್ಮೂಲನೆ.

೬. ನಿಶಸ್ತ್ರೀಕರಣ ಮತ್ತು ನಾಗರಿಕ ಅಸಹಕಾರ ಸತ್ಯಾಗ್ರಹದ ಬಳಕೆ.

೭. ಎಲ್ಲ ಬಣ್ಣಗಳ ಜನತೆಯ ನಡುವೆ ಸಮಾನತೆ ಮತ್ತು ಸೌಂದರ್ಯ ಮೀಮಾಂಸೆಯಲ್ಲಿ ಕ್ರಾಂತಿ.

ಈ ಸಪ್ತ ಕ್ರಾಂತಿಯ ಮೂಲಕ ಅವರು ಸಮಾನತೆಯ ಹೊಸ ಜಗತ್ತನ್ನು ಕಟ್ಟುವ ಕನಸು ಕಂಡಿದ್ದರು. ಲೋಹಿಯಾ ನಿಧನರಾಗಿ ೪೦ ವರ್ಷಗಳು ಸಂದಿವೆ. ಅವರು ತಮ್ಮ ಗೆಳೆಯರೊಂದಿಗೆ ಕಟ್ಟಿದ ಸಮಾಜವಾದಿ ಪಕ್ಷ, ಜೆ.ಪಿ. ಮಾರ್ಗದರ್ಶನದಲ್ಲಿ ೧೯೭೭ರಲ್ಲಿ ರಚಿತವಾದ ಜನತಾಪಕ್ಷದಲ್ಲಿ ವಿಸರ್ಜನೆಯಾಗಿ ಸುಮಾರು ೩೦ ವರ್ಷಗಳಾಗಿವೆ. ಆದರೆ ಭಾರತದಲ್ಲಿ ಸಮಾಜವಾದಿ ಆಂದೋಲನದ ತೊರೆ, ತೆಳುವಾಗಿಯಾದರೂ ಇನ್ನೂ ಹರಿಯುತ್ತಿದೆ. ಲೋಹಿಯಾ ಪ್ರತಿಪಾದಿಸಿದ ಸಮಾಜವಾದವನ್ನು ಬಾಯಿ ಮಾತಿನಲ್ಲಾದರೂ ಎತ್ತಿ ಹಿಡಿಯುವ ಸಣ್ಣ ಪುಟ್ಟ ಪಕ್ಷಗಳು, ಗುಂಪುಗಳು ರಾಷ್ಟ್ರರಾಜಕಾರಣದಲ್ಲಿ ಇನ್ನೂ ಕಾರ್ಯನಿರತವಾಗಿವೆ. ಪಕ್ಷೇತರ ನೆಲೆಯಲ್ಲಿ ಸಮಾಜವಾದಿ ಅಧ್ಯಯನ-ಚಟುವಟಿಕೆಗಳಲ್ಲಿ ನಿರತವಾದ ಅನೇಕ ಸಂಘ-ಸಂಸ್ಥೆಗಳಿವೆ. ಲೋಹಿಯಾ ಹೆಸರಲ್ಲದಿದ್ದರೂ ಅವರು ಪ್ರತಿಪಾದಿಸಿದ ಸಮಾಜವಾದಿ ತತ್ವಗಳ ಪ್ರಭಾವದಿಂದಲೋ, ಅಥವಾ ಸಾರ್ವತ್ರಿಕವಾಗಿ ಸಮಾಜವಾದಿ ಆಂದೋಲನ ಉಂಟು ಮಾಡಿದ ವಾತಾವರಣದ ಪ್ರಭಾವದಿಂದಲೋ, ಅಲ್ಲಲ್ಲಿ ಜನಪರ ಆಂದೋಲನಗಳನ್ನು ಸಂಘಟಿಸುತ್ತಿರುವ ಸಾಹಸಿಗಳಿದ್ದಾರೆ. ನರ್ಮದಾ ಬಚಾವೋ

ಆಂದೋಲನದ ಮೇಧಾ ಪಾಟ್ಕರ್, ಜಲಾನಯನ ಅಭಿವೃದ್ಧಿ ಆಂದೋಲನದ ರಾಜೇಂದ್ರಸಿಂಗ್, ಪಂಚಾಯತ್‌ರಾಜ್ ಆಂದೋಲನದ ಇಳಂಗೋವನ್ ಸಣ್ಣ ಘಟಕ ತಂತ್ರಜ್ಞಾನ ಕ್ಷೇತ್ರದ ಸಂಶೋಧಕ ಪಿ.ವಿ. ಶೇಷಾದ್ರಿ ಮುಂತಾದವರನ್ನು ಇಲ್ಲಿ ಹೆಸರಿಸಬಹುದು. ಇತ್ತೀಚಿನ ಪಾಳೇಕರರ ನೈಸರ್ಗಿಕ ಕೃಷಿ ಆಂದೋಲನವನ್ನೂ ಈ ಪಟ್ಟಿಗೆ ಸೇರಿಸಬಹುದು. ಲೋಹಿಯಾ ಶಿಷ್ಯ ಕಿಷನ್ ಪಟ್ನಾಯಕ್ ತಾವು ನಿಧನರಾಗುವ ಇತ್ತೀಚಿನವರೆಗೂ ಈ ಎಲ್ಲ ಅಧ್ಯಯನ-ಚಟುವಟಿಕೆ-ಆಂದೋಲನಗಳ ನಡುವೆ ಸಮನ್ವಯಯ ಸಾಧಿಸುವ ಕೆಲಸ ಕೈಗೊಂಡಿದ್ದರು. ಇದಕ್ಕಾಗಿ ರಾಷ್ಟ್ರಾದ್ಯಂತ ಸಂಚರಿಸಿ, ವಿವಿಧ ರಾಜ್ಯಗಳಲ್ಲಿ ಸಮಾನ ಮನಸ್ಕ ಗುಂಪುಗಳನ್ನು ಸಂಘಟಿಸುವ ಪ್ರಯತ್ನ ಮಾಡಿದ್ದರು. ಈ ಎಲ್ಲ ಪ್ರಯತ್ನಗಳ ಹಿಂದೆ ಇರುವುದು ಲೋಹಿಯಾ ಪ್ರತಿಪಾದಿಸಿದ ಸಪ್ತ ಕ್ರಾಂತಿಯನ್ನಾಧರಿಸಿದ ಹೊಸ ಜಗತ್ತನ್ನು ಕಟ್ಟುವ ಬತ್ತದ ಆಕಾಂಕ್ಷೆ; ನಿಲ್ಲದ ಹಠ. ಅಂದರೆ, ಲೋಹಿಯಾ ಹಚ್ಚಿಸಿಟ್ಟ ಸಮಾನತೆಯ ಕಿಚ್ಚು ಇಷ್ಟು ವರ್ಷಗಳ ನಂತರವೂ ಇನ್ನೂ ಆರಿಲ್ಲ; ಅವರು ಪ್ರತಿಪಾದಿಸಿದ ಸಮಾಜವಾದಿ ತತ್ವ ಅಪ್ರಸ್ತುತಗೊಂಡಿಲ್ಲ ಎಂದೇ ಅರ್ಥ. ಆದರೆ ಅವರು ರೂಪಿಸಿಕೊಟ್ಟ ಕಾರ್ಯಕ್ರಮಗಳು?

ರಾಷ್ಟ್ರ ಮತ್ತು ಜಗತ್ತುಗಳೆರಡೂ ಈಗ ಲೋಹಿಯಾ ಕಾಲದಲ್ಲಿದ್ದಂತಿಲ್ಲ. ಅವರ ಸೃಜನಶೀಲ ಸಮಾಜವಾದಿ ದೃಷ್ಟಿಕೋನಕ್ಕೆ ಆಧಾರವಾಗಿದ್ದ ಎರಡು ಬಣಗಳ ಜಗತ್ತು ಈಗ ಏಕ-ಧ್ರುವ ಜಗತ್ತಾಗಿದೆ. ಬಂಡವಾಳಶಾಹಿಯು ಇಂದು ವೇಷ ಮರೆಸಿಕೊಂಡು ನಿಗಮ (ಕಾರ್ಪೊರೇಟ್)ಶಾಹಿಯಾಗಿ ತನ್ನ ಆಕರ್ಷಕ ಭಾವಭಂಗಿಗಳಲ್ಲಿ ಜನರನ್ನು ಆಕರ್ಷಿಸುತ್ತಿದೆ. ಲೋಹಿಯಾ ವಾದಿಸಿದಂತೆ ಕಮ್ಯೂನಿಸ್ಟ್ ಕ್ರಾಂತಿ ಹುಸಿ ಎಂದು ಸಾಬೀತಾಗಿದೆ. ಆದರೆ ಅದೇ ವೇಳೆ, ಅವರು ನಂಬಿದ್ದ ಸಮಾಜವಾದಿ ಕ್ರಾಂತಿಯೂ ಗುರಿ ಮುಟ್ಟದೆ ವಿಶ್ವಾಸಾರ್ಹತೆ ಕಳೆದುಕೊಂಡಿದೆ. ಆದುದರಿಂದ ಇಂದು ಸಮಾಜವಾದಿ ಆಂದೋಲನವನ್ನು ಮುನ್ನಡೆಸಬಯಸುವ ಜನ ಅನೇಕ ಮೂಲಭೂತ ಪ್ರಶ್ನೆಗಳನ್ನು ಎದುರಿಸಿಯೇ ಮುಂದೆ ಹೋಗಬೇಕಾಗಿದೆ- ಸಮಾಜವಾದದ ಗೊತ್ತು ಗುರಿಗಳ ಬಗೆಗೆ ಮತ್ತು ಸಮಾಜವಾದಿ ಆಂದೋಲನದ ಚಾಲೂ-ಚಹರೆಗಳ ಬಗೆಗೆ. ಮುಖ್ಯವಾಗಿ ಈ ಎರಡು ಪ್ರಶ್ನೆಗಳು : ಸ್ವತಃ ಲೋಹಿಯಾ ಅವರೇ ತಮ್ಮ ಬದುಕಿನ ಕೊನೆಯ ಹೊತ್ತಿಗೆ ತಾವೇ ರೂಪಿಸಿದ ಸಮಾಜವಾದಿ ಆಂದೋಲನ ಮತ್ತು ಕಾರ್ಯಕ್ರಮಗಳಿಂದ ಸುಸ್ತಾಗಿ ಹೋಗಿದ್ದರೇಕೆ? ಜನತೆ, ಲೋಹಿಯಾ ಅಥವಾ ಅವರ ಮಿತ್ರರು ಪ್ರತಿಪಾದಿಸಿದ ಸಮಾಜವಾದಿ ರಾಜಕಾರಣಕ್ಕೆ ಬೆಂಬಲ ನೀಡದೆ, ನೆಹರೂ ಮತ್ತು ಇಂದಿರಾಗಾಂಧಿಯವರ (ಅಥವಾ ಕಾಂಗ್ರೆಸ್) ಮೂಲಕ ವ್ಯಕ್ತವಾದ ಅದರ ದುರ್ಬಲ ಅನುಕರಣೆಗೇಕೆ ಬೆಂಬಲ ವ್ಯಕ್ತಪಡಿಸಿದರು?

ಸಮಾಜವಾದಿ ಆಂದೋಲನದ ಪ್ರಾಮಾಣಿಕತೆಯನ್ನಾಗಲೀ, ಸದುದ್ದೇಶವನ್ನಾಗಲೀ ಯಾರೂ ಪ್ರಶ್ನಿಸಲಾರರಾದರೂ, ಅದು ನಡೆದ ಮಾರ್ಗವೇನಾದರೂ ಜನರಲ್ಲಿ ಅಪನಂಬಿಕೆ ಹುಟ್ಟಿಸಿತೆ? ಎಂಬ ಪ್ರಶ್ನೆ ಕೇಳಿಕೊಳ್ಳಲು ಅವಕಾಶವಿದೆ. ಲೋಹಿಯಾ ತಮ್ಮ ಉಜ್ವಲ ಪ್ರತಿಭೆಗೆ ತಾವೇ ಮಾರು ಹೋಗಿ, ಇದರಿಂದಾಗಿ ಆಂದೋಲನ ಏಕವ್ಯಕ್ತಿ ಪ್ರದರ್ಶನವಾಗಿ ಮಾರ್ಪಟ್ಟು,

ಆಂದೋಲನ ಮತ್ತು ಜನತೆಯ ನಡುವೆ ಹೊಂದಾಣಿಕೆ-ಮರು ಹೊಂದಾಣಿಕೆಗಳನ್ನು ಸಾಧ್ಯಮಾಡಬಹುದಾಗಿದ್ದ ನಾಯಕತ್ವ-ವೈವಿಧ್ಯತೆ ಹಾಗೂ ಸಮಾಲೋಚನಾ ಸಂಪನ್ಮೂಲಗಳ ಕೊರತೆಯುಂಟಾಯಿತೇ? ಗಾಂಧೀಜಿ ಬ್ರಿಟಿಷ್ ಸರ್ಕಾರದ ವಿರುದ್ಧ ರೂಪಿಸಿದ ನಾಗರಿಕ ಅಸಹಕಾರ ಸತ್ಯಾಗ್ರಹವನ್ನು ಸ್ವತಂತ್ರ ಭಾರತದ ಸಮಾಜವಾದಿ ಹೋರಾಟದ ಅಸ್ತ್ರವನ್ನಾಗಿ ಮಾರ್ಪಡಿಸುವಾಗ, ಅದರಲ್ಲಿನ ಧಾರ್ಮಿಕ ಅಂಶ ಬಹುತೇಕ ಮಾಯವಾಗಿ ಕ್ರೋಧವೇ ಮೇಲುಗೈ ಪಡೆಯಿತೇ? ಈ ಮಾರ್ಪಾಟಿನಲ್ಲಿ ರೂಪುಗೊಂಡ ಧರಣಿ, ಘೇರಾವೋ, ಬಂದ್ ಮುಂತಾದ ಪ್ರತಿಭಟನೆಯ ಅಸ್ತ್ರಗಳು ಎಷ್ಟರಮಟ್ಟಿಗೆ ಜನತೆಯ ವಿಶ್ವಾಸ ಗಳಿಸಲು ಸಾಧ್ಯವಾಯಿತು?

ಸಮಾಜವಾದವು ಮಾರ್ಕ್ಸ್‌ವಾದದ ಇಲ್ಲವೇ ಬಂಡವಾಳವಾದದ ಪರಿಷ್ಕೃತ ರೂಪವಾಗಿ ಕಾಣಿಸಿಕೊಂಡು, ತನ್ನದೇ ಎನ್ನಬಹುದಾದ ಸ್ಪಷ್ಟ ಚಹರೆಯನ್ನು ಪಡೆದುಕೊಳ್ಳುವಲ್ಲಿ ಸೋಲುತ್ತಿರುವ ಬಗ್ಗೆ ಲೋಹಿಯಾ ಅನೇಕ ಬಾರಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಎಚ್ಚರಿಸಿದ್ದರು. ಆದರೆ ಲೋಹಿಯಾ ಕಾರ್ಯಕ್ರಮಗಳ ಮೂಲಕವಾದರೂ ಅದು ಅಂತಹ ಸ್ಪಷ್ಟ ಚಹರೆಯನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಯಿತೇ? ಇಂತಹ ಚಹರೆಗೆ ಮೂಲ ಆಧಾರವಾಗಿ ಅವರು ಪ್ರತಿಪಾದಿಸಿದ ಸಣ್ಣ ಯಂತ್ರ ಘಟಕ ತಂತ್ರಜ್ಞಾನ ಮತ್ತು ದಿನಬಳಕೆ ವಸ್ತುಗಳ ಆಧುನೀಕರಣದ ಮೇಲಿನ ನಿಯಂತ್ರಣ, ಎಷ್ಟರಮಟ್ಟಿಗಿನ ವಾಸ್ತವಿಕ ಪ್ರಜ್ಞೆಯಿಂದ ಕೂಡಿದುದು? ಮನುಷ್ಯನ ಚಿತ್ತವೃತ್ತಿಯ ನಿಯಂತ್ರಣ ಮಾಡದೇ ಇದು ಸಾಧ್ಯವಾದೀತೇ? ಸಾಗರಕ್ಕೆ ಅಣೆಕಟ್ಟು ಕಟ್ಟುವಂತಹ ಈ ಪ್ರಯತ್ನಕ್ಕೆ, ಸಮಾಜವಾದಿ ಆಂದೋಲನ ಎಷ್ಟರಮಟ್ಟಿಗಿನ ಸಿದ್ಧತೆ ಕೈಗೊಂಡಿತ್ತು? ಇದಕ್ಕೆಲ್ಲ ಗಾಂಧೀಜಿ ನಿರ್ಮಿಸಿದ್ದ ಸರಳ ಜೀವನ, ಉನ್ನತ ಚಿಂತನದ ಸ್ಥೂಲ ವಾತಾವರಣವೇ ಸಾಕು ಎಂದು ಅದು ಮುಗ್ಧವಾಗಿ ನಂಬಿತ್ತೇ?

ಲೋಹಿಯಾ ತಾವು ಕಟ್ಟಿದ್ದ ಆಂದೋಲನ ಹೊರಲಾಗದಂತಹ ಆದರ್ಶಗಳನ್ನು ಅದರ ತಲೆಯ ಮೇಲೆ ಇಟ್ಟಿದ್ದರು. ಹಾಗಾಗಿಯೇ ಲೋಹಿಯಾ ಸಮಾಜವಾದ ಹೊರಗೆ ನಿಂತು ನೋಡಿದರೆ ಆಕರ್ಷಕವಾಗಿ ಕಾಣುತ್ತದೆ. ಒಳಹೊಕ್ಕರೆ ತಲೆಭಾರ ಶುರುವಾದಂತೆನಿಸುತ್ತದೆ... ದೊಡ್ಡ ತಾತ್ವಿಕರಾಗಿದ್ದ ಲೋಹಿಯಾ ವಸ್ತು ಮತ್ತು ಪ್ರಜ್ಞೆ, ಕ್ರೋಧ ಮತ್ತು ಕರುಣೆ, ವ್ಯಕ್ತಿ ಮತ್ತು ಸಮಾಜ, ಜಗತ್ತು ಮತ್ತು ರಾಷ್ಟ್ರ ಮುಂತಾದ ದ್ವಂದ್ವಗಳನ್ನು ಒಪ್ಪದವರು. ಅವುಗಳನ್ನು ತಮ್ಮ ಸೂಕ್ಷ್ಮ ಚಿಂತನೆಯ ಮೂಲಕ ಏಕತ್ರಗೊಳಿಸಿ ಸಮಾಜವಾದಿ ಆಂದೋಲನದ ತಾತ್ವಿಕತೆ ಕಟ್ಟಿದವರು. ಆದರೆ ಈ ತಾತ್ವಿಕತೆಯ ಸೂಕ್ಷ್ಮತೆಯನ್ನು ಜನಸ್ತೋಮ ಅರಿಯುವ ಬಗೆ ಹೇಗೆ? ಹಾಗಾಗಿಯೇ ಅವರ ಅನೇಕ ತತ್ವ-ಕಾರ್ಯಕ್ರಮಗಳು ಸಮಾಜವಾದಿ ದೃಷ್ಟಿ-ಕೇಂದ್ರವನ್ನು ಕಳೆದುಕೊಂಡು, ಪರಿಣಾಮದಲ್ಲಿ ಚದುರಿಹೋದುವು. ಅವರ ಜಾತಿ ವಿನಾಶ ಆಂದೋಲನ, ಬ್ರಾಹ್ಮಣ ವಿರೋಧಿ ಆಂದೋಲನವಾಗಿ ಚದುರಿಹೋದದ್ದು ಹೀಗೇ. ಹಾಗೇ ಅವರ ವಿಶೇಷ ಪ್ರಾಶಸ್ತ್ಯ ತತ್ವ, ಹಿಂದುಳಿದ ಜಾತಿವಾದಕ್ಕೆ ದಾರಿ ಮಾಡಿಕೊಟ್ಟು ಸಮಾಜವಾದದ ರುಚಿಯನ್ನೇ

ಕೆಡಿಸಿದೆ. ಆಡಳಿತ ವಿಕೇಂದ್ರೀಕರಣ, ಅಧಿಕಾರ ಹಾಗೂ ಸಂಪನ್ಮೂಲಗಳನ್ನು ಹರಿದು ತಿನ್ನುವ ವ್ಯವಸ್ಥೆಯಾಗಿ ಮಾರ್ಪಾಡಾಗಿದೆ; ಜಾಗತಿಕ ಸರ್ಕಾರದ ಪರಿಕಲ್ಪನೆ, ಜಾಗತೀಕರಣದಲ್ಲಿ ಕೊನೆಗೊಂಡಿದೆ. ಇನ್ನು ಭಾಷಾ ನೀತಿ, ಜಾಗತೀಕರಣದ ಹೊರ ಹೊಡೆತಗಳನ್ನೂ ತಾಳಲಾಗದಷ್ಟು ದುರ್ಬಲವಾಗಿಹೋಗಿದೆ; ಇಂಗ್ಲಿಷ್ ಇಲ್ಲದೆ ಭಾರತ ಬೆಳೆಯದು ಎನ್ನುವ ವಾತಾವರಣ ನಿರ್ಮಾಣವಾಗಿದೆ!

ಹಾಗಾದರೆ ಲೋಹಿಯಾ ಸಮಾಜವಾದಕ್ಕೆ ಭವಿಷ್ಯವಿಲ್ಲವೇ? ಆ ತೀರ್ಮಾನಕ್ಕೆ ಬರುವುದಾದರೆ ಈವರೆಗಿನ ಎಲ್ಲ ಚರ್ಚೆ-ವಿವೇಚನೆಯ ಹಿಂದಿನ ಉತ್ಸಾಹವೇ ಅರ್ಥಹೀನವಾದೀತು. ಸಮಾಜವಾದಿ ಆಂದೋಲನದಿಂದ ಈವರೆಗೆ ನಾವು ಪಡೆದಿರುವುದನ್ನೆಲ್ಲ ಅಲ್ಲಗಳೆಯುವ ಆಚಾರಿತ್ರಿಕವಾದ ನಿಲುವಾದೀತು. ಸಮಾನತೆ, ಮನುಷ್ಯ ನಾಗರೀಕತೆಯ ಚಿರಂತನ ತುಡಿತ. ಲೋಹಿಯಾ ತಮ್ಮ ಕಾಲಕ್ಕೆ ಪ್ರಸ್ತುತವೆನಿಸಿದ ಸಮಾನತೆಯ ತತ್ವವೊಂದನ್ನು ರೂಪಿಸಿದರು. ಆ ತತ್ವ ಇಂದೂ ನಮ್ಮ ಚರ್ಚೆಯ ಆಸಕ್ತಿ ಕೇಂದ್ರವಾಗಿದ್ದರೆ, ಅದರಲ್ಲೇನೋ ಅಮೂಲ್ಯವಾದದ್ದಿರಲೇಬೇಕು. ಆದುದರಿಂದ ಅದನ್ನು ಶೋಧಿಸಿ, ಪುನರ್‌ರೂಪಿಸುವ ಜವಾಬ್ದಾರಿ ನಮ್ಮದು. ಈ ಸಂಬಂಧ ನಾವು ಅವರು ಪ್ರತಿಪಾದಿಸಿದ ತಂತ್ರಜ್ಞಾನ, ಜಾತಿ, ಭಾಷೆ ಮತ್ತು ವಿಕೇಂದ್ರೀಕರಣ ನೀತಿಗಳನ್ನು, ಈವರೆಗಿನ ನಮ್ಮ ಅನುಭವಗಳ ಬೆಳಕಿನಲ್ಲಿ ಪುನರ್‌ರೂಪಿಸಿ ಪರಸ್ಪರ ಜೋಡಿಸುವ ಅಗತ್ಯವಿದೆ.

ಜಾಗತೀಕರಣ ಸೃಷ್ಟಿಸಿರುವ ವೈವಿಧ್ಯಮಯ ಪದಾರ್ಥ ಪ್ರಪಂಚದ ಮಧ್ಯೆ; ಸಮಾಜವಾದ ಪ್ರತಿಪಾದಿಸಿದ್ದ 'ಸರಳ ಸಭ್ಯ ಜೀವನ ಮಟ್ಟ'ದ ಮಾದರಿ ತನ್ನ ಅರ್ಥ-ಆಕರ್ಷಣೆಗಳೆರಡನ್ನೂ ಕಳೆದುಕೊಂಡು, ಪ್ರಗತಿ ವಿರುದ್ಧವಾದ ಸ್ಥಗಿತತೆಯ ಮಾದರಿ ಎನ್ನಿಸಿಕೊಂಡಿದೆ. ಕಳೆದ ೨೫-೩೦ ವರ್ಷಗಳಲ್ಲಿ ಜಾಗತಿಕ ರಾಜಕಾರಣಕ್ಕೆ ಸಮರ್ಪಕವಾಗಿ ಪ್ರತಿಸ್ಪಂದಿಸದೇ ಹೋದ ಸಮಾಜವಾದಿ ರಾಜಕಾರಣದ ಜಡತೆಯೇ ಇದಕ್ಕೆ ಕಾರಣವಾಗಿದೆ. ಆದುದರಿಂದ ಸಮಾಜವಾದೀ ಆರ್ಥಿಕ ನೀತಿಯನ್ನು ಮೀರಿ ಬೆಳೆದು ನಿಂತಿರುವ ಇಂದಿನ ಜಾಗತಿಕ ಆರ್ಥಿಕ ನೀತಿಯ ಸಂದರ್ಭದಲ್ಲಿ, ಹಳೆಯದೇ ಮಾದರಿಯ ಸರಳ-ಸಭ್ಯ ಜೀವನ ಮಟ್ಟದ ಮಂತ್ರ ಜಪಿಸುವುದು ಹಠ ಮಾತ್ರವಾಗುತ್ತದೆ. ಈ ದೃಷ್ಟಿಯಿಂದ ಸಮಾಜವಾದದ ಆರ್ಥಿಕ ನೀತಿಯನ್ನು ಸಮಕಾಲೀನಗೊಳಿಸಿದ ಕಡೆ ಗಮನ ಹರಿಸಿ, ಖಾಸಗಿ ಬಂಡವಾಳ ಹಾಗೂ ತಂತ್ರಜ್ಞಾನ ಕುರಿತ ನಿಲುವನ್ನು ಪುನರ್ ಪರಿಶೀಲನೆಗೆ ಒಳಪಡಿಸಲಾಗಿದೆ.

ಜಾತಿ ವಿನಾಶ ಪರಿಕಲ್ಪನೆ ಇಂದು ಜಾತಿ ಸಮಾನತೆಯ ಪ್ರತಿಪಾದನೆಗೆ ಬಂದು ನಿಂತಿದೆ. ಇದಕ್ಕೆ ಮತ್ತೆ ಸಮಾಜವಾದಿ ಚಳುವಳಿಯ ಜಡತೆಯೇ ಕಾರಣವಾಗಿದೆ. ಸಾಮಾಜಿಕ ಹಿಂದುಳಿದಿರುವಿಕೆಯ ಪರಿಕಲ್ಪನೆಯನ್ನು ಪರಿಷ್ಕರಿಸುವ ಮೂಲಕ ಈ ಜಡತೆಯನ್ನು ನೀಗಿ ವಿಶೇಷ ಪ್ರಾಶಸ್ತ್ಯ ತತ್ವವನ್ನು ಸಮಕಾಲೀನ ಪರಿಸ್ಥಿತಿಗನುಗುಣವಾಗಿ ಪ್ರಸ್ತುತಗೊಳಿಸಬೇಕಿದೆ. ಖಾಸಗಿ ಬಂಡವಾಳದ ನಿಗಮಗಳು ರಾಷ್ಟ್ರಾದ್ಯಂತ ಸಮಾನಾಂತರ ಸರ್ಕಾರಗಳಂತೆ ಕಾರ್ಯ ನಿರ್ವಹಿಸುತ್ತಾ ಪರೋಕ್ಷವಾಗಿ ಪ್ರಜಾಪ್ರಭುತ್ವದ ಕಲ್ಪನೆಗೆ ಸವಾಲೊಡ್ಡುತ್ತಿರುವ ಇಂದಿನ

ಸಂದರ್ಭದಲ್ಲಿ, ಸ್ವಸಹಾಯ ಗುಂಪುಗಳ ಸಂಘಟನೆಯ ಮೂಲಕ ಸಹಕಾರಿ ಆಂದೋಲನವನ್ನು ಪುನಾರಚಿಸಿ, ಸಾಮಾಜಿಕ ಒಡೆತನದ ಪರಿಕಲ್ಪನೆಗೆ ಜೀವ ತುಂಬಿ, ಸ್ಥಳೀಯ ಸರ್ಕಾರಗಳನ್ನು ಬಲಗೊಳಿಸಬೇಕಿದೆ. ಇದು ಜನಭಾಷಾ ಮಾಧ್ಯಮದ ಶಿಕ್ಷಣದ ಮೂಲಕ ಸಿದ್ಧಗೊಂಡ ಜನತಾ ಸಂಘಟನೆಯಿಂದ ಮಾತ್ರ ಸಾಧ್ಯವಾದ್ದರಿಂದ, ಇಂದಿನ ಅಗತ್ಯಗಳಿಗನುಗುಣವಾಗಿ ವ್ಯಾವಹಾರಿಕ ಇಂಗ್ಲಿಷ್ ಕಲಿಕೆಗೂ ಅವಕಾಶವಿರುವ ಏಕರೂಪದ ಶಿಕ್ಷಣ ನೀತಿಯನ್ನು ಸಮಾಜವಾದಿ ಆಂದೋಲನ ಪ್ರತಿಪಾದಿಸಬೇಕಿದೆ.

ಕಿಷನ್ ಪಟ್ನಾಯಕ್ ಹೇಳುತ್ತಿದ್ದಂತೆ, ಇದು ಸಮಾಜವಾದಿಗಳಿಗೆ ಧ್ಯಾನದ ಕಾಲ. ದೊಡ್ಡ ಹೋರಾಟವೊಂದಕ್ಕೆ ಶಕ್ತಿ ಸಂಚಯನ ಮಾಡಿಕೊಳ್ಳುವ ಕಾಲ. ಆದರೆ ಈ ಹೋರಾಟ ಈವರೆಗಿನ ಸಮಾಜವಾದಿ ಹೋರಾಟದಂತೆ ಹೊರ ಹೋರಾಟವಾಗದೆ, ಒಳ ಹೋರಾಟವಾಗಿರಬೇಕಾಗಿದೆ. ಏಕೆಂದರೆ ಈ ಹೋರಾಟವಿರುವುದು ನಮ್ಮ ಮೈ ಮನಗಳೆರಡನ್ನೂ ನಾಶ ಮಾಡಹೊರಟಿರುವ ಜಾಗತೀಕರಣದ ವಿರುದ್ಧ. ಜಾಗತೀಕರಣ ಮತ್ತೇನೂ ಆಗಿರದೆ, ಲೋಹಿಯಾ ಯಾವುದನ್ನು ಸಾಮ್ರಾಜ್ಯಶಾಹಿ ಶೋಷಣೆಯ ಸಾಧನ ಎಂದು ಕರೆದರೋ ಆ ಬಂಡವಾಳವಾದದ ಅಂತಿಮ ರೂಪವಾಗಿದೆ. ಹಾಗಾಗಿ ಝುಗಝುಗಿಸುವ ಪದಾರ್ಥ ಪ್ರಪಂಚದ ಆಕರ್ಷಣೆ ಒಡ್ಡಿ, ಆತ್ಯಂತಿಕವಾಗಿ ಜಗತ್ತನ್ನೇ ಒಂದು ಷೇರು ಬಂಡವಾಳ ಉದ್ಯಮವನ್ನಾಗಿ ಪರಿವರ್ತಿಸಿ, ಒಂದು ನಿರ್ದಿಷ್ಟ ದಕ್ಷತೆಯನ್ನು ರೂಢಿಸಿಕೊಳ್ಳುವಲ್ಲಿ ಯಶಸ್ವಿಯಾಗುವ ಜನ ಮಾತ್ರ ಬದುಕುವ ಹಕ್ಕುಳ್ಳವರು ಎಂಬ ತನ್ನ ತತ್ವವನ್ನು ಸತ್ಯದಂತೆ ಪ್ರತಿಪಾದಿಸುತ್ತಿರುವ ಜಾಗತೀಕರಣದ ವಿರುದ್ಧ ಹೋರಾಟ, ಪ್ರಾಥಮಿಕವಾಗಿ ವೈಯಕ್ತಿಕ ಎಚ್ಚರದ ಹೋರಾಟವೇ ಆಗಿರಬೇಕು. ನಮ್ಮ ಆದ್ಯತೆಗಳನ್ನು ಔಚಿತ್ಯ ಮೀರದಂತೆ ಎಚ್ಚರದಿಂದ ರೂಪಿಸಿಕೊಂಡು, ಬದುಕಿನ ಶುಚಿ ರುಚಿಗಳನ್ನು ಕಾಯ್ದುಕೊಳ್ಳುವ ಹೋರಾಟವಿದು. ಈ ಹೋರಾಟದ ಮೂಲಕ ನಾವು ಸಮಾಜವಾದದ ಹೊಸ ನೀತಿ ಸಂಹಿತೆಯನ್ನೂ ರೂಪಿಸಿಕೊಳ್ಳಬಹುದಾಗಿದೆ.

ಜಗತ್ತಿನಾದ್ಯಂತ ಈ ಜಾಗತೀಕರಣ ವಿರುದ್ಧ 'ಇನ್ನೊಂದು ಜಗತ್ತು ಸಾಧ್ಯ' ಎಂಬ ಆಂದೋಲನದ ಮೆಲುಧ್ವನಿ ಈಗಾಗಲೇ ಕೇಳಿಸುತ್ತಿದೆ. ಲೋಹಿಯಾ ಕಲ್ಪಿಸಿಕೊಟ್ಟ ಹೊಸ ಸಮಾಜವಾದಿ ಜಗತ್ತಿನ ಪ್ರತಿಧ್ವನಿಯಂತಿರುವ ಈ ಇನ್ನೊಂದು ಜಗತ್ತಿನ ಆದ್ಯತೆಗಳನ್ನು ನಿರ್ಧರಿಸುವ ಪ್ರಕ್ರಿಯೆಯಲ್ಲಿ ಭಾರತದ ಸಮಾಜವಾದಿಗಳು ಭಾಗವಹಿಸುವ ಮೂಲಕ ಈ ಹೋರಾಟವನ್ನು ಆರಂಭಿಸಬಹುದು. ಇದು ಸದಾ ಏರುತ್ತಲೇ ಹೋಗುವ ಜೀವನಮಟ್ಟದ ಅನಾಹುತಕಾರಿ ನಾಗರೀಕತೆ ವಿರುದ್ಧ ಲೋಹಿಯಾ ನಿರೂಪಿಸಿದ ಒಂದು ಸಭ್ಯ ಜೀವನ ಮಟ್ಟವನ್ನು ಬದಲಾದ ಸಂದರ್ಭದಲ್ಲಿ ಪುನರನ್ವೇಷಿಸಿಕೊಳ್ಳುವ ಹೊಸ ನಾಗರೀಕತೆಯ ಪ್ರಯೋಗವಾಗಿಯೂ ಪರಿವರ್ತಿತವಾಗಬಹುದು. ಆದರೆ ಇದೆಲ್ಲ ಸಾಧ್ಯವಾಗುವುದು, ಹರದಿ,

ಹಂಚಿ ಹೋಗಿರುವ ಸಮಾಜವಾದಿಗಳು ತಮ್ಮ ಚಟುವಟಿಕೆಗಳಿಗಾಗಿ, ಮೊದಲ ಉಪ ಕ್ರಮವಾಗಿ ಒಂದು ಸಮನ್ವಯ ಸಮಿತಿಯನ್ನು ರೂಪಿಸಿಕೊಂಡಾಗ ಮಾತ್ರ. ರಾಜ್ಯಮಟ್ಟದಲ್ಲಾದರೂ ಇದು ಸಾಧ್ಯವಾಗಬೇಕು. ಇಲ್ಲದೇ ಹೋದರೆ ನಾವು ಸಮಾಜವಾದದ ಮಾತಾಡುವುದೇ ಆತ್ಮದ್ರೋಹದ ಕೆಲಸವಾಗುತ್ತದೆ.

ಕರ್ನಾಟಕದಲ್ಲಿ ಸಮಾಜವಾದಕ್ಕೆ ಗೋಪಾಲಗೌಡರಂತಹ ಧೀರರ ನಾಯಕತ್ವವಿತ್ತು. ಆ ಧೀರತೆಯನ್ನು ಕರ್ನಾಟಕದ ಸಮಾಜವಾದಿಗಳು ಸಾಮೂಹಿಕವಾಗಿ ಪ್ರದರ್ಶಿಸುವ ಕಾಲವೀಗ ಬಂದಿದೆ. ಹಳೆಯ ಶೈಲಿಯಲ್ಲಿ ಚಳುವಳಿ ಕಟ್ಟುವ ಅಗತ್ಯವಾಗಲೀ, ಶಕ್ತಿಯಾಗಲೀ ಸದ್ಯಕ್ಕೆ ಸಮಾಜವಾದಿಗಳಿಗೆ ಇಲ್ಲವಾದರೂ, ತತ್ವದ ನೆಲೆಯಲ್ಲಾದರೂ ನಿರ್ದಿಷ್ಟವಾಗಿ ರಾಷ್ಟ್ರಮಟ್ಟದ ಮತ್ತು ಸಾರ್ವತ್ರಿಕವಾಗಿ ಜಗತ್ತಿನ ರಾಜಕಾರಣಕ್ಕೆ ಪ್ರತಿಸ್ಪಂದಿಸುವ ಮೂಲಕ ನಮ್ಮ ಬದುಕಿಗೆ ಒಂದು ಅರ್ಥವನ್ನೂ, ಬೆಡಗನ್ನೂ ನೀಡಿರುವ ಈ ಚಳುವಳಿಯ ಕನಸನ್ನು ಮುಂದಿನ ಪೀಳಿಗೆಗೆ ದಾಟಿಸುವ ಜವಾಬ್ದಾರಿಯನ್ನಾದರೂ ನಿರ್ವಹಿಸಿದಂತಾಗುತ್ತದೆ. ಸಮಾಜವಾದಿ ಆಂದೋಲನವನ್ನು ಕಾಲಕಾಲಕ್ಕೆ ವಿಮರ್ಶಿಸಿ, ಉಳಿಸಿ ಬೆಳೆಸುವಲ್ಲಿ ಎಚ್ಚರ ತಪ್ಪಿದ ಸಮಾಜವಾದಿಗಳು, ಈಗ ನಿರ್ವಹಿಸಲೇಬೇಕಾದ ಜವಾಬ್ದಾರಿ ಇದು.

(ಇದೇ ಲೇಖಕರ 'ಲೋಹಿಯಾ ಸಮಾಜವಾದ ದರ್ಶನ' ಪುಸ್ತಕದಿಂದ)

●

ಅನುಬಂಧ –೧

ವಿಸ್ತಾರಗೊಳ್ಳಬೇಕಾದ 'ಅಹಿಂದ'

ಪ್ರಶ್ನೆ : ನೀವು ಬಹುಕಾಲದಿಂದಲೂ ಪ್ರಗತಿಪರ ಚಳುವಳಿಯ ಮಿತ್ರರಾಗಿ ಕೆಲಸ ಮಾಡುತ್ತಾ ಬಂದಿದ್ದೀರಿ. ಇದೀಗ ವಿಸ್ತಾರಗೊಳ್ಳುತ್ತಿರುವ 'ಅಹಿಂದ'ವನ್ನು ದೀರ್ಘಕಾಲದ ಚಳುವಳಿಯಾಗಿ ಬೆಳಸುವ ಮಾರ್ಗವನ್ನು ದಯಮಾಡಿ ಸೂಚಿಸಬಲ್ಲಿರಾ?

ಉತ್ತರ : 'ಅಹಿಂದ' ಆರಂಭವಾದದ್ದು ಹೇಗೇ ಇರಲಿ, ಸದ್ಯಕ್ಕೆ ಅದು ಸಿದ್ಧರಾಮಯ್ಯನವರ ರಾಜಕೀಯ ಅಳಿವು–ಉಳಿವುಗಳ ವೇದಿಕೆಯಾಗಿ ಮಾರ್ಪಟ್ಟಿರುವುದಂತೂ ಸತ್ಯ. ಹೀಗಿರುವಾಗ ಅದನ್ನು ಅದು ಈಗಿರುವ ಸ್ಥಿತಿಯಲ್ಲಿ ದೀರ್ಘ ಕಾಲದ ಚಳುವಳಿಯಾಗಿ ಬೆಳಸುವ ಪ್ರಶ್ನೆಯೇ ಏಳದು. ಹಾಗೇನಾದರೂ ಬೆಳೆಸುವ ಯೋಚನೆ ಇರುವವರು, ಮೊದಲು ಅದನ್ನು ವ್ಯಕ್ತಿನಿಷ್ಠೆಯಾಚೆಯ ತಾತ್ವಿಕ ವೇದಿಕೆಯನ್ನಾಗಿ ರೂಪಿಸುವ ಕಡೆ ಗಮನ ಹರಿಸಬೇಕು.

ಪ್ರಶ್ನೆ : ಅಹಿಂದ, ಸರ್ವೋದಯ ಕರ್ನಾಟಕ, ಬಿ.ಎಸ್.ಪಿ., ಸಮಾಜವಾದಿ ಪಕ್ಷಗಳು ಒಂದೇ ಮತದಾರ ವಲಯಕ್ಕೆ ಕೈ ಇಟ್ಟಂತೆ ಕಾಣುತ್ತದೆ. ಇದನ್ನು ತಪ್ಪಿಸಲು ಏನು ಮಾಡಬೇಕು?

ಉತ್ತರ : ಪ್ರಶ್ನೆಯಲ್ಲೇ, 'ಅಹಿಂದ'ವನ್ನು ಒಂದು ಪ್ರತ್ಯೇಕ ರಾಜಕೀಯ ಪಕ್ಷವಾಗಿ ಗ್ರಹಿಸಿರುವುದು ಸ್ಪಷ್ಟವಾಗಿದೆ. ಅಂದರೆ, 'ಅಹಿಂದ'ವನ್ನು ಸಿದ್ಧರಾಮಯ್ಯನವರ ಜನತಾದಳವೆಂದೇ ಗ್ರಹೀತವಾಗಿದೆ. ಇಲ್ಲಿದೆ ಹಿಂದುಳಿದ ಜಾತಿಗಳ ಚಳುವಳಿಯ ದುರಂತ.

ಸಿದ್ಧರಾಮಯ್ಯ, ದೇವೇಗೌಡರ ಹಳೇ ಗೌಡಿಕೆ ರಾಜಕಾರಣವನ್ನು ಎದುರಿಸಲು ವಿಫಲವಾಗಿ ಹೊರದೂಡಲ್ಪಟ್ಟಾಗ, ನಮ್ಮೆಲ್ಲರ ಸಹಾನುಭೂತಿ ಸಿದ್ಧರಾಮಯ್ಯನವರ ಪರವಿತ್ತು. 'ಸರ್ವೋದಯ ಕರ್ನಾಟಕ'ವು ತಾತ್ವಿಕವಾಗಿಯಾದರೂ ಪ್ರತಿನಿಧಿಸುತ್ತಿರುವ ಹೊಸ ರೀತಿಯ ಸಮಾಜವಾದಿ ರಾಜಕಾರಣಕ್ಕೆ ಸಮೂಹ ರಾಜಕಾರಣದ ದೀಕ್ಷೆ ದೊರಕಬಹುದೆಂಬ ಆಸೆಯಿತ್ತು. ಈಗ? ಸಿದ್ಧರಾಮಯ್ಯನವರು ಮುಕುಡಪ್ಪ–ಜಾಲಪ್ಪ–ಇಬ್ರಾಹಿಂರ ಸುಖ ಸಹವಾಸದಲ್ಲಿ ವಿರಮಿಸಿರುವುದನ್ನು ನೋಡಿದರೆ, ಅವರ ಹೋರಾಟ ಹಿಂದುಳಿದ ವರ್ಗಗಳ ಚಳುವಳಿಯ ಇನ್ನೊಂದು ಅಪೂರ್ಣ ಅಧ್ಯಾಯವಾಗಿಯೇ ಕೊನೆಗೊಳ್ಳುವಂತೆ ಕಾಣುತ್ತಿದೆ.

ಹಿಂದುಳಿದ ಜಾತಿಗಳ ಸಂಘಟನೆಯ ಮೂಲಕವೇ ರಾಜಕೀಯ ಮಾಡುವ ಕಲ್ಪನೆ, ಗೊಡ್ಡು ಸಮಾಜವಾದಿಗಳ ಒಂದು ವ್ಯಸನವಷ್ಟೆ. ಈ ಹಿನ್ನೆಲೆಯಲ್ಲಿ ಯಾರ ಮತ ಬುಟ್ಟಿಗೆ ಯಾರು ಕೈ ಹಾಕಿದ್ದಾರೆ ಎಂಬುದರ ಲೆಕ್ಕಾಚಾರವೂ ಒಂದು ಹಳೇ ವ್ಯಸನವಷ್ಟೇ. ಚಿಂತಿಸಲು,

ಬೆಳೆಯಲು ವರ್ತಮಾನವನ್ನು ಅರಿಯಲು ನಿರಾಕರಿಸುವ ಸಮಾಜವಾದಿಗಳ ಈ ಹಳೇ ತಾತ್ವಿಕ ವ್ಯಸನದಿಂದಾಗಿ ಅಖಂಡವೂ, ಸಮಗ್ರವೂ ಆಗಿ ರೂಪುಗೊಳ್ಳಬೇಕಾದ ಹೊಸ ಸಮಾಜವಾದಿ ರಾಜಕಾರಣದ ಕಲ್ಪನೆ, ಪದೇ ಪದೇ ಅದನ್ನು ತಪ್ಪಿಸಲು ಏನು ಮಾಡಬೇಕು, ಇದನ್ನು ತಪ್ಪಿಸಲು ಏನು ಮಾಡಬೇಕು ಎಂಬ 'ಚಿಲ್ಲರೆ' ರಾಜಕಾರಣದಲ್ಲೇ ತೊಡಗುವಂತಾಗಿದೆ.

ಪ್ರಶ್ನೆ : ದಲಿತ, ಶೂದ್ರ, ಅಲ್ಪಸಂಖ್ಯಾತ ಜಾತಿಗಳನ್ನು ಒಗ್ಗೂಡಿಸಲು ಪೆರಿಯಾರ್ ಮಾದರಿ ಅಥವಾ ವಚನ ಚಳುವಳಿಯ ಮಾದರಿಯಲ್ಲಿ ನಾವು ಈಗಲೂ ಮುನ್ನಡೆಯಲು ಸಾಧ್ಯವೇ?

ಉತ್ತರ : ನಮ್ಮ ಉದ್ದೇಶಗಳಿಗನುಗುಣವಾಗಿ ನಮ್ಮ ಮಾದರಿ ರೂಪುಗೊಳ್ಳುತ್ತಿರುತ್ತದೆಯಲ್ಲವೇ? ನೀವು ಉಲ್ಲೇಖಿಸಿರುವ ಮಾದರಿಗಳಂತೂ ಕೇವಲ ಅಧ್ಯಯನದ ಫಲಗಳಷ್ಟೇ. ವಚನ ಚಳುವಳಿಯ ಮಾದರಿ ಎನ್ನುತ್ತೀರಿ. ಅದರ ಸಾಹಿತ್ಯಿಕ ಸ್ವರೂಪದಾಚೆಗೆ ಏನಾದರೂ ಗ್ರಹಿಕೆಗೆ ಸಿಗುವಂತಿದೆಯೇ? ಪೆರಿಯಾರ್ ಚಳುವಳಿ ನಮ್ಮ ಕಣ್ಮುಂದೆಯೇ ಬಹು ರೂಕ್ಷವೂ, ಸ್ವಲ್ಪ ಮಟ್ಟಿಗೆ ಅಶ್ಲೀಲವೂ ಆಗಿ ಅವಸಾನಗೊಂಡಿದೆಯಲ್ಲವೇ? ಹೀಗಿರುವಾಗ, ಸದ್ಯಕ್ಕೆ 'ಅಹಿಂದ' ಜಾತಿಗಳನ್ನು ಒಗ್ಗೂಡಿಸಿವುದಾದರೂ ಏತಕ್ಕೆ? ಅಧಿಕಾರದ ಶೀಲ-ಸ್ವರೂಪಗಳನ್ನು ಬದಲಾಯಿಸುವುದಕ್ಕೋ ಅಥವಾ ಅದನ್ನು ಹೀಗಿರುವ ಸ್ಥಿತಿಯಲ್ಲೇ ಎಲ್ಲರೂ ಸಮನಾಗಿ ತಿಂದುಂಡು ಸಾಯುವುದಕ್ಕೋ? ಈ ಪ್ರಶ್ನೆಗಳಿಗೆ ಉತ್ತರ ಪಡೆದುಕೊಳ್ಳದೆ ನಿಮ್ಮ ಪ್ರಶ್ನೆಯನ್ನೆತ್ತಿಕೊಳ್ಳುವುದು ಕಷ್ಟ.

ಪ್ರಶ್ನೆ : ಅಹಿಂದ ಜಾತಿಗಳನ್ನು ರಾಜಕೀಯವಾಗಿ ಒಗ್ಗೂಡಿಸುವುದಕ್ಕಿಂತ ಸಾಂಸ್ಕೃತಿಕವಾಗಿ ಒಗ್ಗೂಡಿಸುವುದರ ಮೂಲಕ ದೀರ್ಘಕಾಲ ಈ ಸಂಘಟನೆಯನ್ನು ಮುಂದುವರಿಸಬಹುದಲ್ಲವೇ? ಈ ನಿಟ್ಟಿನಲ್ಲಿ ನಿಮ್ಮ ಸಲಹೆಗಳೇನು?

ಉತ್ತರ : ಸಾಂಸ್ಕೃತಿಕವಾಗಿ ಒಗ್ಗೂಡಿಸುವುದು ಎಂದರೆ ಯಾವ ಆಧಾರಗಳ ಮೇಲೆ? ಹಾಡು-ಹಸೆ-ಕುಣಿತಗಳ ಆಧಾರದ ಮೇಲೆಯೇ? ಅಥವಾ ನಮ್ಮೆಲ್ಲರ 'ಸಂಸ್ಕೃತಿ' ಒಂದೇ; ಅದು ಅಹಿಂದೇತರ ಗುಂಪಿಗಿಂತ ಭಿನ್ನ ಎಂಬ 'ಶಿಕ್ಷಣ'ದ ಮೂಲಕವೇ? ನಿಮಗೆಲ್ಲೋ ಭ್ರಾಂತು. ಪ್ರಜಾಪ್ರಭುತ್ವದ ಇತ್ತೀಚಿನ ಆವೃತ್ತಿಯಲ್ಲಿ ಸಂಸ್ಕೃತಿಯೂ ತನ್ನ ಸಾರ್ಥಕತೆ ಕಂಡುಕೊಳ್ಳುವುದು ರಾಜಕಾರಣದಲ್ಲಿಯೇ. ಇತ್ತೀಚಿನ ಆರೆಸ್ಸೆಸ್-ಬಿ.ಜೆ.ಪಿ. ಜಗಳ ವೈಯುಕ್ತಿಕ ನೆಲೆಯದ್ದೇನಲ್ಲ ಎಂದು ನಿಮಗೂ ಗೊತ್ತಿರಬೇಕು.

ಪ್ರಶ್ನೆ : ಅಹಿಂದಕ್ಕೆ ಅಗತ್ಯವಾದ ವೈಚಾರಿಕ, ತಾತ್ವಿಕ ಚೌಕಟ್ಟು ಯಾವುದಾಗಿರಬೇಕು ಎಂದು ನಿಮಗನ್ನಿಸುತ್ತದೆ?

ಉತ್ತರ : ಅಹಿಂದ ಒಂದು ಬೀಜ ಮಾತ್ರ. ಅದು ಇಡೀ ಸಮಾಜದ ವಿವೇಕದ ನೆಲದಲ್ಲಿ ಚಿಗುರೊಡೆದು, ಎಲ್ಲ ಜನವರ್ಗಗಳಿಗೂ ನೆರಳನ್ನು ಒದಗಿಸುವಂತಗಬೇಕು. ಲೋಹಿಯಾ ಪ್ರತಿಪಾದಿಸಿದ ಸಮಾಜವಾದದ ಚೌಕಟ್ಟನ್ನು ಮೂಲಾಧಾರವಾಗಿ ಇಟ್ಟುಕೊಂಡು, ಕಳೆದ ಐವತ್ತು ವರ್ಷಗಳ ರಾಜಕೀಯ ಪಾಠಗಳ ಹಿನ್ನೆಲೆಯಲ್ಲಿ ಅದನ್ನು ವಿಸ್ತರಿಸುತ್ತಾ ಹೋಗಬೇಕಾಗಬಹುದು. ಇದು ಬಹುದೊಡ್ಡ ಜವಾಬ್ದಾರಿಯ ಕೆಲಸ.

ಪ್ರಶ್ನೆ : 'ಅಹಿಂದ' ಕರ್ನಾಟಕದ ರಾಜಕಾರಣದ ಮುಂದಿನ ದಿಕ್ಕನ್ನು ನಿರ್ಧರಿಸುವಷ್ಟು ಶಕ್ತವಾಗಿದೆಯೇ? ಹಾಗೆ ಶಕ್ತವಾಗಲು ಅದು ಮಾಡಬೇಕಾದ ಕೆಲಸಗಳೇನು?

ಉತ್ತರ : 'ಅಹಿಂದ'ದ ಈಗಿನ ಅದರ ನಾಯಕರ ವರಸೆಗಳನ್ನು ನೋಡಿ ಹೇಳುವುದಾದರೆ, ಅದು ಆ ನಾಯಕರ ರಾಜಕೀಯ ಆಕಾಂಕ್ಷೆಗಳು ಈಡೇರಿದೊಡನೆ/ಕರಗಿ ಹೋದೊಡನೆ ಹಿನ್ನೆಲೆಗೆ ಸರಿಯಲಿವೆ. ಯಾವುದೇ ಸ್ಪಷ್ಟ ತಾತ್ವಿಕತೆ, ಅದನ್ನಾಧರಿಸಿದ ಕಾರ್ಯಕ್ರಮ ಹಾಗೂ ಅದನ್ನು ಅನುಷ್ಠಾನಗೊಳಿಸುವ ಸಂಕಲ್ಪ ಬಲವಿರುವ ಸಂಘಟನೆಯೇ ಇರದೆ, ಕೇವಲ ಒಂದು ರಾಜಕೀಯ ವಂಚನೆಯ ನೋವನ್ನಷ್ಟೇ ಭಾವನಾತ್ಮಕವಾಗಿ ಸ್ಫೋಟಿಸಿಕೊಂಡು ನಡೆದಿರುವ 'ಅಹಿಂದ', ಬಹುಬೇಗ ಆಯಾಸಗೊಂಡು ಕುಸಿದು ಬೀಳುವ ಎಲ್ಲ ಲಕ್ಷಣಗಳಿವೆ. ರಾಜಕೀಯ ಸರಳೀಕರಣದ ಇಂತಹ ಆಟ ಕಳೆದ ಐವತ್ತು ವರ್ಷಗಳಲ್ಲಿ ಬಹುಬಾರಿ ಆಡಲ್ಪಟ್ಟಿದ್ದು(ಪಾತ್ರಧಾರಿಗಳು ಬೇರೆ ಬೇರೆ ಅಷ್ಟೆ), ಅದನ್ನು ಸ್ವಇಚ್ಛೆಯಿಂದ ನೋಡುವವರ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಿದೆ, ಹೆಚ್ಚಾಗುತ್ತಿಲ್ಲ. ಇದನ್ನರಿತು ಹಳೇ ರಾಜಕಾರಣದ ವರಸೆಗಳನ್ನು ಬಿಟ್ಟು, ಹಣ-ಜಾತಿ ಬಲಗಳನ್ನಷ್ಟೇ ಪ್ರಮುಖ ಮಾಡಿಕೊಳ್ಳದ, ಹೊಸ ಸಾಮಾಜಿಕ ಸನ್ನಿವೇಶಕ್ಕೆ ತಕ್ಕಂತಹ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುವ 'ಹೊಸ' ಸಮಾಜವಾದಿ ರಾಜಕಾರಣದ ಬಗ್ಗೆ ಜನಾಭಿಪ್ರಾಯ ರೂಪಿಸುವತ್ತ 'ಅಹಿಂದ' ಗಮನ ಹರಿಸಿದರೆ ಒಳ್ಳೆಯದು.

(ಸಂವಾದ ಡಿಸೆಂಬರ್, ೨೦೦೫)

ಭಯೋತ್ಪಾದನೆಯೂ ಪೌರುಷ ರಾಜಕಾರಣವೂ.....

೧. ಭಯೋತ್ಪಾದನೆಯನ್ನು ನೀವು ಹೇಗೆ ವ್ಯಾಖ್ಯಾನಿಸುತ್ತೀರಿ? ಭಯೋತ್ಪಾದನೆಯ ಹಿಂದೆ ಇರುವ 'ಯುದ್ಧ ಸಿದ್ಧಾಂತ'ಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು?

ಎಲ್ಲ ಹಿಂಸೆಯೂ ಅಂತಿಮವಾಗಿ ಭಯೋತ್ಪಾದನೆ ಎನ್ನಿಸಿಕೊಳ್ಳುವುದಾದರೂ, ಭಯೋತ್ಪಾದನೆಗೆ ಇಂದಿನ ಜಾಗತಿಕ ರಾಜಕೀಯ ಸಂದರ್ಭದಲ್ಲಿ ಒಂದು ನಿರ್ದಿಷ್ಟ ಅರ್ಥ ಪ್ರಾಪ್ತಿಯಾಗಿದೆ. ಸಾಂವಿಧಾನಿಕ(ಅಂದರೆ ಜನಶಕ್ತಿಯ) ಅನುಮೋದನೆ ಇಲ್ಲದೆ ಒಂದು ರಾಷ್ಟ್ರದ ಅಥವಾ ಸಮುದಾಯದ ಭಿನ್ನಮತೀಯ ಗುಂಪುಗಳು ತಮ್ಮ ಅಭಿಪ್ರಾಯ ಅಥವಾ ದೃಷ್ಟಿಕೋನಗಳನ್ನು ಪ್ರಚುರಪಡಿಸಲು ಮತ್ತು ಅವುಗಳ ಪರವಾಗಿ ಬೆಂಬಲ ಸಂಘಟಿಸಿಕೊಳ್ಳಲು ತನ್ನ ಜನರ ಮೇಲೇ ಅಥವಾ ಇತರ ಸಮಾಜಗಳ ಅಥವಾ ರಾಷ್ಟ್ರಗಳ ಮೇಲೆ ನಡೆಸುವ ಹಿಂಸಾಚಾರವನ್ನು ಸ್ಥೂಲವಾಗಿ ಭಯೋತ್ಪಾದನೆ ಎಂದು ಕರೆಯಬಹುದು. ಶಬ್ದಾರ್ಥ ಹಾಗೂ ಭಾವಾರ್ಥ ಎರಡರ ನೆಲೆಯಲ್ಲೂ ಭಯೋತ್ಪಾದನೆಯ ಅರ್ಥ, ನಾವು ಹಿಂಸೆ–ಅಹಿಂಸೆಯ ಪರಿಕಲ್ಪನೆಗಳನ್ನು ನಾವು ಯಾವ ನೈತಿಕ ನೆಲೆಯಲ್ಲಿ ಗ್ರಹಿಸುತ್ತೇವೆ ಎಂಬುದನ್ನು ಅವಲಂಬಿಸಿದೆ. ಈ ಅರ್ಥದಲ್ಲಿ ಇದು ಧಾರ್ಮಿಕ ಪ್ರಶ್ನೆಯೂ ಹೌದು. ಹಾಗಾಗಿಯೇ ಇಂದು ಭಯೋತ್ಪಾದನೆ ಕೆಲವರಿಗೆ ಧಾರ್ಮಿಕ ಕೆಲಸವಾಗಿದ್ದರೆ, ಕೆಲವರಿಗೆ ಅಧಾರ್ಮಿಕ ಕೆಲಸವಾಗಿರುತ್ತದೆ. ಇನ್ನು ನಿಮ್ಮ 'ಯುದ್ಧ ಸಿದ್ಧಾಂತ'ದ ವಿಷಯವಾಗಿ, ಮುಂದಿನ ಪ್ರಶ್ನೆಗಳ ಉತ್ತರದಲ್ಲಿ ನನ್ನ ಪ್ರತಿಕ್ರಿಯೆಯನ್ನು ಗ್ರಹಿಸಬಹುದು.

೨. ಮುಸ್ಲಿಮರೆಲ್ಲ ದುಷ್ಟರು ಮತ್ತು ಭಯೋತ್ಪಾದಕರೆಂದು ಬಿಂಬಿಸುವ ಪ್ರಯತ್ನ ರಾಷ್ಟ್ರ ಮತ್ತು ಅಂತರ್‍ರಾಷ್ಟ್ರೀಯ ಮಟ್ಟದಲ್ಲಿ ವ್ಯವಸ್ಥಿತವಾಗಿ ನಡೆಯುತ್ತಿದೆ. ಒಂದು ಧರ್ಮವನ್ನು ಹಾಗೂ ಅದನ್ನು ಅವಲಂಬಿಸಿರುವವರನ್ನು ಸಾರಾ ಸಗಟು ಭಯೋತ್ಪಾದಕರೆಂದು ನಿಂದನೆಗೆ ಗುರಿ ಮಾಡುವುದು ಸರಿಯೇ? ಚರಿತ್ರೆಯ ದೀರ್ಘಕಾಲೀನ ಪರಿಣಾಮದಲ್ಲಿ ಇದು ಯಾವ ಆಯಾಮಗಳನ್ನು ಪಡೆದುಕೊಳ್ಳಬಹುದು?

ನನಗೇನೂ ಹಾಗನ್ನಿಸುವುದಿಲ್ಲ. ಇಂದು ಜಗತ್ತಿನಲ್ಲಿ ಎದ್ದು ಕಾಣುವಂತೆ ನಿರಂತರವಾಗಿ ಭಯೋತ್ಪಾದನೆಯ ಕೃತ್ಯಗಳಲ್ಲಿ ತೊಡಗಿರುವವರು, ಅಮೆರಿಕಾದಿಂದ ಹಿಡಿದು ಇಂಡೋನೇಷ್ಯಾದವರೆಗೆ ಮುಸ್ಲಿಮರೇ ಆಗಿರುವುದರಿಂದ, ಈವೊಂದು ಅಭಿಪ್ರಾಯ ಆಳವಾದ ರಾಜಕೀಯ ತಿಳುವಳಿಕೆಯಿಲ್ಲದ ಜನಸಾಮಾನ್ಯರಲ್ಲಿ ಮೂಡುವುದು ಸಹಜ.

ಆದರೆ ಒಂದು ಜನ ವರ್ಗದ ಇಂತಹ ಸಾರಾಸಗಟು ಅಭಿಪ್ರಾಯದ ವಿರುದ್ಧವೂ, ಅಮೆರಿಕಾ ಸೇರಿದಂತೆ ಜಗತ್ತಿನಾದ್ಯಂತ ಜನ ಜಾಗೃತಿ ಕಾರ್ಯಕ್ರಮಗಳು ನಡೆದಿವೆ. ಇತ್ತೀಚೆಗೆ ತಾನೇ ನಮ್ಮ ಬೆಂಗಳೂರಿನ ಹನೀಫ್ ವಿರುದ್ಧದ ಕಾರ್ಯಾಚರಣೆಯ ವಿರುದ್ಧವೇ ಆಸ್ಟ್ರೇಲಿಯಾದ ಹಾಗೂ ಭಾರತದ ಜನತೆ ಕೂಡಾ ಮತಭೇಧವಿಲ್ಲದೆ ಪ್ರತಿಭಟಿಸಿ ಆತನ ನೆರವಿಗೆ ಬರಲಿಲ್ಲವೇ?. ಯಾವುದೇ ಒಂದು ಧರ್ಮದವರನ್ನು ಭಯೋತ್ಪಾದಕರು ಎಂದು ಸಾರಾಸಗಟಾಗಿ ಕರೆಯುವುದು ಅಥವಾ ನಿಂದಿಸುವುದು ಅವಿವೇಕದ ಪರಮಾವಧಿ ಅಷ್ಟೆ. ಆದರೆ ಅಂತಹ ನಿಂದನೆಗೆ ಗುರಿಯಾದ ಧಾರ್ಮಿಕ ಸಮುದಾಯದ ನಾಯಕತ್ವ-ಧಾರ್ಮಿಕ, ಸಾಮಾಜಿಕ ಸಾಂಸ್ಕೃತಿಕ ಹಾಗೂ ರಾಜಕೀಯ ಯಾವುದಾರೂ ನೆಲೆಯ-ಕೂಡಾ ಒಮ್ಮೆ ಈ ನಿಂದನೆಗೆ ಕಾರಣವಾದರೂ ಏನು ಎಂದು ಪ್ರಾಮಾಣಿಕ ಹಾಗೂ ವಸ್ತುನಿಷ್ಠವಾಗಿ ಆಲೋಚಿಸುವ ಪ್ರಯತ್ನವನ್ನೂ ಮಾಡಬೇಕು. ಅಂತಹ ಗಂಭೀರ ಪ್ರಯತ್ನ ಯಾವ ಮಟ್ಟದಲ್ಲೂ ಸಂಘಟಿತವಾಗದಿರುವುದೇ, ಎಲ್ಲ ಗೊಂದಲಗಳಿಗೆ ಕಾರಣವಾಗಿದೆ. ಈ ಗೊಂದಲಗಳೇ ಚರಿತ್ರೆಯ ಮುಂದಿನ ಆಯಾಮಗಳನ್ನು ಸೃಷ್ಟಿಸುವಂತಾದರೆ, ಅದು ದೊಡ್ಡ ದುರಂತವೇ ಸರಿ.

೩. ಭಯೋತ್ಪಾದನೆ ಮೂಲತಃ ಅಮೆರಿಕಾದಂತಹ ಬಂಡವಾಳಶಾಹಿ ರಾಷ್ಟ್ರಗಳ ರಾಜಕೀಯ ದಾಳವಾಗಿ ಬಳಸಲ್ಪಡುತ್ತಿತ್ತಾದರೂ, ಈಚೆಗೆ "ಇಸ್ಲಾಂ" ಮಾತ್ರ ಇಂಥ ಆಪಾದನೆಗೇಕೆ ಗುರಿಯಾಯಿತು? ಬೇರೆ ಧರ್ಮದ ಜನ ಭಯೋತ್ಪಾದನೆಯಲ್ಲಿ ತೊಡಗಿದ್ದರೂ ಆ ಧರ್ಮವನ್ನೇಕೆ ಭಯೋತ್ಪಾದನೆ ಜತೆ ಸಮೀಕರಿಸುತ್ತಿಲ್ಲ?

ಭಯೋತ್ಪಾದನೆ ಮೂಲತಃ ಈ ಹಿಂದಿನ ಅಮೆರಿಕಾ-ರಷ್ಯಾಗಳ ಶೀತಲ ಸಮರದ ಅಂತ್ಯದ ಅವಶೇಷವೇ ಆಗಿದೆ. ಅಮೆರಿಕಾದ ಸಮೃದ್ಧಿಗೆ ಅಸ್ತಿವಾರ ಹಾಕಲ್ಪಟ್ಟಿದ್ದೇ ಅಲ್ಲಿನ ಮೂಲನಿವಾಸಿಗಳಾದ ರೆಡ್ ಇಂಡಿಯನ್ನರನ್ನು ಭಯೋತ್ಪಾದನೆಯ ಪ್ರಾಥಮಿಕ ಆವೃತ್ತಿಯ ಮೂಲಕ ನಾಶ ಮಾಡುವುದರೊಂದಿಗೆ. ಇದಕ್ಕೆ ಬಳಸಲಾದ ಅಸ್ತ್ರ: ಆಧುನಿಕ ತಂತ್ರಜ್ಞಾನ. ಇದರ ಸೊಕ್ಕಿನಲ್ಲೇ ಜಗತ್ತಿನ ಎರಡು ಮಹಾಯುದ್ಧಗಳು ನಡೆದದ್ದು. ಜಗತ್ತು ಎರಡು ಪಾಳೆಯಗಳಾಗಿ ಒಡೆದು, ಭಯೋತ್ಪಾದನೆಯ ವಿವಿಧ ರೂಪಗಳು ಚಿಗುರೊಡೆದದ್ದು. ಇಸ್ರೇಲ್ ಇದಕ್ಕೊಂದು ಸಾಕ್ಷಿಯಷ್ಟೆ. ರಷ್ಯಾ, ಪೂರ್ವ ಈರೋಪ್ ರಾಷ್ಟ್ರಗಳೆಂಬ ತನ್ನ ಇಸ್ರೇಲ್‌ಗಳು ತನ್ನ ಹಿಡಿತದಿಂದ ತಪ್ಪಿಸಿಕೊಂಡು ಹೋಗದಂತೆ ರಕ್ಷಿಸಿಕೊಳ್ಳಲು ಆಫ್ಘಾನಿಸ್ಥಾನದ ಮೇಲೆ ನಡೆಸಿದ ರಾಜಕೀಯ ಆಕ್ರಮಣವೇ ಆಧುನಿಕ ಭಯೋತ್ಪಾದನೆಗೆ ಕಾರಣವಾಯಿತು. ಒಸೆಮಾ ಬಿನ್ ಲಾಡೆನ್‌ನ ಸೃಷ್ಟಿಯಾಯಿತು. ಇಂದು ಇಸ್ರೇಲ್ ಹಿಂದಕ್ಕೆ ಸರಿದು, ಲಾಡೆನ್ ಜಾಗತಿಕ ಭಯೋತ್ಪಾದನೆಯ ಕೇಂದ್ರಕ್ಕೆ ಬಂದಿದ್ದರೆ, ಅದಕ್ಕೆ ಕಾರಣ, ಭಯೋತ್ಪಾದನೆ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವುದೇ ಆಗಿದೆ. ಹಾಗಾಗಿ ಭಯೋತ್ಪಾದನೆಯನ್ನು ಇಸ್ಲಾಂನೊಂದಿಗೆ ಸಮೀಕರಿಸುವ ಪ್ರವೃತ್ತಿ ಬೆಳೆಯುತ್ತಿದೆ.

ಭಾರತದಲ್ಲೂ ಇಪ್ಪತ್ತು ವರ್ಷಗಳ ಹಿಂದೆ ಪಂಜಾಬ್ ಅಶಾಂತಿಯ ಕಾಲದಲ್ಲಿ, ಸಿಖ್ ಧರ್ಮವನ್ನೂ ಹೀಗೆ ಭಯೋತ್ಪಾದನೆಯೊಂದಿಗೆ ಸಮೀಕರಿಸಲಾಗಿತ್ತು ಎಂಬುದನ್ನು

ನಾವು ಮರೆಯಬಾರದು. ಜೊತೆಗೆ, ಭಾರತವನ್ನು ಅಸ್ಥಿರಗೊಳಿಸುವ(ಬಹುಶಃ ಬಂಗ್ಲಾದೇಶದ ಹುಟ್ಟಿಗೆ ಕಾರಣವಾದುದರ ವಿರುದ್ಧ ಸೇಡು ತೀರಿಸಿಕೊಳ್ಳಲು) ಪ್ರಯತ್ನಗಳು ಪಾಕಿಸ್ಥಾನದಲ್ಲಿ ನೆಲೆಗೊಂಡಿರುವ ಮುಸ್ಲಿಂ ಮೂಲಭೂತವಾದಿ ಸಂಘಟನೆಗಳಿಂದ ನಡೆದಿರುವುದರಿಂದ, ಈ ಪ್ರವೃತ್ತಿಗೆ ಭಾರತದಲ್ಲಿ ಒಂದು ನೆಲೆಯಲ್ಲಿ ಮಾನ್ಯತೆ ದೊರೆಯುವಂತಾಗಿದೆ. ಬೇರೇ ಧರ್ಮದ ಜನ–ಉದಾಹರಣೆಗೆ LTTEಯ ತಮಿಳು ಉಗ್ರಗಾಮಿಗಳು- ಭಯೋತ್ಪಾದನೆಗೆ ತೊಡಗಿದ್ದರೂ, ಅದು ಮೂಲತಃ ಧಾರ್ಮಿಕ ಕಾರಣಗಳಿಂದಾಗಿ ಅಲ್ಲವಾದ್ದರಿಂದ, ಆ ಕಳಂಕ ಅವರ ಧರ್ಮಗಳಿಗೆ ತಟ್ಟಿಲ್ಲ ಅಷ್ಟೆ.

ಇಂದು ಕಾಣುತ್ತಿರುವ ಭಯೋತ್ಪಾದನೆ ತಾತ್ವಿಕವಾಗಿ, ಎರಡು ಜೀವನ ಕ್ರಮಗಳ ಹಾಗೂ ನಂಬಿಕೆಗಳ ನಡುವಣ ಘರ್ಷಣೆಯೇ ಆಗಿದ್ದು, ಆ ಅರ್ಥದಲ್ಲಿ ರಾಜಕೀಯ ಘರ್ಷಣೆಯೇ ಆಗಿದೆ. ಆದರೆ ಈ ಘರ್ಷಣೆಯನ್ನು ಸಾಂಸ್ಕೃತಿಕ ಅನುಸಂಧಾನಗಳ ಮೂಲಕ ಅಥವಾ ರಾಷ್ಟ್ರ ರಾಷ್ಟ್ರಗಳ ನಡುವಣ ಅಧಿಕೃತ ರಾಜಕೀಯ ಸಂವಾದದ(ಅವೆಷ್ಟೇ ಕಹಿಯಾಗಿದ್ದರೂ) ಮೂಲಕ ನಿವಾರಿಸಿಕೊಳ್ಳುವ ಬದಲು, ಯಾವುದೇ ರೀತಿಯ ಪ್ರಜಾಸತ್ತಾತ್ಮಕ ಮಾನ್ಯತೆ ಇಲ್ಲದ ಸಂಘಟನೆಗಳು ಅಪ್ರಜಾಸತ್ತಾತ್ಮಕ ಮಾರ್ಗಗಳಲ್ಲಿ ಇತ್ಯರ್ಥಗೊಳಿಸಲು ಹೊರಟಿರುವುದೇ ಸಮಸ್ಯೆಯ ಮೂಲವಾಗಿದೆ.

೪. ಭಯೋತ್ಪಾದನೆಯ ನಿವಾರಣೆಗೆ ನೀವು ಸೂಚಿಸುವ ಮಾರ್ಗೋಪಾಯಗಳೇನು?

ಇದು ನನ್ನಂಥವನಿಗೆ ದೊಡ್ಡ ಪ್ರಶ್ನೆ. ಹಾಗೆ ನೋಡಿದರೆ ಜಾಗತಿಕ ಶಕ್ತಿ(Global Power)ಯಾಗುವ ಪೌರುಷದ ಮಾತುಗಳ ರಾಜಕೀಯ ಪರಿಭಾಷೆಯನ್ನು ಸೃಷ್ಟಿಸಿರುವ ಶಕ್ತಿ ರಾಜಕಾರಣವೇ ಭಯೋತ್ಪಾದನೆಯ ಮೂಲವಾಗಿದೆ. ಭಾರತದ ರಾಜಕಾರಣವೂ ಈ ಪರಿಭಾಷೆಗೆ ಬಲಿಯಾಗಿ ಇಂದು ಭಯೋತ್ಪಾದನೆಗೆ ತುತ್ತಾಗಿದೆ. ಆದರೆ ಇದು ದೊಡ್ಡ ಸಮಸ್ಯೆಯೇ ಅಲ್ಲವೆಂಬಂತೆ, ಎರಡಂಕಿಯ ಪ್ರಗತಿ ದರದ ಅಭಿವೃದ್ಧಿಯ ಮಾತನ್ನಾಡುತ್ತಾ ಜನರನ್ನು ಮರುಳು ಮಾಡುವ 'ಮಾಯಾ ಬಜ಼ಾರ್' ರಾಜಕಾರಣ ಇಂದು ಜನಪ್ರಿಯವಾಗಿ, ಚಾಲ್ತಿಗೆ ಬಂದಿದೆ. ಇಂತಹ ರಾಜಕಾರಣವನ್ನೆದುರಿಸುವ ಮೂಲಕವೇ ಭಯೋತ್ಪಾದನೆಯನ್ನೂ ಎದುರಿಸಬೇಕಾಗುತ್ತದೆ. ಇದರ ಒಂದು ಭಾಗವಾಗಿಯೇ ಎಲ್ಲ ರೀತಿಯ ಭಯೋತ್ಪಾದನೆಯನ್ನೂ ಯಾವುದೇ ಬೌದ್ಧಿಕ ತಲೆ ಹರಟೆಗೆ ಎಡೆ ಕೊಡದೆ, ಸ್ಪಷ್ಟ ಶಬ್ದಗಳಲ್ಲಿ ವಿರೋಧಿಸಿ ಖಂಡಿಸಬೇಕಿದೆ.

(ಸಂವಾದ ಅಕ್ಟೋಬರ್, ೨೦೦೭)

ಇದೇ ಲೇಖಕರ ಇತರ ಕೃತಿಗಳು

- ಬೇರು ಬಿಳಲು (ಸಮಾಜವಾದಿ ಸಂಕಥನಗಳು)
- ಒಂದನೇ ತರಗತಿಯಿಂದ ಇಂಗ್ಲೀಷ್ : ಏಕೆ ಬೇಡ (ಭಾಷಾ ನೀತಿ ವಿಶ್ಲೇಷಣೆ)
- ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ (ಪರಿಚಯ – ವಿಮರ್ಶೆ)
- ಲೋಹಿಯಾ ಸಮಾಜವಾದ ದರ್ಶನ (ಲೋಹಿಯಾ ವಿಚಾರ ಮಂಥನ)
- ಅನೇಕ (ಸಾಹಿತ್ಯ ವಿಮರ್ಶೆ–ಸಾಮಾಜಿಕ ಚಿಂತನೆ)
- ಗಮನ (ಸಾಹಿತ್ಯ ವಿಮರ್ಶೆ–ಸಾಮಾಜಿಕ ಚಿಂತನೆ)

ಸಂಪಾದನೆ :

- ಕುವೆಂಪು : ಒಂದು ಪುನರನ್ವೇಷಣೆ
- ಲೋಹಿಯಾ : ವ್ಯಕ್ತಿ–ವಿಚಾರ–ವಿಮರ್ಶೆ
- ಒಲವು (ಅಂತರ್ಜಾತಿ ವಿವಾಹಿತರ ಸಮಾವೇಶದ ಸ್ಮರಣ ಸಂಪುಟ)

ಸಹಸಂಪಾದನೆ :

- ಹಣತೆ (ಜಿ.ಎಸ್. ಶಿವರುದ್ರಪ್ಪ ಅಭಿನಂದನ ಗ್ರಂಥ)
- ಮಾಸ್ತಿ ಸಾಹಿತ್ಯ : ಸಮಗ್ರ ದರ್ಶನ (ಮಾಸ್ತಿ ಸಾಹಿತ್ಯ ದರ್ಶನ)
- ಕಾಡಿನ ಹುಡುಗ ಕೃಷ್ಣ (ಶ್ರೀಕೃಷ್ಣ ಆಲನಹಳ್ಳಿ ನೆನಪಿನ ಸಂಪುಟ)

ಅನುವಾದ :

- ಜೆ.ಪಿ. ಸೆರೆಮನೆ ದಿನಚರಿ

ನಮ್ಮ ಪ್ರಕಟಣೆಗಳು

ಕಥಾ ಸಂಕಲನ

*1.	ಕರ್ಪೂರದ ಕಾಯದಲ್ಲಿ	ಡಾ. ರಾಜಶೇಖರ ನೀರಮಾನ್ವಿ	15/-
*2.	ನೀರಮಾನ್ವಿ ಕಥೆಗಳು	ಡಾ. ರಾಜಶೇಖರ ನೀರಮಾನ್ವಿ	15/-
*3.	ನಾರೀ ಹಳ್ಳದ ದಂಡೆಯಲ್ಲಿ	ಚಂದ್ರಕಾಂತ ವಡ್ಡು	15/-
*4.	ಮಣ್ಣಿನ ಬಳೆ ಮತ್ತು ಇತರ ಕತೆಗಳು	ಶಾಂತಾರಾಮ ಸೋಮಯಾಜಿ	30/-
*5.	ಹಂಗಿನರಮನೆಯ ಹೊರಗೆ	ಡಾ. ರಾಜಶೇಖರ ನೀರಮಾನ್ವಿ	60/-
*6.	ಅನಾಥ ಪಕ್ಷಿಯ ಕಲರವ	ವೀರಭದ್ರ	125/-
*7.	ಕಾಳಬೆಳುದಿಂಗಳ ಸಿರಿ	ರಾಜಶೇಖರ ಹತಗುಂದಿ	45/-
*8.	ಹಣದಿ	ಶಿವಕುಮಾರ ನಾಗವಾರ	60/-
*9.	ಪಟ್ಟಾ	ಚಿತ್ರಶೇಖರ ಕಂಠಿ	45/-
*10.	ಉಡಿಯಲ್ಲಿಯ ಉರಿ	ಕಲಿಗಣನಾಥ ಗುಡದೂರು	45/-
*11.	ಮಣ್ಣಿನ ಕುಡಿಕೆ	ಡಾ. ಮಲ್ಲಿಕಾರ್ಜುನ ವಣೇನೂರು	50/-
*12.	ಹಂಸೆ ಹಾರಿತ್ತು	ಬಿದರಹಳ್ಳಿ ನರಸಿಂಹಮೂರ್ತಿ	75/-
*13.	ಬಾಳೆಗಿಡ ಗೊನೆಹಾಕಿತು	ಬಿ. ಎಂ. ಬಶೀರ್	30/-
*14.	ವಾಸ್ತವದ ಕನವರಿಕೆ	ಡಿ. ಬಿ. ರಜಿಯಾ	30/-
*15.	ತಪ್ಪಂಡ	ಡಾ. ಬಸವರಾಜ ಸಾದರ	45/-
*16.	ಹುಡುಕಾಟ	ಅಬ್ಬಾಸ್ ಮೇಲಿನಮನಿ	60/-
17.	ಪ್ರಕ್ಷುಬ್ಧ ಅಲೆಗಳು	ಡಾ. ಪ್ರಹ್ಲಾದ ಅಗಸನಕಟ್ಟೆ	40/-
18.	ಲದೇಣಿಯಾ	ಕೃಷ್ಣ ನಾಯಕ್	50/-
19.	ಮೀಯುವ ಆಟ	ಡಾ. ಎಚ್. ನಾಗವೇಣಿ	60/-
20.	ಕಾಡಿನ ಬೇರು	ಡಾ. ಶಾಂತರಸ ಹೆಂಬೇರಾಳು	35/-
21.	ವಸುಂಧರೆಯ ಗ್ಯಾನ	ಡಾ. ಎಚ್. ನಾಗವೇಣಿ	35/-
22.	ಸದ್ಯಕಿದು ಹುಚ್ಚರ ಸಂತಿ	ಹಸನ್ ನಯೀಂ ಸುರಕೋಡ	50/-
23.	ಮೋಹನ ದಾಸ	ಆರ್. ಪಿ. ಹೆಗಡೆ	50/-

ಕಾವ್ಯ

*24.	ಹಟವಾದಿ ಮತ್ತು ಹುಡುಗಿ	ಡಾ. ಬೂದಗುಪ್ಪ ಪ್ರಹ್ಲಾದರೆಡ್ಡಿ	60/-
*25.	ಗಾಂಧಿಯೊಂದಿಗೆ	ಪ್ರಮೋದ್ ತುರ್ವಿಹಾಳ್	30/-
26.	ಆ ಅಜ್ಜ - ಈ ಮೊಮ್ಮಗ	ಮುದೇನೂರ ಸಂಗಣ್ಣ	75/-
*27.	ತಮಾಷಾ	ವಿಕ್ರಮ ವಿಸಾಜಿ .	45/-
*28.	ಜಾಲಿ ಹೂಗಳ ನಡುವೆ	ಬಿ. ಪೀರ್ ಬಾಷ	45/-
*29.	ಮರಾಠಿ ದಲಿತ ಕಾವ್ಯ	ಡಾ. ಸರಜೂ ಕಾಟ್ಕರ್	75/-
*30.	ಕೆಡಹಬಲ್ಲರು ಅವರು ಕಟ್ಟಬಲ್ಲೆವು ನಾವು	ಪ್ರೊ. ಅಲ್ಲಮಪ್ರಭು ಬೆಟ್ಟದೂರು	35/-
*31.	ಗಾಂಧೀಗಿಡ	ಸತೀಶ್ ಕುಲಕರ್ಣಿ	35/-
*32.	ಕಣ್ಣಮುಂದಿನ ಬೆಳಕು	ದಸ್ತಗೀರ್‌ಸಾಬ್ ದಿನ್ನಿ	35/-
33.	ಸಿಸಿಫಸ್‌ರ ಸುತ್ತು	ಡಾ. ಬಸರಾಜ ಸಾದರ	50/-
*34.	ಕದವಿಲ್ಲದ ಊರಲ್ಲಿ	ಜಿ. ಕೆ. ರವೀಂದ್ರಕುಮಾರ್	75/-
35.	ಅವ್ವ	ಡಾ. ಸರಜೂ ಕಾಟ್ಕರ್	60/-
36.	ಕಣ್ಮುಚ್ಚಿ ಕಂಡವರು	ಶಂಕರ ಪಾಟೀಲ	35/-
37.	ಸುನೀತ ಸಂಪದ	ಚೆನ್ನವೀರ ಕಣವಿ	100/-
38.	ಮಳೆಯೇ ಮಂಟಪ	ಎಚ್. ಎಸ್. ಶಿವಪ್ರಕಾಶ್	50/-
39.	ಬಾಂಬ್ ವಿರೋಧಿ ಪಾಕಿಸ್ತಾನಿ ಕವಿತೆಗಳು	ಡಾ. ಸರಜೂ ಕಾಟ್ಕರ್	30/-
40.	ಈ ಮಣ್ಣು ಅಪ್ಪಿಕೊಳ್ಳುವ ಮುನ್ನ...	ಗವಿಸಿದ್ಧ ಎನ್. ಬಳ್ಳಾರಿ	75/-
41.	ಮಗುಮಲಗಿದೆ ಎದೆಯಮೇಲೆ	ಎಂ. ಡಿ. ಒಕ್ಕುಂದ	35/-
42.	ಚಿತ್ತಾರ	ಡಾ. ಸಬಿಹಾ ಭೂಮಿಗೌಡ	40/-
43.	ಬಾಗಿಲಾಚೆಯ ಮೌನ	ರೂಪ ಹಾಸನ	50/-
44.	ಕಂಪನಿ ಸವಾಲ್	ಸತೀಶ ಕುಲಕರ್ಣಿ·	50/-
45.	ನೂರು ಗೋರಿಯ ದೀಪ	ಡಾ. ವಿನಯಾ	35/-
46.	ಉರಿವ ಒಲೆಗಳ ಮುಂದೆ	ಆರ್. ನಿರ್ಮಲ	25/-
47.	ಗಾಂಧೀ ಟು ಗೋದ್ರಾ	ಡಾ. ಸರಜೂ ಕಾಟ್ಕರ್	35/-

ಕಾದಂಬರಿ

*48.	ಮಾಂಡೋವಿ	ರವಿ ಬೆಳಗೆರೆ	60/-
*49.	ಶಾಮಣ್ಣ	ಕುಂ. ವೀರಭದ್ರಪ್ಪ	175/-
*50.	ಗಾಂಧಿಬಂದ	ಎಚ್. ನಾಗವೇಣಿ	130/-
51.	ಬದುಕು	ಗೀತಾ ನಾಗಭೂಷಣ	200/-
*52.	ಹುತ್ತ	ಬಾಳಾಸಾಹೇಬ ಲೋಕಾಪುರ	75/-
53.	ಲೋಟಸ್ ಪಾಂಡ್	ತಾರಾಭಟ್	50/-
54.	ಚಾಕ್ರಿ ನಿಂಬಜ್ಜ	ಬ್ರಹ್ಮದೇವ್ ಹದಳಗಿ	30/-

55. ರಂಗನೋ ಮಲೆ ಮಂಗನೋ!	ಮುಹಮ್ಮದ್ ಕುಳಾಯಿ	30/-
56. ಕೆರೂರುನಾಮಾ	ಚಂದ್ರಕಾಂತ ಕುಸನೂರ	60/-
57. ಅತಂತ್ರ	ಗುರುರಾಜ ಮಾರ್ಪಳ್ಳಿ	50/-

ಪ್ರವಾಸ ಕಥನ

58. ನನ್ನೊಳಗಿನ ಹಾಡು ಕ್ಯೂಬಾ	ಜಿ. ಎನ್. ಮೋಹನ್	50/-
*59. ಪಂಚಮುಖಿ ಪಂಜಾಬ್	ಜಿ. ಪಿ. ಬಸವರಾಜು	60/-
*60. ನಾ ಕಂಡ ಬ್ರಝಿಲ್	ಡಾ. ಸಿ. ನಾಗಭೂಷಣ	60/-
61. ಥೇಮ್ಸ್‌ದಿಂದ ಟೈಬರ್‌ವರೆಗೆ	ವೆಂಕಟೇಶ ಮಾಚಕನೂರ	40/-
62. ಆಗ್ನೇಯದಂಗಳದಲ್ಲಿ	ವೆಂಕಟೇಶ ಮಾಚಕನೂರ	60/-

ವೈಚಾರಿಕ ಮತ್ತು ಇತರೆ

63. ಲೋಹಿಯಾ	ಹಸನ್‌ನಯೀಂ ಸುರಕೋಡ	120/-
*64. ಸರಳಸಿದ್ಧರಾಮ ಚರಿತೆ	ಡಾ. ಎಲ್. ಬಸವರಾಜು	60/-
*65. ಶ್ರೀ ಮಧುರಚೆನ್ನರ ಸ್ಮೃತಿಗಳು	ಡಾ. ಸಿಂಪಿ ಲಿಂಗಣ್ಣ	60/-
66. ಕಾಡು ಮತ್ತು ತೋಪು	ವಿ. ಚಂದ್ರಶೇಖರ ನಂಗಲಿ	90/-
*67. ಅಮೃತ ಮತ್ತು ವಿಷ	ರಂಜಾನ್ ದರ್ಗಾ	75/-
*68. ಶತಮಾನ	ಮೊಗಳ್ಳಿ ಗಣೇಶ	50/-
*69. ಅಣುವೆಂಬ ಸದ್ದಿಲ್ಲದ ಸಾವ ಕುರಿತು	ಎನ್. ಜಗದೀಶ ಕೊಪ್ಪ	25/-
70. ನಿರ್‌ಬೀಜೀಕರಣದ ವಿರಾಟ್ ಸ್ವರೂಪ	ವಿ. ಚಂದ್ರಶೇಖರ ನಂಗಲಿ	12/-
71. ಬುದ್ಧ ಚರಿತೆ	ಡಾ. ಎಲ್. ಬಸವರಾಜು	180/-
72. ಸೌಂದರನಂದ	ಡಾ. ಎಲ್. ಬಸವರಾಜು	150/-
*73. ನೀರದೀವಿಗೆ	ಡಾ. ಕೆ. ವೈ. ನಾರಾಯಣಸ್ವಾಮಿ	100/-
*74. ನಮ್ಮ ಬಡತನ ಸಂವಿಧಾನಕ್ಕೊಂದು ಕಳಂಕ	ಜಸ್ಟೀರ್ ಸಿಂಗ್	25/-
75. ಅಲ್ಲಮನ ವಚನಚಂದ್ರಿಕೆ	ಡಾ. ಎಲ್. ಬಸವರಾಜು	250/-
*76. ಸೂಳೆ ಸಂಕವ್ವೆ (ನಾಟಕ)	ಮುದೇನೂರ ಸಂಗಣ್ಣ	50/-
77. ಚಾತುರ್ವರ್ಣ ಧರ್ಮದರ್ಶನ	ಕುಮಾರ ಕಕ್ಕಯ್ಯಪೋಳ	75/-
*78. ನಾ ನಿಮ್ಮೊಳಗು	ಪ್ರೊ. ವಿ. ಚಂದ್ರಶೇಖರ ನಂಗಲಿ	100/-
*79. ಬಗೆ	ಡಾ. ಸಬಿಹಾ ಭೂಮಿಗೌಡ	60/-
*80. ಹಣತೆ: ಜಿ.ಎಸ್.ಎಸ್. ಅಭಿನಂದನ ಗ್ರಂಥ		300/-
81. ಎಸ್. ನಿಜಲಿಂಗಪ್ಪ : ಒಂದು ಅಧ್ಯಯನ	ಕೋ. ಚೆನ್ನಬಸಪ್ಪ	125/-
82. ಬಸವಪ್ರಜ್ಞೆ	ರಂಜಾನ್ ದರ್ಗಾ	15/-
83. ಹುತಾತ್ಮ ಭಗತ್‌ಸಿಂಗ್	ಜಿ. ಪಿ. ಬಸವರಾಜು	60/-
84. ಗುಣಗೌರವ	ಜಿ. ಎಚ್. ನಾಯಕ	75/-
*85. ಜೀವನಸಂಧ್ಯಾ	ಡಾ. ಕೃಷ್ಣಮೂರ್ತಿ ಕಿತ್ತೂರ	75/-
*86. ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ	ಡಾ. ಜೆ. ಎಂ. ನಾಗಯ್ಯ	100/-
*87. ನೊಂದವರ ನೋವು	ಮೂಡ್ನಾಕೂಡು ಚಿನ್ನಸ್ವಾಮಿ	60/-
*88. ಸಾಕ್ಷಿ	ಡಾ. ಸರಜೂ ಕಾಟ್ಕರ್	50/-
89. ಸಲ್ಲಲಿತ ಸನ್ಮಾರ್ಗ	ಚೆನ್ನಬಸವಪ್ಪ ಬೆಟ್ಟದೂರು	30/-
90. ಪ್ರೇಮಲೋಕದ ಮಾಯಾವಿ	ಹಸನ್ ನಯೀಂ ಸುರಕೋಡ	45/-
*91. ಶರಣ ಬಂಡಾಯ	ಡಾ. ಸರಜೂ ಕಾಟ್ಕರ್	50/-
92. ಜಯಪ್ರಕಾಶ್ ನಾರಾಯಣ	ಡಿ. ಎಸ್. ನಾಗಭೂಷಣ	100/-
93. ಬೆಳಗಿನ ಬೆರಗು	ಜಿ. ಎನ್. ಮಲ್ಲಿಕಾರ್ಜುನ	75/-
94. ರಸೀದಿ ತಿಕೀಟು	ಹಸನ್‌ನಯೀಂ ಸುರಕೋಡ	100/-
95. ನಡುಹಗಲಿನಲ್ಲಿ ಕಂದೀಲುಗಳು	ಡಾ. ರಾಜೇಂದ್ರ ಚೆನ್ನಿ	125/-
96. ಕುವೆಂಪು-ಒಂದು ಪುನರನ್ವೇಷಣೆ	ಡಿ.ಎಸ್. ನಾಗಭೂಷಣ	150/-
97. ಬಸವಣ್ಣನವರ ದೇವರು	ರಂಜಾನ್ ದರ್ಗಾ	15/-
98. ಹಿಂದೂ ಮಂದಿರಗಳು ಹಾಗೂ ಔರಂಗಜೇಬನ ಆದೇಶಗಳು	ಹಸನ್ ನಯೀಂ ಸುರಕೋಡ	20/-
99. ನಮ್ಮೊಡನೆ ನಮ್ಮನುಡಿ	ಡಾ. ಕೆ. ವಿ. ನಾರಾಯಣ	50/-
100. ಅನೇಕ	ಡಿ. ಎಸ್. ನಾಗಭೂಷಣ	125/-
*101. ಖರೇ ಖರೇ ಸಂಗ್ಯಾ-ಬಾಳ್ಯಾ	ಡಾ. ಎಂ.ಎಂ. ಕಲಬುರ್ಗಿ	30/-
102. ಶಿವಾಜಿ ಮೂಲ ಕನ್ನಡ ನೆಲ	ಡಾ. ಸರಜೂ ಕಾಟ್ಕರ್	75/-
103. ಅಯೋಧ್ಯೆ-ವಿನಾಶಕಾರಿ ವೋಟ್ ಬ್ಯಾಂಕ್ ರಾಜಕೀಯ	ಹಸನ್ ನಯೀಂ ಸುರಕೋಡ	25/-
104. ಮನೆಯೊಡೆಯನಿದ್ದಾನೋ	ಎಸ್.ಜಿ. ಮೈಸೂರು ಮಠ	150/-
105. ಲಿಂಗವ ಪೂಜಿಸಿ ಫಲವೇನಯ್ಯಾ?	ರಂಜಾನ್ ದರ್ಗಾ	25/-
106. ಅರಿವಿನ ನಡೆ	ಡಾ. ಕವಿತಾ ರೈ	50/-
107. ಬದುಕಿಗಾಗಿ ಶಿಕ್ಷಣ	ಅರವಿಂದ ಚೊಕ್ಕಾಡಿ	40/-
108. ಕರ್ನಾಟಕ ಏಕೀಕರಣ	ಕೋ. ಚೆನ್ನಬಸಪ್ಪ	60/-
109. ಮರಳಿ ಬರಲಿದೆ ಸಮಾಜವಾದ	ಡಿ. ಎಸ್. ನಾಗಭೂಷಣ	60/-

* ಪ್ರತಿಗಳು ಮುಗಿದಿವೆ



....ಇಂತಹ ಲೋಹಿಯಾ, ಜಾಗತೀಕರಣ ತಂದೊಡ್ಡುತ್ತಿರುವ ಅಪಾಯಗಳ ವಿರುದ್ಧದ ಆಂದೋಲನಕ್ಕೆ, ಭಾರತದ ಮಟ್ಟಿಗಾದರೂ ಸ್ಫೂರ್ತಿಯ ಕೇಂದ್ರವಾಗದೆ, ಇನ್ನಾರಾದಾರು? ನಾವು ಹೈಟೆಕ್ ಆಧುನಿಕತೆಯ ಹಾದಿಯಲ್ಲಿ ಎಷ್ಟು ಮುಂದೆ ಹೋಗಿಬಿಟ್ಟಿದ್ದೀವೆಂದರೆ, ಹಿಂದೆ ಬರುವುದು ಅಸಾಧ್ಯ ಎನ್ನುವವರು, ಈ ಹಾದಿ ನಮ್ಮನ್ನು ಎಲ್ಲಿಗೆ ಕೊಂಡೊಯ್ಯುತ್ತಿದೆ ಎಂಬುದನ್ನು ವ್ಯವಧಾನದಲ್ಲಿ ಆಲೋಚಿಸಬೇಕು; ಈ ಅಭಿವೃದ್ಧಿ ಎಂತಹುದು, ಎಷ್ಟು, ಏಕೆ ಮತ್ತು ಯಾರಿಗಾಗಿ ಎಂಬ ಪ್ರಶ್ನೆಗಳನ್ನು ಹಾಕಿಕೊಳ್ಳಬೇಕು. ನಾವು, ನಮ್ಮ ಮಕ್ಕಳು ಮತ್ತು ಮೊಮ್ಮಕ್ಕಳ ಭವಿಷ್ಯದ ಮಟ್ಟಿಗೆ ಮಾತ್ರ ಆಲೋಚಿಸುವ ಸಮೀಪ ದೃಷ್ಟಿಯ ಸಮಾಜ, ಅವನತಿಯ ಕಡೆಗೆ ಮಾತ್ರ ನಡೆಯಬಲ್ಲುದು. ಇಂದಿನ 'ಅಭಿವೃದ್ಧಿ' ಹುಟ್ಟು ಹಾಕುತ್ತಿರುವ ಸಾಮಾಜಿಕ ಅಶಾಂತಿ ಹಾಗೂ ಜೀವ ಪರಿಸರ ನಾಶ ನಮ್ಮಲ್ಲಿ ಆತ್ಯಂತಿಕ ಆತಂಕ ಹುಟ್ಟಿಸದಿದ್ದಲ್ಲಿ ನಾವು ನಾಗರಿಕ ಜಗತ್ತಿನ ಅಲ್ಲ, ಜೀವ ಜಗತ್ತಿನ ಪ್ರಜೆಗಳಾಗಿ ಉಳಿಯುವ ಎಲ್ಲ ಅರ್ಹತೆಗಳನ್ನೂ ಕಳೆದುಕೊಂಡು ಆಧುನಿಕ ಭಸ್ಮಾಸುರರಾಗುತ್ತಿದ್ದೇವೆ ಎಂದೇ ಅರ್ಥ. ಇದರರ್ಥ, ನಾವು ಕಾಲದಲ್ಲಿ ಹಿಂದಕ್ಕೆ ಹೋಗಬೇಕು ಎಂಬುದಲ್ಲ. ಅದು ಸಾಧ್ಯವೂ ಆಗದು. ಬದಲಿಗೆ ಹಾದಿಯ ದಿಕ್ಕನ್ನು ಕ್ರಮೇಣ ಬದಲಿಸುವ ಸಂಕಲ್ಪ ಮಾಡಿ, ಅದಕ್ಕೆ ಅಗತ್ಯವಾದ ಮೂಲಭೂತ ತಾಂತ್ರಿಕ ಹಾಗೂ ಆಡಳಿತಾತ್ಮಕ ಬದಲಾವಣೆಗಳಿಗಾಗಿ ಕಾರ್ಯಕ್ರಮಗಳನ್ನು ಆರಂಭಿಸಲು ಸರ್ಕಾರಗಳ ಮೇಲೆ ಒತ್ತಡ ತರಬೇಕಿದೆ. ಎಲ್ಲಕಿಂತ ಮುಖ್ಯವಾಗಿ ನಮ್ಮ ಜೀವನ ಕ್ರಮವನ್ನು, ಮಿತಿಗಳುಳ್ಳ ಬದುಕಿನ ಶೈಲಿಗೆ ಪರಿವರ್ತಿಸಿಕೊಳ್ಳಬೇಕಿದೆ.

ಲೋಹಿಯಾ ಪ್ರಕಾಶನ, ಬಳ್ಳಾರಿ
ISBN: 81-87731-88-5

ಬೆಲೆ ರೂ. 60/-